# ಕಸ್ತೂರಿ



ಫೆಬ್ರುವರಿ, ೧೯೬೨ ಬೆಲೆ : ೭೫ ನ.ಪೈ.

ಇಂದಿನ ವಿಶ್ವಕ್ಕೊಂದು ಬೆಳಕಿಂಡಿ


ಬಾಯಿಯ ದುರ್ಗಂಧವನ್ನು
ಕಾಲ್ಗೇಟಿನಿಂದ ತೊಲಗಿಸಿರಿ
ಅದರೊಂದಿಗೆ ದಿನವಿಡೀ
ದಂತಕ್ಷಯವನ್ನು ಇದಿರಿಸಿರಿ !
ಏಕೆಂದರೆ : ಕಾಲ್ಗೇಟ್ ಡೆಂಟಲ್ ಕ್ರೀಮ್‌ನೊಂದಿಗೆ ಒಮ್ಮೆ ಹಲ್ಲುಜ್ಜುವುದರಿಂದ ಬಾಯಿಯಲ್ಲಿ ದುರ್ಗಂಧವನ್ನುಂಟು ಮಾಡುವ ಹಾಗೂ ಹಲ್ಲುಗಳನ್ನು ಕ್ಷಯಿಸುವ ಶೇಕಡ 85ರಷ್ಟು ಕ್ರಿಮಿಗಳು ನಾಶವಾಗುತ್ತವೆ.
ಊಟವಾದೊಡನೆ ಕಾಲ್ಗೇಟಿನಿಂದ ಹಲ್ಲುಜ್ಜುವುದರಿಂದ ದಂತ-ಮಂಜನಗಳ ಇತಿಹಾಸದಲ್ಲೇ ಹಿಂದೆಂದೂ ಆಗದಷ್ಟು ಅಧಿಕ ಜನರ ದಂತಕ್ಷಯವನ್ನು ಅಧಿಕ ಪ್ರಮಾಣದಲ್ಲಿ ತಡೆಗಟ್ಟಲು ಸಾಧ್ಯವಾಗುತ್ತದೆ. ಇದಲ್ಲದೆ,ಕಾಲ್ಗೇಟಿನಿಂದ 10ರಲ್ಲಿ 7 ಸಂದರ್ಭಗಳಲ್ಲಿ ಬಾಯಿಯ ದುರ್ಗಂಧವು ಕೂಡಲೇ ನಿವಾರಿಸಲ್ಪಡುತ್ತದೆ. ಈ ಎರಡು ಪ್ರಮಾಣಗಳನ್ನು ಕಾಲ್ಗೇಟ್ ವೈಜ್ಞಾನಿಕ ಪರೀಕ್ಷೆಗಳ ಮುಖೇನ ಸಿದ್ಧಗೊಳಿಸಿರುತ್ತದೆ. ಕಾಲ್ಗೇಟಿಗೆ ಮಾತ್ರ ಈ ಪ್ರಮಾಣವಿದೆ !
ಊಟವಾದ ಮೇಲೆ ಬರೇ ಬಾಯಿ ಮುಕ್ಕಳಿಸುವುದರಿಂದ ಪ್ರಯೋಜನವಾಗಲಾರದು–ಪ್ರತಿ ಊಟದ ಮೇಲೆ ತಪ್ಪದೆ ನಿಮ್ಮ ಹಲ್ಲುಗಳನ್ನು ಕಾಲ್ಗೇಟಿನಿಂದ ಉಜ್ಜಿರಿ. ಇದರ ಪ್ರಬಲವಾದ ಸಂದು ಸಂದುಗಳಿಗೆ ಒಳನುಗ್ಗುವ ನೊರೆಯು ಅಗೋಚರವಾದ ಹಲ್ಲುಗಳ ನಡುವಿನ ಸಂದುಗಳಿಗೆ ಹೊಕ್ಕು, ನಿಮ್ಮ ಬಾಯಿಯ ದುರ್ಗಂಧಕ್ಕೂ, ಹಲ್ಲುಗಳ ಕ್ಷಯಿಸುವಿಕೆಗೂ ಕಾರಣವಾದ ಆ ಕೊಳೆಯುತ್ತಿರುವ ಆಹಾರ ಕಣಗಳನ್ನು ನಿವಾರಿಸಿ ಸ್ವಚ್ಛಗೊಳಿಸುವುದು.
ಮಕ್ಕಳಿಗೆ ಕಾಲ್ಗೇಟಿನಿಂದ ಹಲ್ಲುಜ್ಜುವುದೆಂದರೆ ತುಂಬಾ ಪ್ರೀತಿ, ದೀರ್ಘಕಾಲ ಉಳಿಯುವ ಅದರ ನೆಚ್ಚಿನ ಪೆಪರ್‌ಮಿಂಟ್ ಸ್ವಾದವು ಇದರಲ್ಲಿ ಕೂಡಿರುತ್ತದೆ.
COLGATE DENTAL CREAM
ಕಾಲ್ಗೇಟಿನಿಂದ ತಪ್ಪದೆ ಹಲ್ಲುಜ್ಜುವುದರಿಂದ
✔ ಬಾಯಿಯ ದುರ್ಗಂಧವು ನಿವಾರಿಸಲ್ಪಡುತ್ತದೆ
✔ ದಂತಕ್ಷಯವನ್ನು ವಿರೋಧಿಸಲಾಗುವುದು
✔ ಹಲ್ಲುಗಳು ಪರಿಶುಭ್ರವಾಗಿ ಉಳಿಯುವವು
COLGATE TOOTH POWDER
ನಿಮಗೆ ಹಲ್ಲುಪುಡಿ ಹೆಚ್ಚು ಇಷ್ಟವಾಗಿದ್ದರೆ ಈ ಎಲ್ಲಾ ಪ್ರಯೋಜನಗಳನ್ನು ಕಾಲ್ಗೇಟ್ ಟೂತ್ ಪೌಡರ್‌ನಿಂದಲೂ ಪಡೆಯಿರಿ...ಒಂದು ಡಬ್ಬಿ ಹಲವು ತಿಂಗಳುಗಳವರೆಗೆ ಸಾಕಾಗುವುದು.
COLGATE
COLGATE DENTAL CREAM
DCG. 31 K
ಬಾಯಿಯ ದುರ್ಗಂಧವನ್ನು ನಿವಾರಿಸಲು ಮತ್ತು ಹಲ್ಲುಗಳು ಶುಭ್ರವಾಗಿರಲು... ಹೆಚ್ಚಿಗ ಜನರು ಪ್ರಪಂಚದ ಇನ್ನಿತರ ಡೆಂಟಲ್ ಕ್ರೀಮ್‌ಗಳಿಗಿಂತ ಅಧಿಕವಾಗಿ ಕಾಲ್ಗೇಟನ್ನೇ ಕೊಂಡುಕೊಳ್ಳುತ್ತಾರೆ

# ಕಸ್ತೂರಿ

## ಕನ್ನಡ ಡೈಜೆಸ್ಟ್

ಪ್ರತಿತಿಂಗಳ ೧ ನೇ ದಿನಾಂಕ
ಪ್ರಕಟವಾಗುವುದು.

ಮುಖ್ಯ ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ಮುಖಚಿತ್ರ :
ಮರಿಬೆಕ್ಕುಗಳು
ಸಿ. ರಾಜಗೋಪಾಲ

ಚಂದಾ ದರ :

| | |
|---|---|
| ವಾರ್ಷಿಕ (ಅಂಚೆಸೇರಿ). | ರೂ.೮.೦೦ |
| ಅರ್ಧ ವರ್ಷ — | ರೂ.೪.೫೦ |
| ಬಿಡಿಸಂಚಿಕೆ — | ರೂ.೦.೭೫ |

Kasturi, February 1962


## ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ ಲೇಖಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ"ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳುವ ಅಧಿಕಾರ ಸಂಪಾದಕರಿಗಿದೆ.

## ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾನಂಬರು ಕಾಣಿಸಲು ಮರೆಯಬಾರದು.

# ಈ ಸಂಚಿಕೆಯಲ್ಲಿ



ಜನವರಿ ೧೯೬೨ ರ ಕಸ್ತೂರಿಯಲ್ಲಿ ಪ್ರಕಟವಾದ ಸರ್ವಜ್ಞಮೂರ್ತಿಯ ಚಿತ್ರವು ಉಡುಪಿಯ ಶ್ರೀ ಬಿ. ಪಿ. ಬಾಯರಿಯವರ ವರ್ಣಚಿತ್ರದ ರೇಖಾನುಕೃತಿಯಾಗಿತ್ತು. ಮತ್ತು ಈ ತಿಂಗಳ ಕಸ್ತೂರಿಯಲ್ಲಿ 'ವಿಜಯನಗರದ ರಮಣಿಯರು' ಎಂಬ ಲೇಖದಲ್ಲಿ ಪ್ರಕಟವಾಗಿರುವ ಚಿತ್ರಗಳು ಹುಬ್ಬಳ್ಳಿಯ ಶ್ರೀ ಕೃಷ್ಣ ಕ್ಷತ್ರಿಯವರ ವರ್ಣ ಚಿತ್ರಗಳ ರೇಖಾನುಕೃತಿಗಳಾಗಿವೆ.

ಕಸ್ತೂರಿ

ಸಂಚಿಕೆ ೬ ಫೆಬ್ರುವರಿ, ೧೯೬೨ ವರ್ಷ ೬

ಒಂದು ಸುಂದರ ರೂಪಕ ಕಥೆ

# ತಥಾಗತನ ದೀಪ

ಜಗದೀಶ

ಈ ಜೀವನದ ದಾರಿ ಬೆಳಗಿರಲಿಲ್ಲ. ಸರಿಯಾಗಿರಲಿಲ್ಲ. ಬಹಳ ಸಲ ದಾರಿ ಸಿಗುತ್ತಿದ್ದಿಲ್ಲ. ಎಡವುತ್ತಿದ್ದೆ. ಸೋತು ವಿಶ್ರಮಿಸುತ್ತಿದ್ದೆ. ಮತ್ತೂ ಜೀವಿಸಿ ಮುನ್ನಡೆದಿದ್ದೆ. ಇದಕ್ಕೊಂದು ಕಾರಣವಿತ್ತು. ಏನೆಂದರೆ ಪ್ರತಿ ಸಂಕಟದ ಮೇಲೂ ಯಾವುದೋ ಒಂದು ಸತ್ಯದ ಕೈ ಇರುತ್ತಿತ್ತು. ಈ ಕೈಯ ಸ್ಪರ್ಶದಿಂದ ಮಮತೆ, ಜ್ಞಾನ, ಕರ್ಮರತೆಗಳ ಅರಿವಾಗುತ್ತಿತ್ತು.

ಇದೇ ರೀತಿ ನಾನು ನನ್ನ ಜೀವನಪಥ ಕ್ರಮಿಸುತ್ತಿರಲು ನನಗೆ ಆಸರೆಯಾಗಿ ಶ್ರೀ ಟಿ. ಎಲ್. ವಾಸ್ವಾನಿ ಸಾಧುಗಳು ಸಿಕ್ಕಿದ್ದರು. ಆ ಮಾತಿಗೆ ಇಂದು ಮೂವತ್ತು ವರ್ಷಗಳಾದವು. ಹೇಳಿದ ಹೊರತು ಗುರುತು ಸಿಗಲಾರದು. ಅವರು ಸಂತರೂ ನೇತಾರರೂ ಒಟ್ಟಿಗೇ ಆಗಬಯಸದೇ ಇದ್ದಿದ್ದರೆ ಇಂದಿಗೂ ಮುಂದಿನ ಪೀಳಿಗೆಗೂ ಅವರು ಮಹಾತ್ಮರಾಗಿ ಉಳಿಯುತ್ತಿದ್ದರು.

ದ್ರೋಣಾಚಲದಲ್ಲಿ ಒಮ್ಮೆ ಮಂದಿರದ ಹೊರಗಡೆ ಕಲ್ಲುಬಂಡೆಯ ಮೇಲೆ ಕೂತಿದ್ದಾಗ ಅವರೊಂದು ಕತೆ ಹೇಳಿದರು. ಆ ಕತೆ ನನ್ನಲ್ಲಿ ಅಚ್ಚಳಿಯದೆ ಉಳಿಯಿತು. ಇಂದು ಅದನ್ನು ತಮ್ಮೆದುರು ಹೇಳದಿರಲಾರೆ. ಆ ಚಿರಂತನ ಆಲೋಕ-ಶಿಖೆಯನ್ನು ಚಿರಂತನವಾಗುಳಿಸ ಬಯಸುತ್ತೇನೆ. ಕತೆಯ ಕೊಂಚ ಭಾಗವು ಉತ್ತರಾಖಂಡದಲ್ಲೂ ಉಳಿದ ಭಾಗವು ಕೆಲ

ಶತಮಾನಗಳ ಹಿಂದಿನದೂ ಆಗಿದೆ. ಇದು ಕೇವಲ ಕಲ್ಪನೆಯಾಗಿರಲೂ ಬಹುದು.

ಕತೆಯಲ್ಲಿ ಒಬ್ಬನು ನಾಗರಿಕನು, ಇನ್ನೊಬ್ಬನು ಸಾಧುವು. ದಿನಾಲೂ ಈ ನಾಗರಿಕನು ಸಾಧುವಿನ ಸೇವೆಗೈದು ಧರ್ಮಾಚರಣೆಯಿಂದಿರುತ್ತಿದ್ದ. ಸಾಧು ನಿಜವಾದ ಸಾಧುವಾಗಿದ್ದ. ಆತ ಆ ನಾಗರಿಕನನ್ನು ಕರೆದು ಒಂದು ದಿನ ಹೇಳಿದ: "ನಾನಿನ್ನು ಹೋಗುವೆನು. ಶುಕ್ಲಪಕ್ಷದ ಮಧ್ಯ ರಾತ್ರಿಯಲ್ಲಿ ಯಾರಾದರೂ ನಿನ್ನ ಬಾಗಿಲಿಗೆ ಬಂದರೆ ಅವರು ವಿಮುಖರಾಗಿ ಮರಳದಿರಲಿ. ನಿನ್ನ ಕಲ್ಯಾಣವಾಗುವುದು" ಎಂದು ಹರಸಿದರು.

ಮರುದಿನ ಕುಟೀರಕ್ಕೆ ನಾಗರಿಕನು ಬಂದಾಗ ಅಲ್ಲಿ ಸಾಧು ಇರಲಿಲ್ಲ. ಮುಂದೆ ಆತ ಶುಕ್ಲಪಕ್ಷ ಬಂತೆಂದರೆ ಅತಿಥಿಯ ಆಗಮನಾಪೇಕ್ಷಿಯಾಗಿ ದಾರಿನೋಡುತ್ತ ಕೂಡುತ್ತಿದ್ದ. ತಿಂಗಳುಗಳು ಕಳೆದರೂ ಇವನ ಕ್ರಮ ತಪ್ಪಲಿಲ್ಲ. ಜನ ನಗೆಯಾಡಿದರು. ಆದರೆ ಈತ ಅಚಲನಾಗಿದ್ದ.

ಮುಂದೆ ಶರತ್ ಪೂರ್ಣಿಮೆಯ ದಿನ ಅವನ ಬಾಗಿಲಲ್ಲಿ ನಿಜವಾಗಿಯೇ ಯಾರೋ ಒಬ್ಬ ಆಗಂತುಕ ನಿಂತದ್ದು ಕಾಣಿಸಿತು. ತುಂಬಿದ ಮೈಕಟ್ಟು. ಆದರೆ ಮೈಮೇಲೆ ಗಾಯಗಳು. ತಲೆಯ ಮೇಲೆ ದೊಡ ಗಾಯ. ರಕ್ತಸಿಕ್ತ ಶರೀರ.

ಆಗಂತುಕನೆಂದ: "ನಾನು ಅಶ್ವತ್ಥಾಮ. ಸ್ವಧರ್ಮವಾದ ಬ್ರಾಹ್ಮಣಧರ್ಮವನ್ನು ತ್ಯಜಿಸಿ ಕ್ಷತ್ರಿಯವೃತ್ತಿಯನ್ನು ಕೈಕೊಂಡೆ. ಅನ್ಯಾಯಿಯಾದ ದುರ್ಯೋಧನನ ಪಕ್ಷಕ್ಕೆಸೇರಿ ಪಾಂಡವ ಕುಲ ಸಂಹಾರಮಾಡಿ ಅವನಿಗೂ ಅಪಕೀರ್ತಿ ತಂದೆ. ಈಗ ಆತ್ಮಗ್ಲಾನಿಯಲ್ಲೇ ಕ್ಷಣಕ್ಷಣವನ್ನೂ ಕಳೆಯುತ್ತಿದ್ದೇನೆ. ಪ್ರಾಯಶ್ಚಿತ್ತ ಹೊಂದುತ್ತ ಊರೂರು ಸುತ್ತುತ್ತಿದ್ದೇನೆ. ಧರ್ಮಾಚಾರಿಯಾದ ಗೃಹಸ್ಥನು ಯಾವನಾದರೂ ಕಾಣಿಸಿದರೆ ಅವನ ಹತ್ತಿರ ನನ್ನ ನೋವಿನ ನಿವಾರಣೆಗಾಗಿ ಒಂದು ಬೊಗಸೆ ತುಪ್ಪಕೇಳುತ್ತೇನೆ. ಅಷ್ಟು ಭಿಕ್ಷೆ ಹಾಕಬಲ್ಲೆಯಾ?"

ನಾಗರಿಕನು ವಿಸ್ಮಿತನಾದನು. ಒಳಗೆ ಹೋಗಿ ತುಪ್ಪದೊಂದಿಗೆ ಹೊರಬಂದನು. ಅಲ್ಲಿ ಅಶ್ವತ್ಥಾಮನ ಬದಲು ಬೇರೊಬ್ಬ ವ್ಯಕ್ತಿ ಇದ್ದ. ಪರಮ ಸೌಮ್ಯ, ಕಾಂತಿಮಯ, ಶಾಂತ ಮೂರ್ತಿ. ಕೈಯಲ್ಲೊಂದು ಚಿಕ್ಕ ದೀವಿಗೆ. ದೀಪವನ್ನು ಮುಂದೊಡ್ಡಿ ಅಮೃತವಾಣಿಯಲ್ಲಿ ನುಡಿದನಾತ: "ನಾನು ತಥಾಗತ ಬುದ್ಧ. ಕರುಣೆ, ಮೈತ್ರಿ ಮತ್ತು ನಿರ್ವಾಣ-ಸಾಧನೆಯ ಸಂದೇಶ-ದೀಪವನ್ನು ಎತ್ತಿಕೊಂಡು ದ್ವಾರದ್ವಾರಕ್ಕೆ ಹೋಗುತ್ತಿದ್ದೇನೆ. ಬಹುಜನಹಿತಾಯ ಈ ದೀಪ-ಶಿಖೆ ಚಿರಂತನವಾಗಿರಲೆಂದು ಎಲ್ಲರನ್ನೂ ಕೇಳಿಕೊಳ್ಳುವೆ. ನೀನೂ ಇದಕ್ಕೆ ತುಪ್ಪ ಎರೆದು ಇದು ಪ್ರಜ್ವಲಿಸುವಂತೆ ಮಾಡು."

ನಾಗರಿಕನು ವಿಚಾರ ವಿಮೂಢನಾದನು. ಅಶ್ವತ್ಥಾಮರ ನೋವಿನ ಹುಣ್ಣು ಹಾಗೂ ತಥಾಗತರ ಜೀವನ-ದೀಪಗಳೆರಡರಲ್ಲಿ ಯಾವುದಕ್ಕೆ ಈತ ತುಪ್ಪ ಎರೆಯಬೇಕು? ಆ ವ್ಯಕ್ತಿಯ ವೇದನೆಯಿಂದ ನಾಗರಿಕನು ಕನಿಕರಗೊಂಡರೂ ಈ ಕಣ್ಣುಗಳ ಪ್ರಭೆಯಿಂದ ಅವಾಕ್ಕಾದ. ಇಲ್ಲಿ ಅಪೂರ್ವ ಆತ್ಮಸಂಯಮವೂ ಅಪಾರ ಸರ್ವ ಮಂಗಲವೂ ಇತ್ತು.

ನಾಗರಿಕನು ತನ್ನ ಘೃತವನ್ನು ತಥಾಗತರ ದೀಪಕ್ಕೆ ಎರೆದ.

"ಆ ಮೇಲೆ?" ನಾನಂದೆ. ವಾಸ್ವಾನಿಯರು ನಕ್ಕು ಆಳವಾದ ವಿಚಾರದಿಂದ ನನ್ನತ್ತ ನೋಡಿ ನುಡಿದರು. "ಮುಂದೇನು? ಆಮೇಲೆ ಆ ನಾಗರಿಕ ಚಿರಸುಖಿಯಾದ. ಅಶ್ವತ್ಥಾಮನು ಕೂಡ ಆಮೇಲೆ ಆ ರೀತಿ ತಿರುಗುತ್ತಿರುವುದನ್ನು ಯಾರೂ ಕಂಡಿಲ್ಲ". ✶

# ರವಿಶಂಕರ: ಸಿತಾರಿನ ಪುರುಷ ಸರಸ್ವತಿ

ಇಂದು ಭಾರತೀಯ ಸಂಗೀತಾಕಾಶದಲ್ಲಿ ಹೊಳೆಹೊಳೆಯುತ್ತಿರುವ ನವೀನ ತಾರೆಗಳಲ್ಲಿ ಪಂಡಿತ ರವಿಶಂಕರರು ಆಗಲೇ ನೆತ್ತಿಯ ಸರಿಗೆ ಏರಿದ್ದಾರೆ. ಸಿತಾರು ಎಂದರೆ ರವಿಶಂಕರ, ರವಿ ಶಂಕರ ಎಂದರೆ ಸಿತಾರು ಎಂಬಷ್ಟು ಮಟ್ಟಿಗೆ ಅವರಿಗೆ ಆ ವಾದ್ಯ ಒಲಿದುಬಿಟ್ಟಿದೆ. ನೋಡಲು ವೀಣೆಯಂತೆಯೆ ಕಾಣುವ ಸಿತಾರನ್ನು ಅವರು ಬಾರಿಸಲೆತ್ತಿದಾಗ ಸರಸ್ವತಿಯೆ ಅವರ ಬೆರಳಲ್ಲಿ ನರ್ತಿಸುವಳೋ ಎನಿಸುತ್ತದೆ.

ರವಿಶಂಕರರ ಕೀರ್ತಿಯೂ ಕಲೆಯೂ ಅಂತಃ ಪ್ರಾಂತೀಯವಾಗಿವೆ, ಅಂತರ್-ರಾಷ್ಟ್ರೀಯವಾಗಿವೆ. "ಕಾಬೂಲಿವಾಲಾ" ಚಿತ್ರಕ್ಕೆ ಅವರು ಯೋಜಿಸಿದ ವಾದ್ಯ ಸಂಗೀತಕ್ಕೆ ೧೯೫೭ ರಲ್ಲಿ ಬರ್ಲಿನ್ನಿನ "ಸಿಲ್ವರ್ ಬೇರ್" ಬಹುಮಾನ ಬಂತು. ವಿದೇಶಗಳಲ್ಲಿ ಅವರ ಸಿತಾರು ವಾದನ ಜನರನ್ನು ಈ ದೇಶದಲ್ಲಿ ಹೇಗೋ ಹಾಗೆಯೆ ಮುಗ್ಧಗೊಳಿಸಿದೆ. ಅವರು ಕಲಿತದ್ದು ಹಿಂದುಸ್ತಾನಿ ಸಂಗೀತದ ದಿಗ್ಗಜನೊಬ್ಬನಿಂದ; ಆದರೂ ಅವರು ಕರ್ನಾಟಕ ಸಂಗೀತದ ಅನೇಕ ಹೃದ್ಯವಾದ ಅಂಶಗಳನ್ನಷ್ಟೇ ಅಲ್ಲ, ಪಾಶ್ಚಾತ್ಯ ಸಂಗೀತದ ರಸಸಾರವನ್ನೂ ಭಾರತೀಯ ಸಂಗೀತದ ಸ್ವಭಾವಕ್ಕೆ ವ್ಯತಿರಿಕ್ತವಾಗದಂತೆ ಅಳವಡಿಸಿಕೊಂಡಿದ್ದಾರೆ. ಭಾರತೀಯ ಸಂಗೀತಕ್ಕೆ ಅವರ ದೊಡ್ಡ ಕೊಡುಗೆಯೆಂದರೆ ಪಾಶ್ಚಾತ್ಯರಲ್ಲಿ ತುಂಬ ಪ್ರಗತಿಹೊಂದಿರುವ ವಾದ್ಯಮೇಳ (ಆರ್ಕೆಸ್ಟ್ರಾ) ಪ್ರಕಾರವನ್ನು ಇಲ್ಲಿಯೂ ಬೆಳೆಸಿದ್ದು. ದಿಲ್ಲಿ ಆಕಾಶವಾಣಿಯ ಭಾರತೀಯ ಆರ್ಕೆಸ್ಟ್ರದ ಸ್ಥಾಪಕರು ಅವರೇ. "ಪಥೇರ್ ಪಾಂಚಾಲಿ" "ಅಪರಾಜಿತೊ" ಮೊದಲಾದ ವಿಶ್ವವಿಖ್ಯಾತ ಭಾರತೀಯ ಚಲಚ್ಚಿತ್ರಗಳ ವಾದ್ಯಮೇಳದ ನಿರ್ದೇಶಕರೂ ರವಿಶಂಕರರೇ.

ಪಂ. ರವಿಶಂಕರರು ಹುಟ್ಟಿದು ಎಪ್ರಿಲ್ ೧೯೨೦ ರಲ್ಲಿ. ಅವರ ತಂದೆ ಶ್ಯಾಮಾಶಂಕರ ಚಟ್ಟೋಪಾಧ್ಯಾಯರು ರಾಜ್ಯಶಾಸ್ತ್ರ ಮತ್ತು ಸಂಸ್ಕೃತದಲ್ಲಿ ಮಹಾಪಂಡಿತರಾಗಿದ್ದು ಇಂಗ್ಲಂಡಿನಲ್ಲಿ ಬಾರ್-ಅಟ್-ಲಾ ಆಗಿ ಅಲ್ಲೇ ವಕಾಲತ್ತು ನಡೆಸಿ ಅನಂತರ ಝಾಲವಾಡಾ ಸಂಸ್ಥಾನದಲ್ಲಿ ಕೆಲ ಕಾಲ ದಿವಾಣರೂ ಆಗಿದ್ದರು. ಅದನ್ನು ತೊರೆದು ಅವರು ವಾರಣಾಸಿಯಲ್ಲಿ ಹಿಂದೂ ವಿಶ್ವವಿದ್ಯಾಲಯ ಸ್ಥಾಪಿಸಲು ಪಂ. ಮಾಲವೀಯರಿಗೆ ನೆರವಾಗಿ ಕೆಲ ಕಾಲ ಅಲ್ಲಿ ಪ್ರಾಧ್ಯಾಪಕರೂ ಆಗಿದ್ದರು. ರವಿಶಂಕರರು ಹುಟ್ಟಿದ್ದು ಬನಾರಸದಲ್ಲಿಯೆ. ಶ್ಯಾಮಾಶಂಕರರು ಅನಂತರ ಕೆಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ವೇದಾಂತದ ಪ್ರೊಫೆಸರರಾಗಿ ಹೆಸರು ಪಡೆದರು.

ವಿದೇಶಗಳಲ್ಲಿ ವೇದಾಂತವನ್ನು ಪಾಠ ಹೇಳುತ್ತಿದ್ದ ತತ್ವಜ್ಞಾನಿಯ ಹೊಟ್ಟೆಯಲ್ಲಿ ಭಾರತದ ಕಲೆಯನ್ನು ವಿದೇಶಗಳಲ್ಲಿ ಮೆರೆಸಲಿದ ಇಬ್ಬರು ಪ್ರತಿಭಾಶಾಲಿ ಮಕ್ಕಳು ಹುಟ್ಟಿದ್ದು ದೈವನಿಯತಿಯಲ್ಲದೆ ಮತ್ತೇನು? ಮೊದಲನೇ ಮಗ ಉದಯಶಂಕರರು, ಚಿತ್ರಕಲೆಯ ದಾರಿಯಲ್ಲಿ ಹೊರಟು ನೃತ್ಯಕಲೆಯ ಶಿಖರವನ್ನು ಮುಟ್ಟಿದರು. ಭಾರತೀಯ ನೃತ್ಯಕಲೆಯ ಒಂದು ಪ್ರದರ್ಶನಕ್ಕಾಗಿ ಲಂಡನ್ನಿನಲ್ಲಿ ರಂಗಸಜ್ಜಿಕೆಯ ಚಿತ್ರಣ ಮಾಡಲೆಂದು ಭಾರತದಿಂದ ಹೋದ ತರುಣ ಉದಯ

ಶಂಕರರು ರಶಿಯನ್ ನೃತ್ಯವಿದುಷಿ ಅನ್ನಾ ಪಾವ್‌ಲೋವಾಳ ಪ್ರಭಾವಕ್ಕೆ ಸಿಲುಕಿ ತಂದೆಯ ಇಚ್ಛೆಯ ವಿರುದ್ಧ ನೃತ್ಯಶಾಲೆಯನ್ನು ಸೇರಿದರು. ಪಾಶ್ಚಾತ್ಯ ನೃತ್ಯದಲ್ಲಿ ಪದವಿ ಪಡೆದ ಮೇಲೆ ಭಾರತೀಯ ನಾಟ್ಯಶಾಸ್ತ್ರದತ್ತ ಕಂದೆರೆದು ಅದನ್ನು ಸಾಧಿಸಿದರು; ಪಾಶ್ಚಾತ್ಯ ನಗರಗಳಲ್ಲಿ ಅವರು ಯೋಜಿಸಿದ ಭಾರತೀಯ ನೃತ್ಯಗಳು ಎಷ್ಟು ಯಶಸ್ವಿಯಾದವೆಂದರೆ ಉದಯಶಂಕರರು ಪ್ಯಾರೀಸಿನಲ್ಲಿ ಶಾಶ್ವತವಾದ ಒಂದು ಮಂಡಳಿಯನ್ನೇ ಸ್ಥಾಪಿಸಿ ಅಪಾರ ಕೀರ್ತಿಯನ್ನೂ ಧನವನ್ನೂ ಸಂಪಾದಿಸಿದರು.

ಶ್ಯಾಮಾಶಂಕರರ ಎರಡನೇ ಮಗ ರವಿಶಂಕರರು ನೃತ್ಯಕಲೆಯ ದಾರಿಯಲ್ಲಿ ಹೊರಟು ಸಂಗೀತದ ಶಿಖರವನ್ನು ತಲುಪಿದರು. ಉದಯಶಂಕರರು ಉತ್ಕರ್ಷ ಹೊಂದಿದೊಡನೆ ತಾಯಿಯನ್ನೂ ತಮ್ಮಂದಿರನ್ನೂ ಪ್ಯಾರೀಸಿಗೆ ಕರೆಸಿಕೊಂಡಿದ್ದರು. ಆಗ ರವಿಗೆ ಒಂಭತ್ತು ವರ್ಷ. ಆತ ಅಣ್ಣನ ಕಲೆಯಲ್ಲಿ ಆಟವಾಡಹತ್ತಿದ. ಪ್ಯಾರೀಸು ; ಉತ್ಕರ್ಷಶೀಲ ನಾಟ್ಯಮಂಡಳಿ; ಹಣದ ಹೊಳೆ ; ಕಲಾವಿಲಾಸ; ಕೈತೊಳೆದುಕೊಂಡು ಮುಟ್ಟಬೇಕೆಂಬಂಥ ಬಾಲಮನೋಹರ ರೂಪ. "ಏಕೈಕಪ್ಯನರ್ಥಾಯ" ಎನ್ನುತ್ತಾರಲ್ಲ. ಹುಡುಗ ಕಂಡದ್ದನ್ನೆಲ್ಲ ಅರಗಿಸಿಕೊಳ್ಳುವ ಅಕಾಲಪರಿಣತ ಪ್ರತಿಭೆಯವನಂತೆ



ಕಂಡ. ಭಾರತದ ನಾಲ್ಕೂ ವಿಧದ ನೃತ್ಯಗಳನ್ನು ಕಲಿತ ನಂತರ ಮಂಡಳಿಯ ವಾದ್ಯಗಳ ಕಡೆ ಅವನ ಗಮನ ಹೋಯಿತು. ಲಹರಿಯಂತೆ ತಂತು ವಾದ್ಯ, ಚರ್ಮ ವಾದ್ಯಗಳನ್ನು ತುಡುಕಿದ. ಯಾರೂ ತಡೆಯಲಿಲ್ಲ. ಅಕ್ಷರವಿದ್ಯೆ ಬಹು ಕಾಲ ಸಾಗಲಿಲ್ಲ. ಒಂದೋ ಎರಡೋ ವರ್ಷ ಪ್ಯಾರೀಸಿನ ಪ್ರಾಥಮಿಕ ಶಾಲೆಗೆ ಹೋದದ್ದೇಷ್ಟೋ ಅಷ್ಟೇ. ಆದರೆ ಹದಿನಾರು ದಾಟುವುದರೊಳಗೆ ಅವನು ಜನಪ್ರಿಯ ನೃತ್ಯಯೋಜಕನಾಗಿದ್ದ.

ಅದು ಕಲಾವಿಲಾಸ. ಅನಂತರದ್ದು ಕಲಾತಪಸ್ಯೆ. ಅದರಿಂದ ಇದಕ್ಕೆ ದಾಟಿಸಿದ್ದು ಇನ್ನೊಬ್ಬ ವೃದ್ಧ ಕಲಾತಪಸ್ವಿಯ ಮುಖದಿಂದ ಬಂದ ಒಂದು ಹಿಂದೀ ದ್ವಿಪದಿ. ಉದಯಶಂಕರರು ತಮ್ಮ ವಾದ್ಯಮೇಳಕ್ಕೆ ದಿಗ್ದರ್ಶಕರಾಗಲೆಂದು ಮೆಹರ್ ಶೈಲಿಯ ಅತ್ಯುತ್ಕೃಷ್ಟ ಪ್ರತಿಪಾದಕ ಉಸ್ತಾದ್-ಅಲ್ಲಾವುದ್ದೀನ್‌ಖಾನರನ್ನು ಒಂದು ವರ್ಷದ ಮಟ್ಟಿಗೆ ಯುರೋಪಿಗೆ ಕರೆಸಿದ್ದರು. ಈ ಹುಡುಗನ ಕಲಾಪ್ರತಿಭೆಯಿಂದ ಖಾನರು ಆಕರ್ಷಿತರಾದರೂ ಅವನ ಆಸಕ್ತಿಗಳು ಸಂಜೆಯ ಮೋಡದ ಬಣ್ಣಗಳಂತೆ ಬದಲಾಗುತ್ತಿರುವುದನ್ನು ಕಂಡು ವ್ಯಥಿತರಾಗಿದ್ದರು. ಒಂದು ರವಿವಾರ ನೃತ್ಯಗೃಹದಲ್ಲಿ ಬೇರೆ ಬೇರೆ ವಾದ್ಯಗಳನ್ನು ಕೆಲ ಕೆಲ ನಿಮಿಷಗಳ ವರೆಗೆ ಬಾರಿಸಿ ಬದಿಗೆ ಸರಿಸುತ್ತಲಿದ್ದ ರವಿಶಂಕರರನ್ನು ಸುದೀರ್ಘವಾಗಿ ಅವಲೋಕಿಸಿ ಅಲ್ಲಾವುದ್ದೀನ್ ಖಾನರು, “ನೋಡು ಮಗು, ‘ಏಕ ಸಾಧೇ ಸಬ ಸಿಧೇ। ಸಬ ಸಾಧೇ: ಸಬ ಜಾವೇ’* ಎಂಬೊಂದು ವಚನವಿದೆ ನೀನು ಕೇಳಿದ್ದೀಯಾ?” ಎಂದರು.

ರವಿಶಂಕರರಿಗೆ ಈ ಸಮಸ್ಯಾತ್ಮಕವಾದ ಮಾತಿನ ಪೂರ್ತಿ ಅಭಿಪ್ರಾಯವನ್ನು ಅರ್ಥಮಾಡಿಕೊಳ್ಳುವಷ್ಟು ವಯಸ್ಸಾಗಿರಲಿಲ್ಲ. ಆದರೆ ಹೇಗೋ ಅದು ಅವರ ಮನಸಿನ ಒಂದು ಮೂಲೆಯಲ್ಲಿ ನಟ್ಟುಹೋಯಿತು. ತೋರಿಕೆಗೆ ಅದರಿಂದೇನೂ ಬದಲಾವಣೆಯಾಗಲಿಲ್ಲ. ಸಂಪದ್ಭೋಗ, ಸುಲಭ ಕೀರ್ತಿ ಮತ್ತು ಪ್ರಶಂಸೆ ಇವು ಅವರ ಚೇತನದಲ್ಲಿ ಮೂಡಿದ್ದ ಕಲಮಲವನ್ನು ತಾತ್ಕಾಲಿಕವಾಗಿ ಅಳಿಸಿ ಹಾಕಲು ಸಾಕಾದವು. ಕಲಾಮಧುಕರ ವೃತ್ತಿ ಯಥಾಪ್ರಕಾರ ಸಾಗಿತು. ಒಂದು ವರ್ಷದ ಅವಧಿ ಮುಗಿದು ಅಲ್ಲಾವುದ್ದೀನ್‌ಖಾನರು ಭಾರತಕ್ಕೆ ಮರಳಿದರು.

ಅಷ್ಟರಲ್ಲಿ ಶ್ಯಾಮಾಶಂಕರ ಬಾಬುಗಳು ಸ್ವರ್ಗಸ್ಥರಾದರು. ತಾಯಿಯೊಡನೆ ರವಿ ಶಂಕರರು ಭಾರತಕ್ಕೆ ಮರಳಿದರು. ಅವರಿಗೆ ಈಗ ಮನದಲ್ಲೊಂದು ಅನಿರ್ವಚನೀಯ ಶೂನ್ಯತೆಯು ಭಾಸವಾಗತೊಡಗಿತ್ತು. ಅಲ್ಲಾವುದ್ದೀನರು ಉದಾಹರಿಸಿದ ವಚನ ಮರಮರಳಿ ಜಾಗ್ರತ ಮನಸ್ಸಿಗೆ ಏರಿ ಬರುತ್ತಿತ್ತು. ಒಂದು ದಿನ ವಾರಣಾಸಿಯಲ್ಲಿ ಸಿತಾರುವಾದಕರಲ್ಲಿ ಅಗ್ರಣಿಯೆನಿಸಿದ ಗೌರೀಪುರದ ಇನಾಯತ್ ಖಾನರ ಕಲಾವೈಖರಿಯನ್ನು ಕೇಳಿದ ಅವರಿಗೆ ತಮ್ಮ ಸಂಗೀತ ಎಷ್ಟು ಟೊಳ್ಳಾದುದೆಂದು ಮನವರಿಕೆಯಾಯಿತು. ಇನಾಯತರ ಶಿಷ್ಯನಾಗಬೇಕೆಂಬ ಉತ್ಕಟವಾದ ಹಂಬಲವೊಂದು ಜಾಗ್ರತವಾಯಿತು. ‘ಗಂಡಾ’ ಕಟ್ಟಿಕೊಂಡು ದೀಕ್ಷಿತನಾದರೆ ಮಾತ್ರ ವಿದ್ಯೆ ಕಲಿಸೇನೆಂದು ಆ ಕಲಾಸಿದ್ಧ ತಿಳಿಸಿದ. ಆದರೆ ‘ಗಂಡಾ’ ಸಮಾರಂಭದ ಸಿದ್ಧತೆಯಾಗುವುದರೊಳಗೆ ಇನಾಯತರು ಇಹಲೋಕವನ್ನು ತ್ಯಜಿಸಿಬಿಟ್ಟರು.

ಮುಂಗಾಣದಂತಾದ ರವಿಶಂಕರರು ತಮಗೆ ಒಂದನ್ನು ಸಾಧಿಸುವ ಉಪದೇಶವಿತ್ತ ಅಲ್ಲಾವುದ್ದೀನಖಾನರನ್ನು ನೆನೆದುಕೊಂಡು ಮೆಹರ್‌ಗೆ ಧಾವಿಸಿದರು. ಆರ್ತಭಾವದಿಂದ ವಿದ್ಯಾಭಿಕ್ಷೆ ಬೇಡಿದರು. ಅಲ್ಲಾವುದ್ದೀನರು ಅವರನ್ನು ಅಡಿಯಿಂದ ಮುಡಿವರೆಗೊಮ್ಮೆ ನೋಡಿ ಹೇಳಿದರು:

---

* ಒಂದನ್ನು ಸಾಧಿಸಿದರೆ ಎಲ್ಲವೂ ಸಿದ್ಧಿಸುತ್ತದೆ; ಎಲ್ಲವನ್ನೂ ಸಾಧಿಸಹೋದರೆ ಎಲ್ಲವೂ ಕೈತಪ್ಪುತ್ತದೆ.

"ಹೋಗು ಹೋಗು. ನಿನ್ನಂಥ ಅಸ್ಥಿರ ಮನದ ವಿಲಾಸಿಗೆ ವಿದ್ಯೆ ಹತ್ತುವ ಹಾಗೆ ಕಾಣೆ. ಇದು ತಪಸ್ಸು. ಇಲ್ಲಿ ಸಂನ್ಯಾಸಿಯ ಹಾಗೆ ಬಂದರೆ ತಾನೆ ವಿದ್ಯೆ ಬಂದೀತು."

ಕಣ್ಣೀರುದುಂಬಿ ರವಿಶಂಕರರು ವಾರಣಾಸಿಗೆ ಮರಳಿದರು. ಆದರೆ ಸಂಗೀತವನ್ನು ಸಾಧಿಸುವ ಅವರ ಹಂಬಲ ಇನ್ನಷ್ಟು ರೂಢಮೂಲವಾಯಿತು. ಉದಯಶಂಕರರು ಪುನಃ ತಮ್ಮೊಡನೆ ಸೇರಿಕೊಳ್ಳಲು ಕರೆದಾಗ ರವಿ ಸುತರಾಂ ಒಪ್ಪಲಿಲ್ಲ. ಏನು ಮಾಡಿದರೂ ಅಲಾವುದ್ದೀನಖಾನರ ತಿರಸ್ಕಾರದ ಹೊಡೆತದ ನೋವು ಮಾಯಲಿಲ್ಲ. ಅವರನ್ನೇ ಗುರುವಾಗಿ ಮಾಡಿಕೊಳ್ಳುವ ಹಟ ಉಲ್ಬಣಿಸಿತು. ಒಂದು ದಿನ ಬೆಳಿಗ್ಗೆ ಎದ್ದು ಕ್ಷೌರಿಕನ ಕಡೆ ಹೋಗಿ ತಮ್ಮ ಹೆಮ್ಮೆಯ ಸಂಪತ್ತಾಗಿದ್ದ ಮೃದು ಕೃಷ್ಣ ಕೇಶರಾಶಿಯನ್ನು ಸಂಪೂರ್ಣವಾಗಿ ಬೋಳಿಸಿಕೊಂಡರು. ನುಣುಪಾದ ಬಟ್ಟೆಗಳನ್ನು ಬಿಸುಟು ಒರಟಾದವುಗಳನ್ನು ಹಾಕಿಕೊಂಡರು. ಮೆಹರ್‌ಗೆ ಯಾತ್ರೆ ಬೆಳಸಿ ಗುರುಸನ್ನಿಧಿಯಲ್ಲಿ ಹಾಜರಾಗಿ, "ವಿಲಾಸದ ಹೆಗ್ಗುರುತುಗಳನ್ನೆಲ್ಲ ತೊಡೆದುಹಾಕಿ ಬಂದಿದ್ದೇನೆ. ಈಗಾದರೂ ವಿದ್ಯೆ ಕೊಡು ಗುರೋ" ಎಂದರು.

ರವಿಶಂಕರರನ್ನು ಅಷ್ಟು ಕಠೋರವಾಗಿ ತಿರಸ್ಕರಿಸಿದ್ದಕ್ಕಾಗಿ ಮೊದಲೇ ಪಶ್ಚಾತ್ತಾಪಗೊಂಡಿದ್ದ ಅಲ್ಲಾವುದ್ದೀನ್‌ಖಾನರು ರವಿಶಂಕರರ ಈ ವೇಷವನ್ನೂ ಆರ್ತತೆಯನ್ನೂ ಕಂಡು ಕರಗಿಹೋದರು. ಅವರು ಶಿಷ್ಯನನ್ನು ಎರಡೂ ತೋಳುಗಳಿಂದ ಅಂಗೀಕರಿಸಿದರು.

"ಏಕ ಸಾಧೇ" ಮರುದಿನವೇ ಆರಂಭವಾಯಿತು. ಹದಿನೇಳು ವರ್ಷಗಳ ವರೆಗೆ ಸುಖ ವಿಲಾಸಗಳಲ್ಲಿ ಓಲಾಡಿದ ರವಿಶಂಕರರು ಈಗ ಒಂದು ಜೋಪಡಿಯಲ್ಲಿ ಏಕಾಕಿಯಾಗಿ ವಾಸ ಮಾಡುತ್ತ ಸ್ವಹಸ್ತದಿಂದ ಅಡುಗೆ ಮಾಡಿ ಉಂಡು ಗುರುಸನ್ನಿಧಿಯಲ್ಲಿ ಶಿಕ್ಷಣಕ್ಕೆ ಹಾಜರಾಗಬೇಕಾಗುತ್ತಿತ್ತು. ಕುಳಿತ ಮೆಟ್ಟಿಗೆ ಎರಡು, ಮೂರು, ನಾಲ್ಕು ಗಂಟೆ ಕಾಲ ವಾದ್ಯವಾದನ ಸಾಧನೆ ಮಾಡುವಾಗ ಬೆನ್ನು ಮುರಿಯುವಂತೆನಿಸುತ್ತಿತ್ತು. ಇಚ್ಛಾಶಕ್ತಿಯನ್ನು ಬೆಳಸಿಕೊಳ್ಳಲು ರವಿಶಂಕರರು ಅನೇಕ ಕಠೋರ ನಿಯಮಗಳನ್ನು ಪಾಲಿಸುತ್ತಿದ್ದರು. ತಿಂಗಳುಗಳು, ವರ್ಷಗಳು ಸವೆದವು. ಆದರೆ ಗುರುಕೃಪೆಯಾಗಿತ್ತು, ಸರಸ್ವತಿಯ ವರದ ಹಸ್ತವಿತ್ತು. ಸಿತಾರಲ್ಲದೆ ಸುರಬಹಾರ, ಸುರಸಿಂಗಾರ, ರಬಾಬ ಮೊದಲಾದ ವಾದ್ಯಗಳನ್ನೂ ಅಲ್ಲಾವುದ್ದೀನ್‌ಖಾನರು ಕಲಿಸಿದರು.

೧೯೩೮ರಲ್ಲಿ ಅಲಹಾಬಾದಿನಲ್ಲಿ ಸೇರಿದ ಸಂಗೀತ ಪರಿಷತ್ತಿಗೆ ಅಲ್ಲಾವುದ್ದೀನ್ ಖಾನರು ಮಗ ಅಲಿ ಅಕಬರ ಖಾನರನ್ನೂ ರವಿಶಂಕರರನ್ನೂ ಕಳಿಸಿದರು. ಅದೇ ಸ್ವತಂತ್ರವಾಗಿ ರವಿಶಂಕರರು ಪ್ರಥಮವಾಗಿ ವಿದ್ವಜ್ಜನ ಮಂಡಲಿಯಲ್ಲಿ ಸಿತಾರು ಬಾರಿಸಿದ್ದು. ರವಿಶಂಕರರ ಅಂದಿನ ಕಾರ್ಯಕ್ರಮ ಗುರುವಿಗೆ ಕೀರ್ತಿ ತರುವಂಥದಾಗಿತ್ತು.

ಅಂದಿನಿಂದ ರವಿಶಂಕರ, ಅಲಿ ಅಕಬರ ಮತ್ತು ಅಲ್ಲಾವುದ್ದೀನರ ಮಗಳು ಅನ್ನಪೂರ್ಣಾ (ಅವರು ಮುಸಿಮರಾಗಿದ್ದರೂ ತಮ್ಮ ಧರ್ಮಸಹಿಷ್ಣುತೆಯನ್ನು ತೋರಿಸಲು ಗಂಡುಮಕ್ಕಳಿಗೆಲ್ಲ ಮುಸ್ಲಿಂ ಮತ್ತು ಹೆಣ್ಣು ಮಕ್ಕಳಿಗೆಲ್ಲ ಹಿಂದೂ ಹೆಸರುಗಳನ್ನಿಟ್ಟಿದ್ದರು.) ಇವರಿಗೆ ಒಟ್ಟೊಟ್ಟಿಗೆ ಸಂಗೀತ ಪಾಠ ನಡೆಯತೊಡಗಿತು. ಒಮ್ಮೆ ಅವರನ್ನು ಕಾಣಲು ಬಂದಿದ್ದ ಉದಯಶಂಕರರ ಹೆಂಡತಿಗೆ ಹತ್ತಿರ ಹತ್ತಿರ ಕುಳಿತು ಗುರು ಸಮ್ಮುಖದಲ್ಲಿ ಸಂಗೀತ ಸಾಧನೆ ನಡೆಸುತ್ತಿದ್ದ ಅನ್ನಪೂರ್ಣಾ ಮತ್ತು ರವಿಶಂಕರರು ಪರಸ್ಪರ ಎಷು ಅನುರೂಪರಾಗಿ ಕಂಡರೆಂದರೆ ಅವರು ತಮ್ಮ ಅಭಿಪ್ರಾಯವನ್ನು ಬಹಿರಂಗವಾಗಿ ವ್ಯಕ್ತಗೊಳಿಸಿದರು. ಈ ಕಲ್ಪನೆ ಎಲ್ಲರಿಗೂ ತುಂಬ ಯೋಗ್ಯವಾಗಿ ಕಂಡಿತು. ಅನ್ನಪೂರ್ಣಾ ಹಿಂದೂ ಧರ್ಮವನ್ನಂಗೀಕರಿಸಿ ರವಿಶಂಕರರ ವಧುವಾದಳು. ಅಲ್ಲಾವುದ್ದೀನರು ರವಿಶಂಕರರನು

ತನ್ನ ಮೂರನೆ ಮಗು ಎಂದು ಕರೆದರು. ಸ್ಥಳಿಕ ಮುಸ್ಲಿಂ ಸಮಾಜದಲ್ಲಿ ಈ ವಿವಾಹವು ಕೆಲ ಕಾಲ ಅಸಂತೋಷಲಹರಿಯನ್ನೆಬ್ಬಿಸಿದರೂ ಅಲ್ಲಾವುದ್ದೀನರ ವಿಶಾಲ ಹಾಗು ದೃಢ ಹೃದಯ ವಿಚಲಿತವಾಗಲಿಲ್ಲ. ಅವರ ಮೂವರು "ಮಕ್ಕಳ" ಸಾಧನೆ ಇನ್ನೂ ಹೆಚ್ಚಾಗಿ, ಇನ್ನೂ ಸ್ನೇಹ ಪೂರ್ಣ ಸ್ಪರ್ಧೆಯಿಂದ ಮುಂದುವರಿಯಿತು.

ರವಿ–ಅನ್ನಪೂರ್ಣೆಯರ ಮಗು ಶುಭೇಂದ್ರನಿಗೆ ಮೂರು ವರ್ಷವಾದಾಗ ರವಿಶಂಕರರು ಪತ್ನೀ ಸಮೇತರಾಗಿ ಸತಂತ್ರ ಭವಿಷ್ಯವನ್ನರಸುತ್ತ ಮುಂಬಯಿಗೆ ಬಂದರು. ಸ್ವತಂತ್ರ ಭವಿಷ್ಯತ್ತನ್ನು ಅರಸುವುದೂ ಗುಡ್ಡವೇರಿದಂತೆಯೆ ಇತ್ತು. ದೊರೆತ ಕಾರ್ಯಕ್ರಮಗಳನ್ನೇ ಒಪ್ಪಿಕೊಂಡು ಸಾಗಬೇಕಾಗಿತ್ತು. ಹಣದ ವಿಷಯ ವಿಶೇಷ ಒತ್ತಡ ತರುವಂತಿರಲಿಲ್ಲ. ಗ್ರಾಮಾಫೋನ್ ರಿಕಾರ್ಡಿಂಗ್, ಪೀಪಲ್ಸ್ ಥಿಯೇಟರಿನಲ್ಲಿ ನೃತ್ಯ ಸಂಗೀತ ದಿಗ್ದರ್ಶನ, ಚಲಚ್ಚಿತ್ರ ವಾದ್ಯಮೇಳ ದಿಗ್ದರ್ಶನಗಳನ್ನೂ ಸ್ವೀಕರಿಸಬೇಕಾಯಿತು. ಅತ್ತ ದುಡಿಯಬೇಕು, ಇತ್ತ ಉಣ್ಣಬೇಕು ಎಂಬಂತಿತ್ತು. ಅನಂತರ ಐದು ವರ್ಷ ದಿಲ್ಲಿ ಆಕಾಶವಾಣಿಯಲ್ಲಿ ಮೇಳವಾದ್ಯ ದಿಗ್ದರ್ಶಕರಾಗಿ ಅವರು ಶ್ರಮಿಸಿದರು. ಆಗಲೇ ಅವರ ಪ್ರತಿಭೆಗೆ ಮನ್ನಣೆ ದೊರೆತದ್ದು. ಅವರು ಭಾರತೀಯ ಆರ್ಕೆಸ್ಟ್ರಾವನ್ನು ಕಲ್ಪಿಸಿ ಕಟ್ಟಿ ಬೆಳಸಿದರು. ಅದು ಜನಪ್ರಿಯವಾಯಿತು.

೧೯೫೬ ರಲ್ಲಿ ಆಕಾಶವಾಣಿಯ ಕೆಲಸ ಬಿಟ್ಟು ಅವರು ಪುನಃ ಸ್ವತಂತ್ರರಾದರು. ಎರಡು ವರ್ಷಗಳ ನಂತರ ಅವರು ಕೈಕೊಂಡ ಯುರೋಪ್ ಯಾತ್ರೆ ಅತ್ಯಂತ ಯಶಸ್ವಿಯಾಯಿತು. ಜಗತ್ತಿನ ಶ್ರೇಷ್ಠ ಪಿಟೀಲುವಾದಕ ಯಹೂದಿ ಮೆನುಹಿನ್ ನೊಡನೆ ಟೆಲಿವಿಜನ್ ಕಾರ್ಯಕ್ರಮವೊಂದು ಜರುಗಿತು. ರಶಿಯದ ಆಯ್‌ಸ್ಟ್ರಾಕ್‌ನೊಡನೆ ಇಂಗ್ಲಂಡಿನಲ್ಲಿ ಅವರ ವಾದನವಾಯಿತು. ಯುರೋಪಿನ ರುಚಿಗಳನ್ನರಿತ ಅವರು ಅಲ್ಲಿಯ ಜನರನ್ನೂ ಮುಗ್ಧಗೊಳಿಸಿದ್ದಾರೆ.

ಈಗ ರವಿಶಂಕರರಗೆ ವೇಳೆಯೆ ಇಲ್ಲ. ಸಂಗೀತ ಕಚೇರಿಗಳು, ಚಲಚ್ಚಿತ್ರ ಪಾರ್ಶ್ವ ಸಂಗೀತ ಯೋಜನೆ, ವಿದೇಶಯಾತ್ರೆಗಳು ಇವನ್ನೆಲ್ಲ ಅವರು ಯಾವುದೋ ಕೌಶಲದಿಂದ ತೂಗಿಸಿಕೊಂಡು ಹೋಗುತ್ತಿದ್ದಾರೆ. ನೆಹರೂ ಅವರ "ಭಾರತ ದರ್ಶನ" ದ ನೃತ್ಯನಾಟ್ಯರೂಪವನ್ನು ಅವರೇ ಯೋಜಿಸಿ ಮೆಚ್ಚುಗೆ ಪಡೆದಿದ್ದಾರೆ. ಮುಂಬಯಿಯಲ್ಲಿ ಅವರ ಪ್ರಥಮ ಕಛೇರಿಗೆ ೧೦೧ ರೂಪಾಯಿ ಮಾತ್ರ ದೊರಕಿತ್ತು ; ಈಗ ಅಂಕೆ ೨೦೦೦ ಕ್ಕೇರಿದೆ. ಮುಂಬಯಿಯ ಸಿರಿವಂತರ ವಸತಿಯಾದ ಮಲಬಾರ್ ಹಿಲ್ಲಿನಲ್ಲಿ ಸುಂದರವಾದ ಮನೆಯೊಂದನ್ನು ಕಟ್ಟಿಕೊಂಡು ಸುಖದಾಂಪತ್ಯವನ್ನು ನಡೆಸುತ್ತಿದ್ದಾರೆ.

ರವಿಶಂಕರರ ಜೀವನದಲ್ಲಿ ಮತ್ತು ಅವರ ಗುರು ಅಲ್ಲಾವುದ್ದೀನರ ಜೀವನದಲ್ಲಿ ಕೂಡ, ಬಹುಶಃ ಅತಿ ಅಮೋಘವಾದ ಮುಹೂರ್ತ ರವಿಶಂಕರರು ಮುಂಬಯಿಯಲ್ಲಿ ಸ್ಥಿರವಾಗಿ ತಳವೂರಿದನಂತರ ನಡೆದ ಒಂದು ಕಛೇರಿಯ ದಿನ ಬಂತು. ಅಂದು ಸ್ವತಃ ಅಲ್ಲಾವುದ್ದೀನ್ ಖಾನರು ಉಪಸ್ಥಿತರಾಗಿದ್ದರು. ಎಡಕ್ಕೆ ಅಲಿ ಅಕಬರ್ ಮತ್ತು ರವಿಶಂಕರರು, ಹಿಂಗಡೆ ಅಲಿ ಅಕಬರರ ಮಗ ಆಶೀಶ ಮತ್ತು ಅನ್ನಪೂರ್ಣಾ. ರವಿಶಂಕರರ ಕೈಲಿ ಸಿತಾರು, ಉಳಿದವರ ಕೈಲಿ ಸರೋದ. ಸರಸ್ವತಿ ಅಂಥ ಮೇಳವನ್ನು ಅಪರೂಪವಾಗಿಯೆ ಕಂಡಿರಬೇಕು.

ಸಹಪಾಠಿಗಳಾದ ಅಲಿ ಅಕಬರರು ಸರೋದವನ್ನೂ ರವಿಶಂಕರರು ಸಿತಾರನ್ನೂ ಹಿಡಿದ "ಜುಗಲ ಬಂದಿ" ಕಾರ್ಯಕ್ರಮಗಳೆಂದರೆ ಕಲಾರಸಿಕರಿಗೊಂದು ಸಂತಸದ ಸುಗ್ಗಿ. ಇಬ್ಬರು ಸರಸ್ವತೀ ಪುತ್ರರ ಕೈಯಲ್ಲಿ ತಂತೀವಾದ್ಯಗಳು ಮಾನವೀ ಭಾವನೆಗಳನ್ನು ನಾದದ ಭಾಷೆಯಲ್ಲಿ ನೇರವಾಗಿ ಹೃದಯಕ್ಕೆ ತಲುಪಿಸುತ್ತವೆ ಅದು ನೇಮಿಚಂದ್ರ ಹೇಳಿದ ಹಾಗೆ, ಅಕ್ಷರಶಃ "ಕಿವಿಯಿಂದೀಂಟಿಸುಗುಂ ಸಮಸ್ತ ರಸಮಂ."

ರವಿಶಂಕರರು ದೇಶವಿದೇಶಗಳನ್ನು ಸುತ್ತಿ ತಮ್ಮ ಸಂಗೀತಕ್ಕೆ ಅದರದೇ ಮೆರುಗನ್ನು ಕೊಟ್ಟಿದ್ದಾರೆ. ಪಾಶ್ಚಾತ್ಯ ಸಂಗೀತದಿಂದ ಆರ್ಕೆಸ್ಟ್ರಾ ಪದ್ಧತಿಯನ್ನು ಎರವಲು ತಂದು ರೂಪಾಂತರಿಸಿ ಭಾರತೀಯ ಸಂಗೀತಕ್ಕೆ ಕಾಣಿಕೆ ಕೊಟ್ಟಿದ್ದಾರೆ. ಕರ್ನಾಟಕ ಸಂಗೀತದ ಮರ್ಮವನ್ನರಿತು ಅದರಿಂದ ಕೀರವಾಣಿ ಹೇಮವತಿ, ಸಿಂಹೇಂದ್ರ–ಮಧ್ಯಮ, ನಟಭೈರವಿ, ವಾಚಸ್ಪತಿ, ಚಾರುಕೇಶಿ ಮೊದಲಾದ ಅನೇಕ ರಾಗಗಳನ್ನು ಹಿಂದುಸ್ತಾನಿಗೆ ಅಳವಡಿಸಿದ್ದಾರೆ. ತಮ್ಮದೇ ಹೊಸ ರಾಗಗಳನ್ನೂ ಶೋಧಿಸಿದ್ದಾರೆ.

ಈ ತರುಣವಾದಕನ ವಯಸ್ಸು ನೋಡಿ ಇವನೆಷ್ಟು ಶಾಸ್ತ್ರ ಬಲ್ಲಾನು ಎಂದುಕೊಂಡವರು ಕೈಸುಟ್ಟುಕೊಳ್ಳಬೇಕಾಗುತ್ತದೆ. ಮುಂಬಯಿಯಲ್ಲೊಮ್ಮೆ ಒಬ್ಬ ಹೆಸರಾಂತ ತಬಲಜಿ ಈ ನಿನ್ನೆಮೊನ್ನೆಯ ಪೋರ ಏನು ಬಾರಿಸಿಯಾನು ಎಂಬ ಭಾವದಿಂದ ರವಿಶಂಕರ ಕಚೇರಿಯಲ್ಲಿ ತಬಲಾದ "ಸಿಂಹನಾದ" ಮಾಡಿ ಅವರತ್ತ ನೋಡಿದನು. ರವಿ ಶಂಕರರು ಆಲಾಪ ಮುಗಿಸಿ ಅವನಿಗೆ ಸನ್ನೆ ಮಾಡಿ ಹಾಡಿನ ಪಲ್ಲವಿ ಪ್ರಾರಂಭಿಸಿದರು. ತಬಲಜಿಗೆ ಬಗೆಯೇ ಹರಿಯಲಿಲ್ಲ. ಯಾವ ತಾಳದ ಗತ್ತು ಬಾರಿಸಿದರೂ ಸರಿಹೊಂದಲಿಲ್ಲ. ಕಡೆಗೆ ರವಿಶಂಕರರೇ ಇದು "ಚಂಪಕ ಸವಾರಿ" ತಾಳ ಎಂದರು. ಆ ಪಳಗಿದ ತಬಲಜಿ ಆ ತಾಳದ ಹೆಸರನ್ನೇ ಕೇಳಿರಲಿಲ್ಲ. ರವಿಶಂಕರರು ಅತ್ಯಂತ ಮಧುರವಾದ ವಾದನವನ್ನು ಹೇಗೆ ಮಾಡಬಲ್ಲರೋ ಅಷ್ಟೇ ಕಠಿನ, ಜಟಿಲವಾದ ಶಾಸ್ತ್ರ ಕೌಶಲಗಳನ್ನೂ ಕರಗತ ಮಾಡಿಕೊಂಡಿದ್ದಾರೆ.

ಹೀಗಿದ್ದರೂ ಈ ಕಲಾವಿದ ನಿಹಂಕಾರಿ; ತೆರೆದ ಮನಸಿನವರು. ಬಹುಬೇಗ ಗೆಳೆಯರನ್ನು ಮಾಡಿಕೊಳ್ಳುತ್ತಾರೆ. ಅವರೊಡನೆ ಕಲಾವಿಷಯ ಚರ್ಚಿಸುತ್ತಾರೆ. ಅವರಿಗೆ ತಿಳಿಹೇಳುತ್ತಾರೆ. ಅವರಿಗಾಗಿ ಬಾರಿಸಿ ತೋರಿಸುತ್ತಾರೆ. ನಿಜವಾಗಿ ಅವರ ವಾದನ ರಸವನ್ನು ಸವಿಯಬೇಕಾದರೆ ಅವರು ಸ್ವಗೃಹದಲ್ಲಿ, ಗುರುಪ್ರತಿಮೆ ಮತ್ತು ಸರಸ್ವತೀ ಚಿತ್ರದ ಸಮ್ಮುಖದಲ್ಲಿ ಬಾರಿಸುವುದನ್ನು ಕೇಳಬೇಕು. *

## ಸೂಳ್–ನುಡಿಗಳು

ಆತ್ಮನೋ ಮುಖದೋಷೇಣ ಬಧ್ಯಂತೇ ಶುಕಸಾರಿಕಾಃ ।
ಬಕಾಸ್ತತ್ರ ನ ಬಧ್ಯಂತೇ ಮೌನಂ ಸರ್ವಾರ್ಥಸಾಧನಮ್ ॥

ತಮ್ಮ ಬಾಯಿಯ ದೋಷದಿಂದ ಗಿಳಿಗಳೂ ಸಾರಿಕೆಗಳೂ ಹಿಡಿಯಲ್ಪಟ್ಟು ಪಂಜರ ಸೇರುತ್ತವೆ. ಬಕಪಕ್ಷಿಗಳನ್ನು ಯಾರೂ ಹಿಡಿಯುವುದಿಲ್ಲ. ಅದಕ್ಕೇ ಹೇಳುವುದು, ಮೌನವೇ ಸರ್ವಾರ್ಥಸಾಧನ ಎಂದು.

ಜಲೇ ತೈಲಂ ಖಲೇ ಗುಹ್ಯಂ ಪಾತ್ರೇ ದಾನಂ ಮನಾಗಪಿ ।
ಪ್ರಾಜ್ಞೇ ಶಾಸ್ತ್ರಂ ಸ್ವಯಂ ಯಾತಿ ವಿಸ್ತಾರಂ ವಸ್ತುಶಕ್ತಿತಃ ॥

ನೀರಿನಲ್ಲಿ ಎಣ್ಣೆ, ದುಷ್ಟರಲ್ಲಿ ಗುಟ್ಟು, ಸತ್‌ಪಾತ್ರದಲ್ಲಿ ದಾನ, ಬಲ್ಲವರಲ್ಲಿ ಶಾಸ್ತ್ರ ಇವು ತಾವಾಗಿ ವಿಸ್ತಾರ ಹೊಂದುತ್ತವೆ.

ಗುಣಂ ಪೃಚ್ಛಸ್ವ ಮಾ ರೂಪಂ ಶೀಲಂ ಪೃಚ್ಛಸ್ವ ಮಾ ಕುಲಮ್ ।
ಸಿದ್ಧಿಂ ಪೃಚ್ಛಸ್ವ ಮಾ ವಿದ್ಯಾಂ ಭೋಗಂ ಪೃಚ್ಛಸ್ವ ಮಾ ಧನಮ್ ॥

ರೂಪವನ್ನಲ್ಲ ಗುಣವನ್ನು ಕೇಳು; ಕುಲವನ್ನಲ್ಲ ಶೀಲವನ್ನು ಕೇಳು; ವಿದ್ಯೆಯನ್ನಲ್ಲ ಸಿದ್ಧಿಯನ್ನು ಕೇಳು; ಹಣವನ್ನಲ್ಲ ಭೋಗವನ್ನು ಕೇಳು.



ಐದು ಶತಮಾನವಾದರೂ ಅದು ಕೊಳೆತಿಲ್ಲ

# ಸಂತ ಜೇವಿಯರನ ಶವದ ಅಪೂರ್ವ ಕಥೆ

ಮುಕ್ತಾ ರಾಜೆ

ಕ್ರಿ. ಶ. ೧೫೪೨ ರ ಚಳಿಗಾಲದ ಪ್ರಾತಃಕಾಲ. ಇನ್ನೂ ಸೂರ್ಯೋದಯವಾಗಿಲ್ಲ. ಆಗಲೇ ಗೋವೆಯ ಎಷ್ಟೋ ದೊಡ್ಡದೊಡ್ಡ ಅಧಿಕಾರಿಗಳು ಸಾಗರತೀರದಲ್ಲಿ ಆತುರದಿಂದ ಅತಿಥಿಯ ಬರವಿಗಾಗಿ ಕಾದಿದ್ದಾರೆ. ಪೋರ್ತುಗಾಲದ ಮಹಾರಾಜ ಮೂರನೇ ಜಾನ್‌ನು ಅತಿಥಿಯ ಸ್ವಾಗತವನ್ನು ವಿಜೃಂಭಣೆಯಿಂದ ಮಾಡಬೇಕೆಂದು ಆದೇಶವಿತ್ತಿದ್ದನು. ಆ ಮೇರೆಗೆ ಗೋವೆಯನ್ನು ಅಂದವಾಗಿ ಸಿಂಗರಿಸಲಾಗಿತ್ತು. ಸ್ವಾಗತಕ್ಕೆ ಜನರು ಸಾಲುಗಟ್ಟಿ ನಿಂತಿದ್ದರು.

ಹಡಗವು ತೀರವನ್ನುಸಮೀಪಿಸಿತು. ಬ್ಯಾಂಡ್ ವಾದನ ಸುರುವಾಯಿತು. ಅಧಿಕಾರಿಗಳು ತಮ್ಮ ತಮ್ಮ ಸ್ಥಳಗಳಲ್ಲಿ ನಿಂತರು. ಬಟ್ಟೆಗಳು ಓರಣವಾಗಿವೆಯೊ ಇಲ್ಲವೊ ಎಂದು ನೋಡಿಕೊಂಡರು. ಯಾರೊ ಹಣೆಯ ಬೆವರೊರಸಿಕೊಂಡರು.

ಹಡಗು ಲಂಗರ್ ಹಾಕಿತು. ಗೋವಾದ ಗವರ್ನರ್ ಜನರಲ್ಲರು ಮುಂದಾದರು. ಸ್ವತಃ ಪೋಪರಿಂದ ನಿಯುಕ್ತರಾದ ಧರ್ಮದೂತರು ಬರಿಗಾಲಿನಿಂದ ಹಡಗಿನಿಂದಿಳಿದರು. ಹರಹರಕಾದ ಅವರ ವೇಷ ಕಂಡು ಗವರ್ನರ್ ಜನ

• ಧರ್ಮಯುಗ " ದಿಂದ

ರಲ್‌ರು ಅಚ್ಚರಿಗೊಂಡರು. ಆದರೂ ಅವರು ಧರ್ಮದೂತರಲ್ಲವೆ? ರಾಜಸಮ್ಮಾನಿತರು. ಅವರನ್ನು ಇವರು ಆದರದಿಂದಲೇ ಸ್ವಾಗತಿಸಿದರು. ಸಿಂಗರಿಸಿದ ಪಲ್ಲಕ್ಕಿಯಲ್ಲಿ ಕೂಡ್ರಲು ಅವರನ್ನು ಕೇಳಿಕೊಂಡರೆ ಅವರು ಅದಕ್ಕೊಪ್ಪದೇ ಎಲ್ಲರ ಹಾಗೆ ನಡೆಯತೊಡಗಿದರು. ಆರ್ಕ್‌ಬಿಶಪ್‌ರ ಮಹಲಿನಲ್ಲಿ ಇವರು ಇಳಕೊಳ್ಳುವ ವ್ಯವಸ್ಥೆ ಮಾಡಿದ್ದರು. ಆದರೆ ಧರ್ಮದೂತರು ಸಾರ್ವಜನಿಕ ಆಸ್ಪತ್ರೆಯ ದಾರಿ ಕೇಳಿದರು. ಧರ್ಮದೂತರಿಗೆ ಔಷಧೋಪಚಾರ ನಡೆಯಬೇಕೇ ಎಂದೂ ಕೆಲವರು ಶಂಕಿಸಿದರು. ಆದರೆ ಅವರ ಹಾರಾಡುವ ಉಂಗುರಗೂದಲು, ಕರೇ ಗಡ್ಡ, ತೇಜಸ್ವಿ ಮುಖ ನೋಡಿದರೆ ಇವರು ತುಂಬ ಆರೋಗ್ಯವಂತರೆಂದೇ ತೋರುತ್ತಿತ್ತು. ಆಕಾಶದತ್ತ ನೋಡುತ್ತ ಧರ್ಮದೂತರು ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡು ಪ್ರಾರ್ಥನೆಯನ್ನು ಹೇಳುತ್ತ ನಡೆದಿದ್ದರು. ಅವರ ಹೇಳಿಕೆಯಂತೆ ಅವರನ್ನು ಆಸ್ಪತ್ರೆಗೇ ಒಯ್ದುದ್ದಾಯಿತಾದರೂ ಎಲ್ಲರೂ ಇವರ ಅನಿರೀಕ್ಷಿತ ವರ್ತನೆಯಿಂದ ವಿಸ್ಮಯಗೊಂಡಿದ್ದರು. ಆಸ್ಪತ್ರೆಯಲ್ಲಿ ಹೋಗಿ ಇವರು ಕುಷ್ಠರೋಗಿಗಳ ಕಾಲು ತೊಳೆಯಲಾರಂಭಿಸಿದರು.

ಈ ಧರ್ಮದೂತರು ಮತ್ತಾರೂ ಅಲ್ಲ; ಫಾದರ್ ಜೇವಿಯರರಾಗಿದ್ದರು. ಮುಂದೆ ಇವರೇ ಸೇಂಟ್ ಜೇವಿಯರ್ ಎಂದು ಲೋಕವಿಖ್ಯಾತರಾದರು. ಅವರ ಜೀವನಕ್ಕಿಂತ ಮರಣಾನಂತರದ ಕತೆಯೇ ತುಂಬ ವಿಚಿತ್ರ ಸನ್ನಿವೇಶಗಳಿಂದ ಕೂಡಿದೆ. ೧೫೪೨ ರಲ್ಲಿ ಇವರು ಗೋವೆಗೆ ಬಂದರು. ಅಂದಿನಿಂದ ಇಂದಿಗೂ ಇವರ ಪೂಜೆ ಅಲ್ಲಿ ನಡೆಯುತ್ತಿದೆ. ಇವರ ಸ್ಮೃತಿಯನ್ನಲ್ಲ; ಇವರ ದೇಹವನ್ನೇ ಜನ ಪೂಜಿಸುತ್ತಾ ಬಂದಿದ್ದಾರೆ. ಪೋರ್ತುಗಾಲದವರು ತಮ್ಮ ಪ್ರತಿ ಸಮಸ್ಯೆಯನ್ನು ಬಿಡಿಸಲೂ ಈ ಮಹಾತ್ಮರನ್ನೇ ಮೊರೆಹೊಕ್ಕಿದ್ದಾರೆ. ಭಾರತವು ಗೋವೆಯನ್ನು ಮುಕ್ತಗೊಳಿಸಲು ಈಗ ಪೂರ್ಣ ಸಿದ್ಧತೆ ಮಾಡಿಕೊಂಡಿದೆ ಎಂದು ತಿಳಿದೊಡನೆಯೇ ಗೋವಾದ ಪೋರ್ತುಗೀಸ್ ಅಧಿಕಾರಿಗಳು ೧೪ ಡಿಸೆಂಬರ್ ೧೯೬೧ ರಂದು ಜೇವಿಯರರ ಶರೀರವಿರುವ ಪೆಟ್ಟಿಗೆಯನ್ನು ತೆರೆದು ಅವರ ದರ್ಶನ ಹೊಂದಿ ಗೋವೆಯ ಕಲ್ಯಾಣ ಮಾಡಿರೆಂದು ಬೇಡಿಕೊಂಡರು. ಅವರ ಪ್ರತಿ-ಪ್ರಾರ್ಥನೆಯನ್ನೂ ಜೇವಿಯರ್ ನಡೆಸಿಕೊಟ್ಟಿದ್ದರು.

ಜೇವಿಯರರು ಬರುವ ಮೊದಲು ಗೋವೆಯಲ್ಲಿ ಎಲ್ಲ ಕಡೆಗೂ ಹಾಹಾಕಾರವಿತ್ತು. ಯಾರು ಬೇಕಾದರೂ ಯಾರುಬೇಕಾದವರ ವಿತ್ತ, ಜೀವಿತಗಳನ್ನು ಅಪಹರಿಸಬಹುದಿತ್ತು. ಪೋರ್ತುಗಾಲದ ಸಿಪಾಯಿಗಳಂತೂ ಬೇಕಾದವರ ಸ್ತ್ರೀ, ಕನ್ನೆಯರನ್ನು ಓಡಿಸಿಕೊಂಡು ಹೋಗುತ್ತಿದ್ದರು. ಚರ್ಚುಗಳು ಇದ್ದೂ ಇಲ್ಲದಂತಿದ್ದವು. ಅನ್ಯಾಯವು ಈ ರೀತಿ ತಾಂಡವವಾಡುತ್ತಿದ್ದಾಗ ಜೇವಿಯರರು ಆಗಮಿಸಿ ಚರ್ಚುಗಳಲ್ಲಿ ಜೀವಕಳೆ ತುಂಬಿದರು. ಅನ್ಯಾಯಗಳಿನ್ನೂ ಪೂರ್ತಿ ಅಳಿದಿರಲಿಲ್ಲವಾದರೂ ಬಡಬಗ್ಗರ ಮನಮನೆಗೆ ಹೋಗಿ ಅವರೊಂದಿಗೆ ಕೂಡಿಕೊಂಡು ಅವರ ಪ್ರೀತಿ ಸಂಪಾದಿಸಿ ಅವರ ಸೇವೆಗೈದು ಒಬ್ಬೊಬ್ಬರಾಗಿ ಎಲ್ಲ ಬಡವರನ್ನೂ ಕ್ರಿಸ್ತಮತಾನುಯಾಯಿಗಳಾಗಿ ಮಾರ್ಪಡಿಸಿದರು. ಪೋರ್ತುಗಾಲದವರು ಒತ್ತಾಯದಿಂದ ಮಾಡುತ್ತಿದ್ದುದನ್ನು ಇವರು ಸ್ನೇಹದಿಂದ ಮಾಡಿದರು.

ಇಡೀ ದಕ್ಷಿಣ ಭಾರತದಲ್ಲಿ ಧರ್ಮಪ್ರಸಾರ ಮಾಡಿ ಅವರು ಜಪಾನ್ ಮತ್ತು ಚೀನಗಳತ್ತ ಹೋದರು. ಅಲ್ಲಿಯೂ ತುಂಬ ಧರ್ಮಪ್ರಸಾರ ಮಾಡಿದರು. ಇಡೀ ಏಶಿಯಖಂಡವನ್ನೇ ಸುತ್ತುವ ಇಚ್ಛೆ ಅವರಿಗಿತ್ತು. ಆದರೆ ದಾರಿಯಲ್ಲಿ ೨೭ ನವೆಂಬರ್ ೧೫೫೨ ರಂದು ಚೀನದ ಚುವಾನ್ ಪ್ರಾಂತದಲ್ಲಿ ಕ್ಯಾಂಟನ್ ನದಿಯ ಮುಖದ ಬಳಿ ಪ್ರಾಣ ಬಿಟ್ಟರು. ಹತ್ತು ವರ್ಷಗಳ ಈ ಕಾಲದಲ್ಲಿ ಅವರು ಅತ್ಯಾಚಾರದಿಂದ ಬೆಂಡಾದ ಅನೇಕರಿಗೆ ಪ್ರೀತಿಯ ಆಸರೆ ಇತ್ತಿದ್ದರು.

ಮನುಷ್ಯವಸತಿಯಿಂದ ದೂರ ಇವರ ಮರಣ

ವಾಯಿತು. ಮೇಲಾಗಿ ನೋಡಿದ ಯಾರೇ ಗುರು
ತಿಸಬಹುದಾದಷ್ಟು ಇವರು ಆಗಿನ್ನೂ ಖ್ಯಾತರೂ
ಅಲ್ಲ. ಯಾವನೋ ಕ್ರಿಸ್ತಮತದ ಒಬ್ಬ ಚೀನೀ
ಮೀನುಗಾರ ಇವರ ಮೃತಶರೀರ ನೋಡಿ ತಮ್ಮ
ಧರ್ಮದವರೆಂಬ ಭಾವನೆಯಿಂದ ಅಂತ್ಯ-
ಸಂಸ್ಕಾರ ಮಾಡಿದನು. ಗೋರಿ ಕಟ್ಟಿಸುವಷ್ಟು
ಹಣ ಅವನಲ್ಲಿರಲಿಲ್ಲ. ಆದರೂ ಕಾಡು ಪ್ರಾಣಿ
ಗಳು ಕೆದರಿ ಹೆಣಕ್ಕೆ ಅಪಾಯ ಮಾಡದಿರಲೆಂದು
ಹೆಣವನ್ನು ಸುಣ್ಣದಲ್ಲಿ ಮುಚ್ಚಿ ಹುಗಿದನು. ಇದ
ರಿಂದ ಮೃತ ಶರೀರ ಬೇಗನೆ ಅರಗಿಹೋಗುವು
ದೆಂದು ಆತ ತಿಳಿದಿದ್ದ.

ಮುಂದೆ ಪೋರ್ತುಗಾಲದವರ ಒಂದು ಶಾಸನ
ಕ್ಷೇತ್ರವಾದ ಮಲಕ್ಕಾದಲ್ಲಿ ಈ ಸಮಾಚಾರ
ಹಬ್ಬಿತು. ಅಧಿಕಾರಿಗಳು ಜೇವಿಯರರ ಅಸ್ಥಿ
ಗಳನ್ನು ತಂದು ಸುರಕ್ಷಿತವಿಡಬೇಕೆಂದು ಕೆಲವ
ರನ್ನು ಅತ್ತ ಅಟ್ಟಿದರು. ಈ ಜನರು ೧೭ ಫೆಬ್ರು
ವರಿ ೧೫೫೩ ರಂದು ಅಲ್ಲಿ ತಲುಪಿದರು. ಆಗಲೇ
ಮೂರು ತಿಂಗಳುಗಳಾಗಿ ಹೋಗಿದ್ದವು. ಗೋರಿ
ಅಗೆದಾಗ ಎಲ್ಲರೂ ಆಶ್ಚರ್ಯಪಡುವಂತೆ ಹೆಣ
ಇನ್ನೂ ಹಾಗೇ ಇತ್ತು. ಅದೇ ನಿದ್ರಿಸಿದ ವ್ಯಕ್ತಿ
ಎಚ್ಚರಾಗಿ ಎದ್ದು ಬಂದಾನೇನೊ ಎಂಬಂತೆ!

ಮಲಕ್ಕಾದಲ್ಲಿ ಜೇವಿಯರರ ಶವವನ್ನು ಒಳ್ಳೇ
ಆದರದಿಂದ ದಫನ ಮಾಡಲಾಯಿತು. ಶವದ
ಅವಿಗಲಿತ ಅವಸ್ಥೆಯ ಸುದ್ದಿ ವೈಸರಾಯರಿಗೆ
ತಿಳಿದಾಗ ಅವರು ಶವವನ್ನು ಗೋವೆಗೇ ತರ
ಬೇಕೆಂದು ಸೂಚಿಸಿದರು. ಅದನ್ನು ಮಲಕ್ಕಾದ
ಗೋರಿಯಿಂದ ಅಗೆದು ತಂದು ಗೋವೆಯಲ್ಲಿ
ಹುಗಿದರು. ಆ ಪುಣ್ಯಪುರುಷನ ಶವದರ್ಶನಕ್ಕಾಗಿ
ಗೋವೆಯ ಜನ ಹಿಂಡುಹಿಂಡಾಗಿ ನೆರೆದರು.
ಒಂದು ವರ್ಷದ ತರುವಾಯ ಕುತೂಹಲದಿಂದ
ಮತ್ತೊಮ್ಮೆ ಶವವನ್ನು ಹೊರತೆಗೆದು ನೋಡಿ
ದಾಗ ಆಗಲೂ ಶರೀರ ಮೊದಲಿನಂತೇ ಇತ್ತು.
ಭಕ್ತಜನ ಜೇವಿಯರರು ಸಮಾಧಿ ಹೊಂದಿರುವ
ರೆಂದೂ ಪುನಃ ಎಂದಾದರೂ ಎದ್ದು ಬರಬಹು
ದೆಂದೂ ಅನ್ನತೊಡಗಿದರು. ಜೀವಿಸಿದ್ದಾಗ
ಸಿಕ್ಕಿರದಷ್ಟು ಗೌರವ ಈಗ ಅವರಿಗೆ ಸಿಗತೊಡ
ಗಿತು. ಹಿಂದೆ ಬಡವರ ಪ್ರೀತಿ ಲಭಿಸಿದರೂ ಅಧಿ
ಕಾರಿಗಳು ಗೌಣಭಾವದಿಂದಲೇ ಇವರನ್ನು ಗಣಿ
ಸಿದ್ದರು. ಈಗ ಚಮತ್ಕಾರದಿಂದ ಅವರ ಕಣ್ಣು
ಕುಕ್ಕಿ ತಲೆ ಬಾಗಿದವು.

ಶವವನ್ನು ಒಂದು ಪೆಟ್ಟಿಗೆಯಲ್ಲಿ ಇಡಲಾ
ಯಿತು. ವರ್ಷಕ್ಕೊಮ್ಮೆ ತೆರೆದು ದರ್ಶನ ಮಾಡಿ
ಸುವ ಕ್ರಮ ಸುರುವಾಯಿತು. ದರ್ಶನಕಾಲಕ್ಕೆ
ಜನರ ಜಾತ್ರೆಯೇ ನೆರೆಯುತ್ತಿತ್ತು. ಭಕ್ತರು
ಅವರ ಪಾದ ಮುಟ್ಟುತ್ತಿದ್ದರು; ಪಾದಗಳಿಗೆ ಮು-
ತ್ತಿಡುತ್ತಿದ್ದರು. ಒಂದು ವರ್ಷ ಐಜಾವೆಲ್‌ಡೆ
ಕ್ಯಾರಂ ಎಂಬ ಮಹಿಳೆ ಅವರ ಕಾಲಿನ ಕೊಂಚ
ಭಾಗವನ್ನು ಕಡಿದು ಬಾಯಲ್ಲಿ ಅಡಗಿಸಿಕೊಂಡು
ಹೋದಳು. ೧೬೦೦ನೇ ಇಸವಿಯಷ್ಟರಲ್ಲಿ ಮತ್ತೊ
ಬ್ಬರು ಮತ್ತೊಂದು ಕಾಲಿನ ಸ್ವಲ್ಪ ಭಾಗವನ್ನು
ಕಡಿದೊಯ್ದರು. ೧೬೧೪ ರಲ್ಲಿ ಪೋಪರು ಇವರ
ಬಲಗೈಯನ್ನು ಕೇಳಿದರು. ಕಳಿಸಲಾಯಿತು.

ಜಗತ್ತು ಇವರನ್ನು ಋಷಿಮುನಿ ಎಂದು ಭಾವಿ
ಸಿತು. ಎಲ್ಲರೂ ಭಕ್ತಿಯಿಂದ ಚರ್ಚಿಸತೊಡಗಿ
ದರು. ಎಲ್ಲರ ಹರಕೆಗಳೂ ಪೂರ್ಣವಾಗುವ ಆಶಾ
ಸ್ಥಾನವಿದಾಯಿತು. ಹಿಂದುಸ್ಥಾನ ಒಂದೇ ಅಲ್ಲ,
ಯುರೋಪಿನಲ್ಲೂ ಜನ ಇವರನ್ನು ಶ್ರದ್ಧೆಯಿಂದ
ನೆನೆಸತೊಡಗಿದರು. ೧೬೯೦ ರಲ್ಲಿ ಪೋರ್ತು[illegible]-
ಲಿನ ರಾಣಿ ಮೇರಿಯಾ ಸೋಫಿಯಾ ಜೇವಿ
ಯರರ ಟೊಪ್ಪಿಗೆಯನ್ನು ಕೇಳಿದಳು. ಅದನ್ನಾಕೆ
ತನ್ನ ಮಗನ ಜನ್ಮಕಾಲಕ್ಕೆ ತಲೆಯ ಮೇಲೆ ಧರಿ
ಸಿದಳು. ಈ ಟೊಪ್ಪಿಗೆ ಜೇವಿಯರರ ಶವದ
ತಲೆಯ ಮೇಲೆ ೧೩೮ ವರ್ಷಗಳಿಂದ ಇತ್ತು.
ಅದರ ಬದಲು ರಾಣಿ ಒಂದು ಭಾರೀ ಬೆಲೆಯ
ಅಂಗಿಯನ್ನು ಹೊಲಿಸಿ ಜೇವಿಯರರ ಶವಕ್ಕೆ
ತೊಡಿಸಲೆಂದು ಕಳಿಸಿದಳು. ಈ ಅಂಗಿಯ
ಮೇಲೆ "ಸುಓ ಎಸ್. ಜೇವಿಯರ ಓ ಮಾರಿಯಾ
ಸೋಫಿಯಾ ರೆಜಿನಾ ಪೋರ್ತುಗಾಲಿಜ್"
ಎಂದು ತಾನೇ ಸ್ವತಃ ಕಸೂತಿ ಹಾಕಿದ್ದಳು

೧೬೯೫ ರಲ್ಲಿ ಟಸ್ಕಾನಿಯ ಡ್ಯೂಕನು ಜೇವಿ

ಯರನ ತಲೆದಿಂಬನ್ನು ಕೇಳಿದನು. ಅದರ ಬದಲು ಆತ ಅಮೃತಶಿಲೆಯ ಬಹುಮೂಲ್ಯವಾದ ಒಂದು ಸ್ತೂಪವನ್ನು ನಿರ್ಮಿಸಿ ಕಳಿಸಿದನು. ಇದರ ಮೇಲೆ ಜೇವಿಯರನ ಜೀವನ ಚರಿತ್ರೆಯನ್ನು ಕೆತ್ತಲಾಗಿತ್ತು. ಮೇಲೊಂದು ಬೆಳ್ಳಿಯ ಕೊಡೆಯೂ ಇತ್ತು. ಈ ವಸ್ತು ಇಂದಿಗೂ ಬೊಮ್ ಜೀಸಸ್‌ನಲ್ಲಿ ಇದೆ.

೧೭೦೦ ರಲ್ಲಿ ಹ್ಯಾಮಿಲ್ಟನ್ ಎಂಬ ತುಂಟ ಕ್ಯಾಪ್ಟನ್‌ನೊಬ್ಬ, ಜೇವಿಯರನ ಶರೀರದ ಕತೆ ಮೋಸದ ಕತೆಯೆಂದೂ ಈ ಶರೀರ ಮೇಣದ್ದಿದೆ ಎಂದೂ ಒಂದು ಲೇಖ ಬರೆದ. ಇದರ ಬಗ್ಗೆ ಚರ್ಚೆ ಬಹಳಷ್ಟು ಆಯಿತು. ಜನರ ಆದರ ಭಾವನೆ ಕಡಿಮೆಯಾಯಿತು. ಮುಂದೆ ಎಷ್ಟೋ ವರ್ಷ ಈ ಪೆಟ್ಟಿಗೆಯನ್ನು ತೆರೆಯಲೇ ಇಲ್ಲ.

ಭಾರತದಲ್ಲಿ ಸಿಪಾಯರ ಬಂಡಾಯವಾದ ಮೇಲೆ ಎರಡೇ ವರ್ಷಗಳ ತರುವಾಯ ಗೋವೆಯ ಸ್ಥಿತಿ ಹೇಗಿತ್ತೆಂದರೆ ಎಲ್ಲ ಮಠಗಳನ್ನು ಮುಚ್ಚಲಾಗಿತ್ತು. ಕೋಟೆಗಳೆಲ್ಲ ಪುರಾತನ ಅವಶೇಷ ಮಾತ್ರವಾಗಿದ್ದವು. ಆಗ ಪೋರ್ತುಗೀಸ್ ಸರಕಾರದಿಂದ ಗೋವೆಯ ಗವರ್ನರ ಜನರಲ್‌ನಿಗೆ ಸರಿಯಾಗಿ ಸಂಬಳವೂ ಸಿಗುತ್ತಿದ್ದಿಲ್ಲ. ಆಗ ಆತ ಜೇವಿಯರರ ಕಳೇವರವನ್ನೇ ಮೊರೆ ಹೊಕ್ಕ. ಡಾಕ್ಟರರ ಸಮಿತಿಯೊಂದನ್ನು ನಿರ್ಮಿಸಲಾಯಿತು. ಶವವನ್ನು ಪರೀಕ್ಷಿಸಿ ಶವವು ನಿಜವಾದದ್ದೆಂದೂ ಕಾಲಾಂತರದಿಂದ ಒಣಗಿದೆ ಎಂದೂ ಮುಖದ ಮೇಲೆ ಹಕ್ಕಳಿಗಟ್ಟಿದ್ದರೂ ತಲೆಯ ಕೂದಲು ಹಾಗೇ ಇವೆ ಎಂದೂ ಅವರು ಸಾರಿದರು. ಆಮೇಲೆ ಶವದ ಪೆಟ್ಟಿಗೆ ತೆರೆಯುವ ಸಮಾರಂಭವೇರ್ಪಟ್ಟಿತು. ಸುಮಾರು ಎರಡು ಲಕ್ಷ ಜನರು ಇವರ ದರ್ಶನ ಹೊಂದಿದರು. ಕಾಣಿಕೆಗಳನ್ನು ಅರ್ಪಿಸಿದರು. ಇದರಿಂದ ಎಷ್ಟೋ ದಿನ ಗವರ್ನರ್ ಜನರಲ್ ಸುಖದಲ್ಲಿರುವಂತಾಯಿತು.

ಈ ಶವದ ಬಗ್ಗೆ ನಡೆದ ಅತಿ ದೊಡ್ಡ ಸಮಾರಂಭ ಇಂದಿಗೆ ಒಂಭತ್ತು ವರ್ಷಗಳ ಹಿಂದೆ, ೧೯೫೨ ರಲ್ಲಿ. ಅಂದಿಗೆ ಜೇವಿಯರರು ಕಾಲವಾಗಿ ನಾಲ್ಕುನೂರು ವರ್ಷಗಳಾಗಿದ್ದವು. ಆಗ ಕೊನೆಯ ಬಾರಿ ದರ್ಶನ ಮಾಡಿಸಿ ಮುಂದೆಂದೂ ಪೆಟ್ಟಿಗೆ ತೆರೆಯಬಾರದೆಂದು ನಿರ್ಣಯವಾಗಿತ್ತು. ಇದು ಕೊನೆಯ ದರ್ಶನದ ಸಂಧಿ, ಏಕೈಕ ಸಂಧಿ ಎಂದು ಜಗತ್ತಿನಲ್ಲೆಲ್ಲ ಪ್ರಚಾರ ಮಾಡಲಾಯಿತು. ದೇಶವಿದೇಶಗಳಿಂದ ಭಕ್ತರು ಬಂದರು ಮತ್ತೆ ಗೋವೆಯ ಬಗ್ಗೆ ಚರ್ಚೆ ಲೋಕದಲ್ಲೆಲ್ಲ ಆಯಿತು. ಸಮಾರಂಭ ವಿಜೃಂಭಣೆಯಿಂದ ಜರುಗಿ ಕೊನೆಗೆ ಕಳೇವರವನ್ನು ಅಂತಿಮವಾಗಿ ಮುಚ್ಚಿ ದಫನ ಮಾಡಲಾಯಿತು. ಇತಿಹಾಸ ದೃಷ್ಟಿಯಿಂದ ನೋಡಿದರೆ ಜೇವಿಯರರು ಸತ್ತಾಗ ಅಕಬರನ ಆಳಿಕೆ ಇತ್ತು. ಆಮೇಲೆ ಮೊಗಲ ಕಾಲ ಮುಗಿದು ಬ್ರಿಟಿಶ್ ಆಳಿಕೆ ಮುಗಿದು ಭಾರತ ಪುನಃ ಸ್ವತಂತ್ರವಾದ ಮೇಲೆ ಐದು ವರ್ಷಗಳ ತರುವಾಯ ಈ ಶರೀರವನ್ನು ಹುಗಿಯಲಾಗುತ್ತಿತ್ತು.

ದಬ್ಬಾಳಿಕೆಯ ಗೋವೆಯಲ್ಲಿ ಜೇವಿಯರರ ಚಿತ್ತಕ್ಕೆ ಸ್ವಾಸ್ಥ್ಯ ಸಿಗಲಿಲ್ಲವೇನೋ. ಭಾರತವು ಗೋವಾ ವಿಮೋಚನೆಯ ಕ್ರಮಕೈಕೊಳ್ಳುವಾಗ "ಮತ್ತೊಮ್ಮೆ ಅವರ ಶವ ಗೋವಾ ರಕ್ಷಣೆಗಾಗಿ ಬಹಿರಂಗವಾಗಲಿದೆ, ಅವರ ಶವವನ್ನು ಪೋರುಗಾಲಿಗೇ ಒಯ್ಯುವ ವಿಚಾರವಿದೆ" ಎಂಬ ಸುದ್ದಿ ಬಂತು. ಆದರೆ ಪೋರ್ತುಗೀಸ್ ಸರಕಾರವು ಸ್ವಾತಂತ್ರ್ಯವನ್ನು ಸಂಕಟವೆಂದು ಬಗೆದರೂ ಜೇವಿಯರರು ಹಾಗೆ ತಿಳಿದಿದ್ದಿಲ್ಲವೇನೊ. ಡಿಸೆಂಬರ ೧೪ ಕ್ಕೆ ಶವ ಬಹಿರಂಗವಾಯಿತು. ಮುಂದೆ ಐದೇ ದಿನಗಳಲ್ಲಿ ಪೋರ್ತುಗಾಲದ ಸತ್ತೆ ಗೋವೆಯನ್ನು ಬಿಟ್ಟು ಓಡಿಹೋಗಬೇಕಾಯಿತು.

ಗೋವಾ ವಿಮೋಚನೆಯ ನಂತರ ಸ್ವತಃ ಮೇಜರ್ ಜನರಲ್ ಚೌಧುರಿಯವರು ಅವರ ದರ್ಶನಹೊಂದಿದರು. ಗೋವೆಯ ಜನತೆ ಜೇವಿಯರರಿಗೆ ಅನಂತ ಧನ್ಯವಾದಗಳನ್ನು ಅರ್ಪಿಸಿತು. *

ಅನಿರೀಕ್ಷಿತ ಅವಸಾನದ ಒಂದು ಕಥೆ

# ಸಿಲ್ಕ್ ಸೀರೆ

ಇಂದು ಹಾಸ

ತುಂಬಾ ಯೋಚನೆಯಲ್ಲಿ ಇದ್ದ ಹಾಗಿದೆಯಲ್ಲ" ಎಂಬ ಅಪರಿಚಿತ ಸ್ವರದಿಂದ ಆಶ್ಚರ್ಯಗೊಂಡು ನಾನು ಪಲ್ಲಂಗದ ಮೇಲೆ ಮಲಗಿದವನು ಎದ್ದು ಕುಳಿತೆ. ಅಷ್ಟರೊಳಗಾಗಿ ಅಪರಿಚಿತ ಆಗಂತುಕ ಕುರ್ಚಿಯ ಮೇಲೆ ಕುಳಿತುಕೊಂಡಿದ್ದ.

"ಏನು ಹಾಗೆ ಆಶ್ಚರ್ಯವಾಗಿ ನೋಡ್ತಾ ಇದ್ದೀರಲ್ಲ. ಓಹೋ, ನಾನು ಯಾರು ಅಂತ ಯೋಚಿಸ್ತಾ ಇದ್ದಿರಾ? ಹೇಳ್ತೀನೆ. ಅಲ್ಲಾ ನೀವು ಟರ್ಮಿನಲ್ ಪರೀಕ್ಷೆಯಲ್ಲಿ ನಪಾಸಾದದಕ್ಕೆ ಇಷ್ಟು ಖೇದಗೊಂಡಿದ್ದೀರಲ್ಲ! ಎಷ್ಟೊ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವುದಿಲ್ಲ ಕೂಡಾ!"

ಆಗುಂತುಕ ನನ್ನನ್ನು ಮಾತನಾಡಗೊಡದೇ ತಾನೇ ಮಾತನಾಡತೊಡಗಿದ್ದ. ಅಲ್ಲದೇ ನಾನು ಟರ್ಮಿನಲ್ ನಪಾಸಾದ ಬಗ್ಗೆ! ನಾನು ಕಣ್ಣುಜ್ಜಿಕೊಂಡು ಮತ್ತೊಮ್ಮೆ ನೋಡಿದೆ. ನನ್ನ ಪರಿಚಯದವನಂತೂ ಅಲ್ಲವೇ ಅಲ್ಲ. ಮತ್ತೆ ಆತನೇ ಪ್ರಾರಂಭಿಸಿದ.

"ಪರಿಚಯದವನಲ್ಲವೇಂರಾ? ನಿಜ. ನಮ್ಮ ನಿಮ್ಮ ಭೇಟಿ ನಿಮಗೆ ಇದು ಮೊದಲನೇ ಸಲವಾದರೂ ನನಗೆ ಮಾತ್ರ ಅಲ್ಲ. ನಾನಾಗಲೇ ಹಲವು ಬಾರಿ ಇಲ್ಲಿಗೆ ಬಂದುಹೋಗಿದ್ದೇನೆ. ನೀವು ಅಭ್ಯಾಸಕ್ಕೆ ಕುಳಿತಾಗ ಯಾಕೆ ಅನಾವಶ್ಯಕ ತೊಂದರೆ ಕೊಡಬೇಕು ಎಂದು ಯೋಚಿಸಿ ಮಾತಾಡಲಿಲ್ಲ ಅಷ್ಟೆ. ನಿಮ್ಮೊಡನೆ ಮಾತಾಡಬೇಕು ಎಂದು ಬಹಳ ದಿನಗಳಿಂದ ಹಾತೊರೆಯುತ್ತಿದ್ದೆ. ಇವತ್ತು ಅವಕಾಶ ದೊರೆಯಿತು. ನೀವೂ ಮಲಗಿಕೊಂಡಿದ್ದೀರಿ. ತುಸು ಖೇದಗೊಂಡಿದ್ದರೂ ಮಾತನಾಡಿಸಿದರೆ ಏನೂ ತಪ್ಪಿಲ್ಲ ಎಂದು ಕುಳಿತೇಬಿಟ್ಟೆ. ಏನೂ ಆತಂಕವಿಲ್ಲವಷ್ಟೆ?"



"ಛೆ! ಛೆ! ಆತಂಕವೆಲ್ಲಿಯದು? ನನಗೂ ಮನಸ್ಸು ಸಮಾಧಾನ ಮಾಡಿಕೊಳ್ಳಲು ಮಾತನಾಡಲು ಯಾರಾದರೂ ಜತೆ ಬೇಕಾಗಿತ್ತು. ನೀವು ಬಂದದ್ದರಿಂದ ಒಂದು ರೀತಿ ಸಂತೋಷವೇ ಆಯಿತು."

"ಅದೇ, ಅದೇ ನಾನೂ ಬೇಸರ ಕಳೆದುಕೊಳ್ಳಲು ನಿಮ್ಮೊಡನೆ ಮಾತನಾಡಬೇಕೆಂದು ಬಂದೆ. ನಾನು ಯಾವಾಗಾದರೊಮ್ಮೆ ಈ ರೂಮಿನ ಕಡೆಗೆ ಬಂದಿರುತ್ತೇನೆ. ನಾವು ಮೊದಲು ಈ ರೂಮಿನಲ್ಲಿಯೇ ಇರುತ್ತಿದ್ದೆವು"

"ನೀವು ಎಂದಿರಲ್ಲ ಮತ್ತೆ ನಿಮ್ಮ ಜೊತೆಗೆ ಯಾರು ಇರುತ್ತಿದ್ದರು?" ನಾನು ಅವನನ್ನು ಕೇಳಿದೆ.

"ನಾನು ಮತ್ತು ನನ್ನ ಧರ್ಮಪತ್ನಿ ಇಲ್ಲಿಯೇ ಇರುತ್ತಿದ್ದೆವು. ಅರೇ, ಯಾಕೆ ಆಶ್ಚರ್ಯಪಡುತ್ತಿದ್ದೀರಿ? ಈ ರೂಮಿನಲ್ಲಿ ಇಬ್ಬರು ಹೇಗೆಂತ ಆಶ್ಚರ್ಯವಾಯಿತೆ? ಅದು ಸರಿ. ಆದರೆ ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು ನೋಡಿ. ನನ್ನ ಸಂಬಳ ಚಿಕ್ಕದು. ನೀವು ಈಗ ಬಾಡಿಗೆ ಎಷ್ಟು ಕೊಡುತ್ತೀರಿ?"

"ಇಪ್ಪತ್ತು ರೂಪಾಯಿಗಳನ್ನು ಕೊಡುತ್ತೇನೆ."

"ಹಾಗೇನು? ನಾನು ಇಲ್ಲಿದ್ದಾಗ ಹದಿನೆಂಟು ರೂಪಾಯಿ ಕೊಡುತ್ತಿದ್ದೆ. ಬರುವ ಅರುವತ್ತು ರೂಪಾಯಿ ಸಂಬಳದಲ್ಲಿ ಹದಿನೆಂಟು ರೂಪಾಯಿ ಬಾಡಿಗೆ ಕೊಟ್ಟ ಮೇಲೆ ಉಳಿದ ನಲುವತ್ತೆರಡರಲ್ಲಿ ಸಂಸಾರ ನಡೆಸುತ್ತಿದ್ದೆ. ನೀವೂ ಗಟ್ಟಿಗರು ಎನ್ನುತ್ತೀರಾ? ಗಟ್ಟಿಗರಾಗದೇ ಗತ್ಯಂತರವೇ ಇಲ್ಲವಲ್ಲ!"

"ಈಗ ನೀವೆಲ್ಲಿ ಇರುತ್ತೀರಿ?"

"ನಾನೇ? ನಾನು ನಿಮ್ಮ ಎದುರಿನಲ್ಲೇ ಇದ್ದೇನಲ್ಲಾ. ನನ್ನ ಪತ್ನಿ ಈಗ ತವರಿನಲ್ಲಿ ಇರುವಳು ನನ್ನ ಅತ್ತೆಮನೆಯವರು ತಕ್ಕಮಟ್ಟಿಗೆ ಆಸ್ತಿವಂತರು. ಹಾಯಾಗಿ ಇದ್ದಾಳೆ. ಏಕೆ ಆಶ್ಚರ್ಯಪಡುತ್ತಿದ್ದೀರಿ? ನನ್ನ ಬಿಟ್ಟು ಅವಳು ಹೇಗೆ ಹಾಯಾಗಿ ಇದ್ದಾಳೆಂದು ಆಶ್ಚರ್ಯಪಡುತ್ತಿದ್ದೀರಾ? ಅದು ನ್ಯಾಯವೇ ಅನ್ನಿ. ಆದರೆ ನಾನೇ ಆಕೆಯನ್ನು ಬಿಟ್ಟೆ."

"ಅಂದರೆ ಡೈವೋರ್ಸ್ ಮಾಡಿಕೊಂಡಿರಾ?"

"ಡೈವೋರ್ಸ್ ಮಾಡಿಕೊಳ್ಳಲಿಲ್ಲ. ಹಾಗೆ ನೋಡಿದರೆ ನಾನು ಆಕೆಯನ್ನು ಬಿಡಲು ಸಿದ್ಧನೂ ಇರಲಿಲ್ಲ. ಇದೇನು ಒಗಟು ಎನ್ನುತ್ತೀರಾ? ಹೌದು. ಇದು ಹಾಗೆಯೇ ಇದೆ. ನಿಮ್ಮ ಮುಂದೆ ಹೇಳಿಯೇ ಬಿಡುತ್ತೇನೆ ಅಲ್ಲದೆ ನಾನು ಈಗ ಬಂದದ್ದು ಇದನ್ನು ಹೇಳಲೆಂದೇ.

"ನನ್ನ ಸಂಬಳ ಅರುವತ್ತು ಎಂದು ಹೇಳಿದೆನಲ್ಲಾ, ಅದೇ ನೋಡಿ ಆಕೆಯನ್ನು ತವರಿಗೆ ಕಳಿಸಿದ್ದು. ನೀವೇ ಯೋಚಿಸಿ ನೋಡಿ, ಅರುವತ್ತು ರೂಪಾಯಿಗಳಲ್ಲಿ ಸಂಸಾರ ನಡೆಸಿಕೊಂಡು ಹೋಗುವುದು ದುಷ್ಕರವಲ್ಲವೆ? ಅಂಥಾದ್ದರಲ್ಲಿ ಮತ್ತೆ ಈಕೆಗೆ ವರ್ಷದಲ್ಲಿ ಎರಡು ಸಲ ಒಂದೊಂದು ಜತೆ ಪತ್ತಲ ತಂದುಕೊಡಬೇಕು. ಇದೆಲ್ಲ ಸಾಧ್ಯವೆ?"

"ಅದಕ್ಕೆ ಜಗಳ ಕಾದಿರಾ?"

"ಹುಂ, ನನಗೂ ತುಂಬಾ ಸಿಟ್ಟು ಬಂತು. ಜಗಳ ಕಾಯದೆ ಮತ್ತೇನು ಮಾಡಲಿ? ಈಕೆಗೆ ಸಿಲ್ಕ್ ಸೀರೆ ಬೇಕಂತೆ. ನಾನು ಎಲ್ಲಿಂದ ತರೋದಕ್ಕೆ ಸಾಧ್ಯ? ಅಷ್ಟಕ್ಕೂ ಇವಳಿಗೆ ತನ್ನ ತವರಿನ ಅಭಿಮಾನ ಬೇರೆ. 'ನನ್ನಣ್ಣ ನಾನು ಕೇಳಿದಾಕ್ಷಣ ಸಿಲ್ಕ್ ಸೀರೆ ತಂದುಕೊಡುತ್ತಿದ್ದ' ಎಂದು ದಿಮಾಕಿನ ಮಾತನಾಡಿ ನಾನು ತಂದ ಪತ್ತಲಗಳನ್ನು ನನ್ನ ಮುಖಕ್ಕೆಸೆದಳು. ನನಗೂ ಸಿಟ್ಟು ಬಂತು. ಸ್ವಾಭಾವಿಕವಾಗಿ ಸಿಟ್ಟು ಬರುವ ಸಂದರ್ಭವಲ್ಲವೆ? ಮತ್ತೆ ಆ ಸಿಟ್ಟಿಗೆ ತುಪ್ಪ ಹಾಕಿದಂತೆ 'ಮೂರು ಸಾವಿರ ವರದಕ್ಷಿಣೆ ಕೊಟ್ಟು ನನ್ನನ್ನು ನಿಮಗೆ ಧಾರೆ ಎರೆದದ್ದು ಈ ಕಾಟನ್ ಪತ್ತಲ ತಂದು ಕೊಡುವುದಕ್ಕಲ್ಲ' ಎಂದಳು. ನಾನೂ ಮನುಷ್ಯ ನೋಡಿ, ಅಭಿಮಾನ ಹೇಗೆ ಸುಮ್ಮನಿರುತ್ತದೆ? ಅವಳ ಕೆನ್ನೆಗೊಂದು ಏಟು ಬಿಗಿದೆ— ನಿಜವಾಗಿ ನಾನು ಪತ್ತಲ ಕೊಂಡು ಮನೆಗೆ ಬರುತ್ತಿದ್ದಾಗ ಅವಳ

ಕೆನ್ನೆಯ ಮೇಲೆ ನನ್ನ ತುಟಿಗಳನ್ನು ಮೂಡಿಸುವ ಲಹರಿಯಲ್ಲಿದ್ದೆ— ನನ್ನ ಉತ್ಸಾಹಕ್ಕೆ ತಣ್ಣೀರೆರಚಿದ್ದಲ್ಲದೇ ಸಿಟ್ಟು ಬೇರೆ ತರಿಸಿದಳು. ಅದೇ ಸಿಟ್ಟಿನಲ್ಲಿ ಅವಳಿಗೊಂದು ಏಟು ಬಿಗಿದು ಮನೆ ಬಿಟ್ಟು ಹೊರಬಿದ್ದೆ. ನನ್ನ ತಲೆ ವಿಕಾರ ವಿಚಾರಗಳಿಂದ ತುಂಬಿ ಹೋಗಿದ್ದಿತು. ನನಗೆ ನನ್ನ ಮೇಲೆಯೆ ಸಿಟ್ಟು ಬರತೊಡಗಿತು. ಯಾತಕ್ಕೆ ನನ್ನ B. A. ಡಿಗ್ರಿ? ನಾಲ್ಕು ಕಾಸು ಸಂಪಾದಿಸಿ ತರುವ ಯೋಗ್ಯತೆ ಇಲ್ಲದ ನಾನು ಬಾಳಲೂ ಸಂಪೂರ್ಣ ಅಯೋಗ್ಯ! ಅದರಲ್ಲೂ ಇವಳು ಮೂದಲಿಸಿದ ವರದಕ್ಷಿಣೆಯ ಮಾತು ಶಲ್ಯದಂತೆ ಚುಚ್ಚುತ್ತಿತ್ತು. ನನ್ನ ಅಸಹಾಯತೆ ನನ್ನನ್ನು ಮತ್ತಷ್ಟು ಉದ್ರಿಕ್ತಗೊಳಿಸಿತು. ದಾಪುಗಾಲು ಹಾಕುತ್ತ ಊರ ಹೊರಗಿನ ರಸ್ತೆಯ ಗುಂಟ ಸಾಗಿದೆ. ಏನಾದರೂ ಬಿಜಿನೆಸ್ ಮಾಡಬೇಕಿತ್ತು ಎಂದು ವಿಚಾರ ಮೂಡಿತು. ಆಗ ನನ್ನ ಗೆಳೆಯನೊಬ್ಬ ಸಣ್ಣ ಪ್ರಮಾಣದ ಬಿಜಿನೆಸ್ ಪ್ರಾರಂಭಿಸಿ ಈಗ ಶ್ರೀಮಂತನಾದದ್ದು ಕಣ್ಣೆದುರು ಸುಳಿದುಹೋಯಿತು. ಆದರೆ ನನ್ನ ಬಳಿಯಲ್ಲಿ ಅಷ್ಟೊ ಹಣವಿರಲಿಲ್ಲ. ನನಗೆ ಮತ್ತಷ್ಟು ಕೆಡುಕೆನಿಸಿತು. ಥತ್ ಎಂದು ನನ್ನನ್ನು ನಾನೇ ಹಳಿದುಕೊಂಡೆ ವಿಚಾರ ಮಾಡುತ್ತಿದ್ದಂತೆ ನನಗೆ ಈ ಜೀವನವನ್ನು ಕೊನೆಗಾಣಿಸಬೇಕೆನ್ನಿಸಿತು. ಹಣವಿಲ್ಲ, ಗಳಿಸುವ ಯೋಗ್ಯತೆ ಇಲ್ಲ. ಮೇಲೆ ಇವಳ ಮೂದಲಿಕೆಯ ಮಾತು ಬೇರೆ. ನಾನು ಅಷ್ಟು ಹೊತ್ತಿಗೆ ರೇಲ್ವೆ ಕ್ರಾಸಿಂಗಿಗೆ ಬಂದಿದ್ದೆ. ಅಷ್ಟರಲ್ಲಿ ಸೀಟಿ ಹೊಡೆಯುತ್ತ ಮೇಲ್ ಗಾಡಿಯೂ ಬಂದಿತು. ಕೊನೆಗಾಣಿಸಬೇಕು! ಮತ್ತೆ ಯೋಚಿಸಿದೆ. ಗಾಡಿ ಸಮೀಪ ಸಮೀಪ ಬರತೊಡಗಿತ್ತು. ನಾನು ಬೀಳುವ ನಿರ್ಧಾರ ಮಾಡಿದೆ. ನನ್ನ ಗೋಲ್ಡ್ ಮೆಡಲ್ ಕೂಡ ವ್ಯರ್ಥವಾಯಿತಲ್ಲ ಎನ್ನುತ್ತ ಹಾಗೆ ತಲೆಗೊಟ್ಟು ಬಿದ್ದುಬಿಟ್ಟೆ. ಮರುಕ್ಷಣವೇ ಅದೇ ಆ ಗೋಲ್ಡ್ ಮೆಡಲ್ ಮಾರಿ ಸಿಲ್ಕ್ ಸೀರೆ ತರಬಹುದಿತ್ತಲ್ಲ ಎಂದು ಹೊಳೆಯಿತು. ಹೌದು ತರಬೇಕು ಎಂದು ಧಡಪಡಿಸಿ ಏಳತೊಡಗಿದ್ದೆ. ಆದರೆ ಅಷ್ಟರಲ್ಲಿ ಇಂಜಿನ್ನಿನ ಗಾಲಿ ನನ್ನ ಮೇಲೆ ಹಾಯ್ದುಹೋಗಿತ್ತು. ನನ್ನ ರುಂಡ, ಮುಂಡದಿಂದ ಬೇರೆಯಾಗಿತ್ತು. ಅದೇ. ಬೆಚ್ಚಿಬೀಳಬೇಡಿ. ಒಳ್ಳೇದು, ಬರ್ತೀನೆ..."

ನಾನು ಚಟ್ಟನೇ ಎದ್ದು ಕುಳಿತೆ. ಎದುರು ಯಾರೂ ಇರಲಿಲ್ಲ. ಕುರ್ಚಿ ಇದ್ದಂತೆಯೇ ಇತ್ತು. ಬಾಗಿಲು ಚಿಲುಕ ಕೂಡ ಹಾಗಯೇ ಇತ್ತು. ರಾತ್ರಿ ಮೂರು ಘಂಟೆಯಾಗಿತ್ತು. *

---

ಗಂಡಹೆಂಡಿರಲ್ಲಿ ಜಗಳ ಬಹಳ ಹೊತ್ತು ನಡೆದರೂ ಒಬ್ಬರೂ ಹಿಮ್ಮೆಟ್ಟಲಿಲ್ಲ. ಕೊನೆಗೆ ಗಂಡ ಕೋಪಾವೇಶದಿಂದ "ಅಂದರೆ ನನ್ನ ಸಂಬಂಧಿಕರಲ್ಲಿ ಒಬ್ಬರೂ ನಿನಗೆ ಸೇರಿಕೆಯಾಗುವುದಿಲ್ಲ ಎಂದು ಹೇಳುವಿಯೇನು?'' ಎಂದು ಕೇಳಿದ. ಅದಕ್ಕೆ ಹೆಂಡತಿ ಉತ್ತರವಿತ್ತಳು: 'ಛೆ. ಛೆ. ನಿಮ್ಮ ಅತ್ತೆಯನ್ನು ನಾನು ನಿಮಗಿಂತಲೂ ಹೆಚ್ಚಾಗಿ ಪ್ರೀತಿಸುತ್ತೇನೆ.'

*     *     *     *

ರಾಜಾಜಿಯ ಮೇಲೆ ಗಾಂಧೀಜಿಗಿದ್ದ ವಿಶ್ವಾಸಕ್ಕೆ ಕೆಳಗಿನದೊಂದು ಉದಾಹರಣೆ. ಒಮ್ಮೆ ರಾಜಾಜಿಯವರು ಹರಿಜನಸೇವಾಸಂಘದ ಮುಖ್ಯಸ್ಥರಿದ್ದಾಗ ಅವರ ವಿರುದ್ಧ ಕೆಲ ಅಪಾದನೆಗಳನ್ನು ಹೊರಿಸಿ ಕೆಲವು ಜನರು ಗಾಂಧೀಜಿಯವರಿಗೆ ಪತ್ರಗಳನ್ನು ಬರೆದರು. ಗಾಂಧೀಜಿಯವರು ಅವರಿಗೆ ಉತ್ತರ ರೂಪವಾಗಿ "ನಿಮ್ಮ ಅಪಾದನೆಗಳನ್ನೂ ದೂರುಗಳನ್ನೂ ಸ್ವತಃ ರಾಜಾಜಿಯವರಿಗೇ ಕಳುಹಿಕೊಡಿರಿ. ಅವರಿಂದ ಸಿಗುವ ನ್ಯಾಯಕ್ಕಿಂತ ಒಳ್ಳೆಯದಾದ ಅಥವಾ ಹೆಚ್ಚಿನ ನ್ಯಾಯ ಮತ್ತಾರಿಂದಲೂ ನಿಮಗೆ ದೊರಕದೆಂದು ನಾನು ಆಶ್ವಾಸನ ಕೊಡುತ್ತೇನೆಂ"ದು ಬರೆದರು.

—ಯು. ಎಸ್. ಶ್ರೀನಿವಾಸರಾವ



ಈ ನಿತ್ಯ ಶಾಶ್ವತ ಸಾಂಸಾರಿಕ ಕಥಾ ಚಿತ್ರದಲ್ಲಿ ಮಾನವ ಭಾವನೆಗಳ ಮಹತ್ ಸಾಗರವೇ ತುಳುಕುತ್ತಾ, ಆ ಸಾಗರವು ಹಿಮಾಲಯದ ಉತ್ತುಂಗ ಶಿಖರದಿಂದ ಸಣ್ಣ ಗುಡಿಸಿಲಿಗೆ–ಅಂತಃಪುರದಿಂದ ಆಶ್ರಮಕ್ಕೆ, ಚಕ ವರ್ತಿಯಿಂದ ಕಾನನದ ಬಾಲೆಗೆ ಹರಿದಿದೆ.

•

## "ಆಸ್ಕರ್" ಪ್ರಶಸ್ತಿಗೆ

**ಭಾರತ ಚಲನಚಿತ್ರ ಕೈಗಾರಿಕೆಯ ಆಯ್ಕೆ**

ರಾಜಕಮಲ್ ಅವರ
ವರ್ಣರಂಜಿತ ಚಿತ್ರ

# ಸ್ತ್ರೀ

ನಿರ್ದೇಶನ:
ವಿ. ಶಾಂತಾರಾಂ

ಸಂಗೀತ:
ಸಿ. ರಾಮಚಂದ್ರ

'ಅಭಿಜ್ಞಾನ ಶಾಕುಂತಲಾ' ಆಧಾರದ ಮೇಲೆ

ಪಾತ್ರ: **ಸಂಧ್ಯಾ, ವಿ. ಶಾಂತಾರಾಂ, ರಾಜಶ್ರೀ ಶಾಂತಾರಾಂ**

## ಈಗ ಪ್ರದರ್ಶಿತವಾಗುತ್ತಿದೆ!

## ಅಲಂಕಾರ್ ಬೆಂಗಳೂರು

ದಿನವಹಿ **2–45, 6–00** ಮತ್ತು **9–30** ಕ್ಕೆ

## ಪ್ರಭಾ ಮೈಸೂರು

— ಶೀಘ್ರದಲ್ಲಿಯೇ —

**ರೂಪವಾಣಿ** ಮಂಗಳೂರು

**ವಿನಾಯಕ** ಶಿವಮೊಗ್ಗ

**ಗುರು ಸಚ್ಚಿದಾನಂದ** ಹೊಸಪೇಟೆ

**ಪ್ರಭಾತ್** ಬಳ್ಳಾರಿ

**ರೂಪವಾಣಿ** ಚಿತ್ರದುರ್ಗ

AN ALANKAR CHITRA RELEASE



ಒಂದು ರೋಮಾಂಚಕ ಸಾಹಸ

# ಒಕ್ಟೊಪಸ್‌ನೊಂದಿಗೆ ಕದನ

ವಿ. ಮೆನಾರ್ಡ್

ತಾಹಿತಿಯಿಂದ ಈಶಾನ್ಯ ದಿಕ್ಕಿನಲ್ಲಿ ದಕ್ಷಿಣ ಶಾಂತ ಸಾಗರದಲ್ಲಿರುವ ಚಿಕ್ಕ ಹವಳದ ದ್ವೀಪಗಳಲ್ಲಿ ಒಂದಾಗಿರುವ ರಿಮೋರಾದಲ್ಲಿ ಒಂದು ದಿನ ಭೀಕರ ದುರಂತವೊಂದು ಸಂಭವಿಸಿತು. ರಿಮೋರಾದ ಮೂಲನಿವಾಸಿ ಹೆಂಗಸೊಬ್ಬಳು ದೋಣಿಯಲ್ಲಿ ಕುಳಿತು ಮೀನು ಹಿಡಿಯುತ್ತಿದ್ದಾಗ ಸಮುದ್ರಗರ್ಭದಿಂದ ಹಾವಿನಂಥ ಉದ್ದ ಬಳಕುವ ಅಂಗವೊಂದು ಹೊರಚಾಚಿ ಸಮುದ್ರದಲ್ಲಿನ ಬಂಡೆಗಲ್ಲೊಂದರ ಅಂಚಿನಲ್ಲಿ ಕುಳಿತು ಆಡುತ್ತಿದ್ದ ಮಾರೊ ಎಂಬ ಹುಡುಗನನ್ನು ನೀರೊಳಗೆ ಎಳೆದುಕೊಂಡು ಹೋದದ್ದನ್ನು ಕಂಡಳು. ಮರುದಿನ ಅವನ ಎಲುವುಗಳು ಮುಳುಗುಗಾರರಿಗೆ ಒಂದು ಒಕ್ಟೊಪಸ್‌ನ ಗವಿಯ ಬಳಿ ಸಿಕ್ಕವು. ಒಕ್ಟೊಪಸ್ ಎಂಬುದು ಸಮುದ್ರದಲ್ಲಿರುವ ಎಂಟು ತೋಳುಗಳುಳ್ಳ ಪ್ರಾಣಿ. ಇದರ ಹಾವಿನಂಥ ಉದ್ದವಾದ ತೋಳಿನಲ್ಲಿ ಸಿಕ್ಕುವುದು ಮೃತ್ಯುವಿನ ಬಾಯಲ್ಲಿ ಸಿಕ್ಕಂತೆಯೆ ಸರಿ.

ಮಾರೊನನ್ನು ಒಕ್ಟೊಪಸ್ ನುಂಗಿದ ಸುದ್ದಿ ಕೇಳಿದೊಡನೆ ಟೆರಿಯ ಕಣ್ಣುಗಳು ಕೆಂಡದಂತಾಗಿದ್ದವು. ಮೈಮೇಲೆ ಬಂದವರಂತೆ ಆತ ತನ್ನ ಗುಡಿಸಲಿನಿಂದ ಹೊರಗೋಡಿದ್ದ. ಅವನ ಆವೇಶವನ್ನು ಕಂಡ ಜನ ಅವನ ಹಾದಿಯಲ್ಲಿ ಯಾವ ಆತಂಕವನ್ನೂ ಒಡ್ಡಲಿಲ್ಲ. ಟೆರಿ ನೆಟ್ಟಗೆ ತನ್ನ ದೋಣಿಯಲ್ಲಿ ಕುಳಿತು ಮಾರೊನನ್ನು ಒಕ್ಟೊಪಸ್ ಎಳೆದೊಯ್ದ ತಾಣಕ್ಕೆ ಹೋದ.

ಟೆರಿ ಪೊಲಿನೇಶಿಯದ ಮೂಲ ನಿವಾಸಿ ತರುಣ. ಅವನು ಈ ಯಾತ್ರೆಯಿಂದ ಮರಳಿದಾಗ ಅವನ ಮೈಯಲ್ಲಿ ಪ್ರಜ್ಞೆ ಇರಲಿಲ್ಲ. ಅವನ ಪಾದಗಳಿಂದ ಕುತ್ತಿಗೆ ವರೆಗೆ ಕಾದ ಕಬ್ಬಿಣದ ಸಲಾಕೆಯಿಂದ ಬರೆ ಕೊಟ್ಟಂತೆ ಗಾಯಗಳಿದ್ದವು. ಆದರೆ ಆ ರಾಕ್ಷಸ ಒಕ್ಟೋಪಸ್ ಇತಿಶ್ರೀಯಾಗಿತ್ತು ಮತ್ತು ಅವನಿಗೆ ಪ್ರಜ್ಞೆ ಮರಳಿದಾಗ ದೇವಾಲಯವೇ ಇಲ್ಲದ ಆ ದ್ವೀಪದಲ್ಲೊಂದು ಸುಂದರ ದೇವಾಲಯ ರಚನೆ ಆರಂಭವಾಗಿ ಆ ಬಂಡೆಗಲ್ಲಿನ ಬಳಿ ನೀರಿನಲ್ಲಿ ಒಕ್ಟೊಪಸ್‌ನ ಗವಿಯಿದೆ ಎಂಬ ಕಾರಣದಿಂದ ಯಾವ ಮುಳುಗುಗಾರರೂ ಅಲ್ಲಿ ಮುತ್ತಿಗಾಗಿ ಮುಳುಗು ಹಾಕುತ್ತಿರಲಿಲ್ಲ. ಆ ಗವಿಯ ಬಳಿ ಈಜಿದ ಮುಳುಗುಗಾರರು ಇದುವರೆಗೆ ಜೀವಂತ ಮರಳಿದ್ದು ಕಡಿಮೆ. ಆ ಗವಿಯ ಬಾಗಿಲಲ್ಲಿ ಕೆಲವು ಧೈರ್ಯಶಾಲಿ ಮುಳುಗುಗಾರರಿಗೆ ಮನುಷ್ಯರ ಎಲುವುಗಳು, ತಲೆ ಬುರುಡೆಗಳು ಸಿಕ್ಕಿದ್ದವು.

ಟೆರಿ ಮುಳುಗುಗಾರರು ಧರಿಸುವ ಗಾಗಲ್ಸ್ ತಗಲಿಸಿಕೊಂಡು ಬಂಡೆಯ ಮೇಲಿಂದ ನೀರಲ್ಲಿ ಧುಮುಕಿದ್ದನ್ನು ಜನ ಕಂಡರು. ನೀರಲ್ಲಿ ಹಾರಿದ ಟೆರಿ ಗವಿಯ ಬಾಗಿಲಿಗೆ ೧೫ ಅಡಿ ಅಂತರದಲ್ಲಿ ಮುಳುಗಿದ. ಆತ ಸಾವಕಾಶವಾಗಿ ಜಾಗರೂಕತೆಯಿಂದ ಗವಿಯ ಬಾಗಿಲಿಗೆ ಈಸಿ ಬಂದ. ಗವಿಯ ಬಾಗಿಲಲ್ಲಿ ವಿಷಯುಕ್ತ ಸಸ್ಯಗಳೂ ಹವಳದ ಕವಚಗಳೂ ಇದ್ದವು. ನೀರನ್ನು ಭೇದಿಸಿ ಬಂದ ಸೂರ್ಯಕಿರಣಗಳು ಗವಿಯ ಒಳಗಡೆ ಕೆಲ ಅಡಿಗಳ ವರೆಗೆ ಒಂದಿಷ್ಟು ಪ್ರಕಾಶ ಚೆಲ್ಲುತ್ತಿದ್ದವು.

ಸೇಡಿನ ಭಾವನೆಯಿಂದ ಟೆರಿಯಲ್ಲಿ ಹುಚ್ಚು ಆವೇಶ ಬಂದಿತು. ತನಗೆ ಒದಗಬಹುದಾದ ಗಂಡಾಂತರದ ಕಲ್ಪನೆಯ ಆತನಿಗೆ ಇರಲಿಲ್ಲ. ಅವನಿಗೆ ಗವಿಯಲ್ಲಿ ಆ ಭಾಗದಲ್ಲಿ ಸಿಗುತ್ತಿದ್ದ ಅತ್ಯುತ್ತಮ ಮುತ್ತುಗಳ ಚಿಪ್ಪುಗಳೂ ಕಾಣಿಸಿದವು. ಆದರೆ ಅದರ ಮೋಹವೆನಿಸಲಿಲ್ಲ. ಗವಿಯಲ್ಲಿರುವ ಕೊಲೆಪಾತಕಿ ಒಕ್ಟೊಪಸ್ ಒಂದೇ ಅವನ ಗುರಿಯಾಗಿತ್ತು.

ಟೆರಿ ಗವಿಯೊಳಗೆ ಮುಂದೆ ಮುಂದೆ ಹೋದ. ಆತ ಹವಳದ ಕಲ್ಲುಗಳನ್ನು ಹಿಡಿದುಕೊಂಡು ನಿಂತು ಎರಡು ಕಲ್ಲುಗಳನ್ನು ಒಂದಕ್ಕೊಂದು ಕಟೆದು ನೋಡಿದ. ಆದರೆ ಗವಿಯಲ್ಲಿ ಯಾತರ ಚಲನವಲನವೂ ಕಾಣಿಸಲಿಲ್ಲ. ಆತ ತನ್ನ ಚಾಕುವನ್ನು ಕೈಲಿ ಹಿಡಿದುಕೊಂಡು ಗವಿಯ ಬೆನ್ನಿನ ವರೆಗೆ ಸಾಗಿದ. ಆತ ಅಲ್ಲಿ ಒಂದು ವಿಶಾಲವಾದ ಕಡಲ ಬೀಸಣಿಗೆ (ಒಂದು ಸೂಕ್ಷ್ಮ ಸಮುದ್ರ ಪ್ರಾಣಿ) ಯ ಗುಂಪಿನ ಹಿಂದುಗಡೆ ನೋಡುತ್ತಿದ್ದಾಗ ಬೆಳಕು ಒಮ್ಮಿಂದೊಮ್ಮೆ ಮಾಯವಾಯಿತು. ಟೆರಿಯ ಮೇಲೊಂದು ನೆರಳು ಬಿದ್ದಿತು. ಆತ ಸರ್ರನೆ ತಿರುಗಿ ಗವಿಯ ಒಳಭಾಗದ ಪೊಳ್ಳಿನಲ್ಲಿ ನುಗ್ಗಿ ಕುಳಿತ.

ಈಗಾತನಿಗೆ ಗವಿಯ ಬಾಗಿಲನ್ನೆಲ್ಲ ಮುಚ್ಚುವಂಥ ಒಂದು ಆಕಾರ ಚಲಿಸುವುದು ಕಾಣಿಸುತ್ತಿತ್ತು. ಹಾ! ಅದೇ ಕೊಲೆಪಾತಕಿ ಒಕ್ಟೊಪಸ್. ಅವನು ಅಂಥ ಅಕರಾಳ ವಿಕರಾಳವಾದ, ಅಷ್ಟು ದೊಡ್ಡದಾದ ಒಕ್ಟೊಪಸ್‌ನ್ನು ಎಂದೂ ಕಂಡಿರಲಿಲ್ಲ. ಅದು ತನ್ನ ಮೇಲ್ಗಡೆ ಗವಿಯ ಮೇಲ್ಭಾಗಕ್ಕೆ ಸಮೀಪದಲ್ಲಿ ಈಸಿ ಹೋದದ್ದನ್ನು ಆತ ಕಂಡ. ಹನ್ನೆರಡಡಿ ಉದ್ದವಾದ ಅದರ ತೋಳುಗಳು ಅದರ ದೇಹಕ್ಕೆ ಹತ್ತಿಯಾಗಿ ಹೊಂದಿಕೊಂಡಿದ್ದವು.

ಆಗಿಂದಾಗಲೇ ಹೋಗಿ ಅದರ ಮೇಲೆ ಆಕ್ರಮಣ ಮಾಡಬೇಕೆಂಬ ಆವೇಶ ಬಂದರೂ ಟೆರಿ ಒಂದಿಷ್ಟೂ ಅಲುಗಾಡದೆ ಸುಮ್ಮನೆ ಕುಳಿತ. ಒಕ್ಟೊಪಸ್ ಇನ್ನೂ ಅವನನ್ನು ಕಂಡಿರಲಿಲ್ಲ. ಅದಕ್ಕರಿವಾಗದಂತೆಯೆ ತಾನು ಅದರ ಹಿಂದೆ ಹೋಗಬಲ್ಲೆನಾದರೆ ಮಿಂಚಿನ ವೇಗದಲ್ಲಿ ಆಕ್ರಮಣ ಮಾಡಿ ಅದನ್ನು ಕೊಲ್ಲಬಹುದು ಎಂದು ಅವನಿಗೆ ಅನಿಸಿತು.

ಒಕ್ಟೊಪಸ್ ಈಗಲೂ ಮೆಲ್ಲಗೆ ಗವಿಯ ಹಿಂಭಾಗಕ್ಕೆ ಈಸಿ ಹೋಗುತ್ತಲಿತ್ತು. ಟೆರಿ ತಾನು ಅಡಗಿದ ಸ್ಥಳದಿಂದ ಹೊರಗೆ ಬಂದ. ಆ ಕ್ಷಣವೇ ಆತ ಗಂಡಾಂತರದ ಆಶಂಕೆಯಿಂದ ನಿಂತಲ್ಲಿಯೆ ನಿಂತುಬಿಟ್ಟ. ಒಕ್ಟೊಪಸ್ ಈಗ ಈಸುವುದನ್ನು ಬಿಟ್ಟು ಅವನ ಮೇಲ್ಗಡೆಯಲ್ಲಿ ನಿಂತಿತ್ತು. ಟೆರಿ ನೋಡುತ್ತಿದ್ದಂತೆಯೆ ಅದರ ತೋಳುಗಳು ಹರಡಿ ಗವಿಯ ಮಾಡನ್ನೆಲ್ಲ ಆಕ್ರಮಿಸಿದವು.

ಆ ರಾಕ್ಷಸ ಒಕ್ಟೊಪಸ್ ಈಗ ಟೆರಿಯನ್ನು ಕಂಡಿತು. ಕ್ಷಣಾರ್ಧದಲ್ಲಿ ಅದು ಬಲೆಯೊಳಗೆ ಸಿಕ್ಕ ಹುಳದತ್ತ ಧಾವಿಸುವ ಜೇಡದಂತೆ ಕೆಳಗೆ ಎರಗಿತು. ಮೊದಲಿನ ಹೊಡೆತ ಕೊಡುವ ಅಥವಾ ಈಗ ಒಕೊಪಸ್‌ನ ಕೈಯಿಂದ ಜಾರಿಕೊಳ್ಳುವ ಟೆರಿಯ ಆಶೆ ಕರಗಿ ಹೋಯಿತು. ಖಾಡಾಖಾಡಿ ಯುದ್ಧ ಮಾಡದೆ ಇನ್ನು ಗತಿಯಿಲ್ಲವೆಂದಾತ ಅರಿತುಕೊಂಡ. ಆತ ಚಾಕುವಿನ ಕೈಯನ್ನು ಮುಂದಿಟ್ಟುಕೊಂಡು ತನ್ನ ಪೊಳ್ಳಿನಲ್ಲಿ ಸೇರಿಕೊಂಡ. ತನ್ನ ಬೇಟೆಯ ಮೇಲೆ ನೇರವಾಗಿ ಹೇಗೆ ಎರಗಲಿ ಎಂದು ಯೋಚಿಸುತ್ತ ಒಕ್ಟೊ-

ಪಸ್ ಕೆಳಗಿಳಿಯುವ ರಭಸವನ್ನು ಕಡಿಮೆ ಮಾಡಿತು. ಅನುಭವಿ ಟೆರಿಗೆ ಇದು ಈ ಮೊದಲು ಮನುಷ್ಯರ ಮೇಲೆ ದಾಳಿಮಾಡಿದೆ ಎಂಬುದು ಖಚಿತವಾಯಿತು. ಮಾರೊನನ್ನು ನುಂಗಿದ್ದು ಇದೇ ಎಂಬುದರಲ್ಲಿ ಆತನಿಗೆ ಸಂಶಯವುಳಿಯಲಿಲ್ಲ.

ಒಮ್ಮಿಂದೊಮ್ಮೆ ಒಕ್ಟೊಪಸ್ ಆ ಪೊಳ್ಳಿನ ಮೇಲ್ಗಡೆ ಧೊಪ್ಪೆಂದು ಮೈಯೂರಿತು. ಪೊಳ್ಳಿನ ಆಚೆ ಈಚೆ ತನ್ನ ಹಸ್ತಗಳನ್ನೂ ಮೈಯನ್ನೂ ಚಾಚಿಕೊಂಡು ತನ್ನ ಗಿಳಿಯಂಥ ಚುಂಚಿನಿಂದ ಟೆರಿಯನ್ನು ಕಚ್ಚಲು ಯತ್ನಿಸಿತು.

ಟೆರಿ ಚಾಕುವಿನಿಂದ ಬಲವಾಗಿ ಹೊಡೆದ. ರೇಝರಿನಷ್ಟು ಹರಿತವಾದ ಅಲಗು ಒಕ್ಟೊಪಸ್‌ನ ಅಸಹ್ಯ ಶರೀರವನ್ನು ಛೇದಿಸಿದ ಅರಿವು ಅವನಿಗಾಯಿತು. ಒಕ್ಟೊಪಸ್ ನೋವಿನಿಂದ ಹಿಂದೆ ಸರ್ರನೆ ಸರಿಯಿತು. ನೀರೆಲ್ಲ ಸೇಪಿಯ ಬಣ್ಣಕ್ಕೆ ತಿರುಗಿತು. ಕಪ್ಪು ತೆರೆಯೊಂದು ಟೆರಿಯ ಗಾಗಲ್ಸನ್ನು ಮುಚ್ಚಿದರೂ ಆತ ಚಾಕುವಿನಿಂದ ಅತ್ತಿತ್ತ ಹೊಡೆಯುತ್ತಲೇ ಇದ್ದ.

ಒಕ್ಟೊಪಸ್ ಸಾವಕಾಶವಾಗಿ ಹಿಂದೆ ಜಾರಿತು. ರಿಮೊರಾದ ದೇವಾಲಯವಿಲ್ಲದ ದೇವರನ್ನು ಟೆರಿ ಮನದಲ್ಲಿಯೆ ಪ್ರಾರ್ಥಿಸಿಕೊಂಡ. ಆ ಮೇಲೆ ಆತ ಪರಿಸ್ಥಿತಿಯನ್ನೂ ಶತ್ರುವನ್ನೂ ತೂಗಿ ನೋಡಿದ. ಕೆಲವು ನಿಮಿಷಗಳ ನಂತರ ಆತ ಬಹು ಮೆಲ್ಲಗೆ ಒಂದು ಕೈಯನ್ನು ಪೊಳ್ಳಿನ ಹೊರಗೆ ಚಾಚಿದ. ಆ ಕ್ಷಣದಲ್ಲಿ ಒಕ್ಟೊಪಸ್ಸಿನ ಹಸ್ತವೊಂದು ಮಿಂಚಿನ ವೇಗದಲ್ಲಿ ಮುಂದೆ ಬಂದು ಅವನ ಕೈ ಒಂದು ನಿಮಿಷಕ್ಕೆ ಮೊದಲು ಯಾವ ಚಿಪ್ಪಿನ ಮೇಲಿತ್ತೊ ಆ ಚಿಪ್ಪಿನ ಮೇಲೆ ಬಡಿಯಿತು.

ಇನ್ನೂ ಕೆಲ ನಿಮಿಷಗಳು ಸಂದವು. ಇನ್ನೇನು ಮಾಡುವುದು ಎಂದುಕೊಂಡ ಟೆರಿ. ಒಕ್ಟೊಪಸ್ ರಣರಂಗದಿಂದ ಸರಿದಿಲ್ಲವೆಂದಾತನಿಗೆ ಗೊತ್ತಿತ್ತು. ಅವನ ಊಹೆ ಆ ಕ್ಷಣದಲ್ಲಿ ನಿಜವೂ ಆಯಿತು. ಒಕ್ಟೊಪಸ್‌ನ ಹಸ್ತವೊಂದು ಬಾಣದಂತೆ ಪೊಳ್ಳಿನೊಳಗೆ ಬಂದು ಅವನ ಮುಂಗೈಯನ್ನು ಹಿಡಿಯಿತು. ಟೆರಿ ಚಾಕುವಿನಿಂದ ಅದನ್ನು ಕತ್ತರಿಸಿ ಆ ತುಂಡನ್ನು ತನ್ನ ಮುಂಗೈಯಿಂದ ಕಿತ್ತು ತೆಗೆದ. ನೀರು ಅದರ ರಕ್ತದಿಂದ ಇನ್ನೂ ಆಳವಾದ ಸೇಪಿಯ ಬಣ್ಣಕ್ಕೆ ತಿರುಗಿತು.

ಈಗ ಟೆರಿಯ ಪುಪ್ಪುಸಗಳು ದಣಿಯತೊಡಗಿದ್ದವು. ಹೀಗೆಯೆ ನೀರೊಳಗೆ ಹೆಚ್ಚು ಹೊತ್ತು ಮುಳುಗಿರುವುದು ಸಾಧ್ಯವಿರಲಿಲ್ಲ. ಆತ ನೀರ ಮೇಲಕ್ಕೆ ಹೋಗಬೇಕು ಇಲ್ಲವೆ ಶ್ವಾಸಕಟ್ಟಿ ಸಾಯಬೇಕು ಎಂಬ ಪರಿಸ್ಥಿತಿ ಇತ್ತು. ಆತ ಒಮ್ಮೆ ನೀರ ಮೇಲಕ್ಕೆ ಹೋಗಬಲ್ಲನಾದರೆ ಆತ ಚೇತರಿಸಿಕೊಂಡು ಹೊಸ ಹುಮ್ಮಸ್ಸಿನಿಂದ ಕದನಕ್ಕಿಳಿಯಬಹುದಿತ್ತು. ಆದರೆ . . .

ಆತ ನೀರ ಮೇಲಕ್ಕೇರಲು ಅಣಿಯಾಗಿ ಪೊಳ್ಳಿನ ಹೊರಗೆ ಬರಬೇಕೆನ್ನುವಷ್ಟರಲ್ಲಿ ಇನ್ನೊಂದು ಹಸ್ತ ಎರಗಿ ಅವನ ಕಾಲುಗಂಟನ್ನು ಸುತ್ತಿಕೊಂಡಿತು. ಆ ಹಸ್ತದಲ್ಲಿ ಸಾಲಾಗಿದ್ದ ರಕ್ತ ಹೀರುವ ಅಲಗುಗಳು ಅವನ ಮಾಂಸದಲ್ಲಿ ಆಳವಾಗಿ ನಟ್ಟವು. ಆತ ಚಾಕುವಿನಿಂದ ಹುಚ್ಚನಂತೆ ಹೊಡೆದರೂ ಆ ಹಸ್ತವೇನೂ ಪೂರ್ತಿ ಕತ್ತರಿಸಿ ಹೋಗಲಿಲ್ಲ. ಅದು ಅವನ ಕಾಲನ್ನು ಹಿಡಿದೆಳೆಯಿತು. ಆತ ಹಿಮ್ಮುಖವಾಗಿ ಪೊಳ್ಳಿನ ಹೊರಗೆ ಕೆಳಕೆಳಗೆ ನೀರಿನಲ್ಲಿ ಎಳೆಯಲ್ಪಡುತ್ತಿದ್ದಾಗ ಒಂದು ಹವಳದ ಬಂಡೆಯ ಗುಂಪನ್ನು ಆಧಾರಕ್ಕೆಂದು ಹಿಡಿದುಕೊಂಡ.

ಒಕ್ಟೊಪಸ್ ಹಸ್ತ ತನ್ನ ಹಿಡಿತವನ್ನು ಬಿಗಿ ಮಾಡಿತ್ತು. ಅದರ ಎಳೆತ ಬಲವತ್ತರವಾಗಿತ್ತು. ಆದರೆ ಅಷ್ಟರಲ್ಲಿ ಅರ್ಧ ಕತ್ತರಿಸಿದ್ದ ಆ ಹಸ್ತ ತುಂಡಾಗಲು ಟೆರಿ ಮುಕ್ತನಾದ.

ಟೆರಿ ಕಾಲುಗಳನ್ನು ಒಳಗೆ ಎಳೆದುಕೊಂಡು ಪೊಳ್ಳಿನಲ್ಲಿ ಮುದ್ದೆಯಾಗಿ ಕುಳಿತ. ಬಳಿಕ ತನ್ನ ಬಲವನ್ನೆಲ್ಲ ಉಪಯೋಗಿಸಿ ಪೊಳ್ಳಿನ ಹೊರಗೆ ಧುಮುಕಿ ಮೇಲೇರತೊಡಗಿದ. ಆತ ಗವಿಯ ಬಾಗಿಲಿಗೆ ಬಂದಾಗ ತಿರುಗಿ ನೋಡಿದ. ಅವನ ಹಿಂದೆ ಏನೂ ಇರಲಿಲ್ಲ. ಆತ ಈಗ

ಮುಂವಕ್ಕೆ-ಮೇಲಕ್ಕೆ ನೋಡಿದ. ಎದುರಿಗಿದ್ದ ಗಂಡಾಂತರ ಕಂಡು ಅವನ ನರಗಳು ಸೆಟೆದವು. ಆ ರಾಕ್ಷಸ ಸರಿಯಾಗಿ ಅವನ ಮೇಲ್ಗಡೆಯಲ್ಲಿ ತನ್ನೆಲ್ಲ ಮಾದಕ ಹಸ್ತಗಳನ್ನು ಚಾಚಿಕೊಂಡು ಗಿರಿಗಿರಿ ತಿರುಗುತ್ತ ನಿಂತಿತ್ತು. ಮರುಕ್ಷಣದಲ್ಲಿ ಅದು ನೇರವಾಗಿ ಅವನ ಮೈಮೇಲೆ ಎರಗತೊಡಗಿತು.

ಕಣ್ಣು ರೆಪ್ಪೆ ಹೊಡೆಯುವಷ್ಟರಲ್ಲಿ ಆ ಭೀಕರ ಹಸ್ತಗಳು ಅವನ ಶರೀರವನ್ನಾಲಿಂಗಿಸಿದ್ದವು. ಕಪ್ಪಿನ ಆಕಾರದಲ್ಲಿದ್ದ ಅವುಗಳ ರಕ್ತ ಹೀರುವ ಅಲಗುಗಳು ಮಾಂಸವನ್ನು ಚುಚ್ಚತೊಡಗಿದವು. ಟೆರಿ ಅತ್ತ ಇತ್ತ ಸುತ್ತಮುತ್ತ ಚಾಕುವಿನಿಂದ ಹೊಡೆದ. ಆದರೆ ಹಸ್ತಗಳು ಮೊಂಡಾದರೂ ಒಕ್ಟೊಪಸ್ ಕಾದುವುದನ್ನು ನಿಲ್ಲಿಸುವುದಿಲ್ಲವೆಂದರಿತ ಆತನಿಗೆ ತನ್ನ ಆಕ್ರಮಣದ ಅಸಹಾಯಕತೆ ತಿಳಿದುಹೋಯಿತು.

ಕಬ್ಬಿಣದ ಕೈಗಳೊ ಎಂಬಂತೆ ಒಕ್ಟೊಪಸ್‌ನ ಹಸ್ತಗಳು ಟೆರಿಯ ದೇಹವನ್ನು ಬಿಗಿದವು. ಮೃತ್ಯುವೇ ಆತನನ್ನು ಆಲಿಂಗಿಸಿದಂತಿತ್ತು.

ಆ ಮೇಲೆ ಒಕ್ಟೊಪಸ್ ತಾನಾಗಿಯೆ ತನ್ನ ಹಸ್ತಗಳನ್ನು ಬಿಡಿಸಿ ಟೆರಿಯನ್ನು ಬಿಟ್ಟುಬಿಡುವೆ ಎಂಬಂತೆ ಅತ್ತ ನೂಕಿತು. ಆದರೆ ಕೊನೆಯ ಅಲಗು ಮಾಂಸವನ್ನು ಬಿಟ್ಟಿತು ಎನ್ನುವಷ್ಟರಲ್ಲಿ ಹಾವಿನ ನಾಲಗೆಯಂತೆ ಒಂದು ಹಸ್ತ ಟೆರಿಯ ಸೊಂಟವನ್ನು ಸುತ್ತಿ ಅವನನ್ನು ಅದರ ಬಾಯಿಯ ಹತ್ತಿರ ಎಳೆಯತೊಡಗಿತು. ಆ ಚುಂಚಿನ ಮೇಲ್ಗಡೆ ಇದ ಕಣ್ಣುಗಳು ತನ್ನನ್ನು ದಿಟ್ಟಿಸಿ ನೋಡುತ್ತಿರುವುದು ಟೆರಿಗೆ ಕಾಣಿಸಿತು.

ಟೆರಿಗೆ ಉಳಿದುಕೊಳ್ಳಲು ಒಂದೇ ಒಂದು ರೀತಿಯ ಅವಕಾಶವಿದ್ದಿತ್ತು. ಆತ ಆ ಚುಂಚಿನಿಂದ ದೂರವುಳಿದು ಒಕ್ಟೊಪಸ್‌ನ ದೇಹದ ಕೆಳಗಡೆ ಸಮೀಪಕ್ಕೆ ಹೋಗಿ ಅದರ ತಲೆಗೆ ಹಸ್ತಗಳು ಜೋಡಿಸಲ್ಪಟ್ಟಿದ್ದ ತಾಣವನ್ನು ಚಾಕುವಿನಿಂದ ಹೊಡೆಯಬಲ್ಲನಾದರೆ ಆತ ಉಳಿದುಕೊಳ್ಳಬಹುದಾಗಿತ್ತು.

ಇಲಿಯ ಸಂಗಡ ಬೆಕ್ಕು ಚಿನ್ನಾಟವಾಡುವಂತೆ ಒಕ್ಟೊಪಸ್ ಟೆರಿಯನು ಅಂಗುಲಂಗುಲವಾಗಿ ಮೆಲ್ಲಗೆ ತನ್ನತ್ತ ಎಳೆದುಕೊಳ್ಳುತ್ತಲಿತ್ತು. ಅದರ ನಾಲ್ಕು ಹಸ್ತಗಳು ಅವನನ್ನು ಹಿಡಿದಿದ್ದವು. ಇನ್ನೊಂದು ಕ್ಷಣದಲ್ಲಿ ಅದರ ಚುಂಚು ತೆರೆಯುವುದು—ಟೆರಿಯ ನೋವು, ಹಿಂಸೆ ಎಲ್ಲ ಇಲ್ಲದಾಗಿ ಬಿಡುವುದು. ಮಾರೊ ಮತ್ತಿತರರಂತೆ ಅವನ ಎಲವುಗಳಷ್ಟೆ ಉಳಿದುಕೊಳ್ಳುವವು.

ಅಷ್ಟರಲ್ಲಿ ಒಂದು ಚಮತ್ಕಾರ ಆಗಿ ಹೋಯಿತು. ಒಂದು ಕ್ಷಣಮಾತ್ರಕ್ಕೆ ಒಕ್ಟೊಪಸ್ ತನ್ನ ದೇಹವನ್ನು ಮೇಲೆತ್ತಿತ್ತು. ಆ ಕ್ಷಣದಲ್ಲಿ ಟೆರಿ ತನ್ನ ಚಾಕುವನ್ನು ಅದರ ಹಿಡಿಕೆಯವರೆಗೂ ಒಕ್ಟೊಪಸ್‌ನ ದೇಹದಲ್ಲಿ ತಿವಿದ. ಆತ ಮತ್ತೂ ಮತ್ತೂ ತಿವಿದ. ನೀರೆಲ್ಲ ಸೇಪಿಯಾ ಬಣ್ಣದಿಂದ ಕದಡಿಹೋಯಿತು. ತನ್ನ ದೇಹದ ಮೇಲಿನ ಹಿಡಿತದ ಬಲ ತಗ್ಗಿದ್ದು ಅವನಿಗೆ ಅನುಭವವಾಯಿತು. ಒಕ್ಟೊಪಸ್ ತನ್ನ ಬೇಟೆಯನ್ನು ಎಳೆದುಕೊಂಡು ಸಾವಕಾಶವಾಗಿ ಗವಿಯ ನೆಲವನ್ನು ಮುಟ್ಟಿತು. ಆದರೆ ಈಗ ಅದರ ಆಯುಧ ನಿಸ್ಸತ್ವವಾಗಿತ್ತು

ಟೆರಿ ಬೇಗಬೇಗನೆ ತನ್ನ ದೇಹವನ್ನು ಸುತ್ತಿದ್ದ ಹಸ್ತಗಳನ್ನು ಕತ್ತರಿಸಿ ಹಾಕಿದ. ತಲೆ ಸಿಡಿದು ಹೋಳಾಗುತ್ತಿದ್ದಂತೆಯೆ, ಶ್ವಾಸ ಕಟ್ಟಿ ಪ್ರಾಣ ಹಾರಿಹೋಗುವಂತೆ ಅನಿಸುತ್ತಿದ್ದಂತೆಯೆ ಆತ ಬಾಣದಂತೆ ನೀರ ಮೇಲಕ್ಕೇರಿದ. ಈ ಗದ್ದಲದಲ್ಲಿ ಕಳಚಿ ಬಿದ್ದಿದ್ದ ಎರಡು ಮುತ್ತಿನ ಚಿಪ್ಪುಗಳನ್ನು ಕೈಯಲ್ಲಿ ಹಿಡಿದು ಆತ ಅವನ್ನು ದೋಣಿಯ ಹುಟ್ಟುಗಳಂತೆ ಮೇಲಕ್ಕೇರುವಾಗ ಉಪಯೋಗಿಸಿಕೊಂಡ.

ಆತ ನೀರ ಮೇಲಕ್ಕೆ ಬಂದು ಅಂಧನಂತೆ ಬಂಡೆಗಲ್ಲಿನ ಅಂಚನ್ನು ಮುಟ್ಟಲು ಯತ್ನಿಸತೊಡಗಿದ. ಅವನ ಮೈಮೇಲಾದ ಗಾಯಗಳಿಂದ ರಕ್ತ ಹರಿಯುತ್ತಿತ್ತು ಒಕ್ಟೊಪಸ್‌ನ ಹಸ್ತದ ತುಂಡುಗಳು ಅಲ್ಲಲ್ಲಿ ಇನ್ನೂ ಅವನ ಮೈಗಂಟಿಕೊಂಡಿದ್ದವು. ತನ್ನನು ಜನರು ಮೇಲೆಕ್ಕೆಳೆದು

ಕೊಳ್ಳುವಂತೆ ಅವನಿಗೆ ಭಾಸವಾಯಿತು. ಮರು ಕ್ಷಣದಲ್ಲಿ ಅವನು ಮೂರ್ಛೆ ಹೋದ.

ಅವನಿಗೆ ಪ್ರಜ್ಞೆ ಬಂದಾಗ ಅವನು ತನ್ನ ಗುಡಿಸಲಿನಲ್ಲಿ ಮಲಗಿದ್ದ. ಮೈಗೆಲ್ಲ ಗಿಡಮೂಲಿಕೆಯ ಲೇಪವಿತ್ತು. ಅವನ ಹೆಂಡತಿ ಸುಂದರಿ ಮಾನಾ ಅವನ ಕೈ ಹಿಡಿದುಕೊಂಡು ಮೌನವಾಗಿ ರೋದಿಸುತ್ತಿದ್ದಳು.

ಅವನಿಗೆ ಸುಣ್ಣದ ವಾಸನೆ ಬಂತು. ಸುತ್ತಿಗೆ, ಕರಗಸಗಳ ಸಪ್ಪಳ ಕೇಳಿಸಿತು. ಆತ ಗುಡಿಸಲಿನ ಬಾಗಿಲ ವರೆಗೆ ಉರುಳುತ್ತ ಹೋಗಿ ನೋಡಿದ. ತೆಂಗಿನ ತೋಟದ ನಡುವೆ ಊರಿನ ಜನರೆಲ್ಲ ಸೇರಿದ್ದರು. ಚರ್ಚೊಂದನ್ನು ಕಟ್ಟುವ ಕಾರ್ಯ ನಡೆದಿತ್ತು.

ನಾಲ್ವರು ಊರ ಪ್ರಮುಖರು ಗುಡಿಸಲಿನೊಳಗೆ ಬಂದು ಟೆರಿಯ ಸುತ್ತ ಕುಳಿತರು.

ಟೆರಿಯ ಪ್ರಶ್ನಾರ್ಥಕ ಮುದ್ರೆಗೆ ಉತ್ತರವಾಗಿ ಹೇಳಿದರು: "ನಿನ್ನ ಕೈಲಿದ್ದ ಚಿಪ್ಪುಗಳಲ್ಲಿ ಅತ್ಯುತ್ತಮವಾದ ಎರಡು ಮುತ್ತುಗಳಿದ್ದವು. ಅವುಗಳನ್ನು ಮಾರಲು ಈ ನಡುಗಡ್ಡೆಗಳಲ್ಲೆಲ್ಲ ಉತ್ತಮವಾದಂಥ ಚರ್ಚು ಕಟುವಷ್ಟು ಹಣ ಬಂತು. ನೀನು ಮಲಗಿದ್ದ ಈ ಏಳು ವಾರಗಳಲ್ಲಿ ಕಟ್ಟಡದ ಸಾಮಾನುಗಳೆಲ್ಲ ಬಂದುಬಿದ್ದಿವೆ."

ಟೆರಿ ಸುಮ್ಮನೆ ಬಿದ್ದುಕೊಂಡ. ಒಂದು ಒಳ್ಳೆಯ ಮುತು ಸಿಕ್ಕರೆ ಬಂದ ಹಣದಿಂದ ಪ್ಯಾಸಿಫಿಕ್‌ನ ಪ್ಯಾರಿಸಾದ ತಾಹಿತಿಗೆ ಹೋಗಬೇಕು, ಕಾರು ಕೊಳ್ಳಬೇಕು ಎಂದೆಲ್ಲ ಆತ ಕನಸು ಕಾಣುತ್ತಿದ್ದ. ಆದರೆ ಈಗ....? ಆತ ಕ್ಷೀಣ ಸ್ವರದಲ್ಲಿ ಕೇಳಿದ: "ಎಲ್ಲ ಕೊಂಡಾದ ಮೇಲೆ ನನಗಾಗಿ ಏನಾದರೂ ಆ ಹಣದಲ್ಲಿ ಉಳಿದಿದೆಯೆ?"

ಊರ ಹಿರಿಯ ಅವನಿಗೆ ಸೇಂಟ್ ಕ್ರಿಸ್ಟೋಫರನ ಪದಕವಿತ್ತು "ಇದು ಧನದ ರಾಶಿಗಿಂತಲೂ ಅಮೂಲ್ಯವಾದದ್ದು. ಇದನ್ನು ನೀನು ಧರಿಸಿರುವವರೆಗೆ ನಿನಗೆ ಇನ್ನೆಂದೂ ಅಪಾಯವಾಗದು" ಎಂದ.

ಟೆರಿ ನಿಟ್ಟುಸಿರು ಬಿಟ್ಟು ಕಣ್ಮುಚ್ಚಿದ.

ಆದರೆ ಟೆರಿ ಈಗ ಆ ನಡುಗಡ್ಡೆಯಲೆ ಅತಿ ಸುಖಿಯಾದ ಮನುಷ್ಯನಾಗಿದ್ದಾನೆ. ✶

## ಇತಿಹಾ ರ್ಪಕ

ನೌಕಾಪಡೆಯಲ್ಲಿ ಸೇರುವುದಕ್ಕಾಗಿ ಸಂದರ್ಶನಕ್ಕೆ ಬಂದ ತರುಣನೊಬ್ಬ ಕೇಳಿದ ಎಲ್ಲ ಪ್ರಶ್ನೆಗಳಿಗೂ ಅತ್ಯುತ್ತಮವಾಗಿ ಉತ್ತರವೀಯುತ್ತ ಹೋದ—ಆದರೆ ಇತಿಹಾಸದ ಪ್ರಶ್ನೆಗಳು ಬಂದಾಗ ಮಾತ್ರ ಅವನ ಬುದ್ಧಿ ನಿಂತಲ್ಲೇ ನಿಂತುಬಿಟ್ಟಿತು. ಆಗ ಸಂದರ್ಶನ ತೆಗೆದುಕೊಳ್ಳುತ್ತಿದ್ದವರಲ್ಲೊಬ್ಬರು, "ನಿನಗೇನೂ ಇತಿಹಾಸ ಬರೋದಿಲ್ಲೇನಯ್ಯಾ?" ಎಂದು ಕೇಳಿದರು.

ಹುಡುಗ ಚೇತರಿಸಿಕೊಂಡು ಉತ್ತರವಿತ್ತ: "ಇಲ್ಲ ಸ್ವಾಮಿ. ನಮ್ಮ ವಂಶದಲ್ಲಿ ಹುಟ್ಟಿದವರು ಇತಿಹಾಸವನ್ನು ನಿರ್ಮಿಸುವುದರಲ್ಲಿ ಪ್ರವೀಣರಾಗಿದ್ದಾರೆ ಹೊರತು ಇತಿಹಾಸ ಕಲಿಯುವುದರಲ್ಲಲ್ಲ."

—ಅಲನ್ ಆಟ್ಲೆ

ಯಾವಾತನು ಪ್ರತಿಯೊಬ್ಬನಲ್ಲಿಯೂ ಮಹಾಭಾವನೆಗಳನ್ನು ಚೇತರಿಸುವನೋ ಅವನೇ ಮಹಾನುಭಾವ.

—ಚೆಸ್ಟರ್‌ಟನ್

ಬದನೆಬೀಜದ ಅಪೂರ್ವ ಗುಣ ಬಲ್ಲಿರಾ?

# ಗೊಬ್ಬರ ರೋಗಕ್ಕೊಂದು ಸುಲಭ ಪ್ರತಿಬಂಧಕ

ಗೊಬ್ಬರ ಎಂಬುದು ಜಗತ್ತಿನಲ್ಲೆಲ್ಲ ಪ್ರಚಲಿತವಾಗಿರುವ ರೋಗ. ವೈರಸ್ ಜೀವಾಣುಗಳಿಂದ ಹಬ್ಬಿಸಲ್ಪಡುವ ಗೊಬ್ಬರ ರೋಗ, ಸಿಡುಬು (ಮೈಲಿ ಬೇನೆ), ಗಣಜಿಲ ಮೊದಲಾದವುಗಳ ಜ್ಞಾತಿಬಂಧುವಾಗಿದ್ದರೂ ಅದರ ಭಯ ಜನರಲ್ಲಿ ಅಷ್ಟಾಗಿಲ್ಲದಿರಲು ಅದು ಸಾಧಾರಣವಾಗಿ ಪ್ರಾಣಾಂತಿಕ ರೋಗವಲ್ಲ ಎಂಬುದು ಒಂದು ಕಾರಣವಾಗಿದೆ. ಅದು ಪೀಡಿಸುವುದು ಹೆಚ್ಚಾಗಿ ಐದು ವರ್ಷಗಳ ಕೆಳಗಿನ ಮಕ್ಕಳನ್ನು. ಹೆಚ್ಚು ಹೆಚ್ಚು ವಯಸ್ಸಾದಂತೆ ಅದಕ್ಕೆ ಗುರಿಯಾಗುವ ಸಂಭವ ಕಡಿಮೆಯಾಗುತ್ತ ಹೋಗುತ್ತದೆ.

ಆದರೆ ಗೊಬ್ಬರವನ್ನು ದುರ್ಲಕ್ಷಿಸುವುದು ಮಾತ್ರ ಅಪಾಯಕಾರಿಯಾಗಬಲ್ಲದು. ಮೊದಲನೆಯದಾಗಿ ಅದು ಚಿಕ್ಕ ಮಕ್ಕಳಿಗಷ್ಟೆ ಆಗುತ್ತದೆಂಬ ಭರವಸೆಯಿಲ್ಲ. ದೊಡ್ಡವರಿಗೆ ಅದು ಬರುವುದು ವಿರಳವಾದರೂ ಬಂದಾಗ ತುಂಬ ಕಷ್ಟವನ್ನುಂಟುಮಾಡುತ್ತದೆ. ರೋಗಿಗಳಿಗೆ ಅದು ಶ್ವಾಸನಲಿಕೆ, ಕಿವಿ ಮತ್ತು ಕರುಳಿನ ಉಪದ್ರವಗಳನ್ನು ತರುವುದುಂಟು. ಇದು ಪ್ರಾಣಾಂತಿಕವಾಗಲೂಬಹುದು. ಕ್ಷಯದ ಒಲವುಳ್ಳ ಮಕ್ಕಳನ್ನು ಅದು ನೇರವಾಗಿ ಕ್ಷಯಗ್ರಸ್ತರನ್ನಾಗಿ ಮಾಡಬಹುದು.

ಗೊಬ್ಬರದ ಪಿಡುಗುಗಳು ಸುಮಾರು ಎರಡು ಅಥವಾ ಮೂರು ವರ್ಷಗಳಿಗೊಮ್ಮೆ ವಿಶೇಷವಾಗಿ ಕಾಣಿಸಿಕೊಳ್ಳುತ್ತವೆ. ಹತ್ತು ವರ್ಷಗಳಿಗೊಮ್ಮೆ ಅದು ಉಗ್ರವಾದ ಪ್ರತಾಪ ತೋರಿಸುವುದೂ ಕಂಡುಬಂದಿದೆ. ಪಿಡುಗಿನ ಸಮಯದಲ್ಲಿ ಮಿದುಳಿನ ಜ್ವರ ಮೊದಲಾದ ಗಂಭೀರ ಅಸ್ವಾಸ್ಥ್ಯಗಳೂ ಅದರಿಂದ ಕೆಲವು ಸಾರಿ ಶಾಶ್ವತ ಮಾನಸಿಕ ದೋಷಗಳೂ ಹುಟ್ಟುವ ಭಯವುಂಟು.

ಗೊಬ್ಬರ ರೋಗ ತಗಲದಂತೆ ಮಕ್ಕಳಿಗೆ ಮೈಲಿ (ದಾಕು) ಚುಚ್ಚಲು ಯೋಗ್ಯವಾದ ಚುಚ್ಚುಮದ್ದನ್ನು ಕಂಡುಹಿಡಿಯುವ ಯತ್ನಗಳು ಆಗಿ ಕೆಲವು ಸಾಕಷ್ಟು ಯಶಸ್ವಿಯೂ ಆಗಿವೆ. ಈಗ ಸಾಮಾನ್ಯವಾಗಿ ಸ್ವೀಕರಿಸಲ್ಪಟ್ಟಿರುವುದೆಂದರೆ ಗಾಮಾ-ಗ್ಲೋಬ್ಯುಲಿನ್ ಚುಚ್ಚುಮದ್ದು. ಮನುಷ್ಯರಿಂದ ತೆಗೆದ ಗೊಬ್ಬರ ಸಿರಂ, ಕೋಳಿಮರಿಗಳ ಶರೀರದಲ್ಲಿ ಬೆಳಸಿದ ಸಿರಂ ಮೊದ

"ಜರ್ನಲ್ ಆಫ್ ಇಂಡಿಯನ್ ಮೆಡಿಕಲ್ ಅಸೋಸಿಯೇಶನ್" ಆಧಾರದಿಂದ

ಲಾದ ಬೇರೆ ಚುಚ್ಚುಮದ್ದುಗಳೂ ಇವೆ. ಆದರೆ ಇಂಗ್ಲಂಡಿನಂಥ ಪ್ರಗತಿಪರ ದೇಶದಲ್ಲಿ ಕೂಡ ಇವುಗಳ ಪ್ರಯೋಗ ವಿರಳವಾಗಿದ್ದು ಪ್ರತಿ ವರ್ಷ ಸಾವಿರಗಟ್ಟಳೆ ಮಕ್ಕಳು ಗೊಬ್ಬರಕ್ಕೆ ಗುರಿಯಾಗಿ ಕೆಲವೇಳೆ ಶಾಲೆ-ಶಾಲೆಗಳೇ ಮುಚ್ಚಬೇಕಾಗುತ್ತ ದೆನ್ನುವಾಗ ಭಾರತದಂಥ ದೇಶದ ಮಾತೇನು? ಇಲ್ಲಿ ಹಳ್ಳಿಗಾಡಿನಲ್ಲಿ ಯಾವ ಚುಚ್ಚುಮದ್ದು ಗಳೂ ಸಿಕ್ಕುವುದೇ ಇಲ್ಲ. ಅವುಗಳ ಬೆಲೆಯೂ ಚುಚ್ಚುವ ವೆಚ್ಚವೂ ಬಹಳ ಹೆಚ್ಚು

ಆದರೆ ತೀರ ಈಚೆಗಿನ ವರದಿಯಂತೆ ಬದನೇ ಕಾಯಿಯಂಥ ತೀರ ಸಾಮಾನ್ಯ ತರಕಾರಿಯಿಂದ ಗೊಬ್ಬರವನ್ನು ತಡೆಯಬಹುದೆಂಬ ತಥ್ಯ ಹೊರ ಪಟ್ಟಿದೆ. ಇದನ್ನು ಕಂಡುಹಿಡಿದವರು ಬಂಗಾ-ಲದ ಡಾ. ಎಸ್. ಎನ್. ಸನ್ಯಾಲರು. ಕಲ ಕತ್ತೆಯ ಜೀವಾಣು ಶಾಸ್ತ್ರೀಯ ಸಂಶೋಧನ ಸಂಸ್ಥೆಯ ವಿಜ್ಞಾನಿಗಳಾದ ಡಾ. ಸನ್ಯಾಲರು ಬಂಗಾಲದಲ್ಲಿ ಪ್ರಚಲಿತವಾದ ಒಂದು ರೂಢಿಯ ಮೂಲವೇನೆಂದು ಶೋಧಿಸುತ್ತಿದ್ದಾಗ ಅವರಿಗೆ ಈ 'ಬದನೇಕಾಯಿ ರಹಸ್ಯ' ತಿಳಿದು ಬಂತು. ಜನವರಿ ಫೆಬ್ರುವರಿ ತಿಂಗಳುಗಳಲ್ಲಿ ಮಕ್ಕಳ ಅಭಿಮಾನಿ ದೇವತೆಯನ್ನು ಪೂಜಿಸಿ ಬಂಗಾಲದ ಮಾತೆಯರು ಅವರೆಕಾಯಿ, ಬದನೆ ಕಾಯಿ ಮೊದಲಾದ ತರಕಾರಿಗಳಿಂದ ತಯಾರಿಸಿದ ಪ್ರಸಾದವನ್ನು ಮಕ್ಕಳಿಗೆ ತಿನ್ನಿಸುತ್ತಾರೆ. ಬದನೆಕಾಯಿಗಳು ಸರಿಯಾಗಿ ಬಲಿತು ಹಣ್ಣಾ-ಗಲು ಹತ್ತಿರವಾಗಿರಬೇಕೆಂದು ಬೇರೆ ನಿಯಮ ವಿದೆ. ಹೀಗೆ ಮಾಡಿದರೆ ಮಕ್ಕಳು ಆರೋಗ್ಯ ವಾಗಿ ಉಳಿಯುತ್ತಾರೆಂದು ನಂಬಿಕೆ ಅಲ್ಲಿದೆ.

ಇದರ ಒಳಗುಟ್ಟೇನು? ಫೆಬ್ರುವರಿಯ ನಂತರ ಸಾಮಾನ್ಯವಾಗಿ ಹಬ್ಬುವ ಮಕ್ಕಳ ರೋಗವೆಂ-ದರೆ ಗೊಬ್ಬರ. ಈ ತರಕಾರಿಗಳಲ್ಲಿ ಗೊಬ್ಬರದ ಮೇಲೆ ಪರಿಣಾಮ ಮಾಡುವ ಗುಣಗಳೇನಾದರೂ ಇರಬಹುದೇ ಎಂದು ಡಾ. ಸನ್ಯಾಲರು ತರ್ಕಿಸಿದರು. ಈ ಪ್ರಸಾದವಲ್ಲಿ ಸೇರಿದ ಬೇರೆ ಬೇರೆ ತರಕಾರಿಗಳನ್ನು ಪ್ರಯೋಗಕ್ಕೊಳಪಡಿಸಿದಾಗ ಬಲಿತ ಬದನೇಕಾಯಿಯ ಬೀಜವೇ ಆ ಗುಣಕಾರಿ ಪದಾರ್ಥವೆಂದು ಸ್ಪಷ್ಟವಾಯಿತು.

ಡಾ. ಸನ್ಯಾಲರು "ಜರ್ನಲ್ ಆಫ್ ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ನಿ"ನಲ್ಲಿ ಈಚೆಗೆ ಬರೆದ ಒಂದು ಲೇಖದಲ್ಲಿ ತಮ್ಮ ಪ್ರ-ಯೋಗಗಳ ಪ್ರಾಥಮಿಕ ವಿವರಗಳನ್ನೆಲ್ಲ ಕೊಟ್ಟಿದ್ದಾರೆ. ಪ್ರಥಮತಃ ಅವರು ಅದನ್ನು ಪ್ರಯೋ-ಗಿಸಿದ್ದು ಒಬ್ಬ ಡಾಕ್ಟರರ ಮನೆಯ ಮಕ್ಕಳ ಮೇಲೆ. ಅವರಲ್ಲಿ ಮದುವೆ. ತುಂಬಿದ ಮನೆಯಲ್ಲಿ ಒಂದು ಮಗುವಿಗೆ ಜ್ವರ ಬಂದು ನಾಲ್ಕು ದಿನಗಳಲ್ಲಿ ಗೊಬ್ಬರ ಕಾಣಿಸಿಕೊಂಡಿತು. ಮದುವೆ ಮನೆಯಲ್ಲಿ ಎಲ್ಲ ಮಕ್ಕಳಿಗೂ ಅದು ಹಬ್ಬಿದರೇನು ಗತಿಯೆಂದು ಡಾಕ್ಟರರು ತಬ್ಬಿಬ್ಬಾದರು. ಅವರು ಡಾ. ಸನ್ಯಾಲರ ಹೊಸ ಔಷಧವನ್ನು ಪ್ರಯೋಗಿಸಿ ನೋಡಲೊಪ್ಪಿದರು. ೧೯ ಮಕ್ಕಳಿಗೆ ಅದನ್ನು ಕೊಡಲಾಯಿತು. ಅದನ್ನು ಕೊಟ್ಟ ಯಾವ ಮಗುವಿಗೂ ಗೊಬ್ಬರ ಬರಲಿಲ್ಲ.

ಅನಂತರ ಹಲವೆಡೆ ಅದರ ಪ್ರಯೋಗವಾಯಿತು. ನೆರೆಮನೆಯ ಮಕ್ಕಳೆಲ್ಲ ಗೊಬ್ಬರ ತಗಲಿ ಮಲಗಿದಾಗ ನಾಲ್ಕು ಮಕ್ಕಳ ತಂದೆಯೊಬ್ಬರು ತಮ್ಮ ಮೂವರು ಹಿರಿಯ ಮಕ್ಕಳಿಗೆ ಈ ಔಷಧ ಪ್ರಯೋಗಿಸಿದರು. ಇನ್ನೊಂದಕ್ಕೆ ವರ್ಷವೂ ಆಗಿರಲಿಲ್ಲವಾದ್ದರಿಂದ ಈ ಹೊಸ ಔಷಧ ಕೊಟ್ಟರೇನಾಗುವುದೊ ಎಂದು ಹೆದರಿ ಹಾಗೇ ಬಿಟ್ಟರು. ಔಷಧ ತೆಗೆದುಕೊಂಡ ಮಕ್ಕಳಿಗೆ ಏನೂ ಆಗಲಿಲ್ಲ. ತೆಗೆದುಕೊಳ್ಳದ್ದಕ್ಕೆ ಗೊಬ್ಬರ ತಗಲಿತು. ೫೬ ಮಕ್ಕಳಿದ್ದ ಒಂದು ಹಾಸ್ಟೆಲಿನಲ್ಲಿ ಎಂಟಕ್ಕೆ ಗೊಬ್ಬರ ತಗಲಿದಾಗ ಉಳಿದ ೪೮ಕ್ಕೆ ಈ ಔಷಧ ಕೊಡಲಾಯಿತು. ಅವಾವುಗಳಿಗೂ ರೋಗ ತಗಲಲಿಲ್ಲ.

ಡಾ. ಸನ್ಯಾಲರು ಎರಡು ವರ್ಷ ಕಾಲ ನಡೆಸಿದ ಪರೀಕ್ಷೆಗಳಲ್ಲಿ ಬದನೇ ಬೀಜಗಳು ಗೊಬ್ಬರಕ್ಕೆ ಪ್ರತಿಬಂಧಕವೆಂದು ಸಾಕಷ್ಟು ಸ್ಪಷ್ಟವಾಗಿ ಸಿದ್ಧಪಟ್ಟಿದೆ. ಒಟ್ಟು ೨೫ ಪರೀಕ್ಷೆಗಳಾದವು. ೨೫

ಮನೆತನಗಳಿಗೆ ಸೇರಿದ ೩೧೭ ಮಕ್ಕಳ ಪೈಕಿ ಅವೇ ಮನೆಗಳಲಾಗಲಿ ನೆರಮನೆ ಅಥವಾ ವಠಾರದಲ್ಲಾಗಲಿ ಒಂದು ಅಥವಾ ಹೆಚ್ಚು ಗೊಬ್ಬರ ಪ್ರಕರಣಗಳು ಸಂಭವಿಸಿದ ಮೇಲೆ ಒಟ್ಟು ೨೭೭ ಮಕ್ಕಳಿಗೆ ಈ ಔಷಧ ಕೊಡಲಾಯಿತು. ಅವುಗಳಲ್ಲಿ ಮೂರು ಮಕ್ಕಳನ್ನು ಬಿಟ್ಟು ಉಳಿದ ಯಾವ ಮಗುವಿಗೂ ಗೊಬ್ಬರ ಪೀಡಿಸಲಿಲ್ಲ. ಈ ಎಲ್ಲ ಮಕ್ಕಳೂ ಸುಶಿಕ್ಷಿತ ವರ್ಗಕ್ಕೆ ಸೇರಿದವಾಗಿದ್ದು ಅವುಗಳ ರಕ್ಷಕರಲ್ಲಿ ಡಾಕ್ಟರರು, ವ್ಯಾಪಾರಿಗಳು, ವಿಜ್ಞಾನಿಗಳೇ ಮೊದಲಾದವರಿದ್ದರು.

ಡಾ. ಸನ್ಯಾಲರು ಔಷಧವನ್ನು ತಯಾರಿಸಿದ್ದು ಹೀಗೆ: ಬದನೇಕಾಯಿಯ ಬಲಿತ ಬೀಜಗಳನ್ನು ಒಣಗಿಸಿ ಕುಟ್ಟಿ ವಸ್ತ್ರಗಾಳಿತ ಚೂರ್ಣವನ್ನು ತಯಾರಿಸಿದರು. ಈ ಪುಡಿಯ ಒಂದು ಗ್ರಾಂನಷ್ಟನ್ನು ನೀರಿನೊಡನೆ ಮಗುವಿಗೆ ಕೊಡಲಾಯಿತು. ಬದನೇಕಾಯಿ ಅದೇ ಇದೇ ಜಾತಿಯದಾಗಬೇಕೆಂದಿಲ್ಲ. ಎಲ್ಲ ಜಾತಿಗಳೂ ಚೆನ್ನಾಗಿಯೆ ಕೆಲಸ ಕೊಡುತ್ತವೆ. ಹಳೇ ಬೀಜಗಳಾದರೂ ಗುಣಕ್ಕೆ ಕೊರತೆಯಿಲ್ಲ. ಬರಿ ಬದನೇ ಬೀಜವೇ ಫಲಕಾರಿಯಾಗುತ್ತಿದ್ದರೂ ಕ್ಯಾಲ್ಸಿಯಂ ಪೊಲಿಸಲ್ಫೈಡ್‌ನೊಡನೆ ಕೊಟ್ಟಾಗ ಹೆಚ್ಚು ಕ್ರಿಯಾಶೀಲವಾದಂತೆ ಕಂಡಿತು.

ಔಷಧವನ್ನು ಬಹಳ ತಡಮಾಡಿ ಕೊಟ್ಟರೆ ಅದು ಫಲಕಾರಿಯಾಗುವುದು ಸಂಶಯಾಸ್ಪದವೆಂಬುದು ಪರೀಕ್ಷೆಯಲ್ಲಿ ವಿಫಲವಾದ ಮೂರು ಪ್ರಕರಣಗಳಿಂದ ತೋರಿಬರುತ್ತದೆ. ವೈರಸ್ ಜೀವಾಣುಗಳು ಶರೀರದ ಕೋಶಗಳೊಳಗೆ ದೃಢವಾಗಿ ಬೇರೂರಿದ ಮೇಲೆ ಗಾಮಾ ಗ್ಲೋಬ್ಯುಲಿನ್ ಮೊದಲಾದ ಚುಚ್ಚುಮದ್ದುಗಳು ಕೂಡ ವಿಫಲವಾಗುತ್ತವೆ. ಆದರೆ ವೈರಸ್‌ಗಳು ಶರೀರವನ್ನು ಪ್ರವೇಶಿಸಿದ್ದರೂ ಇನ್ನೂ ರಕ್ತದಲ್ಲಷ್ಟೇ ತೇಲಾಡುತ್ತಿದ್ದಷ್ಟು ಕಾಲ ಬದನೇಕಾಯಿ ಬೀಜಗಳು ರೋಗವನ್ನು ತಡೆಯಲು ಸಮರ್ಥವಾಗುತ್ತವೆಂದು ಕಂಡುಬಂದಿದೆ. ಆದರೂ ಇನ್ನೂ ರೋಗ ಶರೀರ ಪ್ರವೇಶ ಮಾಡುವ ಮೊದಲೇ ಔಷಧ ಕೊಡುವುದು ಉತ್ತಮ ಪಕ್ಷ. ಕೇರಿಯಲ್ಲಿ ಗೊಬ್ಬರ ತಲೆಯೆತ್ತಿದಾಕ್ಷಣವೇ ಮಕ್ಕಳಿಗೆ ಈ ಔಷಧ ಕೊಟ್ಟುಬಿಟ್ಟರೆ ರಕ್ಷಣೆ ಹೆಚ್ಚು ಕಡಿಮೆ ಪೂರ್ತಿ ಖಾತ್ರಿಯೆನ್ನಬಹುದು.

ಒಮ್ಮೆ ಈ ಔಷಧಿ ಕೊಟ್ಟರೆ ಕನಿಷ್ಠ ಒಂದು ವರ್ಷದ ವರೆಗೆ ಅದರ ಪರಿಣಾಮ ಇರುತ್ತದೆ. ಕೆಲ ಪ್ರಕರಣಗಳಲ್ಲಿ ಎರಡು ವರ್ಷಗಳ ವರೆಗೆ ಅದು ಉಳಿದದ್ದುಂಟು.

ಬದನೇ ಬೀಜದಲ್ಲಿರುವ ಯಾವ ವಿಶಿಷ್ಟ ರಾಸಾಯನಿಕ ದ್ರವ್ಯವು ರೋಗದ ವೈರಸ್ಸುಗಳ ಬೆಳವಣಿಗೆಯನ್ನು ತಡೆದು ಅವುಗಳನ್ನು ಕೊಲ್ಲುತ್ತದೆಂಬ ಬಗ್ಗೆ ಇನ್ನೂ ಪರಿಶೀಲನೆಗಳಾಗಬೇಕಷ್ಟೆ. ಆದರೆ ಅದರ ಗುಣ ಆಗಲೆ ಸಿದ್ಧವಾಗಿರುವುದರಿಂದ ಸರಕಾರದ ಆರೋಗ್ಯ ಇಲಾಖೆಯವರೂ ಮಕ್ಕಳ ರಕ್ಷಕರೂ ಈ ಅಗ್ಗ ಮತ್ತು ಸುಲಭವಾದ ಔಷಧವನ್ನು ದೊಡ್ಡ ಪ್ರಮಾಣದಲ್ಲಿ ಪರೀಕ್ಷೆಗೊಳಪಡಿಸಿದರೆ ಹಿತರಕರವಲ್ಲವೆ? *

## ಚಿಕ್ಕವರ ವಿಚಾರ

"ಹೆತ್ತವರು" ಎಂಬ ವಿಷಯದ ಮೇಲೆ ಪ್ರಬಂಧ ಬರೆಯುತ್ತ ಒಬ್ಬ ಚಿಕ ಬಾಲಿಕೆ ಹೀಗೆ ಹೇಳಿದ್ದಳು:

"ಹೆತ್ತವರ ಅಭ್ಯಾಸಗಳನ್ನು ಬದಲಾಯಿಸುವುದು ಬಲು ಕಷ್ಟ. ಬಹುಶಃ ಅವರು ತೀರ ದೊಡ್ಡವರಾದ ಮೇಲೆ ನಮಗೆ ಸಿಗುವುದೇ ಇದಕ್ಕೆ ಕಾರಣವಾಗಿರಬೇಕು."

ವೈದ್ಯಕೀಯ

ಇತಿಹಾಸದಲ್ಲೆ

ಇದೊಂದು

ಅಪೂರ್ವ ಸಾಧನೆ



# ಶಿರಃಸಂಧ ಅವಳಿಗಳ ಶಸ್ತ್ರಕ್ರಿಯೆ

ಪಾವೆಂ

೧೯೫೧ ಸೆಪ್ಟೆಂಬರ ಮಧ್ಯದಲ್ಲಿ ರೈತ ರೋಯ್ಸ್ ಬ್ರೋಡಿಯ ಹೆಂಡತಿ ಮಾರ್ಜೋರಿ ಬ್ರೋಡಿ ಅಮೇರಿಕದ ಇಲಿನಾಸ್ ರಾಜ್ಯದ ರಾಕ್ ಐಲಂಡ್‌ನಲ್ಲಿರುವ ಸೆಂಟ್ ಆಂಥನಿ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ಸೇರಿದಾಗ ಅವಳಲ್ಲಿ ಏನೂ ವಿಶೇಷ ಕಾಣಿಸಲಿಲ್ಲ. ೨೯ ವರ್ಷದ ಅವಳು ಆಗಲೆ ನಾಲ್ಕು ಮಕ್ಕಳ ತಾಯಿಯಾಗಿದ್ದಳು. ಅವಳು ಹಿಂದೆ ಕೆಲ ಕಾಲ ಯಾವುದೋ ಆಸ್ಪತ್ರೆಯಲ್ಲಿ ದಾದಿಯಾಗಿದ್ದವಳು. ಆದ್ದರಿಂದ ಡಾಕ್ಟರರು ಅವಳ ಹೊಟ್ಟೆಯ ಮೇಲೆ ಸ್ಟೆಥೋಸ್ಕೋಪು ಇಟ್ಟು ಎರಡೆರಡು ಎದೆ ಬಡಿತಗಳನ್ನು ಗುರುತಿಸಿ "ಬಹುಶಃ ನೀನು ಅವಳಿ ಮಕ್ಕಳನ್ನು ಹಡೆಯುವಿ" ಎಂದು ತಿಳಿಸಿದಾಗ ಅವಳಿಗೆ ಭಯವಾಗಲಿ ಕುತೂಹಲವಾಗಲಿ ಎನಿಸಲಿಲ್ಲ.

ಸಪ್ಟೆಂಬರ್ ೧೫ ರಂದು ಅವಳಿಗೆ ಪ್ರಸವ ವೇದನೆ ಪ್ರಾರಂಭವಾಯಿತು. ಅಂದು ರಾತ್ರಿ ಅಂದರೆ ತಾ. ೧೬ ಬೆಳಗಿನ ಜಾವ ಮೂರು ಗಂಟೆಗೆ ಮೊದಲನೇ ಮಗು ಕಾಲು ಮೊದಲಾಗಿ ಹೊರ ಬಂದಾಗಲೂ ಡಾಕ್ಟರಗಿಗೆ ಆಶ್ಚರ್ಯವಾಗಲಿಲ್ಲ. ಆದರೆ ಆ ಮಗುವನ್ನು ಎಳೆದು ತೆಗೆಯುವುದು ಮಾತ್ರ ಸುಲಭವಾಗಲಿಲ್ಲ. ಬೇಗನೆ ಇನ್ನೊಂದು ಮಗು ಈ ಮಗುವಿಗೆ ತಲೆಯಲ್ಲಿ ಕೂಡಿಕೊಂಡದ್ದು ಅವರಿಗೆ ತಿಳಿಯಿತು.

ಕೆಲ ನಿಮಿಷಗಳಲ್ಲಿ ಮೇಜಿನ ಮೇಲೆ ಒಂದು ವಿಚಿತ್ರ ದೃಶ್ಯ ವಿಶ್ರಮಿಸಿತ್ತು. ಎರಡು ಪುಟ್ಟ ಗಂಡು ಮಕ್ಕಳು ಒಂದಕ್ಕೊಂದು ವಿರುದ್ಧ ದಿಶೆಯಲ್ಲಿ ಕಾಲುಗಳನ್ನು ಚಾಚಿ ಮಿಡುಕುತ್ತಿದ್ದವು. ಅವೆರಡೂ ನೆತ್ತಿಯಲ್ಲಿ ಕೂಡಿಕೊಂಡಿದ್ದವು. ಅವುಗಳ ಹಣೆ ಅಖಂಡವಾಗಿತ್ತು. ನಡುವೆ ಒಂದು ಚಿಕ್ಕ ಕೂದಲ ರೇಖೆಯಷ್ಟೆ ಎರಡು ಹಣೆಗಳನ್ನು ಬೇರ್ಪಡಿಸಿತ್ತು. ಅವುಗಳಲ್ಲೊಂದು ೧೮ ಅಂಗುಲ ಉದ್ದವಾಗಿದ್ದು ತುಸು ಬಲಿಷ್ಠವಾಗಿತ್ತು; ಇನ್ನೊಂದು ಅದಕ್ಕಿಂತ ಸ್ವಲ್ಪ ಚಿಕ್ಕದು ಮತ್ತು ದುರ್ಬಲವಾಗಿತ್ತು.

ತಂದೆ ತಾಯಿಗಳು ಈ ವಿಚಿತ್ರ ಅವಳಿ ಮಕ್ಕಳನ್ನು ಮನೆಗೊಯ್ದರು. ಆದರೆ ಅವರ ಚಿತ್ತ ತುಂಬ ತಳಮಳಗೊಂಡಿತ್ತು. ಸಂದುಗೂಡಿದ ಅವಳಿಗಳು ಹೊಸ ಸಂಗತಿಯೇನೂ ಆಗಿದ್ದಿಲ್ಲ. ಒಂದು ಶತಮಾನಕ್ಕೂ ಹಿಂದೆ ಪಕ್ಕೆಗಳಲ್ಲಿ ಸಂದುಗೂಡಿದ್ದ ಚೆಂಗ್ ಮತ್ತು ಎಂಗ್ ಎಂಬ

ಅವಳಿಗಳು ಅಮೇರಿಕಕ್ಕೆ ಬಂದು ನೆಲಸಿ ವಿಪುಲ ಹಣ ಗಳಿಸಿ ಮದುವೆ ಕೂಡ ಆಗಿ ದೊಡ್ಡ ಸಂಸಾರವನ್ನು ಬಿಟ್ಟು ಹೋಗಿದ್ದರು. ಆದರೆ ತಲೆಯಲ್ಲಿ ಸಂದುಗೂಡಿ ಒಂದಕ್ಕೊಂದು ವಿರುದ್ಧ ದಿಶೆಯಲ್ಲಿರುವ ಈ ಮಕ್ಕಳು ಬೆಳೆದು ದೊಡ್ಡವರಾದರೆ ಹಾಗೆ ಮಾಡಲು ಸಾಧ್ಯವಾಗಲಾರದು. ಅವರು ಯಾವಾಗಲೂ ಬಿದ್ದುಕೊಂಡೇ ಬಾಳನ್ನು ನೂಕಬೇಕಾದೀತು.

ಆರು ವಾರದಲ್ಲಿ ಅವರು ಒಂದು ಧೀರ ನಿರ್ಣಯಕ್ಕೆ ಬಂದರು. ಆದದ್ದಾಗಲಿ ಎಂದು ಅವರು ಈ ಅವಳಿಗಳನ್ನು ಚಿಕಾಗೋನಲ್ಲಿರುವ ಇಲಿನಾಸ್ ವಿಶ್ವವಿದ್ಯಾಲಯದ ಆಸ್ಪತ್ರೆಗೆ ಕರೆತಂದು, "ಇವುಗಳನ್ನು ಬೇರ್ಪಡಿಸಲು ನಿಮಗೆ ಸಾಧ್ಯವಿದ್ದರೆ ನೋಡಿರಿ" ಎಂದು ಒಪ್ಪಿಸಿದರು.

ಡಾಕ್ಟರರು ನೋಡಿದರು. ಗಾತ್ರದಲ್ಲಿ ಬಲು ಚಿಕ್ಕವಾಗಿದ್ದರೂ ಈ ಮಕ್ಕಳು ಆರೋಗ್ಯವುಳ್ಳವಾಗಿ ಕಂಡವು. ಆಗಲೇ ಅವು ನಸುನಗಲು ಪ್ರಾರಂಭಿಸಿದ್ದವು. ಎರಡರಲ್ಲಿ ಹೆಚ್ಚು ಗಾತ್ರದ ರೋಜರ್ ಲೀ ಹೆಚ್ಚು ಚಟುವಟಿಕೆಯುಳ್ಳವನೂ ಆಗಿದ್ದ. ಮಗ್ಗಲು ಯಾವಾಗ ಬದಲಿಸಬೇಕು ಎಂದು ಆತನೇ ನಿರ್ಣಯಿಸುತ್ತಿದ್ದ. ಹೆಚ್ಚು ಕೋಪಿಷ್ಠನೂ ಆತನೇ.

ಈ ಅವಳಿಯನ್ನು ಬೇರ್ಪಡಿಸಲು ಸಾಧ್ಯವೇ ಎಂದು ಡಾಕ್ಟರರಿಗೆ ಗೊತ್ತಿರಲಿಲ್ಲ. ಆದರೆ ಜವಾಬ್ದಾರಿಯನ್ನು ಅವರು ಸ್ವೀಕರಿಸಿದರು.

ಸುದೀರ್ಘವಾದ ಪರಿಶೀಲನೆ ಪ್ರಾರಂಭವಾಯಿತು. ಈ ಮಕ್ಕಳು ನಿಸರ್ಗವೈಚಿತ್ರ್ಯದಿಂದ ಜೋಡಿಗೊಂಡಿದ್ದರೂ ಬೇರೆ ಬೇರೆ ವ್ಯಕ್ತಿಗಳೆಂಬುದು ಸ್ಪಷ್ಟವಾಗಿಯೆ ಇತ್ತು. ಅವರ ಸ್ವಭಾವಗಳು ಬೇರೆ ಬೇರೆಯಾಗಿದ್ದವು. ಎರಡೂ ಏಕಕಾಲದಲ್ಲಿ ನಿದ್ರಿಸದೆ ಬೇರೆ ಬೇರೆ ಸಮಯಗಳಲ್ಲಿ ನಿದ್ರಿಸುತ್ತಿದ್ದವು. ಅನ್ನಪಾನ ಮಲಮೂತ್ರ ವಿಸರ್ಜನೆಗಳನ್ನು ನೋಡಿದರೆ ಎರಡರ ನರಮಂಡಲಗಳೂ ಮಿದುಳುಗಳೂ ರಕ್ತಾಭಿಸರಣಗಳೂ ಬೇರೆಬೇರೆಯೆಂಬುದರಲ್ಲಿ ಸಂದೇಹವಿರಲಿಲ್ಲ.

ಅನೇಕ ಕ್ಷ-ಕಿರಣ ಚಿತ್ರಗಳನ್ನು ತೆಗೆದು ನೋಡಿದಾಗ ಇಬ್ಬರ ಮಿದುಳುಗಳ ನಡುವೆ ನೆತ್ತಿಯಲ್ಲಿ ಎಲುಬಿನ ಚಿಪ್ಪೇ ಇರಲಿಲ್ಲ. ಮಿದುಳಿನ ಮೇಲ್ಗಡೆ ಇರುವ "ಡ್ಯೂರಾ ಮೇತರ್" ಎಂಬ ಮುಚ್ಚಳದಂಥ ಪಟಲ ಮಾತ್ರ ಒಂದಕ್ಕೊಂದು ಕೂಡಿತು.

ಆದರೆ ವೈದ್ಯಕೀಯ ಇತಿಹಾಸವನ್ನು ನೋಡಿದಾಗ ಈ ಮಕ್ಕಳಿಗೆ ಆಶೆಯೇನೂ ತೋರಲಿಲ್ಲ. ಇತಿಹಾಸದಲ್ಲಿ ಸಂದುಗೂಡಿದ ಅವಳಿಗಳ ದಾಖಲೆ ಸುಮಾರು ೩೫೦ ಇದ್ದರೂ ಅವುಗಳಲ್ಲಿ ನೆತ್ತಿಯಲ್ಲಿ ಕೂಡಿದ ಪ್ರಕರಣಗಳು ವಿರಳವಾಗಿದ್ದವು. ಸಂದುಗೂಡಿದ ಅವಳಿಗಳನ್ನು ಬೇರ್ಪಡಿಸುವ ಶಸ್ತ್ರಕ್ರಿಯೆಗಳಾದುದೇ ಅಪರೂಪ. ಆದವುಗಳಲ್ಲಿಯೂ ವ್ಯರ್ಥವಾದವುಗಳು ಹೆಚ್ಚಾಗಿದ್ದವು. ಶಿರಃಸಂಧ (ತಲೆಯಲ್ಲಿ ಕೂಡಿದ) ಅವಳಿಗಳನ್ನು ಬೇರ್ಪಡಿಸಲು ಆಸ್ಟ್ರೇಲಿಯದಲ್ಲೊಂದು, ಬ್ರೆಜಿಲ್‌ನಲ್ಲೊಂದು ಹೀಗೆ ಎರಡೇ ಪ್ರಯತ್ನಗಳಾಗಿ ಎರಡೂ ನಿರರ್ಥಕಗೊಂಡಿದ್ದವು; ನಾಲ್ಕೂ ಮಕ್ಕಳು ಸತ್ತಿದ್ದರು.

ಇತ್ತ ಮಕ್ಕಳು ಬೆಳೆಯುತ್ತಿದ್ದವು. ಬಲಿಷ್ಠನಾದ ರೋಜರ್ ಹೆಚ್ಚು ತುಂಟನೂ ಆಗಿದ್ದ. ಆತ ತನ್ನ ದುರ್ಬಲ ತಮ್ಮನಾದ ರೋಡ್ನಿಯ ಮೇಲೆ ಈರ್ಷೆಯನ್ನೂ ಪ್ರದರ್ಶಿಸುತ್ತಿದ್ದ. ಒಮ್ಮೊಮ್ಮೆ ರೌದ್ರಾವತಾರ ತಾಳಿ ರೋಡ್ನಿಯ ಕಡೆ ತನ್ನ ಕೈಗಳನ್ನು ಚಾಚಿ ಅವನ ಮೂಗು ಕಿವಿಗಳನ್ನು ಹರಿದು ನೋಯಿಸುತ್ತಿದ್ದ. ಪುಟ್ಟ ರೋಡ್ನಿ ಇದನ್ನೆಲ್ಲ ಪ್ರತೀಕಾರವಿಲ್ಲದೆ ಸೈರಿಸಬೇಕಾಗುತ್ತಿತ್ತು.

ಒಂದು ವರ್ಷದ ಪರಿಶೀಲನೆಯ ನಂತರ ಇಲಿನಾಸ್ ವಿಶ್ವವಿದ್ಯಾಲಯದ ಡಾಕ್ಟರರು ಬ್ರೋಡಿ ದಂಪತಿಗಳಿಗೆ ತಮ್ಮ ಖಚಿತಾಭಿಪ್ರಾಯವನ್ನು ತಿಳಿಸಿದರು. "ಶಸ್ತ್ರಕ್ರಿಯೆ ಮಾಡಲಡ್ಡಿಯಿಲ್ಲ. ಆದರೆ ಒಂದೋ ಅಥವಾ ಎರಡೂ ಮಕ್ಕಳು ಶಸ್ತ್ರಕ್ರಿಯಾ ಮಂಚದ ಮೇಲೆಯೆ ಸಾಯುವ ಸಂಭವ ಸೇಕಡಾ ೯೯ ಇದೆ. ಉಳಿ

ಯುವ ಸಂಭವ ನೂರಕ್ಕೊಂದು ಮಾತ್ರ."

ಬ್ರೋಡಿ ದಂಪತಿಗಳು ಈ ಅಪಾಯವಿದ್ದರೂ ಶಸ್ತ್ರಕ್ರಿಯೆ ಮಾಡುವುದೇ ಸೂಕ್ತವೆಂದು ಹೇಳಿದರು.

ಡಾಕ್ಟರರು ಒಪ್ಪಿದರು. ಮಕ್ಕಳಿಬ್ಬರಿಗೂ ನೆತ್ತಿಯನ್ನು ಮುಚ್ಚುವ ಚಿಪ್ಪು ಇದ್ದಿಲ್ಲವಾಗಿ ಅವರನ್ನು ಬೇರ್ಪಡಿಸಿದ ನಂತರ ಮೆದುಳನ್ನು ಮುಚ್ಚಲು ನೆತ್ತಿಗೆ ಹೊದಿಕೆ ಬೇಕಾಗಿತ್ತು. ಆದ್ದರಿಂದ ನಾಲ್ಕು ಪ್ರಾರಂಭಿಕ ಶಸ್ತ್ರ ಚಿಕಿತ್ಸೆಗಳನ್ನು ಮಾಡಿ ಇಬ್ಬರ ತಲೆಯ ಪಕ್ಕಗಳಲ್ಲಿ ಚರ್ಮವನ್ನು ಅರ್ಧಕ್ಕೆ ಸುಲಿದು ಸುರುಳಿ ಮಾಡಿಡಬೇಕಾಯಿತು. ಅವರನ್ನು ಬೇರ್ಪಡಿಸಿದ ಮೇಲೆ ಇವುಗಳನ್ನು ನೆತ್ತಿಯ ಮೇಲೆ ನೀಡಿ ಹೊಲಿದು ಬಿಟ್ಟರೆ ಎಲುಬಿನದಲ್ಲದಿದ್ದರೆ ಚರ್ಮದ ಮುಚ್ಚಳವಾದರೂ ತತ್ಕಾಲಕ್ಕೆ ಸಿದ್ಧವಾಗುತ್ತದಲ್ಲ.

೧೯೫೨ ಡಿಸೆಂಬರ್ ೧೭ ನಸುಕಿನಲ್ಲಿ ಬ್ರೋಡಿ ಅವಳಿಗಳ ಭಾಗ್ಯ ನಿರ್ಣಯವನ್ನೂ ವೈದ್ಯಕೀಯ ಇತಿಹಾಸದ ಒಂದು ಅಸಾಧ್ಯ ಸಾಧನೆಯನ್ನೂ ಮಾಡುವ ಶಸ್ತ್ರಕ್ರಿಯೆ ಇಲಿನಾಸ್ ವಿಶ್ವವಿದ್ಯಾಲಯದ ಆಸ್ಪತ್ರೆಯಲ್ಲಿ ಪ್ರಾರಂಭವಾಯಿತು.

ವಿಶ್ವವಿದ್ಯಾಲಯದ ತರುಣ ನ್ಯುರೋಸರ್ಜನ್ ಒಸ್ಕಾರ್ ಶುಗರ್ ಅವರ ನೇತೃತ್ವದಲ್ಲಿ ೧೫ ಜನ ಡಾಕ್ಟರರ ತಂಡವು ಶಸ್ತ್ರಕ್ರಿಯಾ ಮಂಚದ ಸುತ್ತ ನಿಂತಿತ್ತು. ಮೂವರು ಮೂರ್ಛಾಶಾಸ್ತ್ರಜ್ಞರು ಮಕ್ಕಳಿಬ್ಬರಿಗೆ ಮೂರ್ಛಾವಾಯುವನ್ನು ಹಿತಮಿತವಾದ ಪ್ರಮಾಣದಲ್ಲಿ ಕೊಡುತ್ತಲೂ ಅವರ ಹೃದಯ ಬಡಿತ, ರಕ್ತದ ಒತ್ತಡ, ಉಸಿರಾಟಗಳನ್ನು ಕ್ಷಣಕ್ಷಣಕ್ಕೆ ಪರೀಕ್ಷಿಸುತ್ತಲೂ ಇದ್ದರು.

ಡಾ. ಶುಗರರು ಶಸ್ತ್ರವನ್ನೆತ್ತಿ ಮೃದುವಾಗಿ ಡ್ಯೂರಾ ಮೇತರ್ ಪಟಲವನ್ನು ಸೀಳತೊಡಗಿದರು. ಈ ಪಟಲಗಳು ಅಂಟಿನಿಂದ ಒಂದಕ್ಕೊಂದು ಹಚ್ಚಿದ ಎರಡು ಕಾಗದಗಳಂತೆ ಕೂಡಿದ್ದವು.

ಶಸ್ತ್ರಕ್ರಿಯೆ ನಂಬಲಾರದಷ್ಟು ಸೂಕ್ಷ್ಮವೂ ಜಟಿಲವೂ ಆಗಿತ್ತು. ಅಸಂಖ್ಯ ರಕ್ತನಾಳಗಳೂ ನರಗಳೂ ಅದರಲ್ಲಿ ಸಂಬಂಧ ಪಡೆದಿದ್ದವು. ಚಿಕ್ಕ ಚಿಕ್ಕ ನಾಳಗಳಿಂದ ರಕ್ತವೊಸರಿ ಕಳೆದು ಹೋಗುತ್ತಿತ್ತು. ಈ ಹಾನಿಯನ್ನು ತುಂಬಲು ಡಾಕ್ಟರರು ಹೆಚ್ಚು ಹೆಚ್ಚು ರಕ್ತವನ್ನು ಬೇಡುತ್ತಿದ್ದರು.

ಸುಮಾರು ಎರಡು ತಾಸು ಕೆಲಸ ಸಾಗಿದ ಮೇಲೆ ಡಾಕ್ಟರರು ಉಭಯ ಸಂಕಟದ ಒಂದು ನಿಟ್ಟಿಗೆ ಬಂದರು. ಎರಡು ಮಕ್ಕಳು ಬೇರೆ ಬೇರೆ ವ್ಯಕ್ತಿಗಳಾಗಿದ್ದು ಅವರ ಅವಯವಗಳೆಲ್ಲ ಸ್ವತಂತ್ರವೇ ಆಗಿದ್ದರೂ ಅತ್ಯಂತ ಮಹತ್ವದ್ದಾದ ಸೆಗಿಟಲ್ ಸೈನಸ್ ಎಂಬೊಂದು ರಕ್ತನಾಳ ಮಾತ್ರ ಇಬ್ಬರಿಗೂ ಸೇರಿ ಒಂದೇ ಇತ್ತು. ಈ ನಾಳವು ಮಿದುಳಿನಿಂದ ಅಶುದ್ಧ ರಕ್ತವನು ಬರಮಾಡಿಕೊಂಡು ಹೃದಯದ ಕಡೆ ಕಳಿಸುವ ನಲ್ಲಿಯಂತಿರುತ್ತದೆ.

ಈ ಕಾಲಿಂಚು ದಪ್ಪದ ರಕ್ತನಾಳವನ್ನು ಸಿಗಿದು ಅಥವಾ ಕತರಿಸಿ ಇಬ್ಬರಿಗೆ ಪಾಲು ಮಾಡಿಕೊಡಲು ಸಾಧ್ಯವೇ ಇರಲಿಲ್ಲ. ಅದನ್ನು ಒಬ್ಬರಿಗೇ ಬಿಡಬೇಕಾಗಿತ್ತು; ಯಾರಿಗೆ ಬಿಡಬೇಕು? ನಿರ್ಣಯ ಸುಲಭವಾಗಿರಲಿಲ್ಲ. ಡಾಕ್ಟರರು ಅವಸರದಿಂದ ಮಾತಾಡಿಕೊಂಡರು. ಈ ನಾಳ ದುರ್ಬಲನಾದ ರೋಡ್ನಿಗೆ ಅನುಕೂಲವಾದ ಸ್ಥಾನದಲ್ಲಿತ್ತು. ಮೇಲಾಗಿ ನೋಡಲು ರೋಜರ್ ಬಲಿಷ್ಠನಾಗಿದ್ದರೂ ಆತನಿಗೆ ಸಹನಶಕ್ತಿ ಕಡಿಮೆ ಇತ್ತೆಂದು ಶಸ್ತ್ರಕ್ರಿಯೆ ನಡೆಯುತ್ತಿದ್ದಾಗ ವ್ಯಕ್ತವಾಗಿತ್ತು. ರೋಡ್ನಿ ಸುಖಮುಖವಾಗಿಯೇ ಇದ್ದರೆ ರೋಜರ್ ಮಾತ್ರ ಮೂರು ಸಲ ನಿಶ್ಚೇತನನಾಗಿದ್ದ. ಡಾಕ್ಟರರು ನಾನಾ ಉಪಾಯಗಳಿಂದ ಅವನನ್ನು ಪುನರುಜ್ಜೀವನಗೊಳಿಸಬೇಕಾಯಿತು. ಅಂದಮೇಲೆ ಆಯುರ್ಬಲ ಅವನಿಗಿಂತ ರೋಡ್ನಿಗೇ ಹೆಚ್ಚಾಗಿದೆಯೆಂದವರಿಗೆ ತೋರಿತು.

೧೦॥ ತಾಸುಗಳ ನಿರಂತರ ಪರಿಶ್ರಮವಾದ

ನಂತರ ಸಂಜೆ ೬–೨೬ ಕ್ಕೆ ಸರ್ಜನ್ನರು ನಿರ್ವಿಣರಾಗಿ ಕೋಣೆಯಿಂದ ಹೊರಬಂದರು. ಅವಳಿಗಳನ್ನು ಸಂಪೂರ್ಣವಾಗಿ ಬೇರ್ಪಡಿಸಲಾಗಿತ್ತು. ಸೆಗಿಟಲ್ ಸೈನಸ್ ರೋಡ್ನಿಗೆ ಕೊಡಲ್ಪಟಿತ್ತು. ರೋಜರನ ಪಾಲಿಗೆ ತುಂಬಾ ಪ್ರಸಂಗಾವಧಾನಿಯಾದ ನಿಸರ್ಗವು ಸೆಗಿಟಲ್ ಸೈನಸ್ ಬದಲಿಗೆ ಬೇಗನೆ ಬೇರೆ ರಕ್ತವಾಹಿನಿಯನ್ನು ರೂಪಿಸೀತೆಂದು ಅವರು ಆಶಿಸಿದ್ದರು. ಶಸ್ತ್ರಕ್ರಿಯೆ ಮುಗಿಯಬೇಕಾದರೆ ಇಬ್ಬರು ಮಕ್ಕಳಿಗೆ ಸೇರಿ ಅವರ ಶರೀರಗಳಲ್ಲಿದ್ದುದರ ಮೂರು ಪಟ್ಟು ಹೊಸ ರಕ್ತವನ್ನು ಕೊಡಬೇಕಾಗಿ ಬಂದಿತ್ತು.

ಬೇರ್ಪಟ್ಟ ಇಬ್ಬರು ಮಕ್ಕಳು ಆ ದಿನ ಮೊದಲ ಬಾರಿ ಬೇರೆ ಬೇರೆ ಕಡೆ ಮಲಗಿದರು. ಅವರ ತಲೆಗಳು ಬ್ಯಾಂಡೇಜುಗಳಿಂದ ಮುಚ್ಚಿಹೋಗಿದ್ದವು. ಅವರಿಗಿನ್ನೂ ಮೂರ್ಛೆ ತಿಳಿದಿದ್ದಿಲ್ಲ. ತಿಳಿದೇ ತೀರೀತೆಂಬ ಧೈರ್ಯವೂ ಇರಲಿಲ್ಲ. ಇತಿಹಾಸದಲ್ಲಿ ಸಮವಯಸ್ಸಿನ ಯಾವ ಮಗುವೂ ಅನುಭವಿಸಲಾರದಷ್ಟು ದೀರ್ಘವಾದ ಶಸ್ತ್ರ-ಕ್ರಿಯೆಯನ್ನು ಈ ಮಕ್ಕಳು ಅನುಭವಿಸಿದ್ದರು. ನಿರಂತರವಾಗಿ ೧೨ ಗಂಟೆ ಮೂರ್ಛಾವಸ್ಥೆಯಲ್ಲಿ ಅವರನ್ನಿಡಲು ಉಪಯೋಗಿಸಿದ ಔಷಧದ ಪರಿಣಾಮವಾಗಿ ಅವರ ಹೃದಯಕ್ಕೆ ಎಷ್ಟು ಪೆಟ್ಟು ಬಿದ್ದಿತ್ತೋ ಹೇಳುವಂತಿರಲಿಲ್ಲ. ರಕ್ತ ಹಾನಿಯಿಂದಾದ ಶಾಕ್‌ನಿಂದ ಅವರು ಪ್ರಾಣ ಬಿಡಬಹುದಾಗಿತ್ತು. ಮಿದುಳಿಗೆ ಪ್ರಾಣವಾಯು (ಆಮ್ಲಜನಕ) ಸರಿಯಾಗಿ ಒದಗದೆ ಅಥವಾ ಮಿದುಳಲ್ಲಿ ನೀರು ತುಂಬಿ ಅವರಿಗೆ ಮುಳುವಾಗಬಹುದೆಂದೂ ಡಾಕ್ಟರರಿಗೆ ಚಿಂತೆಯಿತ್ತು.

ವಾರಗಳು ಸರಿದವು. ಡಾಕ್ಟರರ ಚಿಂತೆ ರೋಡ್ನಿಯ ವಿಷಯದಲ್ಲಿ ಸ್ವಲ್ಪ ಸ್ವಲ್ಪ ದೂರವಾಗುತ್ತಿತು. ಆತನಿಗೆ ಪ್ರಜ್ಞೆಬಂದು ಪ್ರಗತಿ ಹೊಂದತೊಡಗಿದ್ದ. ಆದರೆ ರೋಜರನ ವಿಷಯದಲ್ಲಿ ಡಾಕ್ಟರರ ಆಶೆ ಫಲಿಸದೇ ಭಯವೇ ದೃಢಪಟ್ಟಿತು. ಸೆಗಿಟಲ್ ಸೈನಸ್ ಇಲ್ಲದ್ದರಿಂದ ಅವನ ಮಿದುಳಿನ ಮೇಲೆ ಒತ್ತಡ ಹೆಚ್ಚಿ ೩೪ ದಿನಗಳ ದೋಲಾಯಮಾನ ಜೀವನದ ನಂತರ ಆತ ಶಸ್ತ್ರಕ್ರಿಯಾ ಕಾಲದಲ್ಲಿ ಒದಗಿದ ಮೂರ್ಛೆ ತಿಳಿಯದೇನೇ ಮರಣಹೊಂದಿದ.

ಶಸ್ತ್ರಕ್ರಿಯೆಯಾಗಿ ಒಂದು ವರ್ಷದೊಳಗೆ ರೋಡ್ನಿ ಸಾಮಾನ್ಯ ಮಗುವಿನಂತೆ ಕಾಣಿಸತೊಡಗಿದ್ದ. ಅದಕ್ಕೆ ಮೊದಲು ಸರ್ಜನ್ನರು ಅನೇಕಾನೇಕ ಶಸ್ತ್ರಕ್ರಿಯೆಗಳ ಮೂಲಕ ಅವನ ನೆತ್ತಿಯ ಬಹುಭಾಗಕ್ಕೆ ಎಲುಬಿನ ಮುಚ್ಚಳವನ್ನೂ ಅದಕ್ಕೆ ಚರ್ಮದ ಹೊದಿಕೆಯನ್ನೂ ಒದಗಿಸಿದ್ದರು. ಪ್ಲಾಸ್ಟಿಕ್ ಶಸ್ತ್ರಕ್ರಿಯೆಯಿಂದ ಅವರೆಷ್ಟು ಕೌಶಲದಿಂದ ಚರ್ಮವನ್ನು ತಲೆಗೆ ವರ್ಗಾಯಿಸಿದ್ದರೆಂದರೆ ತಲೆಯ ಮೇಲೆ ಕೂದಲು, ಗುಚ್ಛಗುಚ್ಛವಾಗಿ ಬೆಳೆದಿತ್ತು. ೧೯೫೨ ಕ್ರಿಸ್ಮಸ್‌ಗೆ ಮೊದಲು ೧೫ ತಿಂಗಳ ಮಗುವಾಗಿ ಶಸ್ತ್ರಕ್ರಿಯೆಗೊಳಪಟ್ಟಿದ್ದ ರೋಡ್ನಿ ೧೯೫೩ ಕ್ರಿಸ್ಮಸ್‌ಗೆ ೨೭ ತಿಂಗಳ ಮಗುವಾಗಿ ಆತ ತಂದೆ ತಾಯಿಗಳ ಸಂಗಡ ಕಾರಿನಲ್ಲಿ ೨೬೫ ಮೈಲು ಸಾಗಿ ಮನೆ ಸೇರಿದ.

ಇಂದು ರೋಡ್ನಿಗೆ ೧೦ ವರ್ಷ ಪೂರ್ತಿಯಾಗಿದೆ. ಅವನ ಸ್ಥಿತಿ ಹೇಗಿದೆಯೆಂದು ಇಲಿನಾಸ್ ವಿಶ್ವವಿದ್ಯಾಲಯಕ್ಕೆ ಬರೆದಾಗ ಡಾ. ಓಸ್ಕಾರ್ ಶುಗರರು ತತ್‌ಕ್ಷಣ ನಮಗೆ ಉತ್ತರ ಬರೆದರು. ಅದು ಹೀಗಿದೆ:

"ರೋಡ್ನಿ ಲೀ ಬ್ರೋಡಿ. . .ಸಾಕಷ್ಟು ಚೆನ್ನಾಗಿದ್ದಾನೆ. ಮನೆಯಲ್ಲಿ ತಂದೆ ತಾಯಿ ಅಣ್ಣ ತಮ್ಮ ಅಕ್ಕ ತಂಗಿಯರೊಡನೆಯೆ ಇದ್ದಾನೆ. ಎಡಗೈ ಮತ್ತು ಎಡಗಾಲನ್ನುಪಯೋಗಿಸಲು ಅವನಿಗೆ ಸ್ವಲ್ಪ ಕಷ್ಟವಾಗುತ್ತಿದ್ದರೂ ಎದ್ದು ಓಡಾಡಿ ತನ್ನ ಕೆಲಸವನ್ನು ಚೆನ್ನಾಗಿಯೆ ಮಾಡಿಕೊಳ್ಳಲು ಅವನು ಸಮರ್ಥನಾಗಿದ್ದಾನೆ.

"ಅವನ ನೆತ್ತಿಯ ಎಲುಬಿನ ಮುಚ್ಚಳ ಮಾತ್ರ ಇನ್ನೂ ಪೂರ್ತಿಯಾಗಿಲ್ಲ. ಆದರೆ ಇದಕ್ಕೆ ಕಾರಣ ಅವನ ಹೆತ್ತವರ ಕೋರಿಕೆಯೇ. ಅವನು ಇನ್ನಷ್ಟು ಶಸ್ತ್ರಕ್ರಿಯೆಗೆ ಒಳಪಡುವುದನ್ನು ನೋಡಲು ಅವರಿಗೆ ಮನಸ್ಸಿಲ್ಲ." *

ಅಂಥ ದುರಂತ ಇತಿಹಾಸದಲ್ಲೇ ಆಗಿರಲಿಲ್ಲ.

# ಆ [illegible] ರೇಲ್ವೆ ದುರಂತ

ಮುಂಕ್ತಾ ರಾಜೆ

೧೯೪೪ ರ ಮಾರ್ಚ್ ಮೂರರಂದು ಇಟಲಿಯಲ್ಲಿ ಜಗತ್ತಿನಲ್ಲಿಯೆ ಅತಿ ವಿಚಿತ್ರ, ಹಾಗೂ ಶೋಕಮಯವಾದ ರೇಲ್ವೆ ಅಪಘಾತ ಸಂಭವಿಸಿತು. ಮುಂದೆ ನಾಲ್ಕು ದಿನಗಳ ನಂತರ ಒಂದು ಚಿಕ್ಕ ದೈನಿಕ ಪತ್ರಿಕೆಯಲ್ಲಿ ಈ ಬಗ್ಗೆ ಏಳು ಸಾಲಿನ ಒಂದು ಸುದ್ದಿ ಪ್ರಕಟವಾಯಿತು. ಅದು ಯಾರ ಲಕ್ಷಕ್ಕೂ ಬರಲಿಲ್ಲ. ಆದರೆ ಅಪಘಾತದ ಸಂಪೂರ್ಣ ವಿವರ ತಿಳಿದ ಮೇಲೆ ಮಾತ್ರ ಎಲ್ಲರೂ ಮರಮರನೆ ಮರುಗಿದರು.

ಈ ಅತಿಶಯ ಶೋಕಪೂರ್ಣ ರೇಲ್ವೆ ಅಪಘಾತದಲ್ಲಿ ೫೨೧ ಜನರು ಸತ್ತರೂ ಗಾಡಿಗೆ ಸ್ವಲ್ಪವೂ ಪೆಟ್ಟು ತಾಗಿರಲಿಲ್ಲ. ಹಳಿಬಿಟ್ಟು ಗಾಡಿ ಸ್ವಲ್ಪವೂ ಕೆಳಗಿಳಿದಿರಲಿಲ್ಲ. ಸಾಮಾನ್ಯವಾಗಿ ರೇಲ್ವೆ ಅಪಘಾತಗಳಲ್ಲಾಗುವಂತಹದೇನೂ ಇಲ್ಲಿ ಆಗಿರಲಿಲ್ಲ. ಆದರೂ ಸತ್ತವರ ಸಂಖ್ಯೆ ಮಾತ್ರ ೫೨೧ ಆಗಿತ್ತು. ಈ ಟ್ರೇನ್ ನಂ. ೮೦೧೭ ಮತ್ತು ಇದರ ಪ್ರವಾಸಿಕರ ಮೇಲೆ ಬಂದೊದಗಿದ್ದ ಆಪತ್ತನ್ನು ನೆನೆದುಕೊಂಡರೆ ಮೈ ಜುಂ ಎನ್ನುತ್ತದೆ.

ಅಂದು ರಾತ್ರಿ, ಈ ಟ್ರೇನು ನೇಪಲ್ಸಿನಿಂದ ೮೦ ಮೈಲು ದೂರದಲ್ಲಿದ್ದ ಬ್ಯಾಲವ್ಯಾನೊ ಸಿಗ್ಲಿಯಾನೊ ಎಂಬ ಸ್ಟೇಶನ್ನಿಗೆ ಬಂದು ನಿಂತಿತು.



ಅಂದು ಬಹಳ ಚಳಿ ಬಿದ್ದಿತ್ತು. ದಿನನಿತ್ಯದಂತೆ ಗಾಡಿಯನ್ನು ಪರೀಕ್ಷಿಸಿಯಾಯಿತು. ಗಾಡಿಯು ೪೨ ಡಬ್ಬಿಗಳು, ೪ ಕೋಚುಗಳು, ಒಂದು ಊಟದ ಡಬ್ಬ ಮತ್ತು ಎರಡು ಇಂಜಿನುಗಳು ಬರ್ಫ ಮೆತ್ತಿದ ಪ್ಲ್ಯಾಟ್‌ಫಾರ್ಮಿನ ದಂಡೆಗೆ ಹತ್ತಿ ನಿಂತಿದ್ದವು.

ಒಂದು ಗಂಟೆಗೆ ಹತು ನಿಮಿಷವಿರುವಾಗ ಸ್ಟೇಶನ್ ಮಾಸ್ತರ್ ವಿನ್ ಸ್ಯಾಂಥೋ ಮ್ಯಾಗಲೀಯೋನು ಲಾಯಿನ್ ಕಿಯರ್ ಸಿಗ್ನಲ್ ಕೊಟ್ಟನು. ನಂ. ೮೦೧೭ ರ ಗಾಡಿ ಹೊರಟಿತು.

ಇಟಲಿಯಲ್ಲಿ ಯುದ ನಡೆದೇ ಇತ್ತು. ಆಗ ನೇಪಲ್ಸಿನಲ್ಲಿ ಈ ಗಾಡಿಗೆ 'ಕಳ್ಳಪೇಟೆಯ ಗಾಡಿ' ಎನ್ನುತ್ತಿದ್ದರು. ಏಕೆಂದರೆ ಸಣ್ಣ ಸಣ್ಣ ವ್ಯಾಪಾರಿಗಳು ಈ ಗಾಡಿಯಿಂದ ವ್ಯಾಸಾನಿಯಾಕ್ಕೆ ಹೋಗಿ ಮಾಂಸ, ಕಾಳು, ತಂಬಾಕು, ಮಿಠಾಯಿ ಮುಂತಾದ ಪದಾರ್ಥಗಳನ್ನು ಸೋವಿ ದರದಲ್ಲಿ ಖರೀದಿ ಮಾಡಿ ತಂದು ಮುಮ್ಮಡಿ ನಾಲ್ಮಡಿ ಲಾಭ ಹೊಂದುತ್ತಿದ್ದರು. ಇವರು ಈ ಗಾಡಿಯಲ್ಲಿ ಹೋಗಿ ಬರುತ್ತಾರೆಂದು ಎಲ್ಲರಿಗೂ ಗೊತ್ತಿತ್ತು. ಆದರೆ ಆ ದಿನ ಈ ವ್ಯಾಪಾರಿಗಳಲ್ಲದೆ ಕೆಲ ಬೇರೆ ಪ್ರವಾಸಿಕರೂ ಗಾಡಿಯಲ್ಲಿದ್ದರು. ಈ ಹೆಚ್ಚಿನ ಪ್ರವಾಸಿಕರು ಬಾರಿ ವಿಶ್ವವಿದ್ಯಾಲಯದ ಮೆಡಿಕಲ್ ವಿಭಾಗದ ವಿದ್ಯಾರ್ಥಿಗಳಾಗಿದ್ದರು. ಇವರು ತಮ್ಮ ಪ್ರಾಧ್ಯಾಪಕರೊಡನೆ ಹೊರಗಿನ ಆಸ್ಪತ್ರೆಗಳನ್ನು ಕಂಡು ಬರಲು ನಡೆದಿದ್ದರು. ಸಹಸಾ ಗಾಡಿ ಈ ವರೆಗೆ ಹೊರುತ್ತಿದ್ದ ತೂಕಕ್ಕಿಂತ ಈಗ ೫೧೧ ಟನ್ ಹೆಚ್ಚು ಭಾರ ಹೊತ್ತಿತ್ತು. ಎರಡು ಇಂಜನ್ನಿನ ಗಾಡಿ ಪರಮಾವಧಿ ಪ್ರಮಾಣದಲ್ಲಿ ಎಷ್ಟು ಭಾರ ಎಳೆಯಬಹುದೊ ಅದಕ್ಕಿಂತ ಈಗ ೧೦ ಟನ್ ಭಾರ ಹೆಚ್ಚಾಗಿತು. ಆದರೂ ಇದನ್ನು ಯಾರೂ ಅಷ್ಟೊಂದು ಗಮನಿಸಲಿಲ್ಲ.

ಹಿಮದಿಂದ ಎಲ್ಲ ಹಾದಿಗಳು ಮುಚ್ಚಿದವು. ರಸ್ತೆಯ ಮೇಲಿನ ಎರಡು ಕಣಿವೆಗಳನ್ನು ದಾಟಿ ಗಾಡಿಯು ಬ್ಯಾಲವ್ಯಾನೋದಿಂದ ಎರಡು ಮೈಲು ದೂರದಲ್ಲಿರುವ ಗೆಲೆರಿಯಾ ಡ್ಯಾಲೆ ಆಯಿ ಎಂಬ ದೊಡ್ಡ S ಆಕಾರದ ಕಣಿವೆಯನ್ನು ಪ್ರವೇಶಿಸಿತು. ಗಾಡಿ ಒಳಗೆ ಹೋಗುವುದೇ ತಡ, ಒಂದು ಕರುಣ ಚೀತ್ಕಾರದಂಥ ಸ್ವರ ಹೊರಬಿತ್ತು. ಮತ್ತು ಗಾಡಿ ಅಲ್ಲಿಯೆ ನಿಂತಿತು. ಹೆಚ್ಚು ಭಾರದಿಂದ ಗಾಡಿ ನಿಂತಿತೆಂದು ಅಧಿಕಾರಿಗಳ ಮತ.

ಆಗ ಇಂಜನ್ ಮೇಲಿದ್ದ ಮಾತೆಯೋಗಿ ಗಲಿಯಾನಿ ಎಂಬ ಎಂಜಿನಿಯರರು ಗಾಡಿಯನ್ನು ಹಿಂದಕ್ಕೆ ನಡೆಯಿಸಿ ಪರ್ವತದ ಹೊರ ತರಬಹುದಿತ್ತು. ಆದರೆ ಅದಕ್ಕೆ ಬದಲಾಗಿ ಅವರು ಭಟ್ಟಿಯಲ್ಲಿ ಇನ್ನಷ್ಟು ಇದ್ದಲಿಯನ್ನು ಹಾಕಿಸಿದರು. ದುರ್ದೈವದಿಂದ ಇದ್ದಲಿಯಲ್ಲಿ ರಾಳ ಕೂಡಿತ್ತು. ಇದ್ದಲಿಯೂ ಬಹಳ ಕೆಳ ದರ್ಜೆಯದಾಗಿತ್ತು. ಆದ್ದರಿಂದ ಭಟ್ಟಿಯಿಂದ ಬಹಳ ಹೊಗೆ ಬರತೊಡಗಿತು. ಬೆಂಕಿಯೇನೋ ಆಯಿತು. ಆದರೆ ಹೆಚ್ಚು ಭಾರವಾಗಿದ್ದ ಡಬ್ಬಿಗಳ ಗಾಲಿಗಳು ಹಾರಿಯ ಮೇಲಿನ ಹಿಡಿತ ತಪ್ಪಿ ಇದ್ದಲ್ಲಿಯೆ ತಿರುಗತೊಡಗಿದವು.

ಇಂಜನ್ನಿನ ಮೇಲೆ ದುಡಿಯುವ ಎಲ್ಲ ಕೆಲಸಗಾರರೂ ಬೆವತುಬಿಟ್ಟರು. ಭಟಿಯಿಂದ ವಿಪರೀತ ಪ್ರಮಾಣದಲ್ಲಿ ಕಾರ್ಬನ್ ಮೊನೊಕ್ಸಾಯಿಡ್ ಗ್ಯಾಸ್ ಹೊರಬರುತ್ತಿದೆ ಎಂಬುದನ್ನು ಯಾರೂ ಲಕ್ಷ್ಯಕ್ಕೆ ತಕ್ಕೊಳಲಿಲ್ಲ. ರಾತ್ರಿಯಾಗಿತಾದ್ದರಿಂದ ಬಹುತರ ಪ್ರವಾಸಿಕರು ನಿದ್ದೆ ಮಾಡುತ್ತಿದ್ದರು. ಅಥವಾ ಅರೆನಿದ್ದೆಯಲ್ಲಿದ್ದರು. ಅವರಾರ ಲಕ್ಷ್ಯವೂ ಈ ಘಟನೆಯ ಕಡೆಗಿರಲಿಲ್ಲ. ಈ ವಿಷಾರಿ ಗ್ಯಾಸ್ ಬರಬರುತ್ತ ಎಲ್ಲ ಕಣಿವೆಯನ್ನೆ ವ್ಯಾಪಿಸಿ ಗಾಡಿಯಲ್ಲೂ ಹೊಕ್ಕಿತು.

ಆಗ ಶಾಂತ ರೀತಿಯಿಂದ ಐದೇ ನಿಮಿಷದಲ್ಲಿ ಜಗತ್ತಿನ ಭಾರೀ ರೇಲ್ವೇ ದುರ್ಘಟನೆ ಜರುಗಿತು. ೫೨೧ ಜನರು ಗತಪ್ರಾಣರಾದರು.

ಭೋಜನದ ಡಬ್ಬಿ ತೀರ ಹಿಂದೆ ಹಚ್ಚಲಾಗಿತ್ತು. ಅದು ಕಣಿವೆಯ ಹೊರಗೇ ಇತ್ತು. ಅಲ್ಲಿ ಬ್ರೆಕ್‌ಮನ್ ಮ್ಯಾಕೆಲ್ ಪಾಲೊ ಕೂತು

ಬೆಂಕಿ ಉರಿಸುತ್ತಿದ್ದ. ಗಾಡಿ ಅಕಸ್ಮಾತ್ ನಿಂತಿತಾದರೂ ಎಂಜಿನಿಯರನಿಂದ ಭಯಸೂಚನೆ ಏನೂ ಬರಲಿಲ್ಲವಾದ್ದರಿಂದ ಸಿಗ್ನಲ್ ಸಿಕ್ಕಿಲ್ಲವೆಂದು ಗಾಡಿ ನಿಂತಿರಬೇಕೆಂದು ಆತ ತಿಳಿದ. ಎಷ್ಟೊತ್ತಾದರೂ ಗಾಡಿ ಬಿಡದ್ದರಿಂದ ಆತ ಕಿಡಕಿ ತೆರೆದು ಹೊರಗೆ ಇಣಿಕಿ ನೋಡಿದ. ಕಣಿವೆಯೆಲ್ಲ ಅಂಧಕಾರಮಯವಾಗಿತು. ಏನೂ ಕಾಣಿಸಲಿಲ್ಲ. ಕೈಗೆ ಗ್ಲೋವ್ ಏರಿಸಿಕೊಂಡು ಡಬ್ಬಿಯ ಕೆಳಗಿಳಿದ. ಗಾಡಿ ಎಷ್ಟು ಹೊತ್ತು ನಿಲ್ಲಲಿದೆ ಎಂಬುದನ್ನಾದರೂ ತಿಳಿಯೋಣವೆಂದುಕೊಂಡು ನೂರು ಅಡಿ ನಡೆದ. ಅಷ್ಟರಲ್ಲಿ ಏನೋ ಭಯಂಕರ ಅನಾಹುತ ಜರುಗಿದೆ ಎಂದು ಅವನಿಗೆ ಸಂದೇಹ ಹುಟ್ಟತೊಡಗಿತು. ಒಂದು ಡಬ್ಬಿಯ ಬಾಗಿಲನ್ನು ಬಡಿದ. ಉತ್ತರವೇ ಇಲ್ಲ. ಅಡ್ಡಿಯೂ ಇಲ್ಲ. ಸಂದೇಹ ದೃಢವಾಯಿತು. ಭಯಭೀತನಾದ. ಮೂರ್ಛೆ ಬರುವ ಲಕ್ಷಣ ಅವನಿಗನಿಸಿದವು. ಹಾಗೂ ಹೀಗೂ ಬೀಳುತ್ತಾ ಏಳುತ್ತಾ ಹಿಂದಕ್ಕೆ ಓಡಹತ್ತಿದ. ಬ್ಯಾಲ್‌ವ್ಯಾನೋ ಸ್ಟೇಶನ್ನಿನಿಂದ ನೂರು ಗಜ ದೂರದಲ್ಲಿ ಬರುವಷ್ಟರಲ್ಲಿ ಅವನ ಶಕ್ತಿ ಉಡುಗಿತು. ಆತ ಮೂರ್ಛಿತನಾದ. ಕೆಲ ಹೊತ್ತಿನ ಮೇಲೆ ಅವನಿಗೆ ಎಚ್ಚರಾದಾಗ ಬೆಳಗಿನ ಮೂರು ಗಂಟೆಯಾಗಿತ್ತು. ಅಲ್ಲಿಂದಲೇ ಜೋರಾಗಿ ಚೀರತೊಡಗಿದ. ಅವನ ಕೂಗು ಅಸಿಸ್ಟಂಟ್ ಸ್ಟೇಶನ್ ಮಾಸ್ತರ್ ಗಿಡಸ್ಯಾಪ್ಪೆ ಸ್ಯಾಲೊನಿಯಾಗ ಕೇಳಿಸಿತು. "ಗಾಡಿಯಲ್ಲಿ ಎಲ್ಲರೂ ಸತ್ತಿದ್ದಾರೆ. ಯಾರಾದರೂ ಸಹಾಯಕ್ಕೆ ಬನ್ನಿರಿ. ಅವರೆಲ್ಲರೂ ಸತ್ತಿದ್ದಾರೆ. ಯಾರಾದರೂ ಅಲ್ಲಿ ಹೋಗಿರಿ. ಏನಾದರೂ ಮಾಡಿರಿ" ಎಂದು ಪಾಲೊ ಕೂಗುತ್ತಿರುವುದು ಕೇಳಿಸಿತು.

ಸ್ಯಾಲೋನಿಯಾ ಅವನ ಹತ್ತಿರ ಹೋಗಿ ನೋಡಿದಾಗ ಆತ ನೆಲದ ಮೇಲೆ ಬಿದ್ದಿದ್ದ. ಇವರನ್ನು ಕಂಡು ನಡುಗುತ್ತ ಎದ್ದ. ಚರ್ಮದ ಾಕೀಟಿನ ಜೇಬಿನ ಹತ್ತಿರ ಎದೆಯಲ್ಲಿ ಮುಖ ಪೊತ್ತಿ ಚಿಕ್ಕಮಕ್ಕಳಂತೆ ಅಳಲಾರಂಭಿಸಿದ. ಇಡೀ ಕಣಿವೆಯಲ್ಲಿ ಕಾರ್ಬನ್ ಗ್ಯಾಸ್ ಸೇರಿರಬೇಕೆನಿಸುತ್ತದೆಂದುಸಿರಿದ. ಎಲ್ಲರೂ ಸತ್ತಿದ್ದಾರೆಂದು ಹೇಳಿ ಪಾಲೊ ಮತ್ತೆ ಅಳತೊಡಗಿದ.

ಮರುದಿನ ಆ ಸ್ಥಳದ ಪರೀಕ್ಷೆ ನಡೆಯಿತು. ಅರ್ಧಕ್ಕೆ ಮೇಲ್ಪಟ್ಟು ಜನರ ಗುರುತೂ ಸಿಗಲಿಲ್ಲ. ಏಕೆಂದರೆ ಕಳ್ಳ ವ್ಯಾಪಾರಿಗಳು ಬೇಕಂತೇ ತಮ್ಮ ಬಳಿ ತಮ್ಮ ಗುರುತಿನ ಯಾವ ಕಾಗದವನ್ನೂ ಇಡುತ್ತಿದ್ದಿಲ್ಲ. ೫೨೧ ಹೆಣಗಳಲ್ಲಿ ೧೯೩ ಜನರ ಪರಿಚಯ ಸಿಗಲೇ ಇಲ್ಲ. ಬ್ಯಾಲ್‌ವ್ಯಾನೊದ ಸಿಗ್ಲಿಯಾನೊ ಎಂಬ ಸ್ಟೇಶನ್ನಿನ ಹತ್ತಿರ ಮೂರು ಭಾರೀ ತಗ್ಗುಗಳನ್ನು ತೋಡಿ ಇವರನ್ನು ಹುಗಿಯಲಾಯಿತು.

ಇವರಲ್ಲಿ ಐದು ಜನ ಕಳ್ಳ ವ್ಯಾಪಾರಿಗಳು ಗಾಡಿ ನಿಂತದರಿಂದ ಪೋಲೀಸರೇ ಗಾಡಿಯನ್ನು ನಿಲ್ಲಿಸಿರಬೇಕೆಂದು ಭಾವಿಸಿದ್ದರು. ಇನ್ನು ತಮ್ಮನ್ನು ಬಂಧಿಸಿಯಾರೆಂದು ಹೆದರಿ ಸದ್ದು ಮಾಡದೇ ಸುರಂಗ ಮಾರ್ಗದ ಹೊರಗೆ ಬಂದರು. ಇವರಲ್ಲಿ ಇಬ್ಬರು ಸ್ವಲ್ಪ ತಡೆದು ಹೊರಬಿದ್ದರಾದ್ದರಿಂದ ಗ್ಯಾಸಿನ ಪರಿಣಾಮ ಅವರ ಮೇಲಾಗಿ ಅವರ ಮೆದುಳು ಕೆಟ್ಟಿತು. ಆದ್ದರಿಂದ ಅವರು ಆಸ್ಪತ್ರೆ ಸೇರಬೇಕಾಯಿತು. ಇವರಿಂದ ದುರ್ಘಟನೆಯ ಬಗ್ಗೆ ಸ್ಪಷ್ಟ ವಿವರ ತಿಳಿಯಲಿಲ್ಲ. ಆದರೆ ಒಬ್ಬ ಆಲಿವ್ ಎಣ್ಣೆ ಮಾರುವ ವ್ಯಾಪಾರಿ ಆ ಪ್ರಸಂಗದ ಪೂರ್ಣ ವಿವರವನ್ನು ಕೊಟ್ಟ. "ಗಾಡಿ ಸುರಂಗ ಸೇರುವಾಗ ಎಲ್ಲರೂ ಮಲಗಿದ್ದರು. ನಾನು ಎಚ್ಚರಿದ್ದೆ. ಸ್ವಲ್ಪ ಹೊತ್ತಿನಲ್ಲಿ ಗ್ಯಾಸು ಮೂಗಿನಲ್ಲಿ ಸೇರಿ ಕೆಮ್ಮು ಬರತೊಡಗಿತೆಂದು ನಾನು ಕರವಸ್ತ್ರವನ್ನು ಬಾಯಿ ಮೂಗಿನ ಮೇಲೆ ಹಿಡಿದೆ. ಮತ್ತು ಶುದ ಹವೆಗಾಗಿ ಕಣಿವೆಯ ಹೊರಗೆ ಬಂದೆ. ಆದರೆ ಗಾಡಿ ಸೀಟಿ ಇಲ್ಲದೇ ಹೊರಟೀತೆಂಬ ಭಯದಿಂದ ಹಿಂದಿನ ಡಬ್ಬಿಯಲ್ಲಿ ಹೊಕ್ಕೆ" ಎಂದು ಆತ ಹೇಳಿದ. ಪೋಲೀಸರಿಗೆ ಆತ ಸಿಕ್ಕದ್ದು ಅಲ್ಲಿಯೆ. ಗ್ಯಾಸಿನ ಪ್ರಭಾವದಿಂದ

ಅವನ ಕಪ್ಪು ಕೂದಲು ಬೆಳ್ಳಗಾಗಿದ್ದವು. ಆದರೂ ಪ್ರಾಣ ಉಳಿಯಿತಲ್ಲ ಎಂದು ಆತ ದೇವರಿಗೆ ಸಾವಿರ ಪ್ರಣಾಮಗಳನ್ನರ್ಪಿಸಿದ.

ಆಗ ಯುದ್ಧವಿನ್ನೂ ನಡೆದಿತ್ತಾದ್ದರಿಂದ ಇಟಲಿ ಸರಕಾರವು ಈ ದುರ್ಘಟನೆಯನ್ನು ಪ್ರಕಟಿಸುವುದು ಸರಿಯಲ್ಲವೆಂದು ಯೋಚಿಸಿತು. ಏಕೆಂದರೆ ಜನರು ಇದು ಶತ್ರುಗಳ ಕುಟಿಲ ತಂತ್ರವೆಂದು ಬಗೆದು ವ್ಯರ್ಥ ಗೋಳಾಡಿಯಾರೆಂದು ಸರಕಾರ ತರ್ಕಿಸಿ ಈ ಸಮಾಚಾರವನ್ನೇ ಗುಪ್ತವಾಗಿರಿಸಿತು. ಇಷ್ಟೇ ಅಲ್ಲ, ಮೃತರ ಸಂಬಂಧಿಕರಿಗೂ ಈ ಘಟನೆಯ ಬಗ್ಗೆ ಏನೂ ತಿಳಿಯಗೊಡಲಿಲ್ಲ. ಆದರೆ ಸರಕಾರೀ ಫೈಲುಗಳಲ್ಲಿ ಅಡಗಿದ್ದ ಈ ಕಾಂಡವು ಮುಂದೆ ಜನ-ಜನಿತವಾದಾಗ ಜನರು ಬರಿಯ ನಿಟ್ಟುಸಿರೆಳೆದು ಸುಮ್ಮನಾದರು. ನಿಜವಾಗಿಯೂ ಇಂಥ ದೈವ ದುರ್ವಿಲಾಸ ಮತ್ತೆಂದೂ ನಡೆದಿಲ್ಲ. *

## ನಿರುಪಯುಕ್ತ ಮಾಹಿತಿ

ರಷ್ಯಾದಲ್ಲಿ ೧೯೩೮ ರಲ್ಲಿ ೧೬೫ ವರ್ಷ ಪ್ರಾಯದ ಓರ್ವ ವೃದ್ಧನಿದ್ದ. ಆತ ಪ್ರತಿ ದಿನ ಒಂದು ಮೈಲು ತಿರುಗಾಡಲು ಹೋಗುತ್ತಿದ್ದ.

* * *

ತಮ್ಮ ಮೊದಲ ಸಂತಾನ ಪುತ್ರನಾದರೆ, ಆ ಮಗುವನ್ನು ಮಠದಲ್ಲಿ ಬಿಟ್ಟು ಬರುವಂತಹ ಪದ್ಧತಿ ಟಿಬೇಟಿನಲ್ಲಿ ೧೯೫೮ ರ ತನಕವೂ ಬಳಕೆಯಲ್ಲಿತ್ತು.

* * *

ಶಲ್ಯಕ್ರಿಯೆಯ ಸಮಯ ಮನುಷ್ಯನ ಮುಖದ ೫೦೦ ಸ್ನಾಯುಗಳು ಸಂಕುಚಿತಗೊಳ್ಳುತ್ತವೆ.

* * *

ತಿಮೋರಲಾವುಟ್‌ನ ಸ್ತ್ರೀಯರು ಪುರುಷರ ಸಾನ್ನಿಧ್ಯದಲ್ಲಿ ಕೇವಲ ಒಂದು ಕಣ್ಣನ್ನು ಮಾತ್ರ ತೆರೆಯಬೇಕು.

* * *

ಭಾರತದಲ್ಲಿ ಸರ್ವಪ್ರಥಮವಾಗಿ ಪೋಲಿಸ್ ವ್ಯವಸ್ಥೆಯ ನಿಯಮ ರೂಢಿಗೆ ಬಂದುದು ೧೭೯೩ ರಲ್ಲಿ ಕಾರ್ನವಾಲಿಸ್‌ನಿಂದ.

* * *


ಚಳಿಗಾಲದಲ್ಲಿ ಪಾರಿವಾಳಗಳು ಪ್ರತಿ ಗಂಟೆಗೆ ೬೦ ಮೈಲು ಹಾರಬಲ್ಲವೆಂದು ಅಂದಾಜು ಮಾಡಲಾಗಿದೆ.

* * *

ಜಗತ್ತಿನಲ್ಲಿ ಅತಿ ಇಕ್ಕಟ್ಟಾದ ಓಣಿಗಳಿರುವುದು ಪೂರ್ವ ಆಫ್ರಿಕಾದ ಜಂಜೀಬಾರ್‌ನಲ್ಲಿ.

* * *

ರೋಮನ್ ಚಕ್ರಾಧಿಪತಿಯಾದ ಜೂಲಿಯಸ್ ಸೀಸರ್ ಒಂದೇ ಸಮಯಕ್ಕೆ ಓದಲು, ಬರೆಯಲು, ಮಾತನಾಡಲು ಸಮರ್ಥನಾಗಿದ್ದ. —ಸಂ : ಚಕ್ರಧಾರಿ



# ವಿಚಿತ್ರ ವಿವಾಹ ಪದ್ಧತಿಗಳು

ಭಾರತದ ಆಗ್ನೇಯ ಭಾಗದಲ್ಲಿರುವ ಮೂಲ ನಿವಾಸಿಗಳಲ್ಲೊಂದು ವಿಚಿತ್ರ ವಿವಾಹ ಪದತಿ ಇದೆ. ರಾತ್ರಿ ವಧುವಿನ ತಾಯಿ-ತಂದೆ ಮಲಗಿ ನಿದ್ದೆ ಹೋಗಿರುವಂತೆ ನಟಿಸುತ್ತಾರೆ. ಆಗ ವರ ಬಂದು ಒಂದು ಕೋಲಿನಿಂದ ವಧುವನ್ನು ಮುಟ್ಟುತ್ತಾನೆ. ವಧು ವರನಿಗೆ ಒಂದು ಗಿಡದ ಟೊಂಗೆಯನ್ನು ಕೊಡುತ್ತಾಳೆ. ಈ ಕೊಡು ತೆಗೆದುಕೊಳ್ಳುವಿಕೆ ಅವರೀರ್ವರ ಪರಸ್ಪರ ಒಪ್ಪಿಗೆಯ ಸೂಚನೆ. ಹುಡುಗಿ ಗಿಡದ ಟೊಂಗೆಯನ್ನು ಕೊಡದಿದ್ದರೆ ವರ ಅವಳಿಗೆ ಒಪ್ಪಿಗೆಯಿಲ್ಲವೆಂದರ್ಥ. ಆ ಮೇಲೆ ಅವರಿಬ್ಬರೂ ಓಡಿ ಕಾಡಿನಲ್ಲಿ ಮರೆಯಾಗುತ್ತಾರೆ. ತಂದೆ ತಾಯಿ ಎಚ್ಚರಾಗಿ ಮಗಳು ಇಲ್ಲವಲ್ಲ ಎಂದು ಹುಡುಕಾಡಲು ಹೊರಡುತ್ತಾರೆ.

ವಧೂವರರು ಯಾರ ಕಣ್ಣಿಗೂ ಬೀಳದಂತೆ ಕಾಡಿನಲ್ಲಿ ಅಡಗಿರುತ್ತಾರೆ. ಮಕ್ಕಳಾಗುವವರೆಗೂ ಇವರು ಅಡಗಿಕೊಂಡೇ ಕಾಲ ಕಳೆಯಬೇಕು. ಒಂದು ವೇಳೆ ಸಂತಾನೋತ್ಪತ್ತಿಯ ಮೊದಲೆ ಇವರು ಹಿರಿಯರ ಕೈಗೆ ಸಿಕ್ಕರೆ ಕನ್ಯಾಪಿತನು ವಧುವನ್ನು ಹೊಡೆಯುವನಲ್ಲದೆ ಅವಳ ಪಾದಕ್ಕೆ ಭರ್ಚಿಯಿಂದ ತಿವಿದು ಗಾಯ ಮಾಡುತ್ತಾನೆ. ಇನ್ನು ಇವಳು ಹೀಗೆ ಓಡಿ ಹೋಗಬಾರದೆಂಬುದಕ್ಕೆ ಇದು ಸಂಕೇತ. ವರನನ್ನೂ ಹೊಡೆಯುತ್ತಾರೆ. ಹೀಗೆ ಸಿಕ್ಕಿಬಿದ್ದಲ್ಲಿ ಓಡಿ ಹೋಗುವ ನಾಟಕವನ್ನು ಅವರು ಪುನಃ ಮೊದಲಿನಂತೆ ಅಭಿನಯಿಸಬೇಕಾಗುತ್ತದೆ.

*

ಇಗೋರೊಟ್ ಜನಾಂಗದಲ್ಲಿ ಊರ ಕುಮಾರಿಕೆಯರಿಗಾಗಿ ಮಲಗಿಕೊಳ್ಳಲು ಪ್ರತ್ಯೇಕ ಒಂದು ಮನೆ ಇರುತ್ತದೆ. ಇದಕ್ಕೆ ಓಲಾಗ್ ಎನ್ನುತ್ತಾರೆ. ಉಪವರಳಾದ ಹುಡುಗಿ ತನ್ನ ಪ್ರಿಯಕರನನ್ನು ಆಹ್ವಾನಿಸುತ್ತಾಳೆ. ಪ್ರೇಯಸಿ ಪ್ರಿಯಕರನ ಪೈಪ್ (ಚಿಲುಮೆ) ಕದಿಯುತ್ತಾಳೆ. ಅದನ್ನು ಶೋಧಿಸುತ್ತ ಪ್ರಿಯಕರ ಓಲಾಗಕ್ಕೆ ಬರುತ್ತಾನೆ. ಇಲ್ಲಿಂದ ಅವರ ಕ್ರೀಡೆಗೆ ಪ್ರಾರಂಭವಾಗುತ್ತದೆ. ಮುಂದೆ ವರ ವಧುವಿನ ಮನೆಯಲ್ಲೇ ಇದ್ದು ಅಲ್ಲಿಯೇ ದುಡಿದು ಅಲ್ಲಿಯೇ ಊಟ ಮಾಡುತ್ತಾನೆ. ಆದರೆ ಈ ವಧೂವರರು ನಿಜವಾಗಿ ವಧೂವರರೆಂದು ಕರೆಸಿಕೊಳ್ಳುವುದು ವಧು ಗರ್ಭವತಿಯಾದ ಮೇಲೆಯೇ.

'ಜ್ಞಾನೋದಯ' ದಿಂದ

ಗುಜರಾತದ ಪಂಚಮಹಾಲ್ ಜಿಲ್ಲೆಯ ಜಸವಾಡಾ ತಾಲೂಕಿನಲ್ಲಿ ಉಪವರ ಯುವತಿಯರೂ ತರುಣರೂ ತಾಳೇ ಮರದ ಸುತ್ತು ಕುಣಿಯುತ್ತಾರೆ. ಯುವತಿಯರು ಕೈಯಲ್ಲಿ ಕಸಬರಿಗೆ ಹಿಡಿದುಕೊಂಡು ಮರದ ಸುತ್ತ ಚಕ್ರಾಕಾರ ಕುಣಿಯುತ್ತಿರುವಾಗ ತರುಣರು ಅವರ ತಾಲಕ್ಕೆ ಸರಿಯಾಗಿ ತಾವೂ ಕುಣಿಯುತ್ತಾರೆ. ಆ ಸಮಯದಲ್ಲಿ ಯಾವನಾದರೊಬ್ಬ ಯುವಕ ಈ ಯುವತಿಯರ ಕೋಟೆಯನ್ನು ಒಡೆದು ಒಳಹೊಕ್ಕು ಮರ ಹತ್ತಿ ಅದರ ತುದಿಯಲ್ಲಿ ಕಟ್ಟಿದ ತೆಂಗಿನಕಾಯಿ ಮತ್ತು ಬೆಲ್ಲವನ್ನು ಬಿಡಿಸಿ ತರಲು ಮುಂದೆ ಬರುತ್ತಾನೆ. ಇದರಿಂದ ಈತನಿಗೆ ವಿವಾಹದ ಇಚ್ಛೆಯಿದೆಯೆಂದು ಸಿದ್ಧವಾಗುತ್ತದೆ. ಆತ ಮುಂದೆ ಬಂದಾಗ ಯುವತಿಯರೆಲ್ಲ ಸುತ್ತಿಗಟ್ಟಿ ಅವನನ್ನು ಕಸಬರಿಗೆಯಿಂದ ಹೊಡೆಯುತಾರೆ, ಚಿವುಟುತ್ತಾರೆ. ಅವನ ಕೂದಲುಗಳನ್ನು ಹಿಡಿದು ಎಳೆಯುತ್ತಾರೆ. ಇಷ್ಟೆಲ್ಲಕ್ಕೂ ಮೀರಿ ಆತ ಮರದ ಹತ್ತಿರ ಬಂದದ್ದೇ ಆದರೆ ಅವನನ್ನು ಹಿಡಿದು ಕೆಳಗೆ ಕೆಡಹಲೆತ್ನಿಸುತ್ತಾರೆ. ಆಗಲೂ ಆತ ಸೋಲಬಾರದು. ತೆಂಗಿನಕಾಯಿ ಬಿಡಿಸಿ ತರಬೇಕು. ಯಶಸ್ವಿಯಾದವನು ರಾಜಕುಮಾರನಂತೆ ತನಗೆ ಬೇಕಾದವಳನ್ನು ಆರಿಸಿಕೊಂಡು ಮದುವೆಯಾಗಬಹುದು.

*

ಸಂಥಾಲಿ ಜನರ ಪದ್ಧತಿಯೊಂದು ಬೇರೆಯೇ ಆಗಿದೆ. ವರನ ಮೆರವಣಿಗೆ ವಧೂದ್ವಾರಕ್ಕೆ ಬಂದು ತಲುಪುತ್ತದೆ. ಆಗ ಸಂಥಾಲಿಯರ ಲೋಕಪ್ರಿಯ ಲೋಕನೃತ್ಯ 'ಪೈಂಕೀ' ಪ್ರಾರಂಭವಾಗುವುದು. ಇದರಲ್ಲಿ ವರಪಕ್ಷದವರು ಮಾತ್ರ ಭಾಗವಹಿಸುತ್ತಾರೆ. ಅವರದಾದ ಮೇಲೆ ವಧೂಪಕ್ಷದವರು 'ದೋಂಗ' ನೃತ್ಯವನ್ನು ಮಾಡುತ್ತಾರೆ. ನೃತ್ಯ ಮುಗಿದ ಮೇಲೆ ವಧೂವರ ಪಕ್ಷಗಳೆರಡರ ಸಮ್ಮುಖದಲ್ಲಿ ವಧೂವರರನ್ನು ಸಿಂಗರಿಸಿ ಎರಡು ದೊಡ್ಡ ಬುಟ್ಟಿಗಳಲ್ಲಿ ಕೂಡಿಸುತ್ತಾರೆ ಮತ್ತು ಕುಂಕುಮಾರ್ಚನೆಯ ವಿಧಿಯನ್ನು ಮುಗಿಸುತ್ತಾರೆ. ಆ ಮೇಲೆ ಇಬ್ಬರಿಗೂ ಸ್ನಾನ ಮಾಡಿಸಿ ಇಬ್ಬರ ಕೈಯಲ್ಲೂ ಭತ್ತ ಹಾಗೂ ಅರಿಸಿಣವನ್ನು ಕಂಕಣದಂತೆ ಕಟ್ಟುತ್ತಾರೆ. ಈ ಭತ್ತ ಮೊಳಕೆಯೊಡೆಯುವ ವರೆಗೂ ಈ ಕಂಕಣ ಬಿಚ್ಚುವುದಿಲ್ಲ. ಮೊಳಕೆಯೊಡೆಯುವ ಪೂರ್ವದಲ್ಲಿ ಇವರಿಬ್ಬರೂ ಸಂಭೋಗಕ್ಕೆ ಅರ್ಹರಲ್ಲ ಹಾಗೆ ಮಾಡಿದರೆ ಅದು ಮಹಾ ಪಾಪವೆಂಬ ಭಾವನೆ ಅವರಲ್ಲಿದೆ. ಭತ್ತ ಮೊಳಕೆಯೊಡೆದ ಮೇಲೆಯೇ ವಧೂವರರ ಮಿಲನ.

*

ಬೈಂಗಾ ಸಮಾಜದಲ್ಲಿ ಇನ್ನೊಂದು ವಿಚಿತ್ರ ರೀತಿ ಪ್ರಚಲಿತವಾಗಿದೆ. ನೀರು ತುಂಬಿದ ಪಾತ್ರೆಯಲ್ಲಿ ಊರ ಹಿರಿಯರು ಎರಡು ಅಕ್ಕೀಕಾಳು ಹಾಕುತ್ತಾರೆ. ಅವು ತಟ್ಟನೆ ಕೂಡಿದರೆ ವಧೂವರರು ಆಮರಣ ಸುಖವಾದ, ಅಚಲವಾದ, ಅವಿಚ್ಛಿನ್ನವಾದ ವೈವಾಹಿಕ ಜೀವನವನ್ನು ನಡೆಸುತ್ತಾರೆಂದು ತಿಳಿಯಲಾಗುತ್ತದೆ. ಮೊದಲ ಸಲ ಹಾಕಿದ ಅಕ್ಕೀಕಾಳು ಒಂದು ವೇಳೆ ಕೂಡದಿದ್ದರೆ ಮತ್ತೆರಡು ಅಕ್ಕೀಕಾಳುಗಳನ್ನು ಹಾಕು



ತ್ತಾರೆ. ಇವು ಕೂಡಿದರೆ ವಿವಾಹಾನಂತರ ಕೆಲ ದಿನಗಳಲ್ಲಿ ವಧು ಪತಿಗೃಹದಿಂದ ಜಗಳಾಡಿ ತವರು ಮನೆಗೆ ತಿರುಗಿ ಬರುತ್ತಾಳೆಂದು ತಿಳಿಯು ತ್ತಾರೆ. ಆದರೆ ಎರಡನೇ ಸಲವೂ ಅಕ್ಕೀಕಾಳು ಕೂಡದಿದ್ದರೆ ಮೂರನೇ ಬಾರಿ ಮತ್ತೊಮ್ಮೆ ಪ್ರಯತ್ನ ಮಾಡುತ್ತಾರೆ. ಈ ಸಲ ಅಕ್ಕೀಕಾಳು ಕೂಡಿದರೆ ವಿವಾಹಾನಂತರ ವಧು ಬೇರೊಬ್ಬನ ಬೆನ್ನು ಹತ್ತಿ ಓಡಿಹೋಗುವಳೆಂದೂ ಮರಳಿ ಗಂಡನ ಕಡೆಗೆ ಎಂದೂ ಬರುವುದಿಲ್ಲೆಂದೂ ನಂಬುತ್ತಾರೆ. ಆದರೆ ಇವೆಲ್ಲ ಭವಿಷ್ಯಗಳು ತಿಳಿದವೆಂದು ಗೊತ್ತು ಮಾಡಿದ ವಿವಾಹವನ್ನು ಮಾತ್ರ ನಿಲ್ಲಿಸುವುದಿಲ್ಲ. ಇದು ವಿಶೇಷ!

*

ಭಿಲ್ಲರಲ್ಲಿ ವಿವಾಹಪೂರ್ವದಲ್ಲಿ ತರುಣ ತರುಣಿಯರು ಮಿತ್ರತ್ವ ಬೆಳಸಬಾರದೆಂಬ ಆತಂಕವಿಲ್ಲ. ಬದಲು ಯಾವ ತರುಣ ತರುಣಿ ಯರು ಪ್ರೇಮ ಮಾಡುವರೆಂದು ಕಂಡುಬರು ವುದೋ ಅವರು ಲಗ್ನಮಾಡಿಕೊಳ್ಳಬೇಕೆಂದು ಪಂಚರು ಅಪ್ಪಣೆ ಕೊಡುತ್ತಾರೆ. ವರನ ಕಡೆಯ ನಾಲ್ಕಾರು ಹಿರಿಯರು ಕೂಡಿ ವಧುವಿನ ಮನೆಗೆ ಹೋಗಿ ವಿವಾಹ ಪ್ರಸ್ತಾಪವೆತ್ತುತ್ತಾರೆ. ಆಗ ವಧೂಪಕ್ಷದವರು ಒಪ್ಪಿದರಾಯಿತು. ಒಂದು ಶುಭ ಮುಹೂರ್ತದಂದು ವಧೂವರರಿಗೆ ಅವರವರ ಮನೆಗಳಲ್ಲಿ ಅರಿಸಿಣ ಎಣ್ಣೆ ಹಚ್ಚಿ ಚೆನ್ನಾಗಿ ಮಜ್ಜನ ಮಾಡುತ್ತಾರೆ ಮತ್ತು ಒಂದು ಸಪ್ತಾಹದ ವರೆಗೆ ಅವರನ್ನು ಹೆಗಲ ಮೇಲೆ ಹೊತ್ತು ದಿನಾಲೂ ಊರತುಂಬ ಮೆರೆಸುತ್ತಾರೆ. ಒಂದು ವಾರ ವಿಡೀ ಇವರ ಕಾಲು ನೆಲಕ್ಕೆ ಹತ್ತದಂತೆ ನೋಡಿ ಕೊಳ್ಳಲಾಗುತ್ತದೆ. ಅಲ್ಲದೇ ವಾರದುದ್ದಕ್ಕೂ ಇಬರೂ ಮೌನದಿಂದೇ ಇರಬೇಕಾಗುವುದು. ಉಳಿದೆಲ್ಲರೂ ಬೇಕಾದಷ್ಟು ಮೋಜಿನಿಂದಿದ್ದರೂ ಇವರು ಬಾಯಿಬಿಡತಕ್ಕದ್ದಲ್ಲ. ಈ ಮೌನಪರೀಕ್ಷೆ ಯಲ್ಲಿ ತಪ್ಪದೇ ಉತ್ತೀರ್ಣರಾದವರ ಭಾವೀ ಜೀವನ ಸಫಲವಾಗುವುದೆಂದು ಭಾವಿಸಲಾಗು ತ್ತದೆ. ಒಂದು ಮಂಟಪದಲ್ಲಿ ಮೊದಲು ನಾಲ್ಕು



ಅವಿವಾಹಿತ ಯುವಕ ಯುವತಿಯರನ್ನು ಕೂರಿಸಿ 'ಮಕ್ಕಾಥಲಿ' ಎಂಬ ಗೋವಿನ ಜೋಳ ಹಾಗೂ ಗೋದಿ ಬೆರೆಸಿ ಮಾಡಿದ ಭೋಜ್ಯವನ್ನು ಹೊಟ್ಟೆ ತುಂಬ ತಿನ್ನಿಸುತ್ತಾರೆ. ಆ ಮೇಲೆ ಕೆಂಪು ಮತ್ತು ಬಿಳೀ ವಸ್ತ್ರಗಳನ್ನು ಪರಿಧಾನಮಾಡಿದ ಸಿಂಗಾರ ವಾದ ಮದುಮಗನು ಒಂದು ಕೈಯಲ್ಲಿ ಕಠಾರಿ ಯನ್ನು ಇನ್ನೊಂದು ಕೈಯಲ್ಲಿ ಖಡ್ಗವನ್ನು ಹಿಡಿ-ದುಕೊಂಡು ಮಂಟಪ ಪ್ರವೇಶಮಾಡುತ್ತಾನೆ. ಅವನ ಟೊಂಕಕ್ಕೆ ಒಂದು ಪಟ್ಟಿಯನ್ನು ಕಟ್ಟಿ ರುತ್ತಾರೆ. ಈತ ಬಂದು ಮಂಟಪದ ಮಧ್ಯದಲ್ಲಿ ನಿಂತ ಮೇಲೆ ಅವನ ತಾಯಿ ಒನಿಕೆ, ಬಾಣ ಮತ್ತು ದೊಡ್ಡ ಬುಟ್ಟಿ ತೆಗೆದುಕೊಂಡು ಮಗನ ಸುತ್ತ ತಿರುಗಿಸುತ್ತಾಳೆ. ಮತ್ತು ವಿಶೇಷ ರೀತಿ ಯಲ್ಲಿ ತಯಾರು ಮಾಡಿದ ನಾಲ್ಕು ರೊಟ್ಟಿಗಳನ್ನು ಮಂಟಪದ ನಾಲ್ಕೂ ಮೂಲೆಗಳಲ್ಲಿ ಚೆಲ್ಲುತ್ತಾಳೆ. ಮುಂದೆ ಎಲ್ಲ ಸಿದ್ಧತೆಗಳಾದುವೆಂದರೆ ಮದು ಮಗಳ ಮನೆಗೆ ದಿಬ್ಬಣ ಹೊರಡುತ್ತದೆ. ಅಲ್ಲಿ ವರನೆದುರು ವಧುವೂ ಮೇಲಿನ ಎಲ್ಲ ವಿಧಿಗಳನ್ನು ಸಾಂಗಗೊಳಿಸಬೇಕಾಗುತ್ತದೆ.

*

ಹೈದರಾಬಾದಿನ ಮೊಗಲಾಯಿ
ಕಾರಭಾರದ ವಿಚಿತ್ರ ಕಥೆ

# 'ಖುರ್ಸಿ ಖುದ್ ಸಿಖಾಯೇಗಿ!'



ಸೇತು ಮಾಧವರಾವ್ ಪಗಡಿ

೧೯೩೩ ಮಾರ್ಚ್ ತಿಂಗಳಲ್ಲಿ ತಹಸೀಲದಾರನೆಂದು ನಾನು ನೇಮಕಗೊಂಡೆ. ಮೊದಲಿನ ಆರು ತಿಂಗಳು ನಾನು ಸರ್ವೆ ಮತ್ತು ಸೆಟಲ್‌ಮೆಂಟ್ ವಿಭಾಗದ ಕೆಲಸ ಕಲಿತೆ. ಆ ಮೇಲೆ ಅಕ್ಟೋಬರ್ ತಿಂಗಳಲ್ಲಿ ಮಹಸೂಲ (ಕಂದಾಯ) ವಿಭಾಗದ ಶಿಕ್ಷಣ ಪಡೆಯಲೆಂದು ನನ್ನನ್ನು ರಾಯಚೂರಿನ ಅವ್ವಲ್ ತಾಲೂಕದಾರ ಸಾಹೇಬರ (ಕಲೆಕ್ಟರ್) ಕಡೆಗೆ ಕಳಿಸಿದರು. ಅಲ್ಲಿ ನಾಲ್ಕು ತಿಂಗಳ ಶಿಕ್ಷಣದ ನಂತರ ತಹಸೀಲದಾರಿಯ ಕೆಲಸ ಕಲಿಯಲು ರಾಯಚೂರು ಜಿಲ್ಲೆಯ ಆಲಂಪುರ ತಾಲೂಕಿಗೆ ನಾನು ಹೋಗಬೇಕಾಯಿತು. ೧೯೩೪, ಫೆಬ್ರುವರಿ ತಿಂಗಳಲ್ಲಿ ನಾನು ಆಲಂಪುರಕ್ಕೆ ಹೋದೆ.

ಆಲಂಪೂರಿನ ತಹಸೀಲದಾರರಾದ ಇಬ್ರಾಹೀಮ ಅಲೀಖಾನರು ಸದ್ಗೃಹಸ್ಥರು. ಅವರಿಗೆ ಅರುವತ್ತಕ್ಕಿಂತಲೂ ಹೆಚ್ಚಿಗೆ ವಯಸ್ಸಾಗಿದ್ದಿರಬೇಕು. ಆದರೆ ಸರಕಾರೀ ದಾಖಲೆಯಲ್ಲಿ ಅವರ ವಯಸ್ಸು ೫೦–೫೧ ಎಂದು ಉಲ್ಲೇಖವಾಗಿತ್ತು. ಇಬ್ರಾಹೀಮ ಅಲೀಖಾನರ ಜೊತೆಯಲ್ಲಿದ್ದು ಒಂದು ತಿಂಗಳೊಳಗೆ ನಾನು ಕೆಲಸ ಕಲಿಯಬೇಕಾಗಿತ್ತು.

ಹೈದರಾಬಾದ್ ರಾಜ್ಯದಲ್ಲಿ ಆಲಂಪುರ ಅತಿ ಚಿಕ್ಕ ತಾಲೂಕು. ಕೃಷ್ಣಾ ಮತ್ತು ತುಂಗಭದ್ರೆಗಳ ಸಂಗಮವಾಗಿರುವುದು ಈ ತಾಲೂಕಿನಲ್ಲಿಯೇ. ತುಂಗಭದ್ರೆಯ ದಡದಲ್ಲಿರುವ ಆಲಂಪುರದಿಂದ ಕರ್ನೂಲು ಬರೀ ಏಳು ಮೈಲುಗಳ ದೂರದಲ್ಲಿ ನದಿಯ ಆಚೆ ದಂಡೆಯಲ್ಲಿದೆ. ತಾಲೂಕಿನಲ್ಲಿರುವುದು ಕೇವಲ ೪೬ ಹಳ್ಳಿಗಳು. ತಂಬಾಕು, ಶೇಂಗಾ ಮುಂತಾದವು ಚೆನ್ನಾಗಿ ಬೆಳೆಯುವುದರಿಂದ ತಾಲೂಕಿನ ಜನ ಉಂಡುಟ್ಟು ಸುಖದಿಂದಿದ್ದಾರೆ. ಕಂದಾಯ ವಸೂಲಿ ಸುಲಭವಾಗಿತ್ತು.

'ಅಮೃತ' ದಿಂದ

"ಆಯಿಯೇ, ಆಯಿಯೇ, ಪ್ರೊಬೇಶನರ ಸಾಬ್" ಎಂದು ಇಬ್ರಾಹೀಮ ಅಲೀಖಾನರು ನನ್ನನ್ನು ಸ್ವಾಗತಿಸಿದರು. ಆಮೇಲೆ ಹೈದರಾಬಾದಿನ ಪದ್ಧತಿಯಂತೆ ಪರಸ್ಪರರ ಮನೆತನಗಳ ಚೌಕಸಿ ನಡೆಯಿತು. ನನ್ನ ತಂದೆ ಕೋಡಂಗಲ್ ತಾಲೂಕಿನ ತಾತ್ಪೂರ್ತಿಕ ತಹಸೀಲದಾರರಾಗಿದ್ದಾಗ ಇಬ್ರಾಹೀಮ ಅಲೀಖಾನರು ಆ ಭಾಗದಲ್ಲಿ ತಾತ್ಪೂರ್ತಿಕ ದುಯ್ಯಮ್ ತಾಲೂಕದಾರ (ಅಸಿಸ್ಟಂಟ್ ಕಲೆಕ್ಟರ್) ರಾಗಿದ್ದರು. ಹೀಗಾಗಿ ನಮ್ಮ ಅವರ ಪರಿಚಯ ಸಂಬಂಧ ಹತ್ತಿತು.

ಮಾರನೆಯ ದಿನ ಆಫೀಸಿಗೆ ಹೋಗುವ ಮೊದಲು ನಾನು ಅವರ ಮನೆಗೆ ಹೋದೆ. ಹೈದರಾಬಾದಿನ ಹೆಚ್ಚಿನ ಅಧಿಕಾರಿಗಳ ಪರಂಪರೆಯಂತೆ ಇಬ್ರಾಹೀಮ ಅಲೀಖಾನರು ತಮ್ಮ ಹೆಂಡರು ಮಕ್ಕಳನ್ನು ಹೈದರಾಬಾದಿನಲ್ಲಿಯೆ ಇಟ್ಟಿದ್ದರು ಅವರ ಮನೆಯಿಂದ ಹೊರಟ ನಾವಿಬ್ಬರೂ ಕಚೇರಿಗೆ ಹೋಗುತ್ತಿದ್ದಾಗ ಅವರ ಠೀವಿಯನ್ನೇನು ಹೇಳಲಿ? ಅವರ ಕೈಯಲ್ಲಿ ಕೋಲು. ಶಿಪಾಯಿಯೊಬ್ಬ ಅವರಿಗೆ ಬಿಸಿಲು ಹತ್ತದಂತೆ ಛತ್ರಿ ಹಿಡಿದಿದ. ಮುಂದೆ ಒಬ್ಬ ಸಿಪಾಯಿ ಕಚೇರಿಯ ಪೆಟ್ಟಿಗೆ ಹೊತ್ತು ನಡೆದಿದ್ದ. ಹಿಂದೆ ಇಬ್ಬರು ಶಿಪಾಯಿಗಳು ನಡೆದು ಬರುತ್ತಿದ್ದರು. ನಮ್ಮ ಈ ಮೆರವಣಿಗೆ ಸಾಗುತ್ತಿದ್ದಾಗ ರಸ್ತೆಯ ಎರಡೂ ಮಗ್ಗಲಲ್ಲಿದ್ದ ಅಂಗಡಿಗಳ ಮಾಲಕರು ಕೆಳಗಿಳಿದು ಬಂದು ಸಲಾಮು ಹೊಡೆಯುತ್ತಿದ್ದರು.

ಕಚೇರಿಯಲ್ಲಿ ನಾನು ತಹಸೀಲದಾರರ ಮಗ್ಗಲಲ್ಲೆ ಕುಳಿತೆ. ತುಸು ಹೊತ್ತಿನ ಮೇಲೆ "ಸಾಹೇಬ, ನನಗೆ ಕೆಲಸ ಕಲಿಸಿರಿ. ಜಮಾಬಂದಿ, ಖಟ್ಲೆ ವಿಚಾರ, ಪೇಬಿಲ್ ಇತ್ಯಾದಿಗಳ ವಿಷಯ ಹೇಳಿಕೊಡಿರಿ. ನಾನು ಈ ಹೆಸರುಗಳನ್ನು ಕೇಳಿರುವೆನೇ ಹೊರತು ಅವುಗಳ ಬಗ್ಗೆ ನನಗೆ ಏನೂ ತಿಳಿಯದು" ಎಂದೆ.

ಆಗ ಇಬ್ರಾಹೀಮ ಅಲೀಖಾನರು, "ಹಾಗಾದರೆ ರಾಯಚೂರಿನಲ್ಲಿ ಅವ್ವಲ್ ತಾಲೂಕದಾರರ ಕಚೇರಿಯಲ್ಲಿ ನಿಮಗೆ ಯಾರೂ ಏನೂ ಹೇಳಿಕೊಡಲಿಲ್ಲವೆ?" ಎಂದು ಕೇಳಿದರು.

ನಾನು ಅವರಿಗೆ ಹೇಳಿದೆ: "ಮಲ್ಲಪ್ಪನೆಂಬ ಕಾರಕೂನನನ್ನು ನನಗೆ ಕೊಟ್ಟಿದ್ದರು. ಆತ ಪ್ರತಿನಿತ್ಯ ಟಪಾಲನ್ನು ತಂದು ನನ್ನೆದುರು ಇಡುತ್ತಿದ್ದ. ಈ ಕಾಗದಗಳ ಮೇಲೆ ಏನು ಬರೆಯಲಿ ಎಂದು ನಾನು ಕೇಳಿದರೆ ಮಲ್ಲಪ್ಪ 'ಸಾಹೇಬ, ಅದು ಬಲು ಸುಲಭ. ಕೆಲವು ಪತ್ರಗಳ ಮೇಲೆ ತಾವು ಬಾ ಮಿಸಲ್ (ಪುಟ್ ಅಪ್ ಫ್ಯಾಲ್) ಎಂದು ಬರೆಯುತ್ತ ಹೋಗಿ. ಅದು ಬೇಜಾರಾದಾಗ ಬಾ ಕೈಫಿಯತ್ (ಆಫೀಸ್ ಟು ಪುಟ್ ಅಪ್‌ನೋಟ್) ಎಂದು ಬರೆಯಿರಿ. ಟಪಾಲಿನಲ್ಲಿ ಅಂಕಿ ಸಂಖ್ಯೆಗಳಿದ್ದ ಕಾಗದಗಳಿದ್ದರೆ ಅವು ಮಳೆ ಬೆಳೆಗಳ ವರದಿ ಅಥವಾ ಪೇಟೆಯ ಧಾರಣೆಯ ವರದಿ ಎಂದು ತಿಳಿದು ಅವುಗಳ ಮೇಲೆ ಬಾದ ತನಕ್ಕೀ, ಬಾದ ತನಕ್ಕೀ (ಆಫ್ಟರ್ ಸ್ಕ್ರುಟಿನಿ) ಎಂದು ಬರೆಯಿರಿ. ಇಷ್ಟಾದರೆ ನಿಮ್ಮ ಕೆಲಸ ಮುಗಿಯಿತು' ಎಂದ.

"ನನಗೆ ಮೋಜೆನಿಸಿತು. ದಿನವಿಡೀ ನಾನು ಬಂದ ಕಾಗದಗಳ ಮೇಲೆ ಬಾ ಮಿಸಲ್, ಬಾ-ಕೈಫಿಯತ್, ಬಾ ತನಕ್ಕಿ ಎಂದು ಬರೆಬರೆದು ಸಹಿ ಹಾಕುತ್ತಿದ್ದೆ. ಟ್ರೇನಿಂಗಿಗೆಂದು ಬಂದಿದ್ದ ಆನೆಗೊಂದಿ ಸಂಸ್ಥಾನದ ರಾಜಾ ಕೃಷ್ಣದೇವರೂ ಆಗ ಅಲ್ಲಿದ್ದರು. ತಾನು ಚೆನ್ನಾಗಿ ಸಹಿ ಮಾಡಬೇಕೆಂಬ ಒಂದೇ ಒಂದು ಹಂಬಲ ಅವರಿಗಿತ್ತು.

'ಮಲ್ಲಪ್ಪ ಮಹಾರಾಜ, ನಾವು ಸಹಿ ಮಾಡುತ್ತೇವಲ್ಲ, ಆ ಕಾಗದಗಳು ಎಲ್ಲಿ ಹೋಗುತ್ತವೆ? ಅವು ತಿರುಗಿ ಬರುವುದೇ ಇಲ್ಲ' ಎಂದು ಒಂದು ದಿನ ನಾನು ಮಲ್ಲಪ್ಪನನ್ನು ಕೇಳಿದೆ. ಆತ ನಕ್ಕು ಹೇಳಿದ: 'ಸಾಹೇಬ, ತಾವ್ಯಾತಕ್ಕೆ ಆ ಕಾಳಜಿ ಮಾಡುತ್ತೀರಿ? ತಾವು ತಹಸೀಲದಾರರಾಗಿ ಹೋದಮೇಲೆ ತಮ್ಮ ಪೇಶಕಾರ (ಅವ್ವಲ್‌ಕಾರಕೂನ) ಎಲ್ಲ ಕೆಲಸಗಳನ್ನು ತೂಗಿಸಿಕೊಂಡು ಹೋಗುತ್ತಾನೆ. ಪರಮೇಶ್ವರನ ಕೃಪೆಯಿಂದ

ತಾವು ನೌಕರಿಯ ಭವಸಾಗರವನ್ನು ಸುಖರೂಪವಾಗಿ ಈಸಿ ಹೋಗುತ್ತೀರಿ.'

"ನಾವಾಗ ಅವ್ವಲ ತಾಲೂಕದಾರರ ಮದದಗಾರ ಮಾಲ್ (ರೆವಿನ್ಯೂ ಅಸಿಸ್ಟಂಟ್) ನನ್ನು ಕೇಳಿದೆವು. ಆತನ ಹೆಸರು ವಜೀಹುದ್ದೀನ್ ಎಂದಿತು. 'ಜನಾಬ, ಆಫ್ ಕುಛ್ ಫಿಕ್ರ್ ಮತ್ ಕೀಜಿಯೆ. ಖುರ್ಸಿ ಖುದ್ ಸಿಖಾಯೇಗಿ. ಅಧಿಕಾರದ ಕುರ್ಚಿಯ ಮೇಲೆ ಕುಳಿತ ಕೂಡಲೇ ಕೆಲಸ ತಾನಾಗಿಯೆ ತಿಳಿಯುವುದು. ಖುರ್ಸಿ ಖುದ್ ಸಿಖಾಯೇಗಿ' ಎಂದು ಆತನೆಂದ."

ನಾನು ಇದನ್ನೆಲ್ಲ ಇಬ್ರಾಹೀಮ ಅಲೀಖಾನರಿಗೆ ಹೇಳಲು ಅವರು "ಬಹೊತ್ ಖೂಬ ಕಹಾ ಮದದಗಾರ ಸಾಹಬನೇ. ಖುರ್ಸಿ ಖುದ್ ಸಿಖಾಯೇಗಿ" ಎಂದರು.

ಅಷ್ಟರಲ್ಲಿ ಅವರೆದುರು ಕೆಲವು ಖಟ್ಲೆಗಳು ವಿಚಾರಣೆಗೆ ಬಂದವು. ವಾದಿ, ಪ್ರತಿವಾದಿಗಳು ಹಾಜರಾದರು. ಆದರೆ ಒಬ್ಬ ವಕೀಲ ಮಾತ್ರ ಹಾಜರಿದ್ದ. ಇನ್ನೊಬ್ಬ ಹೈದ್ರಾಬಾದಿಗೆ ಹೋಗಿಬಿಟ್ಟಿದ್ದ. ಆಲಂಪುರದಲ್ಲಿ ಇಬ್ಬರೇ ವಕೀಲರಿದ್ದರು ಎಂದು ನನಗೆ ಆ ಮೇಲೆ ತಿಳಿಯಿತು. ಅವರಲ್ಲೊಬ್ಬ ಹಾಜರಿರಲಿಲ್ಲವೆಂದರೆ ಖಟ್ಲೆ ಮುಂದಕ್ಕೆ ಬೀಳುತ್ತಿತ್ತು.

ಇಷ್ಟೊತ್ತಿಗೆ ಹನ್ನೆರಡು ಹೊಡೆದಿತ್ತು. ಆ ಸಮಯದಲ್ಲಿ ಓಡೋಡುತ್ತ ಬಂದ ಒಬ್ಬ ಚಪರಾಸಿ "ಹುಜೂರ್, ಆಜ್ ಬಸ್ ಪರ್ ಕೋಯಿ ನಹಿ ಆಯಾ" ಎಂದು ಸಲಾಮು ಹೊಡೆದ. ಅದನ್ನು ಕೇಳಿದ್ದೇ ತಹಸೀಲದಾರರು ಎದ್ದು "ಚಲೋ, ದಫ ರ್ ಬರಖಾಸ್ತ್" ಎಂದರು.

"ಅಲ್ಲ, ಕಚೇರಿಯ ವೇಳೆ ಮುಂಜಾನೆ ಹತ್ತರಿಂದ ಮಧ್ಯಾಹ್ನದ ನಾಲ್ಕರ ವರೆಗೆ ಅಲ್ಲವೆ?" ನಾನು ಕೇಳಿದೆ.

ಆಗ ಅವರು. "ಅಜೀ ಜನಾಬ್, ಬೇರೆ ತಾಲೂಕುಗಳಲ್ಲಿ ಹಾಗಿರಬಹುದು. ಇಲ್ಲಿಂದ ರೇಲ್ವೆ ಸ್ಟೇಶನ್ ನಾಲ್ಕು ಮೈಲು ದೂರದಲ್ಲಿದೆಯೆಂಬುದು ನಿಮಗೆ ಗೊತ್ತಿದೆ. ಹೈದ್ರಾಬಾದಿನಿಂದ ದ್ರೋಣಾಚಲಕ್ಕೆ ಹೋಗಿ ಬರುವ ಗಾಡಿಗಳ ಕ್ರಾಸಿಂಗ್ ಇಲ್ಲಿಯೆ ಆಗುತ್ತದೆ. ಎರಡೂ ಗಾಡಿಗಳನ್ನು ನೋಡಿಕೊಂಡೇ ಬಸ್ ಸ್ಟೇಶನ್ನಿನಿಂದ ಹೊರಡುತ್ತದೆ. ಬಸ್ ಸ್ಟಾಂಡಿನಲ್ಲಿ ನಾವು ಒಬ್ಬ ಚಪರಾಸಿಯನ್ನಿಟ್ಟಿರುತೇವೆ. ಜಿಲ್ಲಾ ಕಚೇರಿಯಿಂದ ಯಾವನಾದರೂ ಅಧಿಕಾರಿ ಬಂದಿದ್ದಾನೆಯೆ ಎಂದಾತ ನೋಡಿಕೊಂಡು ಬಂದು ಹೇಳುತ್ತಾನೆ. ಇನ್ನು ಇಪ್ಪತ್ತು ನಾಲ್ಕು ತಾಸುಗಳ ವರೆಗೆ ಯಾವ ಅಧಿಕಾರಿಯೂ ಬರಲಾರ ಎಂದು ನಂಬಿಕೆಯಾಯಿತಲ್ಲ. ಅಂದ ಮೇಲೆ ಕಚೇರಿಯನ್ನು ತೆರೆದಿಡುವುದು ಯಾತಕ್ಕೆ? ಚಲೋ ಬರಖಾಸ್ತ್" ಎಂದರು.

ಅಂದು ಸಂಜೆ ತುಂಗಭದ್ರೆಯ ದಂಡೆಯಲ್ಲಿದ್ದ ಕ್ಲಬ್ಬಿನಲ್ಲಿ ನಾವು ಕಲ್ಲಂಗಡಿ ಮತ್ತು ಕರಬೂಜ್ ಹಣ್ಣುಗಳನ್ನು ತಿನ್ನುತ್ತ ಕುಳಿತಿದ್ದೆವು. ಆಲಂಪುರದ ಈ ಹಣ್ಣುಗಳು ಇಡೀ ಹೈದ್ರಾಬಾದಿನಲ್ಲಿ ಪ್ರಸಿದ್ಧವಾಗಿವೆ. ಹಣು ತಿನ್ನುತ್ತಲೇ ಇಬ್ರಾಹೀಮ ಅಲೀಖಾನರು ಹೇಳಿದರು. "ಮಾಧವರಾವ್, ನೀವು ತರುಣರು. ಕೆಲಸ ಮಾಡುವ ಹುಮ್ಮಸಿದೆ. ಕೆಲಸವೇನು, ಯಾರು ಬೇಕಾದರೂ ಮಾಡುತ್ತಾರೆ. ಆದರೆ ಕೆಲಸ ಮಾಡದೆಯೆ ಮಾಡಿದಂತೆ ತೋರಿಸುವುದೇ ಜಾಣತನ. ಈ ವಿದ್ಯೆಯನ್ನು ನೀವು ಕಲಿಯಬೇಕು."

ನಾನು ದಂಗಾದೆ. ಅದು ಹೇಗೆ ಎಂದು ಕೇಳಿದೆ.

"ಕೆಲಸ ಮಾಡಿದರೆ ಬಡತಿ ಸಿಗುತ್ತದೆ ಎಂದೇನೂ ಇಲ್ಲ. ನನ್ನನ್ನೇ ನೋಡಿ, ಇನ್ನೂ ತಹಸೀಲದಾರಿಯಲ್ಲೆ ಕೊಳೆಯುತ್ತಿದ್ದೇನೆ. ಬಡತಿಯ ಆಶೆ ಅಷ್ಟಕ್ಕಷ್ಟೇ ಎಂದು ತಿಳಿದೊಡನೆ ಕೆಲಸದ ತಂತ್ರವನ್ನು ಒಂದು ತುಸು ಬದಲಿಸಬೇಕು. ಚಿಕ್ಕದೊಂದು ತಾಲೂಕಿಗೆ ವರ್ಗ ಮಾಡಿಸಿಕೊಳ್ಳಬೇಕು. ಜಿಲ್ಲೆಯ ಮುಖ್ಯ ಸ್ಥಳದಿಂದ ಸುಲಭದಲ್ಲಿ ಬರಲು ಸಾಧ್ಯವಿಲ್ಲದಂಥ ತಾಲೂಕನ್ನಾರಿಸಿಕೊಳ್ಳಬೇಕು. ಹೊಲದ ಖಟ್ಲೆ

ಬಂದಾಗ “ಕಿಸ್ಸಾಯೆ ಜಮೀನ್ ಬರಸರೇ ಜಮೀನ್” (ಆ ಹೊಲಕ್ಕೇ ಹೋಗಿ ಖಟೆಯ ವಿಚಾರಣೆ ಮಾಡಬೇಕು) ಎಂದು ಬರೆದು ಕಾಗದ ಪತ್ರಗಳನ್ನು ಸಂಚಾರ ಕಾಲದಲ್ಲಿ ಜೊತೆಯಲ್ಲಿಟ್ಟುಕೊಳ್ಳಬೇಕು ಎಂದು ತಿಳಿಸಬೇಕು. ಸಂಚಾರಕ್ಕೆ ಹೋದ ಬಳಿಕ “ಇಲ್ಲಿ ವಕೀಲರಿಲ್ಲ. ಆದರಿಂದ ಪಕ್ಷಕಾರರ ಮೇಲೆ ಅನ್ಯಾಯವಾದೀತು” ಎಂದು ಕಾಗದ ಪತ್ರಗಳನ್ನು ತಿರುಗಿ ಕಚೇರಿಗೆ ಕಳಿಸಬೇಕು.

“ಹೀಗೆ ಕೆಲಸ ರಾಶಿಯಾಗಿ ಬಿದ್ದ ಮೇಲೆ ೨—೩ ತಿಂಗಳ ರಜೆಯ ಮೇಲೆ ಹೋಗಿಬಿಡಬೇಕು. ಆಗ ಬಡತಿಯ ಆಶೆಯಿಂದ ತಾತ್ಪೂರ್ತಿಕ ತಹಸೀಲದಾರನಾಗಿ ಕೆಲಸ ಮಾಡುವ ನಿಮ್ಮ ಪೇಶಕಾರ ಬಾಕಿ ಉಳಿದಿರುವ ಎಲ್ಲ ಕೆಲಸಗಳನ್ನು ಮುಗಿಸುತ್ತಾನೆ. ಎಲ್ಲ ಕೆಲಸ ಮುಗಿದಾಗ ನೀವು ಮತೆ ಹಾಜರಾಗಬೇಕು. ಬಂದ ಮೇಲೆ “ನಾನೆಲ್ಲ ವ್ಯವಸಿತವಾಗಿ ಮಾಡಿಟ್ಟಿದ್ದನ್ನು ಈ ಪೇಶಕಾರ ಕೆಡಿಸಿಬಿಟ್ಟಿದ್ದಾನೆ” ಎಂದು ಎಲ್ಲರೆದುರು ಹೇಳುತ್ತ ಹೋಗಬೇಕು. ಸಮಾನ ಅಧಿಕಾರಿಗಳೊಂದಿಗೆ ಸ್ನೇಹದಿಂದ ನಡೆದುಕೊಳ್ಳಬೇಕು. ವರಿಷ್ಠ ಅಧಿಕಾರಿಗಳೊಂದಿಗೆ ಮಾತಾಡುವಾಗ—ಕ್ಷಮಿಸಿ—ತನ್ನ ಕಾರ್ಯ ಸಾಧಿಸಿಕೊಳ್ಳುವಾಗ ಹೆಂಡತಿ ಗಂಡನೊಡನೆ ಮಾತಾಡುವ ರೀತಿಯಲ್ಲಿ ಮಾತಾಡಬೇಕು. ಕೆಲಸದ್ದೇನು ಮಹಾ! ಖುರ್ಸಿ ಖುದ್ ಸಿಖಾಯೇಗಿ.”

ನನ್ನ ಗುರುವರ್ಯ ಇಬ್ರಾಹಿಮ ಅಲೀಖಾನರು ಇಂತು ಉಪದೇಶ ಮಾಡಿದರು. ಅವರ ಉಪದೇಶದ ಪ್ರಭಾವ ನನ್ನ ಮೇಲೆ ಬಿತ್ತೆಂದು ಬೇರೆ ಹೇಳಬೇಕೆ? ತಹಸೀಲದಾರ ಜನರಲ್ಲಿ ಇವರಂತೆ ಇನ್ನೂ ಅನೇಕರಿದ್ದರು. ನನ್ನ ಮಿತ್ರರಾದ ಕೈ. ವಾ. ಸೇಡಂ ವೆಂಕೋಬರಾಯರು ತಹಸೀಲದಾರರಾಗಿದ್ದರು. ಅವರು ಹೇಳಿದ ಒಂದು ಸಂಗತಿ ಹೀಗಿದೆ:

ಹೈದ್ರಾಬಾದಿನ ಒಬ್ಬ ನವಾಬಜಾದೆ ಒಂದು ತಾಲೂಕಿನ ತಹಸೀಲದಾರರಾಗಿದ್ದರು. ಹೈದ್ರಾಬಾದಿನಿಂದ ಹೊರಡುವಾಗ ಅವರ ತಾಯಿ ಅವರಿಗೆ “ನೂರೇ ಚಶ್ಮ(ನನ್ನ ಕಣ್ಣ ಬೆಳಕೆ), ಲಖ್ತೇ ಜಿಗರ (ಹ ದಯದ ತುಂಡೇ), ನೀನು ಭೋಳೇ ಇರುವುದನ್ನು ಕಂಡು ನಿನ್ನ ಕಚೇರಿಯ ಕಾರಕೂನರು ನಿನ್ನನ್ನು ಮೋಸಗೊಳಿಸಿಯಾರು. ಆದ್ದರಿಂದ ಆದಷ್ಟು ಕಡಿಮೆ ಸಹಿ ಹಾಕುವ ಧೋರಣವನ್ನಿಟ್ಟುಕೊ” ಎಂದು ಉಪದೇಶ ಮಾಡಿದಳು. ತಹಸೀಲದಾರರು ತಾಲೂಕಿಗೆ ಹೋದೊಡನೆ ಎಲ್ಲರನ್ನೂ ಕರೆಸಿ “ನನ್ನ ಸಹಿಗಾಗಿ ಎಷ್ಟು ಸಾಧ್ಯವೊ ಅಷ್ಟು ಕಡಿಮೆ ಕಾಗದಗಳನ್ನು ಕಳಿಸಬೇಕು. ಇಲ್ಲವಾದರೆ ನೋಡಿಕೊಳ್ಳಿ, ನಿಮ್ಮೆಲ್ಲರನ್ನೂ ನಾನು ಪೂರಾ ಬಲ್ಲೆ” ಎಂದು ತಾಕೀತು ಮಾಡಿದರು.

ಕೆಲ ತಿಂಗಳಗಳ ವರೆಗೆ ಪೇಶಕಾರರು ಹಾಗೂ ಹೀಗೂ ಕೆಲಸ ಸಾಗಿಸಿದರು. ಆದರೆ ಒಂದು ದಿನ ಸಂಕಟ ಬಂತು. ರೈತರಿಗೆ ತಗಾಯಿ ಕೊಟ್ಟು ಅವರಿಂದ ಪಾವತಿ ಪಡೆಯಲಾಗಿತ್ತು. ಅವುಗಳ ಮೇಲೆ ತಹಸೀಲದಾರರ ಕೌಂಟರ್ ಸಿಗ್ನೇಚರ್ ಬೇಕು ಎಂದು ಜಿಲ್ಲಾ ಕಚೇರಿ ಅವುಗಳನ್ನು ತಿರುಗಿ ಕಳಿಸಿತು. ಜಮಾಬಂದಿ ಕಾರಕೂನರು ಆಗ ಅವನ್ನೆಲ್ಲ ತಹಸೀಲದಾರರ ಬಳಿಗೊಯ್ದರು. ಸಹಿಗಾಗಿ ಇಷ್ಟೆಲ್ಲ ಕಾಗದಗಳನ್ನು ತಂದದ್ದನ್ನು ಕಂಡು ತಹಸೀಲದಾರರ ಪಿತ್ತ ಕೆರಳಿತು. ಕಾರಕೂನರೇನೊ ತಂತ್ರ ಹೂಡಿದ್ದಾರೆ ಎಂದುಕೊಂಡು ಅವರು ಶಿಪಾಯಿಗೆ “ಸಿಕಂದರ್ ಔರ್ ಕಲಂದರ್ ಕೊ ಬುಲಾವ್” ಎಂದು ಅಪ್ಪಣೆ ಮಾಡಿದರು.

ಶಿಪಾಯಿಗಳು ಕೂಡಲೇ ಎರಡು ಚಿಗರಿಗಳನ್ನು ಕರಕೊಂಡು ಬಂದರು. ತಹಸೀಲದಾರರು ಅವಕ್ಕೆ ಆ ಪಾವತಿಯ ಕಾಗದಗಳನ್ನು ತಿನ್ನಿಸತೊಡಗಿದರು. ಚಿಗರಿಗಳು ಅರ್ಧದಷ್ಟು ಕಾಗದ ತಿಂದು ಮುಗಿಸಿದಾಗ ಕಾರಕೂನ ಓಡುತ್ತ ಬಂದು “ಸಾಹೇಬ, ಅವು ತಗಾಯಿ ಕಾಗದಗಳು. ಮೈ ತಬಾಹ ಹೋಗಯಾ ಸರಕಾರ, ಕಾಗಜ

ಜಿಲೇಕೊ ಜಾನೇಕೇಥೇ ಎಂದು ಗೋಗರೆದ.

"ಚುಪ್ ರಹೊ" ತಹಸೀಲದಾರರು ಗರ್ಜಿಸಿದರು. "ಹಜಾರಬಾರ್ ಮೈ ತುಮಕೊ ತಾಕೀದ ಕಿಯಾ ಕಿ ದಸ್ತಖತಕೆಲಿಯೆ ಕಾಗಜಾದ ಪೇಶ ಮತ ಕಿಯಾ ಕರೊ. ಅಬ್ ಫಿರ್ ಕಾಗಜಾದ ಲಾಯೆ ತೋ ಫಿರ್ ಸಿಕಂದರ ಔರ್ ಕಲಂದರಕೊ ಬುಲಾತಾ ಹುಂ."

ಆ ಬಡ ಕಾರಕೂನನ ನೌಕರಿ ಹೋಗುವ ಪಾಳಿ ಬಂದಿತೆಂದು ಹೇಳುವ ಕಾರಣವೇ ಇಲ್ಲ.

ಕೆಲಸದ ಅರ್ಧಮರ್ಧ ಮಾಹಿತಿಯಿಂದ ಎಷ್ಟೋ ಸಲ ವಿನೋದ ಪ್ರಸಂಗಗಳು ನಡೆಯುತ್ತಿದ್ದವು. ಒಮ್ಮೆ ರೆವಿನ್ಯು ಇನಸ್ಪೆಕ್ಟರ್ ಜನರಲ್‌ರು (ಯುರೋಪಿಯನ್ನರಾಗಿದ್ದರವರು) ಒಂದು ತಾಲೂಕಿಗೆ ಬಂದರು.

ಅವರು ತಹಸೀಲದಾರರ ಹತ್ತಿರ "ಕಲ್ ರಾತಕೊ ಯಹಾಂ ಕಿತನಾ ಬಾರಿಶ್ ಹುವಾ (ನಿನ್ನೆ ರಾತ್ರಿ ಮಳೆ ಎಷ್ಟು ಬಿತ್ತು?)" ಎಂದು ಕೇಳಿದರು.

ತಹಸೀಲದಾರರು "ಹುಜೂರ್, ಕಲ್ ರಾತಕೊ ಸೌ ಇಂಚ್ ಬಾರಿಶ್ ಹುಯಿ" ಎಂದರು.

ಸಾಹೇಬ ಅವಾಕ್ಕಾಗಿ ಹೋದ. ಒಂದು ರಾತ್ರಿಯಲ್ಲಿ ನೂರು ಇಂಚು ಮಳೆ! ಹೈದ್ರಾಬಾದಿನಲ್ಲಿ ವರ್ಷಕ್ಕೆ ೩೦–೩೨ ಇಂಚಿಗಿಂತ ಮಳೆ ಹೆಚ್ಚು ಬೀಳುವುದಿಲ್ಲ. ಈ ತಹಸೀಲದಾರ ಒಂದೇ ರಾತ್ರಿಯಲ್ಲಿ ನೂರು ಇಂಚು ಮಳೆ ಬಂತೆಂದು ಅನ್ನುತ್ತಾನೆ! ಅವರು "ರೇನ್‌ಗಾಜ್ ಲಾವ್" ಎಂದರು.

ಅದನ್ನು ನೋಡಿ ಅವರು ತಹಸೀಲದಾರನಿಗೆ "ಏ ಪಂಡಿತಾ, ನೂರು ಸೆಂಟ್ಸ್ ಅಂದರೆ ಒಂದು ಇಂಚು ಮಳೆಯಾಗಿದೆ. ನೂರು ಇಂಚು ಅಲ್ಲ." ಎಂದರು.

ವರಿಷ್ಠರ ಸಿಟ್ಟನ್ನಿಳಿಸಲು ಸರಕಾರೀ ಅಧಿಕಾರಿಗಳು ತಮ್ಮ ಪತ್ರಿಕೆಗಳಲ್ಲಿ ಕವಿತೆಗಳ ಸಾಲು ಬರೆಯಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಹಿಂಗೋಲಿಯಾ ತಹಸೀಲದಾರರಿಗೆ ಆಲೂರಿನ ಮಾಸ್ಟರ್ ಪ್ಲಾನ್ ತಯಾರಿಸಲು ಹೇಳಿ ಎಷ್ಟೋ ತಿಂಗಳಾದರೂ ಅವರು ಸುಮ್ಮನೆ ಕುಳಿತದ್ದನ್ನು ಕಂಡು ಅವ್ವಲ್ ತಾಲೂಕದಾರರು "ಇದರ ಬಗ್ಗೆ ವಿವರಣೆ ಕೊಡಿರಿ" ಎಂದು ಅಪ್ಪಣೆ ಮಾಡಿದರು.

ಅದಕ್ಕುತ್ತರವೆಂದು ತಹಸೀಲದಾರ ಒಂದು ಕವಿತೆಯನ್ನೆ ಬರೆದು ಕಳಿಸಿದ. ಅದರ ಮೊದಲಿನ ಎರಡು ಸಾಲುಗಳು ಈ ರೀತಿ ಇದ್ದವು:

"ಬಸ್ತೀಕಾ ಬಸಾನಾ ಖೇಲ ನಹಿ ಜಾಲಿಮ,
ಬಸ್ತಿ ಬಸತೆ ಬಸತೆ ಬಸತೀ ಹೈ" (ಊರು ಕಟ್ಟುವುದೇನೂ ಹುಡುಗಾಟಿಕೆಯಲ್ಲ ಎಲೊ ಛಲಗಾರನೇ, ಒಂದೊಂದು ಮನೆಯಾಗಿ ಊರಾಗುತ್ತದೆ.)

ತಹಸೀಲದಾರನ ಉತ್ತರವನ್ನು ಕಂಡು ಅವ್ವಲ ತಾಲೂಕದಾರ ಮುಖ್ಯ ಪ್ರಶ್ನೆಯನ್ನೆ ಮರೆತು "ವ್ವಾ! ಕ್ಯಾ ಖೂಬ್ ಶಾಯರಿ ಫರ್ಮಾಯೀ ಹೈ" ಎಂದು ಶಹಬಾಸಿಕೆ ಕೊಟ್ಟ.

ಆ ಊರಿನ ಮಾಸ್ಟರ್ ಪ್ಲಾನಿನ ಗೋರಿ ಆಯಿತು ಎಂದು ನಾನು ಹೇಳಬೇಕೇನು? ★

**ಒಳ್ಳೆಯ ಸಂಗತಿಯೊಂದನ್ನು ಕಲಿಯಲು ಸಾವಿರ ದಿವಸಗಳಾದರೂ ಕಡಿಮೆಯೆ. ಆದರೆ ಕೆಟ್ಟದ್ದನ್ನು ಕಲಿಯಲು ಒಂದು ತಾಸು ಕೂಡ ಬೇಡ.**

ಅಮೇರಿಕನ್ ಕಥಾ ಸಾರ್ವಭೌಮನ
ಒಂದು ಹೃದಯಂಗಮ ಕಥೆ

# ಅವರ ವಿವಾಹವಿಚ್ಛೇದ

ಓ ಹೆನ್ರಿ

ನ್ಯಾಯಾಧೀಶ ಬೆಂಜಾ ವಿಡಪ್ ತಮ್ಮ ಕಚೇರಿಯ ಬಾಗಿಲಲ್ಲಿ ಪೈಪ್ ಸೇದುತ್ತ ಕುಳಿತಿದ್ದರು. ಮಧ್ಯಾಹ್ನದ ಪ್ರಕಾಶದಲ್ಲಿ ಕಂಬರ್‌ಲ್ಯಾಂಡ್ ಗುಡ್ಡ ನೀಲಿ ಬಣ್ಣ ತಾಳಿ ಎದ್ದು ನಿಂತಿತ್ತು. ಹಂಡಬಂಡ ಬಣ್ಣದ ಕೋಳಿಯೊಂದು ಊರಿನ ಮುಖ್ಯ ರಸ್ತೆಯಲ್ಲಿ ಹುಚ್ಚನಂತೆ ಕ್ಲಕ್, ಕ್ಲಕ್ ಮಾಡುತ್ತ ಅಲೆಯುತ್ತಿತ್ತು.

ರಸ್ತೆಯಲ್ಲಿ ಚಕ್ಕಡಿಯೊಂದರ ಗಾಲಿಗಳ ಸದ್ದು ಕೇಳಿಸಿತು. ಅದರ ಹಿಂದೆಯೆ ಧೂಳಿನ ಮೋಡ ಕಾಣಿಸಿತು. ಮತ್ತೊಂದೆರಡು ಕ್ಷಣಗಳಲ್ಲಿ ರ್‍ಯಾನ್ಸಿ ಬಿಲ್ಬ್ರೊ ಮತ್ತು ಅವನ ಹೆಂಡತಿ ಚಕ್ಕಡಿಯ ಮೇಲೆ ಕುಳಿತು ಬರುತ್ತಿರುವುದನ್ನು ವಿಡಪ್‌ರು ಕಂಡರು. ಚಕ್ಕಡಿ ನ್ಯಾಯಾಧೀಶರ ಬಾಗಿಲಲ್ಲಿ ಬಂದು ನಿಂತಿತು. ಗಂಡ ಹೆಂಡಿರಿಬ್ಬರೂ ಕೆಳಗಿಳಿದರು. ರ್‍ಯಾನ್ಸಿ ಆರಡಿ ಎತ್ತರದ, ಹಳದಿ ಕೂದಲಿನ ಬಡಕಲು ಮನುಷ್ಯನಾಗಿದ್ದ. ಅವನ ಹೆಂಡತಿಯೊ ಅತೃಪ್ತ



ಆಕಾಂಕ್ಷೆಗಳಿಂದ ದಣಿದವಳಂತಿದ್ದಳು.

ತಮ್ಮ ಗಾಂಭೀರ್ಯ ರಕ್ಷಣೆಗಾಗಿ ನ್ಯಾಯಾಧೀಶರು ಬೂಟು ಮೆಟ್ಟಿಕೊಂಡು ಆಗಂತುಕರನ್ನು ಒಳಗೆ ಬರಗೊಡುವುದಕ್ಕಾಗಿ ತಾವು ಬದಿಗೆ ಸರಿದು ನಿಂತರು.

"ನಾವು.... ನಮಗೆ ವಿವಾಹ ವಿಚ್ಛೇದನವಾಗಬೇಕು," ಎಂದು ಆ ಹೆಂಗಸು ಬಿದಿರುಮೆಳೆಯಲ್ಲಿ ಗಾಳಿ ಬೀಸುವಾಗ ಆಗುವ ಸಪ್ಪಳದಂಥ ಧ್ವನಿಯಲ್ಲಿ ಹೇಳಿದಳು. ತಮ್ಮ ಆಗಮನದ ಉದ್ದೇಶವನ್ನು ವಿವರಿಸುವಲ್ಲಿ ತನ್ನಿಂದೇನಾದರೂ ತಪ್ಪನ್ನು ರ್‍ಯಾನ್ಸಿ ಕಂಡನೇ ಎಂದು ತಿಳಿದುಕೊಳ್ಳುವುದಕ್ಕಾಗಿ ಅವಳು ಆತನ ಕಡೆ ನೋಡಿದಳು.

"ಹೌದು. ವಿವಾಹ ವಿಚ್ಛೇದನ" ರ್‍ಯಾನ್ಸಿ ಗಂಭೀರವಾಗಿ ತಲೆಯಲ್ಲಾಡಿಸುತ್ತ ಹೇಳಿದ. "ಏನೂ ಎಂತೂ ನಾವಿಬ್ಬರೂ ಕೂಡಿ ಇರಲಾರೆವು. ಗಂಡ-ಹೆಂಡಿರಲ್ಲಿ ಪರಸ್ಪರ ಸಾಕಷ್ಟು ಪ್ರೀತಿಯಿದ್ದರೂ ಈ ಗುಡ್ಡಗಾಡಿನಲ್ಲಿ ಜೀವನ ಬೇಸರ ತರುವಂಥದೇ ಆಗಿದೆ. ಹೆಂಡತಿ ಕಾಡುಬೆಕ್ಕಿನಂತೆ ಗುರುಗುಡುತ್ತಿದ್ದರೆ ಅಥವಾ ಗೂಗೆಯಂತೆ ಬಿಮ್ಮನೆ ಕುಳಿತಿರುವವಳಾದರೆ ಗಂಡಸು ಅವಳೊಂದಿಗೆ ಹೇಗೆ ಬಾಳ್ವೆ ಮಾಡಿಯಾನು?"

ಗಂಡನ ಮಾತಿಗೆ ಪ್ರತಿಯಾಗಿ ಆ ಹೆಂಗಸು ಹೇಳಿದಳು: "ಮತ್ತೆ ಗಂಡನಾದವ ಸೋಮಾರಿಯಂತೆ ಬಿದ್ದುಕೊಂಡರೆ, ಸದಾ ಹಸಿದಿರುವ ನಾಲ್ಕಾರು ನಾಯಿಗಳನ್ನು ಕಟ್ಟಿಕೊಂಡು ಇತರರಿಗೆ ತೊಂದರೆ ಕೊಡುತ್ತಿದ್ದರೆ ಹೆಂಡತಿ ಏನು ಮಾಡಬೇಕು?"

"ಹುಂ. ಈ ಕಂಬರ್‌ಲ್ಯಾಂಡಿನಲ್ಲಿ ಉತ್ತಮವಾದ ನಾಯಿಯ ಮೇಲೆ ಹೆಂಡತಿ ಬಿಸಿ ನೀರನ್ನು ಉಗ್ಗುತ್ತಿದ್ದರೆ, ಗಂಡನ ಮೇಲೆ ದೂರಿನ ಮೇಲೆ ದೂರನ್ನು ಹೇಳುತ್ತ ರಾತ್ರಿಯಿಡೀ ಅವನನ್ನು ನಿದ್ದೆಗೆಡಿಸುತ್ತಿದ್ದರೆ ಗಂಡ ಏನು ತಲೆ ಜಜ್ಜಿಕೊಳ್ಳಬೇಕೆ?"

"ಗಂಡ ಈ ಗುಡ್ಡಗಾಡು ಪ್ರಾಂತದಲ್ಲೆಲ್ಲ ಜಿಪುಣ ಎಂದು ಗೇಲಿ ಮಾಡಿಸಿಕೊಳ್ಳುತ್ತಿರುವಾಗ ಯಾರಿಗೆ ತಾನೆ ಸುಖನಿದ್ದೆ ಬಂದೀತು?"

ಗಂಡಹೆಂಡಿರ ಆರೋಪ ಪ್ರತ್ಯಾರೋಪಗಳನ್ನು ಕೇಳಿಕೊಂಡು ನ್ಯಾಯಾಧೀಶರು ತಮ್ಮ ಕರ್ತವ ನಿರ್ವಹಿಸಲು ಸಿದ್ಧರಾದರು. ತಮ್ಮಲ್ಲಿದ್ದ ಒಂದೇ ಒಂದು ಖುರ್ಚಿ ಮತ್ತು ಒಂದು ಸ್ಟೂಲನ್ನು ಅವರು ಅರ್ಜಿದಾರರಿಗಾಗಿ ಮುಂದೆ ಸರಿಸಿದರು. ಮೇಜಿನ ಮೇಲೆ ತಮ್ಮ ಕಾಯದೆ ಪುಸ್ತಕವನ್ನು ತೆರೆದಿಟ್ಟುಕೊಂಡು ಅದರಲ್ಲಿಯ ಅನುಕ್ರಮಣಿಕೆಯನ್ನು ಅವಲೋಕಿಸಿದರು. ಆ ಮೇಲೆ ತಮ್ಮ ಕನ್ನಡಕವನ್ನು ಒರಸಿ ಹಾಕಿಕೊಂಡು ಮಸಿ ದೌತಿಯನ್ನು ಸಮೀಪಕ್ಕೆ ಸರಿಸಿಕೊಂಡರು.

"ಈ ವಿಷಯದ ಬಗ್ಗೆ ಈ ಕೋರ್ಟಿನ ಅಧಿಕಾರಕಕ್ಷೆಯ ಮಟ್ಟಿಗೆ ಹೇಳುವುದಾದರೆ ಈ ಕಾಯದೆ ಪುಸ್ತಕದಲ್ಲಿ ಏನೂ ಹೇಳಿಲ್ಲ. ಆದರೆ ಸಂವಿಧಾನದಲ್ಲಿ ಹೇಳಿರುವ ಮೂಲಭೂತ ಹಕ್ಕುಗಳನ್ವಯ ಯಾವನು ವಿವಾಹವಿಧಿಯನ್ನು ನೆರವೇರಿಸಬಲ್ಲನೊ ಆತನಿಗೆ ವಿವಾಹವಿಚ್ಛೇದನ ಮಾಡಿಸುವ ಅಧಿಕಾರವೂ ಇರಲೇಬೇಕು. ಈ ಕೋರ್ಟು ವಿವಾಹವಿಚ್ಛೇದನದ ಡಿಕ್ರಿ ಹೊರಡಿಸುವುದು. ಅದನ್ನು ಮಾನ್ಯ ಮಾಡುವುದು ಬಿಡುವುದು ಸುಪ್ರೀಂ ಕೋರ್ಟಿಗೆ ಸೇರಿದ್ದು" ನ್ಯಾಯಾಧೀಶರು ಹೇಳಿದರು.

ರ್‍ಯಾನ್ಸಿ ಬಿಲ್ಬ್ರೊ ತನ್ನ ಪ್ಯಾಂಟಿನ ಕಿಸೆಯಿಂದ ಒಂದು ತಂಬಾಕಿನ ಪುಟ್ಟ ಚೀಲವನ್ನು ಹೊರತೆಗೆದ. ಆ ಚೀಲದೊಳಗಿಂದ ಒಂದು ಐದು ಡಾಲರಿನ ನೋಟನ್ನು ಮೇಜಿನ ಮೇಲಿಡುತ್ತ "ನಮ್ಮಲ್ಲಿರುವ ಹಣವೆಂದರೆ ಇಷ್ಟೇ. ಇದನ್ನು ಸಂಪಾದಿಸಲು ಒಂದು ಕರಡಿ ಚರ್ಮ ಮತ್ತು ಎರಡು ನರಿ ಚರ್ಮಗಳನ್ನು ಮಾರಿದೆ" ಎಂದನಾತ.

"ಈ ಕೋರ್ಟಿನಲ್ಲಿ ವಿವಾಹವಿಚ್ಛೇದನ ಕಾರ್ಯಕ್ಕಾಗಿ ಇರುವ ಫೀ ಐದು ಡಾಲರುಗಳು ಮಾತ್ರ," ಎಂದು ನ್ಯಾಯಾಧೀಶರು ನೋಟನ್ನು ತಮ್ಮ

ಜಾಕೀಟಿನ ಕಿಸೆಯಲ್ಲಿ ತೀರ ಮಾಮೂಲಿ ಯೆಂಬಂತೆ ತುರುಕಿದರು. ದೇಹ ಮನಗಳೆರಡನ್ನೂ ತುಂಬ ದಣಿಸುತ್ತ ಅವರು ಒಂದು ಹಾಳೆಯ ಮೇಲೆ ವಿವಾಹವಿಚ್ಛೇದನ ಡಿಕ್ರಿ ಬರೆದು ಮತ್ತೊಂದು ಹಾಳೆಯ ಮೇಲೆ ಅದರ ನಕಲು ಮಾಡಿದರು. ಅವರಿಬ್ಬರಿಗೂ ಸ್ವಾತಂತ್ರ್ಯವನ್ನು ಕೊಡಲಿದ್ದ ಆ ಕಾಗದವನ್ನು ನ್ಯಾಯಾಧೀಶರೇ ರ‍್ಯಾನ್ಸಿ ಮತ್ತು ಅವನ ಹೆಂಡತಿಗೆ ಓದಿ ತೋರಿಸಿದರು:

**"ರ‍್ಯಾನ್ಸಿ ಬಿಲ್ಬ್ರೊ ಮತ್ತು ಅವನ ಹೆಂಡತಿ ಏರಿಲಾ ಬಿಲ್ಬ್ರೊ ಇಂದು ನನ್ನ ಮುಂದೆ ಪ್ರತ್ಯಕ್ಷ ಹಾಜರಾಗಿ ತಾವು ಇನ್ನು ಮೇಲೆ ಪರಸ್ಪರರನ್ನು ಪ್ರೀತಿಸುವುದಿಲ್ಲ, ಗೌರವಿಸುವುದಿಲ್ಲ, ಆಜ್ಞಾಪಾಲನೆ ಮಾಡುವುದಿಲ್ಲ ಎಂದು ಪ್ರತಿಜ್ಞೆ ಮಾಡಿ ಕಾಯುದೆಯನ್ವಯ ವಿವಾಹವಿಚ್ಛೇದನ ಮಾಡಿಕೊಂಡರು ಎಂದು ಈ ಮೂಲಕ ಜಾಹೀರು ಪಡಿಸಲಾಗಿದೆ.**

ಸಹಿ. ಬೆಂಜಾ ವಿಡಪ್<br>ಟೆನೆಸ್ಸಿ ರಾಜ್ಯದ ಪೀಡ್‌ಮಾಂಟ್<br>ತಹಶೀಲಿನ ನ್ಯಾಯಾಧೀಶ."

"ನ್ಯಾಯಾಧೀಶರು ಡಿಕ್ರಿಯ ಒಂದು ಪ್ರತಿಯನ್ನು ರ‍್ಯಾನ್ಸಿಗೆ ಕೊಡಮಾಡಿದಾಗ ಏರಿಲಾಳ ಧ್ವನಿ ಅವರನ್ನು ತಡೆಯಿತು. ಗಂಡಸರಿಬ್ಬರೂ ಅವಳ ಕಡೆ ನೋಡಿದರು.

ನ್ಯಾಯಾಧೀಶರೆ, ಆ ಕಾಗದವನ್ನು ಅವನಿಗೆ ಈಗಲೆ ಕೊಡಬೇಡಿ. ಇನ್ನೂ ಎಲ್ಲವೂ ನಿರ್ಣಯವಾಗಿಲ್ಲ. ಮೊದಲು ನನ್ನ ಹಕ್ಕುಗಳೆಲ್ಲವೂ ಮಾನ್ಯವಾಗಬೇಕು. ನನಗೆ ಚರಿತಾರ್ಥದ (ಅಶನಾರ್ಥ) ಹಣ ಬರಬೇಕು. ಹೆಂಡತಿಗೆ ಒಂದೇ ಒಂದು ಕುರುಡು ಕಾಸನ್ನೂ ಕೊಡದೆ ಗಂಡ ಅವಳನ್ನು ಬಿಟ್ಟುಬಿಡುವುದು ಸರಿಯಲ್ಲ. ನಾನು ಹಾಗ್‌ಬೆಕ್ ಗುಡ್ಡದ ಮೇಲಿರುವ ನನ್ನ ಅಣ್ಣನ ಮನೆಗೆ ಹೋಗಲಿದ್ದೇನೆ. ನನಗೆ ಹಾಕಿಕೊಳ್ಳಲು ಬೂಟ್ಸು ಬೇಕು, ನಸ್ಯ ಬೇಕು ಮತ್ತು ಇನ್ನೂ ಕೆಲವು ವಸ್ತುಗಳು ಬೇಕು. ರ‍್ಯಾನ್ಸಿಗೆ ವಿವಾಹವಿಚ್ಛೇದನ ಬೇಕು ಎಂದರೆ ಆತ ಪರಿಹಾರ ಹಣ ಕೊಡಲಿ," ಏರಿಲಾ ಹೇಳಿದಳು.

ರ‍್ಯಾನ್ಸಿ ಈ ಮಾತು ಕೇಳಿ ದಿಙ್ಮೂಢನಾಗಿ ಹೋದ "ವಿವಾಹವಿಚ್ಛೇದನ ಪ್ರಸ್ತಾಪ ಬಂದಾಗ ಪರಿಹಾರಹಣದ ಸುದ್ದಿ ಬಂದಿರಲೇ ಇಲ್ಲ. ಹೆಂಗಸರ ಸ್ವಭಾವವೇ ಹೀಗೆ: ಅಕಸ್ಮಾತ್ತಾಗಿ ಇಲ್ಲದ್ದೊಂದು ಡೊಂಕು ತರುತ್ತಾರೆ."

ಏರಿಲಾಳ ಬೇಡಿಕೆಯ ಬಗ್ಗೆ ನ್ಯಾಯಸಮ್ಮತ ತೀರ್ಮಾನ ಸಿಗಬೇಕಾದದ್ದು ಯೋಗ್ಯ ಎಂದು ವಿಡಪ್‌ರಿಗೆ ಅನಿಸಿತು. ಆದರೆ ಕಾಯದೆ ಪಂಡಿತರು ಈ ಪರಿಹಾರ ಧನದ ವಿಷಯದಲ್ಲೂ ಮೌನವನ್ನೇ ತಾಳಿದ್ದರು. ಏನು ಮಾಡುವುದು? ಏರಿಲಾ ಬರಿಗಾಲಿನಲ್ಲಿಯೆ ಇದ್ದಳು. ಹಾಗ-ಬೇಕ್ ಗುಡ್ಡದ ದಾರಿ ಕಡಿದಾಗಿ ಕಲ್ಲುಗಳಿಂದ ತುಂಬಿತು.

ಅವರು ಅಧಿಕಾರವಾಣಿಯಿಂದ ಕೇಳಿದರು: "ಏರಿಲಾ ಬಿಲ್ಬ್ರೊ, ನಿನ್ನ ಅಭಿಪ್ರಾಯದಲ್ಲಿ ಯೋಗ್ಯ ಪರಿಹಾರ ಧನ ಎಂದರೆ ಎಷ್ಟು?"

"ಬೂಟ್ಸು ಮತು ಇತರ ಎಲ್ಲ ಸಾಮಾನುಗಳಿಗಾಗಿ ಐದು ಡಾಲರುಗಳು ಬೇಕಾಗಬಹುದು. ಐದು ಡಾಲರುಗಳೆಂದರೆ ಏನೂ ಹೆಚ್ಚಾಗಲಿಲ್ಲ. ನನಗೆ ಅಷ್ಟು ಪರಿಹಾರ ಧನ ಸಿಕ್ಕರೆ ನಾನು ಅಣ್ಣನ ಮನೆ ತಲುಪಿಯೇನು."

"ಹಾಂ! ಇದೇನೂ ಅನ್ಯಾಯವಾದ ಬೇಡಿಕೆಯಲ್ಲ. ರ‍್ಯಾನ್ಸಿ ಬಿಲ್ಬ್ರೊ, ವಿವಾಹ ವಿಚ್ಛೇದನ ಡಿಕ್ರಿ ಹೊರಡಿಸುವ ಮೊದಲು ನೀನು ವಾದಿಗೆ ಐದು ಡಾಲರು ಕೊಡಬೇಕೆಂದು ಕೋರ್ಟು ವಿಧಿಸುತ್ತದೆ" ಎಂದರು ವಿಡಪ್.

"ನನ್ನ ಹತ್ತರ ಒಂದು ಕಾಸೂ ಇಲ್ಲ. ಇದ್ದದ್ದನ್ನೆಲ್ಲ ನಿಮಗೆ ಕೊಟ್ಟಿದ್ದೇನೆ," ರ‍್ಯಾನ್ಸಿ ಭಾರವಾದ ಧ್ವನಿಯಲ್ಲಿ ಹೇಳಿದ.

ಆಗ ನ್ಯಾಯಾಧೀಶರು ತಮ್ಮ ಕನ್ನಡಕ

ಗಳಿಂದ ಉಗ್ರ ದೃಷ್ಟಿಯನ್ನು ರ್‍ಯಾನ್ಸಿಯ ಮೇಲೆ ಬೀರುತ್ತ "ನೀನು ಹಣ ಕೊಡದಿದ್ದರೆ ಕೋರ್ಟಿನ ಅಪಮಾನ ಮಾಡಿದಂತಾದೀತು," ಎಂದರು.

ರ್‍ಯಾನ್ಸಿ, "ನಾಳಿನ ತನಕ ಸಮಯವಿತ್ತರೆ ನಾನು ಹಣವನ್ನು ಹೇಗಾದರೂ ಎಲ್ಲಿಂದಲಾದರೂ ತಂದೇನು. ಪರಿಹಾರ ಕೊಡಬೇಕಾಗುವುದೆಂದು ನಾನು ಕನಸಿನಲ್ಲಿಯೂ ಎಣಿಸಿರಲಿಲ್ಲ," ಎಂದ.

"ಹುಂ! ನಾಳಿನ ತನಕ ಖಟ್ಲೆಯನ್ನು ಮುಂದಕ್ಕೆ ಹಾಕಲಾಗಿದೆ. ಆಗ ನೀವಿಬ್ಬರೂ ಕೋರ್ಟಿಗೆ ಹಾಜರಾಗಿ ಕೋರ್ಟಿನ ಅಪ್ಪಣೆ ಮನ್ನಿಸಬೇಕು. ಆಗ ವಿವಾಹ ವಿಚ್ಛೇದನ ಡಿಕ್ರಿ ಕೊಡಲಾಗುವುದು," ಇಷ್ಟೆಂದು ನ್ಯಾಯಾಧೀಶರು ಬಾಗಿಲ ಬಳಿ ಕುಳಿತು ಬೂಟು ಬಿಚ್ಚತೊಡಗಿದರು.

"ಇನ್ನು ನಾವು ಝಿಯಾ ಕಕ್ಕನ ಮನೆಗೆ ಹೋಗಿ ಅಲ್ಲಿ ರಾತ್ರಿ ಕಳೆಯುವುದೇ ವಾಸಿ" ಎಂದು ನಿರ್ಧರಿಸಿ ರ್‍ಯಾನ್ಸಿ ಚಕ್ಕಡಿಯನ್ನೇರಿದ. ಮತ್ತೊಂದು ಮಗ್ಗಲಿಂದ ಏರಿಲಾ ಚಕ್ಕಡಿಯನ್ನು ಏರಿದಳು. ಚಕ್ಕಡಿ ಗಡಗಡ ಸಪ್ಪಳಗೈಯುತ್ತ ಹೊರಟುಹೋಯಿತು.

ನ್ಯಾಯಾಧೀಶರು ಪೈಪ್ ಎಳೆದರು. ಸಂಜೆಯ ಸುಮಾರಿಗೆ ಅವರಿಗೆ ಅವರ ವಾರಪತ್ರಿಕೆ ಸಿಕ್ಕಿತು. ಮಬ್ಬುಗತ್ತಲಾಗುವ ವರೆಗೂ ಅವರದನ್ನು ಓದುತ್ತ ಕುಳಿತರು. ಆಮೇಲೆ ಮೇಲಿದ್ದ ಮೇಣಬತ್ತಿ ಹೊತ್ತಿಸಿ ಅದರ ಬೆಳಕಿನಲ್ಲಿ ಚಂದ್ರ ಮೂಡಿ ರಾತ್ರಿ ಊಟದ ಹೊತ್ತು ಬಂತೆಂದು ಸೂಚಿಸುವ ವರೆಗೂ ಪತ್ರಿಕೆಯನ್ನು ಓದಿದರು.

ಅವರೆದ್ದು ಮನೆಯ ಕಡೆ ಹೊರಟರು. ಅವರ ಹಾದಿಯಲ್ಲಿ ಒಂದು ದಟ್ಟವಾದ ಪೊದೆ ಇತ್ತು. ಅವರು ಅದರ ಸಮೀಪ ಬಂದಾಗ ಅದರ ಮರೆಯಿಂದ ಒಬ್ಬಾತ ಹೊರಬಿದ್ದು ಅವರ ಎದೆಗೆ ಬಂದೂಕು ಆನಿಸಿ ನಿಂತ. ಅವನು ಹ್ಯಾಟನ್ನು ಹುಬ್ಬಿನ ವರೆಗೂ ಕೆಳಗೆಳೆದುಕೊಂಡಿದ್ದ. ಹೆಚ್ಚು ಕಡಿಮೆ ಅವನ ಮುಖವನ್ನೆಲ್ಲ ಏನೊ ಒಂದು ವಸ್ತು ಮುಚ್ಚಿತ್ತು.

"ನಿನ್ನ ಹತ್ತಿರ ಇರುವ ಹಣವನೆಲ್ಲ ಮರು ಮಾತಾಡದೆ ಕೊಟ್ಟುಬಿಡು. ನಾನು ಉದ್ವಿಗ್ನನಾಗಿದ್ದು ಬಂದೂಕಿನ ಕುದುರೆಯ ಮೇಲಿರುವ ನನ್ನ ಬೆರಳುಗಳು ನಡುಗುತ್ತಿವೆ" ಎಂದ ಆ ಮನುಷ್ಯ.

"ನನ್ನ-ಹ-ಹತ್ತ-ರ ಐ-ಐದೇ ಡಾಲ—ರುಗಳಿವೆ" ನ್ಯಾಯಾಧೀಶರು ನೋಟನ್ನು ಕಿಸೆಯಿಂದ ಹೊರತೆಗೆಯುತ್ತ ತೊದಲಿದರು.

"ಅದನ್ನು ಮಡಿಚಿ ಸುರುಳಿ ಮಾಡಿ ಈ ಬಂದೂಕಿನ ನಳಿಗೆಯಲ್ಲಿಡು," ಅಪ್ಪಣೆ ಬಂತು.

ಸುರುಳಿಯಾದ ನೋಟು ಬಂದೂಕಿನ ನಳಿಗೆ ಸೇರಿತು. "ಇನ್ನು ನೀನು ಹೋಗಬಹುದು," ಕಳ್ಳ ಹೇಳಿದ.

ನ್ಯಾಯಾಧೀಶರ ಕಾಲುಗಳು ಸರಸರ ಹೆಜ್ಜೆ ಹಾಕಿದವು.

ಮರುದಿನ ರ್‍ಯಾನ್ಸಿಯ ಚಕ್ಕಡಿ ಬಂತು. ಇವರು ಬರುತ್ತಾರೆಂಬ ನಿರೀಕ್ಷೆಯಿದ್ದುದರಿಂದ ನ್ಯಾಯಾಧೀಶರು ಬೂಟು ಹಾಕಿಕೊಂಡೇ ಕುಳಿತಿದ್ದರು. ಅವರ ಸಮ್ಮುಖದಲ್ಲಿ ರ್‍ಯಾನ್ಸಿ ಹೆಂಡತಿಯ ಕೈಯಲ್ಲಿ ಐದು ಡಾಲರುಗಳ ನೋಟೊಂದನ್ನು ಇಟ್ಟ. ನ್ಯಾಯಾಧೀಶರ ಕಣ್ಣುಗಳು ಅದನ್ನು ದಿಟ್ಟಿಸಿ ನೋಡಿದವು. ಬಂದೂಕಿನ ನಳಿಗೆಯಲ್ಲಿಟ್ಟ ನೋಟಿನಂತೆ ಅದು ಸುರುಳಿ ಸುತ್ತಿಕೊಂಡಿತ್ತು. ಆದರೆ ನ್ಯಾಯಾಧೀಶರು ಏನನ್ನೂ ಹೇಳಲಿಲ್ಲ. ಬೇರೆ ನೋಟುಗಳೂ ಸುರುಳಿ ಸುತ್ತಿಕೊಳ್ಳಬಾರದೆಂದೇನೂ ಇಲ್ಲವಲ್ಲ. ಅವರು ಇಬ್ಬರ ಕೈಗೂ ವಿವಾಹವಿಚ್ಛೇದನದ ಡಿಕ್ರಿಯ ಒಂದೊಂದು ಪ್ರತಿ ಕೊಟ್ಟರು. ಗಂಡಹೆಂಡಿರಿಬ್ಬರೂ ಸ್ವಾತಂತ್ರ್ಯದಾನವನ್ನೀಯುವ ಆ ಕಾಗದಗಳನ್ನು ಸಾವಕಾಶವಾಗಿ ಮಡಿಚುತ್ತ ಬೆಪ್ಪರಂತೆ ನಿಂತಿದ್ದರು. ಏರಿಲಾ ರ್‍ಯಾನ್ಸಿಯತ್ತ ಮುಗ್ಧ ಆದರೆ ತೀರ ಸಂಕೋಚದ ನೋಟವನ್ನು ಬೀರಿದಳು.

"ನೀನು ತಿರುಗಿ ಮನೆಗೆ ಹೋಗುವಿ ಎಂದು

ತಿಳಿದಿದ್ದೇನೆ. ಶೆಲ್ಫಿನ ಮೇಲೆ ಇರುವ ಟಿನ್ನಿನ ಡಬ್ಬಿಯಲ್ಲಿ ಬ್ರೆಡ್ ಇದೆ. ನಾಯಿಗಳಿಗೆ ಸಿಗದಿರಲೆಂದು ಮಾಂಸದ ತುಣುಕುಗಳನ್ನು ಪಾತ್ರೆಯಲ್ಲಿ ಮುಚ್ಚಿಟ್ಟಿದ್ದೇನೆ. ಇಂದು ರಾತ್ರಿ ಗಡಿಯಾರಕ್ಕೆ ಚಾವಿ ಕೊಡಲು ಮರೆಯಬೇಡ," ಎಂದಳಾಕೆ ರ್‍ಯಾನ್ಸಿಗೆ.

"ನೀನು ನಿನ್ನ ಅಣ್ಣನ ಮನೆಗೆ ಹೋಗುತ್ತೀತಾನೆ ?" ಏನೂ ಸಂಬಂಧವಿಲ್ಲದವರಂತೆ ರ್‍ಯಾನ್ಸಿ ಹೇಳಿದ.

"ರಾತ್ರಿಯಾಗುವುದರೊಳಗಾಗಿ ಅಲ್ಲಿಗೆ ಹೋಗಬೇಕೆಂದಿದ್ದೇನೆ. ಅವರೇನೂ ಸಂಭ್ರಮದಿಂದ ನನ್ನನ್ನು ಸ್ವಾಗತಿಸುವುದಿಲ್ಲವೆಂದು ಬಲ್ಲೆ. ಆದರೆ ನಾನು ಹೋಗಬಹುದಾದ ಮತ್ತಾವ ಸ್ಥಳವೂ ಇಲ್ಲ. ಒಳ್ಳೇದು, ನಿನಗೇನೂ ಅಸಮಾಧಾನವೆನಿಸುವುದಿಲ್ಲವೆಂದಾದರೆ ಹೋಗಿ ಬರುತ್ತೇನೆ ಎನ್ನುತ್ತೇನೆ."

ಹುತಾತ್ಮನ ಧ್ವನಿಯಲ್ಲಿ ರ್‍ಯಾನ್ಸಿ ಹೇಳಿದ: "ಹೋಗಿ ಬರುತ್ತೇನೆ ಎಂದರೆ ಅಸಮಾಧಾನವಾಗಲು ನಾನೇನೂ ಕೀಳು ಪ್ರಾಣಿಯಲ್ಲ. ಇನ್ನು ನಿನಗೇನಾದರೂ ಹಾಗೆ ಹೇಳಲು ಮನಸ್ಸಿಲ್ಲವೆಂದಾದರೆ . . ."

ಏರಿಲಾ ಮೌನವಾಗಿದ್ದಳು. ಅವಳು ಕೈಲಿದ್ದ ಐದು ಡಾಲರಿನ ನೋಟನ್ನೂ ವಿವಾಹ ವಿಚ್ಛೇದನ ಡಿಕ್ರಿಯ ಕಾಗದವನ್ನೂ ಮಡಚಿ ತನ್ನ ಬ್ಲೌಜಿನ ಒಳಗಡೆ ಎದೆಯ ಹತ್ತಿರ ಇಟ್ಟಳು. ನೋಟು ಕಣ್ಮರೆಯಾಗುವುದನ್ನು ಬೆಂಜಾ ವಿಡಪ್‌ರು ಸಂಕಟದಿಂದ ನೋಡಿದರು.

"ಬಹುಶಃ ಇಂದು ರಾತ್ರಿ ನಿನಗೆ ಮನೆಯಲ್ಲಿ ಏಕಾಂತ ವಾಸದಿಂದ ಬೇಸರ ಎನಿಸಬಹುದು, ರ್‍ಯಾನ್ಸಿ" ಏರಿಲಾ ಹೇಳಿದಳು.

ಸೂರ್ಯಪ್ರಕಾಶದಲ್ಲಿ ಸ್ವಚ್ಛವಾಗಿ ಕಾಣುತ್ತಿದ್ದ ಕಂಬರ್‌ಲ್ಯಾಂಡಿನತ್ತ ರ್‍ಯಾನ್ಸಿ ಕಣ್ಣುಗಳನ್ನು ಹಾಯಿಸಿದ. ಆತ ಏರಿಲಾಳ ಕಡೆ ನೋಡದೆ, "ಹೌದು. ಬೇಸರವಾದೀತು. ಆದರೆ ಒಬ್ಬರಿಗೊಬ್ಬರು ಸಿಟ್ಟು ಕೆರಳಿ ಅವರು ವಿವಾಹ ವಿಚ್ಛೇದನ ಆಗಬೇಕು ಎಂದ ಮೇಲೆ ಅವರನ್ನೇನು ಕಟ್ಟಿಹಾಕಲು ಬರುತ್ತದೆಯೆ?" ಎಂದ.

ಏರಿಲಾ ಅಲ್ಲಿದ್ದ ಕಟ್ಟಿಗೆಯ ಸ್ಟೂಲನ್ನುದ್ದೇಶಿಸಿ ಮಾತಾಡುವವಳಂತೆ, "ವಿವಾಹ ವಿಚ್ಛೇದನ ಆಗಬೇಕೆಂದು ಬೇರೆಯವರೂ ಬಯಸಿದ್ದರು. ಮತ್ತೆ ಒಬ್ಬರಿಗೆ ಇನ್ನೊಬ್ಬರು ಇರಬೇಕು ಎಂಬ ಇಚ್ಛೆಯೂ ಇರಲಿಲ್ಲ" ಎಂದಳು.

"ಹಾಗೆಂದು ಯಾರೂ ಹೇಳಲಿಲ್ಲ",

"ಹೇಳಿದರೆಂದು ಯಾರು ಹೇಳಿದರು ? ನಾನಿನ್ನು ಅಣ್ಣನ ಮನೆಗೆ ಹೊರಡುತ್ತೇನೆ."

"ಆ ಹಳೆಯ ಗಡಿಯಾರಕ್ಕೆ ಯಾರು ಚಾವಿ ಕೊಟ್ಟಾರು!"

"ಅಂದರೆ ನಿನ್ನ ಸಂಗಡ ಚಕ್ಕಡಿಯಲ್ಲಿ ಬಂದು ನಾನದಕ್ಕೆ ಚಾವಿ ಕೊಡಬೇಕೆನ್ನುವಿಯಾ ರ್‍ಯಾನ್ಸಿ ?"

ಆ ಗುಡ್ಡಗಾಡಿನ ಮನುಷ್ಯನ ಮುಖದ ಮೇಲೆ ಯಾವ ಭಾವನೆಯೂ ಕಾಣಿಸಲಿಲ್ಲ ಆದರೆ ಅವನ ಕೈಮುಂದಕ್ಕೆ ಚಾಚಿ ಏರಿಲಾಳ ಕೈಯನ್ನು ಹಿಡಿಯಿತು. ಶಿಲಾಪ್ರತಿಮೆಯ ಮುಖದಂತಿದ್ದ ಅವಳ ಮುಖದಲ್ಲಿ ಕೋಮಲ ಭಾವ ಒಮ್ಮೆ ಮೂಡಿ ಬಂದು ಅದನ್ನು ಬೆಳಗಿತು.

"ಇನ್ನು ಮೇಲೆ ನನ್ನ ನಾಯಿಗಳು ನಿನಗೆ ಏನೇನೂ ತೊಂದರೆ ಕೊಡುವುದಿಲ್ಲ. ನಾನು ಸ್ವಲ್ಪ ಕೀಳುತನವನ್ನೆ ತೋರಿಸಿದೆ ಎಂದೆನಿಸುತ್ತದೆ. ನೀನು ಬಂದು ಗಡಿಯಾರಕ್ಕೆ ಚಾವಿ ಕೊಡು ಏರಿಲಾ," ರ್‍ಯಾನ್ಸಿ ಹೇಳಿದ.

"ನಮ್ಮ ಆ ಗುಡಿಸಲಿಗಾಗಿಯೇ ನನ್ನ ಜೀವ ಸುತ್ತಾಡುತ್ತಿದೆ. ನಾನಿನ್ನು ಮೇಲೆ ಎಂದೆಂದೂ ಸಿಟ್ಟಿಗೇಳುವುದಿಲ್ಲ. ನಡಿ ರ್‍ಯಾನ್ಸಿ, ಸಂಜೆಯಾಗುವುದರೊಳಗೆ ಮನೆ ಸೇರೋಣ," ಏರಿಲಾ ಪಿಸುದನಿಯಲ್ಲಿ ಹೇಳಿದಳು.

ಅವರಿಬ್ಬರೂ ತಾನಿರುವುದನ್ನು ಮರೆತು ಬಾಗಿಲತ್ತ ಹೊರಡಲು, ನ್ಯಾಯಾಧೀಶ ಬೆಂಜಾ ವಿಡಪ್‌ರು ಅವರನ್ನು ತಡೆದರು:

"ಟೆನೆಸ್ಸಿ ಸರಕಾರದ ಪರವಾಗಿ ನೀವು ಅದರ

ಕಾಯದೆ-ಕಾನೂನುಗಳನ್ನು ಮುರಿಯಬಾರದು ಎಂದು ವಿಧಿಸುತ್ತೇನೆ. ಎರಡು ಪ್ರೇಮಿ ಹೃದಯಗಳಲ್ಲಿ ಮೂಡಿ ಬಂದ ಭಿನ್ನಾಭಿಪ್ರಾಯ, ಜಗಳಗಳು ಬಗೆಹರಿದರೆ ಈ ಕೋರ್ಟಿಗೆ ಸಂತೋಷವೇ ಆಗುವುದಾದರೂ ಅದು ರಾಜ್ಯದ ನೀತಿಮತ್ತೆಯನ್ನೂ ಗಾಂಭೀರ್ಯವನ್ನೂ ಕಾಯ್ದುಕೊಳ್ಳಬೇಕಾಗಿದೆ. ನೀವಿಬ್ಬರೂ ಈಗ ಗಂಡಹೆಂಡಿರಲ್ಲ ಎಂದು ಕೋರ್ಟು ನಿಮಗೆ ನೆನಪು ಮಾಡಿಕೊಡುತ್ತದೆ. ನಿಮ್ಮ ವಿವಾಹವಿಚ್ಛೇದನವಾಗಿರುವುದರಿಂದ ನೀವು ವೈವಾಹಿಕ ಜೀವನದ ಸುಖಸಂತೋಷಗಳನ್ನು ಅನುಭವಿಸಲು ಹಕ್ಕುಳ್ಳವರಾಗಿಲ್ಲ."

ಏರಿಲಾ ರ‍್ಯಾನ್ನಿಯ ಭುಜವನ್ನು ಹಿಡಿದುಕೊಂಡಳು. ಜೀವನದ ಪಾಠವನು ಕಲಿತ ಕ್ಷಣದಲ್ಲಿಯೆ ಅವಳು ಗಂಡನನ್ನು ಕಳೆದುಕೊಳ್ಳಬೇಕೆ?

ನ್ಯಾಯಾಧೀಶರು ತಮ್ಮ ಮಾತು ಮುಂದುವರಿಸಿದರು: "ಆದರೆ ವಿವಾಹವಿಚ್ಛೇದನ ಡಿಕ್ರಿಯನ್ನು ಬದಲು ಮಾಡಲು ಕೋರ್ಟು ಸಿದ್ಧವಿದೆ. ಪುನಃ ವಿವಾಹ ವಿಧಿ ಜರುಗಿಸಲು ಅದು ಸಿದ್ಧವಿದೆ. ಹಾಗೆ ಪಕ್ಷಕಾರರು ಬಯಸಿದಲ್ಲಿ ಅವರು ಐದು ಡಾಲರು ಫೀ ಕೊಟ್ಟು ವಿವಾಹವನ್ನು ಸಾಂಗಗೊಳಿಸಿಕೊಳ್ಳಬಹುದು."

ಅವರ ಮಾತುಗಳಲ್ಲಿ ಏರಿಲಾಳಿಗೆ ಆಶೆಯ ಸಾಗರವೆ ಕಂಡಿತು. ಅವಳ ಕೈ ಬ್ಲೌಜಿನ ಒಳಗೆ ಹೋಯಿತು. ಐದು ಡಾಲರಿನ ನೋಟು ಪಾರಿವಾಳದಂತೆ ಹಾರಿಬಂದು ನ್ಯಾಯಾಧೀಶರ ಮೇಜಿನ ಮೇಲೆ ಕುಳಿತಿತು. ರ‍್ಯಾನ್ನಿಯ ಕೈ-ಹಿಡಿದುಕೊಂಡು ನಿಂತಿದ್ದ ಏರಿಲಾಳ ಒಳಸೇರಿದ್ದ ಗಲ್ಲ ನ್ಯಾಯಾಧೀಶರು ವಿವಾಹವಿಧಿ ಜರುಗಿಸುತ್ತಿದ್ದಂತೆ ಕೆಂಪು ಬಣ್ಣ ತಾಳಿತು.

ಚಕ್ಕಡಿಯನ್ನೇರಲು ರ‍್ಯಾನ್ನಿ ಅವಳಿಗೆ ಸಹಾಯ ಮಾಡಿದ.

ನ್ಯಾಯಾಧೀಶರು ತಮ್ಮ ಕಚೇರಿಯ ಬಾಗಿಲಲ್ಲಿ ಕುಳಿತು ಬೂಟು ಬಿಚ್ಚಿದರು. ಜಾಕೀಟಿನ ಕಿಸೆಯಲ್ಲಿದ್ದ ಐದು ಡಾಲರಿನ ನೋಟಿನ ಮೇಲೆ ಅವರು ಕೈಯಾಡಿಸಿದರು. ತಮ್ಮ ಪೈಪ್ ಸೇದುತ್ತ ಅವರು ಕುಳಿತಾಗ ರಸ್ತೆಯಲ್ಲಿ ಆ ಹಂಡಬಂಡ ಕೋಳಿ "ಕ್ಲಕ್ ಕ್ಲಕ್" ಮಾಡುತ್ತ ಅಡ್ಡಾಡುತ್ತಲಿತ್ತು. *



## ವಾಗ್ಬಾಣಗಳು

ನಿಮಿಷಗಳನ್ನು ಟಕ್‌ಟಕ್ಕೆಂದು ಗುರುತಿಸುತ್ತ ಗಂಟೆಯನ್ನು ಮಾತ್ರ ಎಂದೂ ತೋರಿಸದ ಗಡಿಯಾರದಂತೆ ಆತ ಮಾತಾಡುತ್ತಾನೆ. —ಜಾನ್ಸನ್

* * *

ಒಂದು ವಿಷಯದಲ್ಲಾದರೂ ಸ್ತ್ರೀಪುರುಷರಲ್ಲಿ ಏಕಮತವಿದೆ: ಇಬ್ಬರೂ ಹೆಂಗಸರನ್ನು ನಂಬುವುದಿಲ್ಲ. — ಮೆಂಕೆನ್

* * *

ಇತರರಿಗೆ ಮುಸಿ ಹಚ್ಚಿದರೆ ತಾವು ವೈತೊಳೆದುಕೊಂಡಂತಾಯಿತೆಂದು ಕೆಲವರು ಎಣಿಸುತ್ತಾರೆ. — ಸ್ವಾನ್ ಸ್ವಾನ್‌ಸನ್

# ಇದುವೆ ಜೀವ, ಇದು ಜೀವನ

ನಾನು ಕುಂದಾಪುರದಿಂದ ಮಾಬುಕಳಕ್ಕೆ ಬಸಿನಲ್ಲಿ ಹೊರಟಿದ್ದೆ. ರಸ್ತೆಯನ್ನು ಅಗಲಗೊಳಿಸುವ ಕಾರ್ಯ ನಡೆಯುತ್ತಿತ್ತು. ಮಾರ್ಗದ ಬದಿಗಳಲ್ಲಿ ಸುರಿದ ಕೆಂಪು ಮಣ್ಣು ಮಳೆ ಬಂದೊಡನೆಯೇ ಕರಗಿ ಕೆಂಪು ರಾಡಿಯಾಗಿತ್ತು. ಬಸ್ಸು ಬದಿಯಲ್ಲಿದ್ದವರ ನೈ ಬಟ್ಟೆಗಳ ಮೇಲೆಲ್ಲಾ ಕೆಸ್ನೀರನ್ನು ಚೆಲ್ಲುತ್ತಾ, ತಮಾಷೆ ನೋಡುತ್ತಾ ಮುಂದುವರಿಯುತ್ತಿತ್ತು. ಕೋಟೇಶ್ವರ—ಆನೆಗುಡ್ಡೆಗಳ ನಡುವೆ ಇಕ್ಕಟ್ಟಾದ ಮಾರ್ಗದಲ್ಲಿ ಒಂದು ಕಡೆ ಓರ್ವ ವೈದಿಕ ಬ್ರಾಹ್ಮಣರು ಶುಭ್ರ ವಸ್ತ್ರಧರಿಸಿ ಬಸ್ಸಿಗೆ ದೂರದಲ್ಲಿ ನಡೆದು ಬರುತ್ತಿದ್ದರು. ಬಸ್ಸು ಪೂರ್ಣ ವೇಗದಿಂದ ಬರುತ್ತಿದ್ದುದನ್ನು ದೂರದಿಂದಲೇ ಕಂಡ ಅವರು ರಸ್ತೆಯ ಬದಿಯಲ್ಲೇ ನಿಂತು ಕೈ ತೋರಿಸಿದರು. ವೇಗ ಕಡಿಮೆಯಾಗಿ ಮೆಲ್ಲಗೆ ಅವರ ಬಳಿ ಬಂದು ನಿಂತಿತು ಬಸ್ಸು. "ಎಲ್ಲಿಗೆ?" ಎಂದು ಕೇಳಿದ ಕಂಡಕ್ಟರ್. "ಎಲ್ಲಿಗಿಲ್ಲ ಹೋಗಿ" ಎಂದು ಶಾಂತವಾಗಿ ಉತ್ತರಿಸಿ ತಮ್ಮ ದಾರಿ ಹಿಡಿದು ಹೊರಡಲನುವಾದರು ಆ ಬ್ರಾಹ್ಮಣೋತ್ತಮರು.

"ಮತ್ಯಾಕೆ ಬಸ್ಸು ನಿಲ್ಲಿಸಿದ್ದು? ಕುಶಾಲಿಗೊ?" ಎಂದು ದರ್ಪದಿಂದ ಕೇಳಿದ ಕಂಡಕ್ಟರ್. "ಕುಶಾಲಿಗಲ್ಲ— ಅಗತ್ಯವಾಗಿ. ಇಲ್ಲೊಂದು ಕಡೆ ಮದುವೆಗೆ ಹೋಗುತ್ತಿದ್ದೇನೆ. ನಿಮ್ಮ ಬಸ್ಸು ಅಷ್ಟು ಜೋರಾಗಿ ನನ್ನ ಪಕ್ಕದಿಂದ ಹಾದುಹೋಗಿದ್ದರೆ ನನ್ನ ಈ ಶುಭ್ರ ಬಟ್ಟೆಯ ಗತಿಯೇನಾಗುತ್ತಿತ್ತು? ಅದಕ್ಕಾಗಿಯೇ ಸ್ವಲ್ಪ ಜಾಗ್ರತೆ ವಹಿಸಿ-ಬಸ್ಸು ನಿಲ್ಲಿಸಿದೆ" ಎಂದು ಶಾಸ್ತ್ರಿಗಳು ನಡೆದೇಬಿಟ್ಟರು.

—ಬಿ. ಸಂಜೀವ ಶೆಣೈ, ಉಡುಪಿ

ಮೂರು ಮಂದಿ ಗೆಳೆಯರೊಡನೆ ನಾನು ಅಭ್ಯಾಸ ಮಾಡುತ್ತಿದ್ದೆ. ಚಾಮರಾಜ ಪೇಟೆಯಲ್ಲಿ ಮಹಡಿಮೇಲಿನ ರೂಮೊಂದನ್ನು ಬಾಡಿಗೆಗೆ ಹಿಡಿದಿದ್ದೆವು. ಮನೆಯ ಮಾಲಕರ ಮಲಗುವ ಮನೆ ಹಾಗೂ ನಮ್ಮ ಕೊಠಡಿಯನ್ನು ಗೋಡೆಯೊಂದು ಬೇರ್ಪಡಿಸಿತ್ತು, ಅಷ್ಟೆ.

ನಾಲ್ಕು ಮಂದಿ ಒಂದು ಚಿಕ್ಕ ರೂಮಿನಲ್ಲಿ ಸೇರಿದ್ದೆವು. ಆದರಲ್ಲಿ ಇಪ್ಪತ್ತರೊಳಗಿನ ವಿದ್ಯಾರ್ಥಿಗಳು; ಕೇಳಬೇಕೆ? ಖಾನಾವಳಿಯಲ್ಲಿ ಊಟ ಮುಗಿಸಿ ಬಂದನಂತರ ಹರಟೆಯ ಪೂರ ಎಡೆತಡೆ ಇಲ್ಲದೆ ಹರಿಯುತ್ತಿತ್ತು. ಅತಿ ಸ್ನೇಹದ ಕುರುಹಾದ ಹುಸಿ ಜಗಳ, ಕುಸ್ತಿ ಸಾಮಾನ್ಯವಾಗಿದ್ದವು. ಮನೆಯವರಿಗೆ ಅಂಜಿ ಇವೆಲ್ಲ ಮೊದಮೊದಲು ಮಂದ್ರಸ್ಥಾಯಿಯಲ್ಲೇ ಜರುಗುತ್ತಿದ್ದವು. ಆದರೆ ಮನೆಯವರಾರೂ ಗಮನಿಸಿದಂತೆ ತೋರಲಿಲ್ಲ.

ಆದಿನ ಬೆಳಿಗ್ಗೆ ಹಲ್ಲುಜ್ಜುತ್ತಾ ಅಂಗಳದಲ್ಲಿ ನಿಂತಿದ್ದೆ. ನಾಲ್ಕೈದು ಕೋತಿಗಳು ಛಾವಣಿ ಮೇಲೆ ಕುಳಿತು ಆಡುತ್ತಿದ್ದವು. ಮನೆಯ ಮಾಲಿಕರು ಟೂತ್ ಬ್ರಷ್ ಹಿಡಿದು ಅಂಗಳಕ್ಕೆ ಬಂದರು.

"ಏನ್ ಸಾರ್, ಕೋತಿ ಸಾಕಿದೀರಾ?" ತಮಾಷೆಗಾಗಿ ಕೇಳಿದೆ.

ಅವರು ನಗುತ್ತ ಹೇಳಿದರು: "ಛೇ ಛೇ, ನಾವು ಸಾಕಿಲ್ಲ. ಆದರೆ ರೂಮು ಬಾಡಿಗೆ ಕೊಟ್ಟಿದ್ದೇವೆ."

—ಕೆ. ಬಿ. ಕೇಶವಮೂರ್ತಿ

ಅಂದು ರಾತ್ರಿ ಸುಮಾರು ಎರಡು ಎರಡೂವರೆ ಗಂಟೆಯಾಗಿರಬಹುದು. ಅಡುಗೆ ಮನೆಯಲ್ಲಿ ಧಪ ಧಪ ಸಪ್ಪಳವಾಗತೊಡಗಿತು. ಊರಲ್ಲಿ ಕಳ್ಳಕಾಕರ ಭಯವಿದ್ದ ಮೂಲಕ ನನಗೆ ಕೂಡಲೇ ಎಚ್ಚರಿಕೆಯಾಯಿತು. ನಾನು ತುಸು ಅಂಜಿದವನಾದರೂ ಧೈರ್ಯಮಾಡಿಕೊಂಡು ದೀಪವನ್ನು ದೊಡ್ಡದು ಮಾಡಿ ಅಡುಗೆ ಮನೆ ಬಾಗಿಲು ತೆರೆಯಲು ಸನ್ನದ್ಧನಾದೆ. ಹೃದಯ ಬಡಿಯುತ್ತಿದ್ದರೂ ಮೆಲ್ಲನೇ ಬಾಗಿಲು ತೆರೆದು ದೀಪ ಹಿಡಿದು ಒಳಗೆ ನೋಡಿದೆ.

ಒಂದು ದೊಡ್ಡ ಬಾವುಗವು (ಗಂಡು ಬೆಕ್ಕು) ಲೋಟದೊಳಗಿದ್ದ ಹಾಲನ್ನು ಕುಡಿಯಲು ಹೋಗಿ ಅದರಲ್ಲಿ ತನ್ನ ಮುಖವನ್ನು ಸಿಕ್ಕಿಸಿಕೊಂಡು ಮುಂದುಗಾಣದೇ ಅತ್ತಿತ್ತ ಅಡ್ಡಾಡತೊಡಗಿತ್ತು. ಅದರ ಕತ್ತಿನಿಂದ ಲೋಟವನ್ನು ಕಳಚಿ ತೆಗೆಯಲು ವಿಶ್ವಪ್ರಯತ್ನಮಾಡಿದೆ. ಆದರೆ ಸಾಧ್ಯವಾಗದ ಮೂಲಕ ಹೌಹಾರಿದೆ. ಬಾಗಿಲು ತೆರೆದು ಆ ಬಾವುಗವನ್ನು ಹಾಗೆಯೇ (ಲೋಟ ಸಹಿತ) ಹೊರಗೆ ಹಾಕಬೇಕೆಂಬ ವಿಚಾರ ಬಂದಿತು. ಆದರೆ ಹಾಗೆಯೇ ಅದನ್ನು ಬಿಟ್ಟರೆ ಎಲ್ಲಿಯಾದರೂ ಬಿದ್ದು ಸತ್ತು ಹೋದೀತೆಂದು ಹೆದರಿಕೆಯಾಯಿತು. ಮುಂಜಾನೆಯವರೆಗೆ ಬಿಟ್ಟು ನಂತರ ನೋಡೋಣ ಎಂದು ಅದನ್ನು ಅಡುಗೆ ಮನೆಯಲ್ಲಿಯೇ ಬಿಟ್ಟು ಬಾಗಿಲನ್ನು ಭದ್ರವಾಗಿ ಮುಚ್ಚಿದೆ.

ಮುಂಜಾನೆ ಸರಿಯಾಗಿ ಏಳು ಗಂಟೆಗೆ ನಮ್ಮ ಹಾಲಿನವನು ಹಾಲು ಕೊಡಲು ಬಂದ. ಅವನಿಗೆ ನನ್ನ ತಾಪತ್ರಯವನ್ನು ಹೇಳಿಕೊಂಡೆ. ಕೂಡಲೇ ಅವನು ವಿಚಾರ ಮಾಡಿ ಒಂದು ಹಗ್ಗವನ್ನು ಇಸಿದುಕೊಂಡು ಅದನ್ನು ಲೋಟಕ್ಕೆ ಕಟ್ಟಿ ಲೋಟ ಸಹಿತ ಬಾವುಗವು ಕೆಳಗೆ ನೇತಾಡುವಂತೆ ಮೇಲಕ್ಕೆ ಕಟ್ಟಿದ. ನಂತರ ಬಾವುಗವು ೫-೧೦ ನಿಮಿಷಗಳ ವರೆಗೆ ಜೋರಿನಿಂದ ಜೋತಾಡಿ ದೊಪ್ಪನೇ ಕೆಳಕ್ಕೆ ಬಿದ್ದು ಪಲಾಯನ ಹೇಳಿತು.

—ಎಂ. ಕೆ. ಜೋಶಿ, ಬಿ.ಎ.

ನಾನು ಧಾರವಾಡದಿಂದ ಈ ಊರಿಗೆ ನೌಕರಿಗೆ ಬಂದು ಎಂಟು ದಿವಸಗಳು ಸಂದಿದ್ದವು. ಅಂದು ನಮ್ಮ ದವಾಖಾನೆಗೆ ರೈತನೊಬ್ಬ ಆಮಾಂಶ ರೋಗದಿಂದ ಬಳಲುವ ಜಾತಿ ಹೋರಿಯೊಂದನ್ನು ತಂದಿದ್ದ. ನಾನು ಅದಕ್ಕೆ ಮದ್ದು ಕುಡಿಸುತ್ತಿರುವಲ್ಲಿ ಆ ಬಡ ರೈತ "ಯಪ್ಪಾ, ಈ ಹೋರಿಗೆ ಬ್ಯಾನಿ ಜಲ್ದಿ ಕಡಿಮೆಯಾಗುತ್ತದs ಇಲ್ಲರೀss" ಎಂದು ಸಹಜವಾಗಿ ಕೇಳಿದ. "ನೀವೇನು ಯೋಚಿಸದಿರಿ ಯಜಮಾನರೆ, ಸರಿಹೋಗುತ್ತದೆ" ಎಂದು ನಾನು ಧೈರ್ಯ ಹೇಳಿದೆ. ನನ್ನ ನುಡಿಯನ್ನು ಕೇಳಿ ಆತ ಕಣ್ಣುಗಳಲ್ಲಿ ಒಮ್ಮೆಲೆ ಹನಿದುಂಬಿ "ಯಪ್ಪಾ, ಹೆಂಗ್ಯಾದರೂ ಮಾಡಿ ನನ್ನ ಹೋರಿಯನ್ನು, ಬದುಕಿಸಿರಿ ನಿಮಗೆ ಕೈ ಜೋಡಿಸುವೆ. ಈ ಬಡವನ ಬದುಕಿನ ಆಸರ ಎರಡು ಹೋರಿಯಪ್ಪಾ" ಎಂದು ಒಳ್ಳೆ ದೈನ್ಯದಿಂದ ಬೇಡಿದ. ಆತನ ದೀನ ನುಡಿಯನ್ನು ಕೇಳಿ ನನಗೆ ತುಂಬಾ ಆಶ್ಚರ್ಯವಾಯಿತು. ಪುನಃ ನಾನು "ನೀವೇನೂ ಯೋಚಿಸದಿರಿ, ಖಂಡಿತ ಸರಿ ಹೋಗುತ್ತದೆ" ಎಂದು ಧೈರ್ಯ ಹೇಳಿದೆ. ನನ್ನ ಧೈರ್ಯದ ನುಡಿಯನ್ನು ಕೇಳುತ್ತಿದ್ದಂತೆಯೇ ಆತನ ದುಃಖ ಇಮ್ಮಡಿಯಾಗುತ್ತಿತ್ತು. ನಾನು ಇವನಿಗೆ ಏನು ಹೇಳಬೇಕೋ ತಿಳಿಯದೆ ನಿಂತಿರುವಲ್ಲಿ ನಮ್ಮ ಆಫೀಸರರು ಬಂದು ನಡೆದ ಘಟನೆಯನ್ನರಿತು ಹೇಳಿದರು: "ಮಿಸ್ಟರ್, ಇಲ್ಲಿ ಸರಿ ಹೋಗುತ್ತದೆ ಎಂಬ ಶಬ್ದಕ್ಕೆ ಸತ್ತು ಹೋಗುತ್ತದೆ ಎಂದು ಅರ್ಥ."

—ಆಳವಾಯಿ ಮೋಹನ, ಅಮರಾದಿ

# ಬೇಕನ್:

## ತತ್ವಭ್ರಷ್ಟ ತತ್ವಜ್ಞಾನಿ ಶ್ರೇಷ್ಠ



ಈಳಂತೋಡಿ ರಾಮಕೃಷ್ಣ ಭಟ್ಟ

ಹೆಸರಾಂತ ಮನೆತನದಲ್ಲಿ ಹುಟ್ಟಿ, ಅಸಾಮಾನ್ಯ ಪ್ರತಿಭೆಯಿಂದ ಬೆಳೆದು, ಸಾಹಿತ್ಯಕ್ಕೆ ಉಜ್ವಲ ಕೊಡುಗೆಯನ್ನಿತ್ತು, ಲೋಕಕ್ಕೆ ತತ್ತ್ವಜ್ಞಾನದ ಬೆಳಕನ್ನು ನೀಡಿ, ತನ್ನ ಶ್ರೇಯಸ್ಸಿಗೆ ಕಾರಣನಾದ ಮಿತ್ರರನ್ನು ವಿಶ್ವಾಸಘಾತಕತನದಿಂದ ಕೊಲ್ಲಿಸಿ, ಲಂಚಗುಳಿತನವೇ ಮೊದಲಾದ ನೀಚ ಕೃತ್ಯಗಳ ದುಷ್ಕೀರ್ತಿಯಿಂದ ಮಡಿದ ಅದ್ಭುತ ಬಾಳುವೆ ತತ್ವಜ್ಞಾನಿ ಫ್ರಾನ್ಸಿಸ್ ಬೇಕನ್ನನಿಗೆ ಸೇರಿದುದು. ಸಾಹಿತಿ, ದಾರ್ಶನಿಕ, ರಾಜಕೀಯ ಮುತ್ಸದ್ದಿ, ಕಾನೂನು ತಜ್ಞ ಎಂದು ಹಲವಾರು ಮುಖಗಳ ಸಮ್ಮಿಳನವನ್ನು ಬೇಕನ್ನನ ಅತಿಮಾನುಷ ವ್ಯಕ್ತಿತ್ವದಲ್ಲಿ ಕಾಣುತ್ತೇವೆ.

ಇತಿಹಾಸದಲ್ಲಿ ಫ್ರಾನ್ಸಿಸ್ ಬೇಕನ್ನನ ಭದ್ರ ಸ್ಥಾನವನ್ನು ಕುರಿತು ಯಾರೂ ಎಂದೂ ಸಂದೇಹಪಟ್ಟಿಲ್ಲ. ಅವನು ಆಧುನಿಕ ತತ್ವಜ್ಞಾನದ ತಂದೆಯೆನಿಸಿದ್ದಾನೆ; ಆಧುನಿಕ ವಿಜ್ಞಾನಕ್ಕೂ ತಂದೆಯೆನಿಸಿದ್ದಾನೆ. ಅವನಿಗಿಂತ ೨೦೦೦ ವರ್ಷ ಹಿಂದೆ ಬಾಳಿದ ಮಹಾ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲನ ಸಿದ್ಧಾಂತಗಳ ದಾರಿಯಲ್ಲಿ ಗತಾನುಗತಿಕವಾಗಿ ಸಾಗಿ ಕಾಲು ತೊಡಕಿಸಿಕೊಂಡು ಹೊರಬರಲಾರದಾಗಿದ್ದ ತತ್ವಜ್ಞಾನ, ವಿಜ್ಞಾನಗಳನ್ನು ಕೆಸರಿನಿಂದ ಮೇಲೆತ್ತಿದಾತ ಬೇಕನ್ನನೇ. ವಿಜ್ಞಾನದಲ್ಲಿ ಪ್ರಯೋಗ–ಪರೀಕ್ಷೆಗಳಿಗೆ ಪ್ರಾಧಾನ್ಯ ತಂದುಕೊಟ್ಟಾತನೂ ಅವನೇ. ಅವನು ಇಂಗ್ಲೀಷ್ ಗದ್ಯದ ಶ್ರೇಷ್ಠ ಲೇಖಕನಾಗಿದ್ದ.

ಆದರೆ ಅವನ ಜೀವನ ಮಾತ್ರ ವಿರೋಧಾಭಾಸಗಳಿಂದ ತುಂಬಿತ್ತು. ದೊಡ್ಡ ಮನೆತನದಲ್ಲಿ ಹುಟ್ಟಿ, ಬಡತನದಲ್ಲಿ ಬಾಲ್ಯ ಕಳೆಯಬೇಕಾಗಿ ಬಂದ ಪ್ರತಿಭಾಶಾಲಿ ಮಹತ್ವಾಕಾಂಕ್ಷಿಯೊಬ್ಬನು ತನ್ನ-ಅಭೀಷ್ಟಸಾಧನೆಗಾಗಿ ಯಾವ ಮಟ್ಟಕ್ಕಿಳಿದಾನೆಂಬ ಅದು ತೋರಿಸುತ್ತದೆ.

ನಿಕೊಲಸ್ ಬೇಕನ್ನನ ಎರಡನೆಯ ಹೆಂಡತಿಯಲ್ಲಿ ಕೊನೆಯ ಮಗನಾಗಿ ಫ್ರಾನ್ಸಿಸ್ ಬೇಕನ್ನನು ೧೫೬೧ ಜನವರಿ ೨೨ ರಂದು ಜನಿಸಿದನು. ಆಗಾಗ್ಗೆ ಅವನ ಎಳೆಯ ಶರೀರವನ್ನು ಪೀಡಿಸುತ್ತಿದ್ದ ಅನಾರೋಗ್ಯವು ಅವನ ಅಸಾಮಾನ್ಯ ಪ್ರತಿಭಾಶಕ್ತಿಯ ಮೇಲೆ ಏನೂ ಪರಿಣಾಮಕಾರಿಯಾಗಲಿಲ್ಲ. ಹದಿಮೂರನೆಯ ಹರೆಯದಲ್ಲಿ ಬೇಕನ್ ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜನ್ನು ಸೇರಿ

ದನು. ಆದರೆ ಅಂದಿನ ವಿದ್ಯಾಭ್ಯಾಸಕ್ರಮವು ಅವನಿಗೆ ನಿರಾಶೆಯನ್ನುಂಟುಮಾಡಿತು. ಮೂರು ವರ್ಷಗಳಲ್ಲಿ ತೀವ್ರ ತಿರಸ್ಕಾರವನ್ನು ತಾಳಿ ಬೇಕನ್ ಕಾಲೇಜಿಗೆ ತಿಲಾಂಜಲಿಯಿತ್ತನು.

ಹದಿನಾರರಲ್ಲಿ ಫ್ರಾನ್ಸಿನ ಬ್ರಿಟಿಷ್ ರಾಯಭಾರಿ ಕಛೇರಿಯಲ್ಲಿ ಬೇಕನ್ನನಿಗೆ ಒಂದು ಹುದ್ದೆ ಲಭಿಸಿತು. ಸಾಹಿತ್ಯ ವಿಜ್ಞಾನಗಳ ಅಭ್ಯಾಸ ಎಡೆಬಿಡದೆ ಸಾಗುತ್ತಲೇ ಇತ್ತು.

ಬಂತು ಪ್ರಥಮ ಆಘಾತ: ತಂದೆಯ ಆಕಸ್ಮಿಕ ನಿಧನದ ವಾರ್ತೆಯನ್ನು ಕೇಳಿ ಬೇಕನ್ ಕೂಡಲೇ ಸ್ವದೇಶಕ್ಕೆ ಮರಳಬೇಕಾಯಿತು. ಬೇಕನ್ನನಿಗೆ ಇನ್ನೂ ವಯಸ್ಸು ಹದಿನೆಂಟು ಪೂರ್ತಿಯಾಗಿರಲಿಲ್ಲ. ಸಿರಿವಂತ ಮನೆತನದಲ್ಲಿ ರಾಜಭೋಗವನ್ನು ಅನುಭವಿಸುತ್ತಿದ್ದ ಬೇಕನ್ ಈಗ ಕೈಯಲ್ಲಿ ಕಾಸಿಲ್ಲದೆ ದಿಕ್ಕುಗೆಟ್ಟು ಬೀದಿ ಬೀದಿ ಅಲೆದಾಡಿದನು. ಹೊಟ್ಟೆಬಟ್ಟೆಗೆ ಸಾಲುವಷ್ಟು ಸಂಪತು ಒದಗಿದರೆ ಸಾಹಿತ್ಯ ರಾಜಕಾರಣಗಳಿಗಾಗಿ ಜೀವನವನ್ನು ಮೀಸಲಾಗಿರಿಸಬಹುದೆಂದು ಅವನ ಆಸೆ ಕಮರಿಹೋಯಿತು.

ಸರಕಾರದಲ್ಲಿ ಯಾವುದಾದರೊಂದು ಉದ್ಯೋಗ ಪಡೆಯುವುದಕ್ಕಾಗಿ ಬೇಕನ್ ತನ್ನ ಬಂಧುಗಳ ಸಹಾಯ ಕೋರಿದನು. ಬೇಕನ್ನನಂತಹ ಪ್ರತಿಭಾವಂತ ವ್ಯಕ್ತಿಗೆ ರಾಜ್ಯಸರಕಾರದಲ್ಲಿ ಉನ್ನತ ಪದವಿಯನ್ನು ಹೊಂದಲು ಕಷ್ಟವಾಗಬಹುದೆಂದು ಯಾರೂ ನೆನೆಸುವಂತಿರಲಿಲ್ಲ. ಅವನ ತಂದೆ ಮುಖ್ಯ ನ್ಯಾಯಾಧೀಶನಾಗಿದ್ದನು. ಇಂಗ್ಲೆಂಡಿನ ಕೋಶಾಧಿಕಾರಿಯಾಗಿದ್ದು, ದೇಶದ ರಾಜಕೀಯದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದ್ದ ವಿಲಿಯಂ ಸೆಸಿಲ್(ಲಾರ್ಡ್ ಬರ್ಲಿ)ನ ಪತ್ನಿ ಮತ್ತು ಬೇಕನ್ನನ ತಾಯಿ ಅಕ್ಕತಂಗಿಯರಾಗಿದ್ದರು. ಇಷ್ಟು ಮಾತ್ರವಲ್ಲ, ಇಂಗ್ಲೆಂಡಿನ ರಾಣಿ ಎಲಿಜಬೆತ್ ಬೇಕನ್ನನ ಮೇಲೆ ಕೃಪಾದೃಷ್ಟಿಯನ್ನು ಬೀರಿದ್ದಳು. ಹೀಗಿರುವಾಗ ಬೇಕನ್ ಅಂಗಲಾಚಿ ಬೇಡಿದರೂ ಸರಕಾರದಲ್ಲಿ ಅವರಿಗೆ ಯಾವ ಉದ್ಯೋಗವೂ ದೊರೆಯದೆ ಹೋಯಿತು. ಇದಕ್ಕೆ ಕಾರಣ ಅವನ ಬಂಧು ಲಾರ್ಡ್ ಬರ್ಲಿಯೆ. ತನ್ನ ಮಗ ರಾಬರ್ಟ್ ಸೆಸಿಲ್, ಯೋಗ್ಯತೆಯಲ್ಲಿ ದಕ್ಷತೆಯಲ್ಲಿ ಬೇಕನ್ನನಿಗೆ ಸರಿಸಾಟಿಯಾಗಲಾರನೆಂದು ಮನಗಂಡ ಅವನಿಗೆ ಬೇಕನ್ನನ ಅಭ್ಯುದಯವು ಸಹಿಸಲಸಾಧ್ಯವಾಗಿತ್ತು.

ನಿರಾಶನಾಗಿ ಬೇಕನ್ ಕಾನೂನು ಅಭ್ಯಾಸಕ್ಕೆ ತೊಡಗಿದನು. ವ್ಯಾಸಂಗದಲ್ಲಿ ವಿಶೇಷ ಪ್ರಾವೀಣ್ಯವನ್ನು ಪಡೆದ ಬೇಕನ್ ಸತತ ಪ್ರಯತ್ನದ ಫಲವಾಗಿ ೧೫೯೦ ರಲ್ಲಿ ರಾಣಿಯ ವಿಶೇಷ ಸಲಹೆಗಾರನಾಗಿ ನೇಮಕಹೊಂದಿದನು. ಆದರೂ ಅದರಿಂದ ದೊರಕುತ್ತಿದ್ದ ವೇತನ ಅತ್ಯಲ್ಪವಾಗಿತ್ತು.

ಅವನು ರಾಜಕೀಯಕ್ಕೂ ಇಳಿದನು. ೧೫೯೩ ರಲ್ಲಿ ಬೇಕನ್ನನು ಪಾರ್ಲಿಮೆಂಟ್ ಸದಸ್ಯನಾಗಿ ಆರಿಸಲ್ಪಟ್ಟನು. ಒಡನೆ ಅಲ್ಲಿ ಅವನ ಪ್ರತಿಭೆ ಪ್ರಕಾಶಗೊಂಡಿತು. ಅವನ ಭಾಷಣಗಳು ಅಪ್ರತಿಮವಾಗಿದ್ದವು. ಇಡಿಯ ಪಾರ್ಲಿಮೆಂಟ್ ಭವನವು ಅವನ ನಿರರ್ಗಳವಾದ ವಾಕ್‌ಪ್ರವಾಹವನ್ನು ತಲ್ಲೀನತೆಯಿಂದ ಕೇಳುತ್ತಿತ್ತು.

ರಾಜಕೀಯದಲ್ಲಿ ಬೇಕನ್ನನ ಪಾತ್ರ ಕಷ್ಟತರವಾಗಿತ್ತು. ರಾಣಿಯ ಪ್ರೀತಿಯನ್ನೂ ಉಳಿಸಿಕೊಳ್ಳಬೇಕು, ಜನರ ಆದರವನ್ನೂ ಗಳಿಸಬೇಕು ಎಂಬ ಅವನ ಇಬ್ಬಗೆಯ ಆಸೆ ಈಡೇರುವುದು ಅಸಾಧ್ಯವಾಗಿತ್ತು. ಒಮ್ಮೆ ಸರಕಾರದ ತೆರಿಗೆಯ ವಿರುದ್ಧ ಭಾಷಣಮಾಡುತ್ತ ಆತ, "ಈ ತೆರಿಗೆಗಳನ್ನು ಕೊಡಬೇಕಾದರೆ ಜನರು ಮನೆ ಪಾತ್ರೆಗಳನ್ನೂ ಬಟ್ಟೆಲುಗಳನ್ನೂ ಮಾರಬೇಕಾಗುತ್ತದೆ" ಎಂದಾಗ ರಾಣಿಗೂ ಮಂತ್ರಿಗಳಿಗೂ ಅವನ ಮೇಲೆ ಕ್ರೋಧವುಂಟಾಯಿತು. ಇದನ್ನು ಕೇಳಿದ ಕೂಡಲೇ ಬೇಕನ್ ನಾಚಿಕೆಯನ್ನು ತೊರೆದು ಅಧಿಕಾರಿಗಳ ಪಾದಧೂಳಿಯಲ್ಲಿ ಹೊರಳಾಡಿ ಕ್ಷಮಾಯಾಚನೆ ಮಾಡಿದನು.

ಹನ್ನೆರಡು ವರ್ಷಗಳ ಕಾಲ ಯೋಗ್ಯ ವೃತ್ತಿಗಾಗಿ ಸಂಬಂಧಿಕರೊಡನೆ ಕಾಡಿ ಬೇಡಿ ಬೇಸತ್ತ

ಬೇಕನ್ನನು ತನ್ನ ಭವಿತವ್ಯಕ್ಕಾಗಿ ರಾಜಕೀಯದಲ್ಲಿ ಪ್ರಭಾವಶಾಲಿಯಾದ ಇನ್ನೊಬ್ಬ ವ್ಯಕ್ತಿಯ ಬೆನ್ನು ಹಿಡಿಯುವ ಪ್ರಮೇಯ ಒದಗಿತು. ಯುವಕನೂ ಮೇಧಾವಿಯೂ ಚತುರನೂ ಆದ ಲಾರ್ಡ್ ಎಸೆಕ್ಸ್‌ನೊಡನೆ ಬೆಳೆದ ಬೇಕನ್ನನ ಸ್ನೇಹ ಒಂದು ದುರಂತ ಕಥೆಯೆ ಆಯಿತು.

೧೫೯೪ ರಲ್ಲಿ ಅಟಾರ್ನಿ ಜನರಲನ ಸ್ಥಾನವು ಬರಿದಾದಾಗ ಅದನ್ನು ತನ್ನ ಸ್ನೇಹಿತ ಬೇಕನ್ನನಿಗೆ ಕೊಡಿಸಲು ಎಸೆಕ್ಸ್ ಶಕ್ತಿಮೀರಿ ಪ್ರಯತ್ನ ಮಾಡಿದನು. ಅದೇ ಹುದ್ದೆಗೆ ಯತ್ನ ನಡೆಸಿದ್ದ ರಾಬರ್ಟ್ ಸೆಸಿಲನ ಗುಂಪಿನವರಿಗೆ ಬೇಕನ್ನನ ಮೇಲಿದ್ದ ದ್ವೇಷವು ಇನ್ನಷ್ಟು ಹೆಚ್ಚಾಯಿತು.

ಹೀಗಾಗಿ ಎಸೆಕ್ಸ್ ಮಾಡಿದ ಪ್ರಯತ್ನಗಳಿಗೆ ವಿಜಯಶ್ರೀ ಒಲಿಯಲಿಲ್ಲ. ಅಟಾರ್ನಿ ಜನರಲನಾಗಿ ಬೇರೊಬ್ಬ ವ್ಯಕ್ತಿ ನೇಮಿಸಲ್ಪಟ್ಟಿರುವನೆಂದು ಕೇಳಿ ಎಸೆಕ್ಸ್‌ನಿಗೆ ಖೇದವಾಯಿತು. ತನ್ನ ಸ್ನೇಹಿತನಿಗಾಗಿ! ಏನೂ ಮಾಡಲಾರದೆ ಹೋದೆನಲ್ಲ ಎಂಬ ಕಳವಳದಿಂದ ಎಸೆಕ್ಸ್ ತನ್ನ ಸೋಲಿಗೆ ಪ್ರಾಯಶ್ಚಿತ್ತರೂಪವಾಗಿ ಅತ್ಯಂತ ಉದಾರತನದ ಕೆಲಸ ಮಾಡಿದನು. ಎರಡು ಸಾವಿರ ಪೌಂಡು ಬೆಲೆ ಬಾಳುವ ಆಸ್ತಿಯನ್ನು ಎಸೆಕ್ಸ್ ಬೇಕನ್ನನಿಗೆ ದಾನಮಾಡಿದನು.

ಈ ಸಮಯದಲ್ಲೇ ಬೇಕನ್ ಪ್ರತಿಭಾನ್ವಿತ ಲೇಖಕನಾಗಿ ಜಗತ್ತಿನ ಮುಂದೆ ಪ್ರಕಾಶಕ್ಕೆ ಬಂದನು. ೧೫೯೭ ರಲ್ಲಿ ಅವನ ಪ್ರಬಂಧಗಳು ಪ್ರಕಟವಾದವು. ಈ ಸಣ್ಣ ಕೃತಿಯು ಕೆಲವೇ ತಿಂಗಳುಗಳಲ್ಲಿ ಪುನರ್ಮುದ್ರಿತವಾಯಿತು. ಲ್ಯಾಟಿನ್, ಫ್ರೆಂಚ್ ಮತ್ತು ಇಟಾಲಿಯನ್ ಭಾಷೆಗಳಲ್ಲಿ ಅನುವಾದಗಳೂ ಪ್ರಕಟಿಸಲ್ಪಟ್ಟವು. ಕೀರ್ತಿ ಬೆಳಗಿದರೂ ಬೇಕನ್ನನ ಆರ್ಥಿಕ ಪರಿಸ್ಥಿತಿ ಇನ್ನೂ ತೃಪ್ತಿಕರವಾಗಿರಲಿಲ್ಲ. ಪ್ರತಿಷ್ಠೆಯ ಬೆನ್ನು ಹತ್ತಿದ ಅವನ ದುಂದುಗಾರಿಕೆಗೆ ಮಿತಿಯಿರಲಿಲ್ಲ. ಒಮ್ಮೆ ಮುನ್ನೂರು ಪೌಂಡುಗಳ ಸಾಲಕ್ಕಾಗಿ ಅವನು ಬಂಧನಕ್ಕೊಳಗಾಗಬೇಕಾಯಿತು.

ಬೇಕನ್ ಈಗ ವಿವಾಹಸಂಬಂಧದಿಂದ ಸಂಪತ್ತನ್ನು ಗಳಿಸುವ ಪ್ರಯತ್ನದಲ್ಲಿ ನಿರತನಾಗಿದ್ದನು. ಹ್ಯಾಟನ್ ಎಂಬ ವಿಧವೆಯನ್ನು ಆತ ಒಲಿಸಬೇಕಾಗಿತ್ತು. ಆಕೆಯ ನಡೆನುಡಿಗಳು ಅಸಹ್ಯವಾಗಿದ್ದುವು. ಆದರೆ ಬೇಕನ್ ಅವಳ ಸಂಪತ್ತಿನ ಮೇಲೆ ಕಣ್ಣಿಟ್ಟಿದ್ದನು. ಎಸೆಕ್ಸ್ ತನ್ನ ಸ್ನೇಹಿತನಿಗೋಸ್ಕರವಾಗಿ ಆಕೆಗೆ ಮತ್ತು ಆಕೆಯ ತಾಯಿಗೆ ಪತ್ರಗಳನ್ನು ಬರೆದನು. ಆದರೆ ಬೇಕನ್ನನನ್ನು ತಿರಸ್ಕರಿಸಿದ ಈ ಹೆಣ್ಣು ಅವನ ಇನ್ನೊಬ್ಬ ವೈರಿಯಾದ ಸರ್ ಎಡ್ವರ್ಡ್ ಕೋಕ್‌ನನ್ನು ಮದುವೆಯಾದಳು.

ಇಷ ರಲ್ಲಿ ಎಸೆಕ್ಸ್‌ನ ಭಾಗ್ಯ ಇಳಿಮುಖವಾಗಿತು. ಜನತೆಯ ದೃಷ್ಟಿಯಲ್ಲಿ ಅವನು ದೊಡ್ಡ ವ್ಯಕ್ತಿಯಾಗಿದ್ದರೂ ರಾಜಕೀಯ ವರ್ತುಲಗಳಲ್ಲಿ ಅವನ ಪ್ರಭಾವ ಕಡಿಮೆಯಾಗಿತ್ತು. ಎಸೆಕ್ಸ್ ಮನಸ್ಸಾಕ್ಷಿಗೆ ವಿರೋಧವಾಗಿ ರಾಣಿಗೆ ತಲೆಬಾಗುವ ವ್ಯಕ್ತಿಯಾಗಿರಲಿಲ್ಲ. ರಾಣಿಯ ಅವಕೃಪೆಗೆ ಪಾತ್ರನಾದ ಆತ ರಾಣಿಯ ವಿರುದ್ಧ ಒಳಸಂಚು ಹೂಡಿರುವನೆಂಬ ವದಂತಿಯೂ ಬಲವಾಗಿ ಹಬ್ಬಿತು.

ಬೇಕನ್ ಉಭಯಸಂಕಟಕ್ಕೆ ಸಿಲುಕಿದನು. ಎಸೆಕ್ಸ್‌ನ ಪಕ್ಷ ಹಿಡಿದರೆ ಅಧಿಕಾರಿಗಳ ಅಸಂತುಷ್ಟಿಗೆ ಕಾರಣನಾಗುವೆನೆಂದು ಬೇಕನ್ ಭಯದಿಂದ ಗಡಗಡನೆ ನಡುಗಿದನು. ದುಡುಕಬಾರದೆಂದೂ ರಾಣಿಯ ಪ್ರೀತಿಯನ್ನು ಕಳೆದುಕೊಳ್ಳಬಾರದೆಂದೂ ಮಿತ್ರನನ್ನು ಬೇಡಿದನು. ಎಸೆಕ್ಸ್‌ನ ಪರವಾಗಿ ರಾಣಿಯೊಡನೆ ಸಂಧಾನ ನಡೆಸುವ ಪ್ರಯತ್ನ ಮಾಡಿದನು ಆದರೆ ಇದರಿಂದ ರಾಣಿಯ ಕೃಪೆ ದೂರವಾಗುವ ಚಿಹ್ನೆ ತೋರಿದೊಡನೆಯೇ ಬೇಕನ್ ಮಿತ್ರದ್ರೋಹಕ್ಕೆ ಅಣಿಯಾದನು.

ಎಸೆಕ್ಸ್‌ನನ್ನು ನ್ಯಾಯಾಲಯದ ಮುಂದೆ ತಂದು ನಿಲ್ಲಿಸಿದರು. ಬೇಕನ್ ತನ್ನ ಮಿತ್ರನ ವಿರುದ್ಧ ಸರಕಾರದ ವಕಾಲತು ವಹಿಸಿದುದು ಮಾತ್ರವಲ್ಲ; ತನ್ನ ಸರ್ವಶಕ್ತಿಯನ್ನೂ ಎಲ್ಲ

ಚಾತುರ್ಯವನ್ನೂ ಮಿತ್ರನ ಸರ್ವನಾಶಕ್ಕಾಗಿ ಉಪಯೋಗಿಸಿದನು. ತನ್ನ ಮಿತ್ರನಿಗೆ ಅತಿ ಹೆಚ್ಚಿನ ಶಿಕ್ಷೆಯಾಗುವಂತೆ ಪ್ರಯತ್ನಮಾಡಿದನು. ಎಸೆಕ್ಸ್‌ನಿಗೆ ತನ್ನ ಸ್ನೇಹಿತನ ಈ ವಿಪರೀತ ವಾದ ದಿಂದ ಕರುಳು ಹಿಚುಕಿದಂತಾಯಿತು. ಆದರೆ ಅಸ ಹಾಯ ಸ್ಥಿತಿಯಲ್ಲಿ ಅವನೇನೂ ಮಾಡುವಂತಿರ ಲಿಲ್ಲ. ತಾನು ಶಕ್ತಿಮೀರಿ ಯಾವನ ಅಭ್ಯುದಯ ಕ್ಕಾಗಿ ತನುಮನಧನಗಳಿಂದ ಶ್ರಮವನ್ನು ವಹಿಸಿ ದನೋ ಅಂಥ ಪ್ರಾಣಸ್ನೇಹಿತನ ಅಸಾಮಾನ್ಯ ಪ್ರತಿಭೆಗೆ ಎಸೆಕ್ಸ್ ತನ್ನ ಪ್ರಾಣವನ್ನು ಆಹುತಿ ಯಾಗಿ ಅರ್ಪಿಸಬೇಕಾಯಿತು.

ಜನರ ಆದರಕ್ಕೆ ಪಾತ್ರನಾದ ಒಬ್ಬ ಮಹಾ ವ್ಯಕ್ತಿಯ ಮೇಲೆ ಆದ ಭೀಕರ ಶಿಕ್ಷೆ ಲಂಡನಿನ ವಾತಾವರಣವನ್ನು ಪ್ರಕ್ಷುಬ್ಧಗೊಳಿಸಿತು ಸರಕಾ ರದ ವರ್ತನೆಯನ್ನು ಸಮರ್ಥಿಸಿ, ಎಸೆಕ್ಸ್ ಮಾಡಿದ ಅಪಚಾರಗಳನ್ನು ವರ್ಣಿಸಿ ಒಂದು ಪ್ರಕ ಟಣೆಯನ್ನು ಹೊರಡಿಸುವಂತೆ ರಾಣಿ ಬೇಕನ್ನ ನಿಗೆ ಹೇಳಿದಳು. ವಾಗ್ವೈಖರಿಯಿಂದ ಮಿತ್ರನ ರಕ್ತವನ್ನು ತೋಯಿಸಿದ ಬೇಕನ್ ಲೇಖನಿಯಿಂದ ಆತನಿಗೆ ಅಂತ್ಯೇಷ್ಟಿಯನ್ನು ಮಾಡಿ ಮುಗಿಸಿದನು.

ಕೆಲವೇ ಸಮಯದಲ್ಲಿ ರಾಣಿ ಕಾಲವಾದಳು. ಜೇಮ್ಸ್ ಪಟ್ಟಕ್ಕೆ ಬಂದನು. ಜೇಮ್ಸ್ ಗದ್ದಿಗೇರಿ ಸಲ್ಪಟ್ಟ ಎಸೆಕ್ಸನ ಮೇಲೆ ಸಹಾನುಭೂತಿಯು ಳ್ಳವನಾಗಿದ್ದನು. ಎಸ್ಸೆಕ್ಸನೊಂದಿಗೆ ಅಪರಾಧಿ ಯೆಂದು ತೀರ್ಮಾನಿಸಲ್ಪಟ್ಟು ಜೈಲುವಾಸವನ್ನ ನುಭವಿಸುತಿದ್ದ ಲಾರ್ಡ್ ಸೌಂತೇಪ್ಟನ್ನನನ್ನು ಬಿಡುಗಡೆ ಮಾಡುವಂತೆ ಅವನು ಅಪ್ಪಣೆ ಕೊಡಿ ಸಿದನು. ಆಗ ತಾನು ವಹಿಸಿದ ಕ್ರೂರ ಪಾತ್ರ ವನ್ನು ಮರೆಸುವುದಕ್ಕಾಗಿ ಬೇಕನ್ ತನ್ನನ್ನು ಕ್ಷಮಿಸುವಂತೆ ಸೌಂತೇಪ್ಟನ್ನನಿಗೆ ದೈನ್ಯದಿಂದ ಪತ್ರ ಬರೆದನು. ತನ್ನ ಹೊಸ ಸ್ವಾಮಿಯ ಆದರವನ್ನು ಗಳಿಸುವುದಕ್ಕೆ ಬೇಕನ್ ತನ್ನ ಚಾತುರ್ಯವನ್ನೆಲ್ಲ ವಿನಿಯೋಗಿಸಿದನು. ಪಟ್ಟಾಭಿಷೇಕದ ದಿನ 'ನೈಟ್' ಪದವಿಯನ್ನು ಪಡೆದ ನೂರು ಮಂದಿಯಲ್ಲಿ ಬೇಕನ್ ಒಬ್ಬನಾ ಗಿದ್ದನು! ಕೆಲವೇ ಸಮಯದಲ್ಲಿ ಊರ ಮುಖ್ಯ- ಸನೊಬ್ಬನ ಮಗಳನ್ನು ಮದುವೆಯಾದನು.

ಪ್ರಕ್ಷುಬ್ಧ ರಾಜಕೀಯ ಜೀವನದ ಮಧ್ಯದಲ್ಲಿ ಬೇಕನ್ನನ ಪ್ರಶಾಂತ ದಾರ್ಶನಿಕ ಸಾಹಿತ್ಯ ಎಡ ಬಿಡದೆ ಸಾಗಿತ್ತು. ೧೬೦೫ ರಲ್ಲಿ "ಜ್ಞಾನದ ಮುನ್ನಡೆ" ಮತ್ತು ೧೬೦೯ ರಲ್ಲಿ "ಪ್ರಾಚೀನರ ಪ್ರತಿಭೆ" ಪ್ರಕಟವಾದವು. ೧೬೧೨ ರಲ್ಲಿ "ಪ್ರ- ಬಂಧ"ಗಳ ಹೊಸ ಆವೃತ್ತಿ ಪ್ರಕಾಶಕ್ಕೆ ಬಂತು.

೧೬೦೪ ರಲ್ಲಿ ಬೇಕನ್ ರಾಜನ ಸಲಹೆಗಾರ ನಾಗಿಯೂ ೧೬೦೭ ರಲ್ಲಿ ಸೊಲಿಸಿಟರ್ ಜನರಲ ನಾಗಿಯೂ ೧೬೧೨ ರಲ್ಲಿ ಅಟಾರ್ನಿ ಜನರಲ ನಾಗಿಯೂ ನೇಮಕಹೊಂದಿದನು.

ತನಗೆ ಲಭಿಸಿದ ಪದವಿಯನ್ನು ಯೋಗ್ಯ ರೀತಿ ಯಲ್ಲಿ ಉಪಯೋಗಿಸುವ ಒಳ್ಳೆಯತನವನ್ನು ಬೇಕನ್ ತೋರಲಿಲ್ಲ. ಕಾರ್‍ಯಸಿದ್ಧಿಯ ಮೇಲೆ ಲಕ್ಷ್ಯವಿಟ್ಟ ಅವನಿಗೆ ನ್ಯಾಯ ನೀತಿಗಳು ತುಚ್ಛ ವಾಗಿದ್ದವು. ಪೀಚಮ್ ಎಂಬ ವೃದ್ಧ ಪಾದ್ರಿ ಯೊಬ್ಬನ ಮೇಲೆ ದೇಶದ್ರೋಹದ ಆಪಾದನೆ ಯನ್ನು ಹೊರಿಸಿ ನ್ಯಾಯಾಲಯಕ್ಕೆ ತಂದಿದ್ದರು. ಅವನ ಮೇಲೆ ಖಚಿತ ಪ್ರಮಾಣಗಳಿರಲಿಲ್ಲ. ಆದರೆ ಶಿಕ್ಷೆಕೊಡಿಸಲು ಬೇಕಾದ ಕಾನೂನು ಗಳನ್ನಾಗಲಿ ಆಧಾರವನ್ನಾಗಲಿ ತರ್ಕಪ್ರೌಢಿಮೆ ಯನ್ನಾಗಲಿ ಒದಗಿಸಿಕೊಡುವುದು ಬೇಕನ್ನನ ಬುದ್ಧಿವಂತಿಕೆಗೆ ನಿಲುಕದ ವಿಚಾರವಾಗಿರಲಿಲ್ಲ. ನ್ಯಾಯಾಧೀಶರೊಳಗೆ ಮೂವರನ್ನು ಬೇಕನ್ ಗುಪ್ತಸಂಧಾನ ನಡೆಸಿ ಒಲಿಸಿದನು. ನಾಲ್ಕನೆಯ ವನಾದ ಕೋಕ್ ಮಾತ್ರ ಕೋರ್ಟಿನ ಮುಂದೆ ತೀರ್ಮಾನಕ್ಕೆ ಬರಲಿರುವ ವ್ಯಾಜ್ಯದ ವಿಚಾರ ವಾಗಿ ವಕೀಲನೊಬ್ಬನು ನ್ಯಾಯಾಧೀಶರೊಂದಿಗೆ ಸಂಧಾನ ನಡೆಸುವುದು ನ್ಯಾಯಬಾಹಿರವಾದು ದೆಂದು ಬಲವಾಗಿ ವಿರೋಧಿಸಿದನು. ಆದರೆ ತನ್ನ ಚಾತುರ್ಯವನ್ನು ಉಪಯೋಗಿಸಿ, ಅರಸ ನಿಗೆ ಪತ್ರವನ್ನು ಬರೆದು, ಕೋಕ್ ಕೂಡ ಶಿಕ್ಷೆಗೆ ಒಪ್ಪುವಂತೆ ಮಾಡಿದ ಸಾಹಸ ಮತ್ತು ಕೀರ್ತಿ ಬೇಕನ್ನನಿಗೆ ಸಲ್ಲುತ್ತದೆ. ಪೀಚಮ್ ತನ್ನ ಉಳಿದ ಆಯುಸ್ಸನ್ನು ಕಾರಾಗೃಹದ ಸರಳುಗಳ ಹಿಂದೆ ಕಳೆಯಬೇಕಾಯಿತು.

೧೬೧೬ ರಲ್ಲಿ ಪ್ರಿವಿ ಕೌನ್ಸಿಲಿನ ನ್ಯಾಯಾಧೀಶ

ನಾಗಿಯೂ ೧೬೧೭ ರಲ್ಲಿ ಮುಖ್ಯ ನ್ಯಾಯಾಧೀಶನಾಗಿಯೂ ಬೇಕನ್ ಅಧಿಕಾರದ ಮೆಟ್ಟಲನ್ನು ಏರುತ ಹೋದನು.

ಅವನ ಭಾಗ್ಯ ದಿನೇ ದಿನೇ ವರ್ಧಿಸುತ್ತಿತ್ತು. ನ್ಯಾಯಾಧೀಶನಾಗಿದ್ದ ಬೇಕನ್ ಛಾನ್ಸೆಲರ್ ಪದವಿಯನ್ನೇರಿದನು. ಹೂದೋಟವನ್ನು ಲಾಲಿಸುವುದು, ಸಾಹಿತ್ಯವನ್ನೋದುವುದು ಇತ್ಯಾದಿ ಮನೋರಂಜನೆಯೊಂದಿಗೆ ಆತನ ಸುಖಮಯ ಜೀವನ ಸಾಗಿತ್ತು.

ಆಮೇಲೆ ಒಮ್ಮೆಲೆ ದುರ್ವಿಧಿ ಅವನ ಮೇಲೆ ತಿರುಗಿ ಬಿತ್ತು. ನ್ಯಾಯಾಲಯಗಳಲ್ಲಿ ನಡೆಯುತ್ತಿದ್ದ ವಂಚನೆಗಳ ಬಗ್ಗೆ ವಿಚಾರಣೆ ನಡೆಸಲು ನೇಮಕವಾಗಿದ್ದ ಪಾರ್ಲಿಮೆಂಟ್ ಸದಸ್ಯರ ಸಮಿತಿ ಕೌತುಕವನ್ನುಂಟುಮಾಡುವ ಹಲವಾರು ವಿಚಾರಗಳನ್ನು ಬಯಲಿಗೆಳೆಯಿತು. ಲಾರ್ಡ್ ಛಾನ್ಸೆಲರ್ ಬೇಕನ್ ತೆಗೆದುಕೊಂಡ ಲಂಚಗಳ ಒಂದು ಪಟ್ಟಿ ತಯಾರಾಗಿತ್ತು. ಆಬ್ರೇ ಎಂಬ ವ್ಯಕ್ತಿ ತನ್ನ ಒಂದು ವ್ಯಾಜ್ಯದಲ್ಲಿ ನ್ಯಾಯಾಲಯದ ವಿಲಂಬದಿಂದ ಕಂಗೆಟ್ಟಿದ್ದನು. ಛಾನ್ಸೆಲರನಿಗೆ ನೂರು ಪೌಂಡುಗಳನ್ನು ಕಾಣಿಕೆಯಾಗಿ ಇತ್ತರೆ ಕಾರ್ಯವು ಶೀಘ್ರವಾಗಿ ಕೈಗೂಡುವುದೆಂಬ ಸೂಚನೆ ಬಂತು. ಬಡ ಆಬ್ರೇ ಸಾಲ ಮಾಡಿ ಹಣ ತಂದು ಛಾನ್ಸೆಲರನ ಪಾದಗಳಲ್ಲಿ ಸಮರ್ಪಿಸಿದನು. ಆದರೆ ನೆನಸಿದಂತೆ ಆತನ ಕಾರ್ಯವು ನೆರವೇರಲಿಲ್ಲ. ಇನ್ನಷ್ಟು ವಿಳಂಬವಾದ ಮೇಲೆ ಅವನಿಗೆ ಪ್ರತಿಕೂಲವಾದ ತೀರ್ಮಾನ ಕೋರ್ಟಿನಿಂದ ಹೊರಟಿತು. ಇನ್ನೊಬ್ಬ ಬಡಪಾಯಿ ಎಗರ್ಟನ್‌ಗೆ ನಾನ್ನೂರು ಪೌಂಡುಗಳ ಕಾಣಿಕೆಯನ್ನು ಮಾಡಬೇಕೆಂದು ಛಾನ್ಸೆಲರನ ನಿಕಟವರ್ತಿಗಳ ನಿರ್ದೇಶ ಬಂದಿತ್ತು. ಆದರೆ ತೀರ್ಮಾನದ ಸಮಯ ಈತನಿಗೂ ತಿರುನಾಮವೇ ಗತಿಯಾಯಿತು.

ಬೇಕನ್ನನ ವಿಚಾರಣೆ ನಡೆಸಲು ಪಾರ್ಲಿಮೆಂಟಿನ ಹದಿನೆಂಟು ಸದಸ್ಯರ ಸಮಿತಿ ಏರ್ಪಟ್ಟಿತು. ಬೇಕನ್ ಜನರಿಗೆ ಮುಖ ತೋರಿಸಲಾರದೆ ನಿವಾಸಕ್ಕೆ ತೆರಳಿ, ಬಾಗಿಲುಗಳನ್ನು ಭದ್ರಗೊಳಿಸಿ ನಿಶ್ಚೇತನನಾಗಿ ಹಾಸಿಗೆಯಲ್ಲಿ ಹೊರಳಾಡಿದನು. ಬೇಕನ್ನನು ಮಾಡಿದ ಇನ್ನೂ ಹಲವಾರು ವಂಚನೆಗಳು ಬಯಲಿಗೆ ಬಂದವು. ಬೇರೆ ದಾರಿ ಕಾಣದೆ ಬೇಕನ್ ತನ್ನ ಮೇಲೆ ಮಾಡಲ್ಪಟ್ಟ ಆಪಾದನೆಗಳೆಲ್ಲ ನಿಜವಾದುವೆಂದೂ ತಾನು ಅಪರಾಧಿಯೆಂದು ಒಪ್ಪಿಕೊಳ್ಳುವೆನೆಂದೂ ಸಾರಿದನು. ತೀರ್ಮಾನವಾಗುವ ವೇಳೆ ವಿಶೇಷವಾಗಿ ನಿಶ್ಶಕ್ತನಾದುದರಿಂದ ಅವನನ್ನು ಸಭಾಭವನಕ್ಕೆ ಕರೆತರಲಾಗಲಿಲ್ಲ. ಬೇಕನ್ ನಲ್ವತ್ತು ಸಾವಿರ ಪೌಂಡುಗಳ ದಂಡ ತೆರಬೇಕೆಂದೂ ರಾಜನ ಇಚ್ಛೆಯ ಮೇರೆಗೆ ಜೈಲುವಾಸವನ್ನನುಭವಿಸಬೇಕೆಂದೂ ತೀರ್ಮಾನವಾಯಿತು. ಅವನು ಸರಕಾರದ ಹುದ್ದೆಗಾಗಲಿ ಪಾರ್ಲಿಮೆಂಟ್ ಸದಸ್ಯತನಕ್ಕಾಗಲಿ ಅನರ್ಹನೆಂದು ಸಾರಲಾಯಿತು. ಅಪ್ರತಿಮ ಮೇಧಾವಿಯ ಉನ್ನತ ಪದವಿ ಅತ್ಯಂತ ಅವಮಾನಕರವಾದ ಸನ್ನಿವೇಶದಲ್ಲಿ ಸಮಾಪ್ತವಾಯಿತು.

ಎರಡೇ ದಿನಗಳಲ್ಲಿ ಬೇಕನ್ನನನ್ನು ಬಂಧನದಿಂದ ಬಿಡುಗಡೆಗೊಳಿಸಿದರು. ದಂಡದ ಹಣವನ್ನು ರಾಜನ ಖಜಾನೆಯಿಂದ ಕೊಡಿಸಲಾಯಿತು. ಉಳಿದ ಶಿಕ್ಷೆಯನ್ನು ಮನ್ನಿಸಲಾಯಿತು. ಪಾರ್ಲಿಮೆಂಟ್ ಸದಸ್ಯನಾಗಲೂ ಅನುಮತಿಯನ್ನೀಯಲಾಯಿತು. ಆದರೆ ಅವಮಾನದ ಹೊರೆಯನ್ನು ಸಹಿಸಲಾರದ ಬೇಕನ್ ಪಾರ್ಲಿಮೆಂಟಿನ ಕಡೆ ಇಣಿಕಿ ನೋಡಲಿಲ್ಲ. ಸರಕಾರ ಅವನಿಗೆ ಇನ್ನೂರು ಪೌಂಡು ವಿರಾಮವೇತನವನ್ನು ಮಂಜೂರು ಮಾಡಿತು. ಆದರೆ ಬೇಕನ್ನನ ವಿಲಾಸ ಜೀವನಕ್ಕೆ ಈ ಹಣ ಸಾಕಾಗುತ್ತಿರಲಿಲ್ಲ. ಕೊನೆಯ ದಿನಗಳಲ್ಲಿ ಹೆಂಡತಿಯ ನಡತೆ ಅವನಿಗೆ ಒಗ್ಗುತ್ತಿರಲಿಲ್ಲವೆಂದು ತಿಳಿಯುತ್ತದೆ.

ಹಣದ ತೊಂದರೆಯಿಂದಾಗಲಿ ಗೃಹತಾಪತ್ರಯದಿಂದಾಗಲಿ ಬೇಕನ್ನನ ಪ್ರತಿಭೆ ಕುಂಠಿತ

ವಾಗಲಿಲ್ಲ. ಜೀವನದ ಕೊನೆಯ ದಿನಗಳಲ್ಲಿ ಹಲವಾರು ಮಾನಸಿಕ ಗೊಂದಲಗಳ ಮಧ್ಯೆ ಇಂದಿಗೂ ಖ್ಯಾತವಾಗಿರುವ ಅವನ ಹಲವು ಗ್ರಂಥಗಳು ಪ್ರಕಟವಾದವು.

ಬೇಕನ್ನನ ಮರಣದ ಸನ್ನಿವೇಶ ಅರ್ಥಗರ್ಭಿತ ವಾಗಿದೆ. ಹಿಮದಲ್ಲಿಟ್ಟ ವಸ್ತು ಕೊಳೆಯಲಾರ ದೆಂಬುದನ್ನು ಪರೀಕ್ಷಿಸುವುದಕ್ಕಾಗಿ ಒಂದು ದಿನ ಒಂದು ಕೋಳಿಯನ್ನು ಕೊಂಡುಕೊಂಡು ಬೇಕನ್ ಅದನ್ನು ಹಿಮದಲ್ಲಿ ಹೂತಿಟ್ಟನು. ಇಷ್ಟ ರಲ್ಲಿ ಅವನ ದೇಹಕ್ಕೆ ಚಳಿಯ ಆಘಾತವುಂಟಾ ಯಿತು; ಅಂಗಾಂಗಗಳು ಮುದುಡಿಕೊಂಡವು. ಅವನನ್ನು ಹತ್ತಿರದ ಮನೆಗೆ ಒಯ್ಯಲಾಯಿತು. ಮನೆಯವರು ಅವನನ್ನು ಪ್ರೀತಿಯಿಂದ ನೋಡಿ ಕೊಂಡರು. ಅಲ್ಲಿ ಒಂದು ವಾರದ ಕಾಲ ಹಾಸಿಗೆಯಲ್ಲಿ ಮಲಗಿದ್ದು ಬೇಕನ್ ೧೬೨೬, ಏಪ್ರಿಲ್ ೯ ರಂದು ಪ್ರಾತಃಕಾಲ ಇಹಲೋಕ ದಿಂದ ಕಣ್ಮರೆಯಾದನು. ಪ್ರಾಯೋಗಿಕ ವಿಜ್ಞಾನದ ಋಷಿ ಪ್ರಯೋಗದ ದೆಸೆಯಿಂದಲೇ ಮುಗಿದುಹೋದನು.

ಬೇಕನ್ ಜೀವಿಸಿದ ಕಾಲ ಮಾನವನ ಇತಿಹಾಸದಲ್ಲೇ ಸಂಧಿಕಾಲ. ಕಾಪರ್ನಿಕಸ್, ಗೆಲಿಲಿಯೋ ಮೊದಲಾದ ಖಗೋಲ ಶಾಸ್ತ್ರಜ್ಞರು ವಿಶ್ವದ ಅಪಾರತೆಯನ್ನು ತೋರಿಸಿಕೊಟ್ಟು ಮತಗಳು ಪ್ರತಿಪಾದಿಸುತ್ತ ಬಂದಿದ್ದ ಪ್ರಪಂಚದ ಸ್ವರೂಪವನ್ನೇ ಸುಳ್ಳುಗಳೆದಿದ್ದರು. ಕಾಗದ, ಮುದ್ರಣ, ನಾವಿಕರ ದಿಕ್ಚಕ್ರ, ಸಿಡಿಮದ್ದು ಮೊದಲಾದವು ಜನಜೀವನದಲ್ಲೊಂದು ಕ್ರಾಂತಿ ಎಬ್ಬಿಸಿದ್ದವು. ಪೋಪ್ ಗುರುಗಳ ಸರ್ವಾಧಿಕಾರದ ವಿರುದ್ಧ ಎದ್ದ ಪ್ರೊಟೆಸ್ಟೆಂಟ್ ಪಂಥಗಳು ಇಂಗ್ಲೆಂಡ್, ಜರ್ಮನಿಗಳಲ್ಲಿ ಧಾರ್ಮಿಕ ಕ್ರಾಂತಿಯನ್ನುಂಟುಮಾಡಿದ್ದವು. ಜನರ ರೂಢ ನಂಬಿಕೆಗಳ ತಳವೇ ಸಡಿಲಾಗಿ ಪಾಶ್ಚಾತ್ಯ ಜಗತ್ತು ವೈಚಾರಿಕ ಅರಾಜಕತೆಯಲ್ಲಿ ಮುಳುಗಿತ್ತು. ಇಂಥ ವಿಷಮ ಸ್ಥಿತಿಯಿಂದ ಜಗತ್ತನ್ನು ತನ್ನ ಸ್ವಚ್ಛವಾದ ವಿಚಾರ ಹಾಗು ಕ್ರಮಬದ್ಧ ದರ್ಶನದ ಮೂಲಕ ಉದ್ಧರಿಸಿದ ಕೀರ್ತಿ ಬೇಕನ್ನನಿಗೆ ಸೇರಿದ್ದು.

ಈ ಮಹಾಸಂಧಿಕಾಲದ ಸೂತ್ರಧಾರನಾದ ಬೇಕನ್ನನ ಪಾತ್ರವನ್ನು ಮುಂದಿನ ಜನತೆಗೆ ತಿಳಿಸಿಕೊಡಲು ಸಾಕ್ಷೀಭೂತವಾಗಿ ಉಳಿದವುಗಳು ಅವನ ಅಮೂಲ್ಯವಾದ ಕೃತಿಗಳು. ಬೇಕನ್ನನ ಪ್ರತಿಯೊಂದು ವಾಕ್ಯವೂ ಇಂದು ಮನೆ-ಮನೆಗಳಲ್ಲಿ ಗಾದೆಯ ಮಾತಾಗಿದೆ; ಪ್ರತಿಯೊಂದು ಅಕ್ಷರದಲ್ಲಿಯೂ ಅನುಭವವು ತುಂಬಿ ತುಳುಕಾಡುತ್ತಿದೆ. "ಕೆಲವು ಪುಸ್ತಕಗಳನ್ನು ರುಚಿ ನೋಡಿದರೆ ಸಾಕು, ಕೆಲವು ಪುಸ್ತಕಗಳನ್ನು ನುಂಗಿಬಿಡಬೇಕು; ಇನ್ನು ಕೆಲವು ಪುಸ್ತಕಗಳನ್ನು ಚೆನ್ನಾಗಿ ಜಗಿದು ಅರಗಿಸಿಕೊಳ್ಳಬೇಕು" ಎಂದು ಬೇಕನ್ ಹೇಳುತ್ತಾನೆ. ಬೇಕನ್ನನ ಗ್ರಂಥಗಳು ನಿಶ್ಚಯವಾಗಿಯೂ ಕೊನೆಯ ಸಾಲಿಗೆ ಸೇರಿದವು.

'ಫಲ' ಮತ್ತು 'ಪ್ರಗತಿ' ಎಂಬೆರಡು ಪದಗಳು 'ಬೇಕನ್ ದರ್ಶನ' ವನ್ನು ಪ್ರತಿನಿಧೀಕರಿಸುತ್ತವೆ. ಪ್ರಾಚೀನ ತಾತ್ವಿಕರು ತಮ್ಮ ಸಿದ್ಧಾಂತಗಳಲ್ಲಿ ಫಲಕ್ಕಾಗಲಿ ಪ್ರಗತಿಗಾಗಲಿ ಯಾವ ಸ್ಥಾನವನ್ನೂ ಕೊಡಲಿಲ್ಲ. ಅಂಕಗಣಿತದ ಉಪಯೋಗ ಅಂಗಡಿಯಲ್ಲಿ ಸಾಮಾನು ಕೊಂಡುಕೊಳ್ಳುವುದಕ್ಕೆ ಎಂದು ಪ್ಲೇಟೊ ಒಪ್ಪಿಕೊಳ ಲಿಲ್ಲ. ದೃಶ್ಯಪ್ರಪಂಚದಿಂದ ಮನಸ್ಸನ್ನು ಉಪಸಂಹರಿಸಿ ಅವ್ಯಕ್ತದಲ್ಲಿ ಲೀನಗೊಳಿಸುವುದೇ ಗಣಿತದ ಉದ್ದೇಶ ಎಂಬುದು ಅವನ ತತ್ತ್ವ-ವಾಗಿತ್ತು. ರೇಖಾಗಣಿತದ ಸಹಾಯದಿಂದ ಮಾನವನ ಉಪಯೋಗಕ್ಕೆ ಬೇಕಾದ ಯಂತ್ರಗಳನ್ನು ತಯಾರಿಸುವುದು ಶಾಸ್ತ್ರದ ದುರುಪಯೋಗವೆಂಬ ಅಭಿಪ್ರಾಯ ಪ್ರಾಚೀನರಲ್ಲಿ ಸಾಮಾನ್ಯವಾಗಿತ್ತು.

ಈ ತತ್ವವನ್ನು ಬೇಕನ್ ಆಮೂಲಾಗ್ರವಾಗಿ ವಿರೋಧಿಸಿದನು. ಒಂದು ಪ್ರಯೋಜನಾಪೇಕ್ಷಿ ದರ್ಶನವನ್ನು (Pragmatic philosophy)

ಬೇಕನ್ ಬೋಧಿಸಿದನು. ಜ್ಞಾನಾರ್ಜನೆಯ ಉಪಯೋಗ ಮಾನವನಿಗೆ ನಿಜವಾದ ಪ್ರಯೋಜನವನ್ನು ಕೊಡುವುದರಲ್ಲಿದೆ; ವ್ಯಾವಹಾರಿಕ ಉಪಯೋಗದಲ್ಲಿಯೇ ಜ್ಞಾನದ ಸಾಫಲ್ಯವಿದೆ; ಮಾನವತೆಯ ಹಿತದೃಷ್ಟಿಯೇ ದರ್ಶನದ ಗುರಿಯಾಗಿರಬೇಕು, ಜನರ ಜೀವನ ಸೌಲಭ್ಯಗಳನ್ನು ಹೆಚ್ಚಿಸುವುದು. ಎಲ್ಲರ ಸುಖಕ್ಕಾಗಿ ಶ್ರಮಿಸುವುದು ದರ್ಶನದ ಉದಾತ್ತ ಧ್ಯೇಯ—ಎಂದು ಬೇಕನ್ ಶತಮಾನಗಳಿಂದ ಕತ್ತಲುದಾರಿಯಲ್ಲಿ ಹರಿಯುತ್ತಿದ್ದ ವಿಚಾರಪ್ರವಾಹವನ್ನು ತಿರುಗಿಸಿದನು. ಬರೆಯುವ ಕ್ರಮ ಜ್ಞಾಪಕಶಕ್ತಿಯನ್ನು ಕುಂಠಿತಗೊಳಿಸುವುದರಿಂದ ಹಿತಕರವಲ್ಲ ಎಂದು ಪ್ಲೇಟೊ ಬೋಧಿಸಿದ್ದನು. ಆದರೆ ಬೇಕನ್ನನಿಗೆ ಜ್ಞಾಪಕ ಶಕ್ತಿಯ ಪವಾಡಗಳಲ್ಲಿ ಶ್ರದ್ಧೆಯುಂಟಾಗಲಿಲ್ಲ. ಬರೆಯುವ ಕ್ರಮದಿಂದ ಜ್ಞಾನ ಪ್ರಸಾರವಾಗಲು ಅನುಕೂಲವಾಗುತ್ತದೆ; ಅದು ನಮಗೆ ಮುಖ್ಯವಾದುದು. ವೈದ್ಯಶಾಸ್ತ್ರದ ಪ್ರಯೋಜನವನ್ನು ಪ್ಲೇಟೊ ಗಮನಿಸಿರಲಿಲ್ಲ. ವೈದ್ಯನ ಚಾತುರ್ಯದಿಂದ ಹೆಚ್ಚಿದ ಆಯುಸ್ಸು ದೀರ್ಘ ಮರಣಕ್ಕೆ ಸಮಾನ ಎಂದು ಆತ ಹೇಳಿದ್ದನು. ಮಳೆಬಿಸಿಲುಗಳು ಹೇಗೆ ಸಾರ್ವತ್ರಿಕವಾಗಿ ತಮ್ಮ ಕೃಪಾಕಟಾಕ್ಷವನ್ನು ಬೀರುವುವೊ ಹಾಗೆಯೇ ವೈದ್ಯಶಾಸ್ತ್ರವು ಅಖಿಲ ಮಾನವತೆಗೆ ತನ್ನ ಸಹಾಯವನ್ನು ಕೊಡಬೇಕೆಂದು ಬೇಕನ್ ಹೇಳಿದನು. ಮನುಷ್ಯನ ಸುಖ ಹೆಚ್ಚಬೇಕು, ಆಯುಸ್ಸು ಹೆಚ ಬೇಕು. ಇದು ಅವನ ಸಿದ್ಧಾಂತ. ಎಷ್ಟು ಕಷ್ಟ ಸಂಕಷ ಅವಮಾನಗಳಿಂದ ನರಳಿದರೂ ಜೀವನದ ರಸಾನುಭವದ ಬಗ್ಗೆ ಬೇಕನ್ ಒಂದಿಷ್ಟೂ ನಿರಾಶಾವಾದಿಯಾಗಿರಲಿಲ್ಲ.

ಒಣ ಪಾಂಡಿತ್ಯವೆಂಬ ಹಳೆಯ ವೃಕ್ಷಕ್ಕೆ ಬೇಕನ್ ಕೊಡಲಿಯೇಟನ್ನು ಹಾಕಿದನು. ಉಪಯೋಗಕ್ಕೆ ಬಾರದ ಪಾಂಡಿತ್ಯವನ್ನು ಅವನು ತಿರಸ್ಕರಿಸಿದನು: "ವಕ್ರಬುದ್ಧಿಯ ಜನರು ಪಾಂಡಿತ್ಯವನ್ನು ನಿಂದಿಸುತ್ತಾರೆ, ಸರಳಬುದ್ಧಿಯ ಜನರು ಪ್ರಶಂಸಿಸುತ್ತಾರೆ, ವಿವೇಕಿಗಳು ಉಪಯೋಗಿಸುತ್ತಾರೆ" ಎಂದು ಬೇಕನ್ ತನ್ನದೇ ಆದ ಮಾರ್ಮಿಕ ಭಾಷೆಯಲ್ಲಿ ಹೇಳುತ್ತಾನೆ.

ಮನುಷ್ಯ ತನ್ನ ಜ್ಞಾನಬಲದಿಂದ ಪ್ರಕೃತಿಯನ್ನೆಲ್ಲ ಜಯಿಸಬಲ್ಲ ಎಂದು ಬೇಕನ್ ಭವಿಷ್ಯವಾಣಿಯನ್ನು ನುಡಿದಿದ್ದಾನೆ. ವಿಜ್ಞಾನದೀವಿಗೆಯಿಂದ ಬೆಳಗಲಾರದ ಅಜ್ಞಾತ ವಸ್ತುವಿಲ್ಲ. ಕನಸಾಗಲಿ ನೆನಸಾಗಲಿ, ಮಾಯೆಯಾಗಲಿ ಇಂದ್ರಜಾಲವಾಗಲಿ, ವಿಜ್ಞಾನದಿಂದ ಭೇದಿಸಿದರೆ ರಹಸ್ಯವನ್ನು ಹೊರಗೆಡಹಬಹುದು. ಕಾರಣವಿಲ್ಲದೆ ಕಾರ್ಯವಿಲ್ಲ; "ಆಕಸ್ಮಿಕವಾದುದು" ಎಂದರೆ "ಇಲ್ಲದಿರುವ ವಸ್ತುವಿನ ಹೆಸರು" ಎಂದು ಬೇಕನ್ ಹೇಳುತಾನೆ.

ವಿಜ್ಞಾನದ ಕೃಪೆಯಿಂದ ರೂಪುಗೊಂಡ ಒಂದು ಆದರ್ಶ ರಾಜ್ಯಕ್ಕೆ, ಬೇಕನ್ "ನ್ಯೂ ಅಟ್ಲಾಂಟಿಸ್" ಎಂಬ ಗ್ರಂಥದಲ್ಲಿ ತನ್ನ ಓದುಗರನ್ನು ಕರೆದೊಯ್ಯುತ್ತಾನೆ.

ಪೆರುವಿನಿಂದ ಒಂದು ಹಡಗಿನಲ್ಲಿ ಆರೂಢರಾಗಿ ಜಪಾನಿನ ಕಡೆಗೆ ಹೊರಟ ಜನ ದಿಕ್ಕುತಪ್ಪಿ ಸಾಗರದಲ್ಲಿ ತೊಳಲುತ್ತ ಹಸಿವು ರೋಗರುಜಿನಗಳಿಂದ ಕಂಗೆಟ್ಟು ಒಂದಾನೊಂದು ಅಜ್ಞಾತ ದ್ವೀಪದಲ್ಲಿಳಿಯುತ್ತಾರೆ. ಅದೇ "ನ್ಯೂ ಅಟ್ಲಾಂಟಿಸ್". ಈ ದ್ವೀಪದಲ್ಲಿ ಇಳಿದು ನೋಡಿದರೆ ಕಂಡುಬರುವುದು ಅನಾಗರಿಕ ಮೂಲನಿವಾಸಿಗಳಲ್ಲ. ಸರಳವಾದ ಸುಂದರವಾದ ಶುಭ್ರವಾದ ಉಡುಪನ್ನು ಧರಿಸಿದ ತೇಜಸ್ವಿಗಳಾದ ಜನರು ಈ ದಿಕ್ಕೇಡಿಗಳನ್ನು ಸ್ವಾಗತಿಸುತ್ತಾರೆ. ಆ ದ್ವೀಪದ ಜೀವನವೇ ಆಶ್ಚರ್ಯಕರವಾಗಿರುತ್ತದೆ.

ಇಲ್ಲಿ ಪಾರ್ಲಿಮೆಂಟ್ ಇದೆ. ಆದರೆ ಇತರ ದೇಶಗಳಲ್ಲಿರುವಂತೆ ಇಲ್ಲಿ ಚುನಾವಣೆ ಇಲ್ಲ. ರಾಜಕಾರಣಿಗಳು, ಪಾರ್ಟಿಗಳು, ಚುನಾವಣಾ ಭಾಷಣಗಳು, ಸುಳ್ಳು, ಮೋಸ— ಒಂದನ್ನೂ ಈ ದ್ವೀಪದ ಜನ ಕೇಳಿಯೂ ಕೂಡ ಅರಿಯರು. ಆದರೆ ವಿಜ್ಞಾನದ ದಾರಿಯಲ್ಲಿ ಹೆಸರನ್ನು ಗಳಿಸಿ ರಾಜ್ಯದ ಉನ್ನತ ಪದವಿಯನ್ನು ಹೊಂದಲು

ಪ್ರತಿಯೊಬ್ಬ ನಾಗರಿಕನಿಗೂ ಅವಕಾಶವಿದೆ. ಈ ದ್ವೀಪದ ರಾಜ್ಯಭಾರ ಜ್ಞಾನಿಗಳಿಂದ, ವಿಜ್ಞಾನಿಗಳಿಂದ ನಡೆಯುತ್ತದೆ. ತಂತ್ರೋದ್ಯಮ, ಖಗೋಳಶಾಸ್ತ್ರ, ಅರ್ಥಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಮನಃಶಾಸ್ತ್ರ, ದರ್ಶನ ಮೊದಲಾದವುಗಳಲ್ಲಿ ಪರಿಣತರಾದ ಜ್ಞಾನಿಗಳು ಆಧುನಿಕ ಹೊಲಸು ರಾಜಕಾರಣದ ಗೊಡವೆಯಿಲ್ಲದೆ ದಕ್ಷತೆಯಿಂದ ಸರಕಾರವನ್ನು ನಡೆಸುತ್ತಾರೆ.

ನಿಜವಾಗಿ ಹೇಳುವುದಾದರೆ ಈ ದ್ವೀಪದಲ್ಲಿ ಸರಕಾರದ ಆವಶ್ಯಕತೆಯೇ ಇಲ್ಲ. ಇಲ್ಲಿನ ಸರಕಾರದ ಕೆಲಸ ಜನರನ್ನು ಆಳುವುದಲ್ಲ, ಪ್ರಕೃತಿಯ ಶಕ್ತಿಗಳನ್ನು ನಿಯಂತ್ರಿಸುವುದು; ಮಾನವನ ಜ್ಞಾನದ ಪರಿಧಿಯನ್ನು ವಿಸ್ತರಿಸುವುದು. ತಮಗೆ ಬೇಕಾದ ವಸ್ತುಗಳನ್ನೆಲ್ಲ ಇಲ್ಲಿಯ ಜನರು ಉತ್ಪಾದಿಸಿಕೊಳ್ಳುತ್ತಾರೆ, ಉತ್ಪಾದಿಸಿದುದನ್ನೆಲ್ಲ ಉಪಯೋಗಿಸುತ್ತಾರೆ. ಹೊರದೇಶಗಳನ್ನು ಯಾವುದಕ್ಕೂ ಅವಲಂಬಿಸಬೇಕಾಗಿಲ್ಲ. ಇಲ್ಲಿಯ ಜನರು ಹೊರದೇಶಗಳಿಗೆ ಹೋಗುವುದು ಜ್ಞಾನದ ಬೆಳಕನ್ನು ಪಸರಿಸುವುದಕ್ಕೆ ಮಾತ್ರ.

ಇದು ಈ ಮಹಾ ದಾರ್ಶನಿಕನು ಕನಸು ಕಂಡ ಆದರ್ಶ ರಾಜ್ಯ!

ಜ್ಞಾನಿಗಳು ಅರಸರಾಗಬೇಕು; ಇಲ್ಲವಾದರೆ ಅರಸರು ಜ್ಞಾನಿಗಳಾಗಬೇಕು ಎಂದು ಪ್ಲೇಟೊ ಸಾರಿದ್ದನು. ಜ್ಞಾನಿಗಳ ಕೈಗೆ ಅಧಿಕಾರ ಬರಬೇಕು ಎಂಬ ಈ ಕೂಗನ್ನು ಮತ್ತೊಮ್ಮೆ ಬೇಕನ್ ಜಾಗೃತಗೊಳಿಸಿದನು. ಆದರೆ ಇಂದಿನ ಜಗತ್ತು ಅದಕ್ಕೆ ಸಿದ್ಧವಾಗಿದೆಯೆ? ಅಥವಾ ಮುಂದೆ ಸಿದ್ಧವಾಗುವುದೆ?

ಬೇಕನ್ ಬರಿಯ ತಾತ್ತ್ವಿಕನೆಂದರೆ ಅಸಮಂಜಸವಾದೀತು. ಜೀವನದ ದೈನಂದಿನ ಹೋರಾಟದಲ್ಲಿ ಜಯವನ್ನು ಹೇಗೆ ಗಳಿಸಬೇಕು ಎಂಬುದನ್ನೂ ಬೇಕನ್ ಹೇಳಿದ್ದಾನೆ. ಪದವಿಯನ್ನು ಪಡೆಯಲು ಮಿತ್ರರನ್ನು ಉಪಯೋಗಿಸಿಕೊಳ್ಳಬೇಕೆಂಬ ಅವನ ಮಾತಿನಲ್ಲಿ ಅನುಭವದ ತಿರುಳಿದೆ. ಮದುವೆಯಾದ ಮರುದಿನ ಪುರುಷನು ಅನುಭವದಲ್ಲಿ ಏಳು ವರ್ಷಗಳಷ್ಟು ಮುಂದುವರಿದಿರುತ್ತಾನೆ ಎಂದು ಬೇಕನ್ ಮಾರ್ಮಿಕವಾಗಿ ನುಡಿದಿದ್ದಾನೆ.

ಐರೋಪ್ಯ ಜನಾಂಗದ ವಿಚಾರ ಪ್ರವಾಹದಲ್ಲಿ ಬೇಕನ್ನನ ಪ್ರಭಾವ ಅಸಾಧಾರಣವಾದುದು. ಅವನ ವಿಚಾರಗಳು ಹೊಸತೊಂದು ಕ್ರಾಂತಿಯನ್ನುಂಟುಮಾಡಿದುವು. ೧೬೬೨ ರಲ್ಲಿ ಮುಂದೆ ಜಗದ್ವಿಖ್ಯಾತವಾಗಲಿದ್ದ ರಾಯಲ್ ಸೊಸೈಟಿ ಸ್ಥಾಪಿಸಲ್ಪಟ್ಟಾಗ ಬೇಕನ್ ಈ ಸಂಸ್ಥೆಯ ಆದರ್ಶ ವ್ಯಕ್ತಿಯಾಗಿ ಗಣಿಸಲ್ಪಟ್ಟನು. ದಾರ್ಶನಿಕರಲ್ಲಿ ಬೇಕನ್ ಶ್ರೇಷ್ಠತಮನಾದವನೆಂದು ಒಬ್ಬ ಮೇಧಾವಿ ಹೇಳಿದ್ದಾನೆ. ಬೇಕನ್ನನ ಕೃತಿಗಳು ಸರಕಾರದ ಖರ್ಚಿನಿಂದ ಪ್ರಕಟಿಸಲ್ಪಟ್ಟವು. ಹದಿನೇಳನೆಯ ಶತಮಾನದಿಂದ ಸಮಗ್ರ ಆಂಗ್ಲ ವಿಚಾರಪ್ರವಾಹವು ಬೇಕನ್ ತೋರಿಸಿದ ಹಾದಿಯಲ್ಲಿ ಹರಿಯಿತು. ಹಾಬ್ಸ್, ಲಾಕ್, ಬೆಂತಮ್ ಮೊದಲಾದ ಲೇಖಕರ ಕೃತಿಗಳಲ್ಲಿ ಬೇಕನ್ನನ ಪ್ರಭಾವವನ್ನು ಸುಲಭವಾಗಿ ಗುರುತಿಸಬಹುದು.

ಬೇಕನ್ ಇಹಲೋಕವನ್ನು ತ್ಯಜಿಸುವ ಮೊದಲು ಹೃದಯಸ್ಪರ್ಶಿಯಾದ ಮಾತನ್ನು ಬರೆದಿದ್ದಾನೆ:

"ನನ್ನ ಆತ್ಮವನ್ನು ದೇವರಿಗೆ ಅರ್ಪಿಸಿದ್ದೇನೆ. ಶರೀರವನ್ನು ಆಡಂಬರವಿಲ್ಲದೆ ಹೂಳಿಡುವುದು. ನನ್ನ ಕೀರ್ತಿ ಮತ್ತು ನನ್ನ ಸ್ಮರಣೆಯನ್ನು ಜನರ ಔದಾರ್ಯದ ಆಸರೆಯಲ್ಲಿ, ವಿದೇಶದ ಜನತೆಯಲ್ಲಿ, ಕಾಲಪುರುಷನ ಅಡಿಗಳಲ್ಲಿ ಅರ್ಪಿಸಿದ್ದೇನೆ." *

# ಸೈನ್ಯಾಧಿಕಾರಿಗಳಾಗಬಯಸುವಿರಾ ?

"ಅಮೃತ"ದಿಂದ

ಆರ್ಟ್ಸ್, ಸಾಯನ್ಸ್, ಎಂಜನಿಯರಿಂಗ್, ಮೆಡಿಕಲ್ ಮತ್ತು ಕಾಮರ್ಸ್ ಪದವಿಗಳ ಅಭ್ಯಾಸಕ್ರಮದ ಮಾಹಿತಿ ಸಾಮಾನ್ಯ ಜನರಿಗಿರುವಂತೆ ಸೈನಿಕ ಶಿಕ್ಷಣವೀಯುವ ಸಂಸ್ಥೆಗಳ ಮತ್ತು ಅಲ್ಲಿ ಕಲಿತವರಿಗೆ ಸಿಗುವ ಪದವಿ, ನೌಕರಿ ಇತ್ಯಾದಿಗಳ ವಿಚಾರ ತಿಳಿದಿರುವುದಿಲ್ಲ.

ಸೈನ್ಯದಲ್ಲಿಯ ಅಧಿಕಾರ ಸ್ಥಾನಗಳೂ ಆಕರ್ಷಕವಾಗಿವೆ. ಆದ್ದರಿಂದ ಇಲ್ಲಿ ಸೈನ್ಯಾಧಿಕಾರಿಗಳಾಗಬಯಸುವವರಿಗೆ ಅನುಕೂಲವಾಗಲೆಂದು ಅವು ಎಷ್ಟು ಬಗೆಯುವಿವೆ, ಎಲ್ಲಿ ಶಿಕ್ಷಣ ಪಡೆಯಬೇಕು ಎಂಬಿತ್ಯಾದಿ ವಿಚಾರಗಳ ಸ್ಥೂಲ ಮಾಹಿತಿಯನ್ನು ಇಲ್ಲಿ ಕೊಟ್ಟಿದೆ

೧. ನ್ಯಾಶನಲ್ ಡಿಫೆನ್ಸ್ ಅಕಾಡಮಿ-ಖಡಕವಾಸಲಾ :

ಇಲ್ಲಿಯ ಅಭ್ಯಾಸ ಕ್ರಮ ನಾಲ್ಕು ವರ್ಷದ್ದು. ವರ್ಷದಲ್ಲಿ ಎರಡು ಸಲ ಅಂದರೆ ಜೂನ್ ಮತ್ತು ಡಿಸೆಂಬರ ತಿಂಗಳಲ್ಲಿ ಪರೀಕ್ಷೆ ನಡೆಯುವುದು. ಇಲ್ಲಿ ಕಲಿಯಬಯಸುವರು ಆರು ತಿಂಗಳ ಮೊದಲೇ ಅರ್ಜಿ ಹಾಕಿಕೊಳ್ಳಬೇಕಾಗುವುದು. ಅರ್ಜಿಯ ಕಾಗದ ರಿಕ್ರೂಟಿಂಗ್ ಆಫೀಸಿನಿಂದ ಪುಕ್ಕಟೆಯಾಗಿ ಸಿಗುವುದು.

ಅರ್ಜಿ ಮಾಡುವಾಗ ಅರ್ಜಿದಾರನ ವಯಸ್ಸು ೧೫॥ ಯಿಂದ ೧೭ ರ ಒಳಗೆ ಇರಬೇಕು.

ಅರ್ಜಿದಾರನ ಶಿಕ್ಷಣ: ಎಸ್. ಎಸ್. ಸಿ. ಪಾಸ್ (ಎಸ್. ಎಸ್. ಸಿ. ವರ್ಗದಲ್ಲಿರುವಾಗಲೇ ಅರ್ಜಿ ಮಾಡಿಕೊಳ್ಳಲೂಬಹುದು).

ಪರೀಕ್ಷೆಯ ವಿಷಯಗಳು ಇಂಗ್ಲೀಷ್, ಅಂಕಗಣಿತ, ಬೀಜಗಣಿತ, ಭೂಮಿತಿ, ಸಾಮಾನ್ಯಜ್ಞಾನ, ಒಟ್ಟು ಇವೆಲ್ಲವಕ್ಕೆ ೬೦೦ ಗುಣಗಳು. ಎಲ್ಲ ಪೇಪರುಗಳನ್ನೂ ಇಂಗ್ಲೀಷಿನಲ್ಲಿ ಬರೆಯಬೇಕು. ಪರೀಕ್ಷೆಯಲ್ಲಿ ಪಾಸಾದವರನ್ನು ಇಂಟರ್‌ವ್ಯೂಗೆ ಕರೆಯುವರು. ಇಂಟರ್‌ವ್ಯೂದಲ್ಲಿ ೬೦೦ ಗುಣಗಳು. ಶರೀರ ಕಾರ್ಯಕ್ಷಮತೆಗಾಗಿ ೨೦೦ ಗುಣಗಳು. ಎತ್ತರ ಮತ್ತು ತೂಕ ಸರಿಯಾಗಿರಬೇಕು. ನಿರೋಗಿಯೂ ಯಾವ ಅವಯವ ನ್ಯೂನತೆಯಿರದವನೂ ಆಗಿರಬೇಕು. ಖಡಕವಾಸಲಾದ ಕೋರ್ಸು ಮುಗಿಸಿದವರು ಭೂ, ಜಲ, ವಾಯುಪಡೆಗಳಲ್ಲಿ ಅಧಿಕಾರಿಗಳಾಗಬಲ್ಲರು.

ಅರ್ಜಿಯನ್ನು "ಸೆಕ್ರೆಟರಿ, ಯೂನಿಯನ್ ಪಬ್ಲಿಕ್ ಸರ್ವಿಸ್ ಕಮೀಶನ್, ಧೋಲಪುರ ಹೌಸ್, ಹೊಸದಿಲ್ಲಿ—೧೧" ಇವರಿಗೆ ಮಾಡಿಕೊಳ್ಳಬೇಕು.

೨. ಇಂಡಿಯನ್ ಮಿಲಿಟರಿ ಅಕಾಡಮಿ—ಡೆಹರಾಡೂನ್:

ಅಭ್ಯಾಸ ಕ್ರಮ ಎರಡು ವರ್ಷದ್ದು. ವರ್ಷದಲ್ಲಿ ಎರಡು ಸಲ (ಎಪ್ರಿಲ್-ಮೇ ಮತ್ತು ನವೆಂಬರ-ಡಿಸೆಂಬರ್) ಅರ್ಜಿಯನ್ನು ಪರೀಕ್ಷೆಗೆ ಆರು ತಿಂಗಳು ಮೊದಲು ಮಾಡಿಕೊಳ್ಳಬೇಕು. ಅರ್ಜಿಯ ಕಾಗದ ರಿಕ್ರೂಟಿಂಗ್ ಆಫೀಸಿನಲ್ಲಿ ಪುಕ್ಕಟೆ ದೊರೆಯುವುದು.

ಅರ್ಜಿಮಾಡುವಾಗ ವಯಸ್ಸು ೧೭ ರಿಂದ ಇಪ್ಪತ್ತರೊಳಗೆ ಇರಬೇಕು.

ಅರ್ಜಿದಾರನ ಶಿಕ್ಷಣ—ಇಂಟರ್, ಫಸ್ಟ್

ಯಿಯರ್ ಬಿ. ಎ. ಅಥವಾ ತತ್ಸಮ ಪರೀಕ್ಷೆ (ಇಂಟರಿನಲ್ಲಿರುವಾಗ ಅರ್ಜಿ ಮಾಡಿಕೊಳ್ಳಲು ಬರುತ್ತದೆ.)

ಪರೀಕ್ಷೆಯ ವಿಷಯ: ಇಂಗ್ಲೀಷ್, ಅಂಕಗಣಿತ, ಬೀಜಗಣಿತ, ಭೂಮಿತಿ, ತ್ರಿಕೋಣಮಿತಿ, ಸಾಮಾನ್ಯಜ್ಞಾನ, ಇವೆಲ್ಲವಕ್ಕೆ ೬೦೦ ಗುಣಗಳು. ಇಂಟರವ್ಯೂನಲ್ಲಿ ೬೦೦ ಗುಣಗಳು. ಶಾರೀರಿಕ ಸುಸ್ಥಿತಿಗೆ ೨೦೦ ಗುಣಗಳು. ಈ ಅಭ್ಯಾಸ ಕ್ರಮ ಮುಗಿಸಿದವರು ಕೇವಲ ಭೂಪಡೆಯಲ್ಲಿ ಮಾತ್ರ ಅಧಿಕಾರಿಗಳಾಗಬಲ್ಲರು.

ಅರ್ಜಿಯನ್ನು "ಸೆಕ್ರೆಟರಿ, ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಶನ್, ಧೋಲಪುರ ಹೌಸ್, ಹೊಸದಿಲ್ಲಿ ೧೧" ಇವರಿಗೆ ಮಾಡಿಕೊಳ್ಳಬೇಕು.

೩. ಏರ್‌ಫೋರ್ಸ್ ಫ್ಲಾಯಿಂಗ್ ಕಾಲೇಜ್, ಜೋಧಪುರ:

ಇದರ ಅಭ್ಯಾಸ ಕ್ರಮ ೧॥ ವರ್ಷದ್ದು. ಎಪ್ರಿಲ್-ಮೇ ಮತ್ತು ನವೆಂಬರ್-ಡಿಸೆಂಬರ್ ತಿಂಗಳಲ್ಲಿ ವರ್ಷಕ್ಕೆ ಎರಡು ಸಲ ಪರೀಕ್ಷೆ. ಪರೀಕ್ಷೆಗೆ ಆರು ತಿಂಗಳು ಮೊದಲು ಅರ್ಜಿ ಮಾಡಿಕೊಳ್ಳಬೇಕು. ಅರ್ಜಿಯ ಕಾಗದ ರಿಕ್ರೂಟಿಂಗ್ ಆಫೀಸಿನಲ್ಲಿ ಪುಕ್ಕಟೆ ಸಿಗುವುದು.

ಅರ್ಜಿ ಮಾಡುವಾಗ ವಯಸ್ಸು ೧೬॥ ಯಿಂದ ೨೦ ರೊಳಗಿರಬೇಕು.

ಶಿಕ್ಷಣ: ಮ್ಯಾಟ್ರಿಕ್ ಅಥವಾ ತತ್ಸಮ ಪರೀಕ್ಷೆ ಪಾಸಾಗಿರಬೇಕು. (ಎಸ್. ಎಸ್. ಸಿ. ವರ್ಗದಲ್ಲಿರುವಾಗ ಅರ್ಜಿ ಹಾಕಿಕೊಳ್ಳಬಹುದು.)

ಪರೀಕ್ಷೆಯ ವಿಷಯ: ಇಂಗ್ಲಿಷ್, ಅಂಕಗಣಿತ, ಬೀಜಗಣಿತ, ಭೂಮಿತಿ, ಸಾಮಾನ್ಯಜ್ಞಾನ. ೬೦೦ ಗುಣಗಳು. ಇಂಟರವ್ಯೂ ಪ್ಯಾಲಟ್ ಆಪ್ಟಿಟ್ಯೂಡ್ ಟೆಸ್ಟ್ ಪರೀಕ್ಷೆ ಪಾಸಾದವರನ್ನಷ್ಟೆ ಇಂಟರವ್ಯೂಗೆ ಕರೆಯುತ್ತಾರೆ. ೬೦೦ ಗುಣಗಳು. (ಪ್ಯಾಲಟ್ ಆಪ್ಟಿಟ್ಯೂಡ್ ಟೆಸ್ಟ್ ಪರೀಕ್ಷೆಯಲ್ಲಿ ಒಮ್ಮೆ ನಾಪಾಸಾದರೆ ಮತ್ತೊಮ್ಮೆ ಆ ಪರೀಕ್ಷೆಗೆ ಕುಳಿತುಕೊಳ್ಳಲು ಬರುವುದಿಲ್ಲ. ಶಾರೀರಿಕ ಸುಸ್ಥಿತಿಗೆ ೨೦೦ ಗುಣಗಳು. ಈ ಅಭ್ಯಾಸ ಪೂರ್ತಿಗೊಳಿಸಿದವರು ಕೇವಲ ಪ್ಯಾಲಟ್ ಅಥವಾ ನೆವಿಗೇಟರ್ ಆಗಬಹುದು.

ಇದಕ್ಕಾಗಿ ಮಾಡಿಕೊಳ್ಳುವ ಅರ್ಜಿಗಳನ್ನೂ ಮೊದಲಿನ ಎರಡು ಅಭ್ಯಾಸ ಕ್ರಮಗಳಿಗಾಗಿ ಹೇಳಿದ ವಿಳಾಸಕ್ಕೇ ಮಾಡಿಕೊಳ್ಳಬೇಕು.

೪. ಸ್ಪೆಶಲ್ ಎಂಟ್ರಿ ನೇವಿ— ಒಂದು ವರ್ಷ ಖಡಕವಾಸಲಾದಲ್ಲಿ ಮತ್ತು ಒಂದು ವರ್ಷ ಮುಂಬಯಿಯಲ್ಲಿ ಒಟ್ಟು ಎರಡು ವರ್ಷಗಳು.

ಪರೀಕ್ಷೆ ವರ್ಷದಲ್ಲಿ ಎರಡು ಸಲ (ಜೂನ್-ಜುಲೈ ಮತ್ತು ನವೆಂಬರ್-ಡಿಸೆಂಬರ್). ಪರೀಕ್ಷೆಗೆ ಆರು ತಿಂಗಳು ಮೊದಲು ಅರ್ಜಿ ಮಾಡಿಕೊಳ್ಳಬೇಕು

ಅರ್ಜಿದಾರನ ವಯಸ್ಸು ೧೭ ರಿಂದ ೧೯ ರೊಳಗೆ ಇರಬೇಕು.

ಶಿಕ್ಷಣ: ಇಂಟರ್ ಪಾಸ್ ಅಥವಾ ತತ್ಸಮ ಪರೀಕ್ಷೆಯಲ್ಲಿ ಪಾಸಾಗಿರಬೇಕು.

ಪರೀಕ್ಷೆಯ ವಿಷಯ: ಇಂಗ್ಲಿಷ್, ಅಂಕಗಣಿತ ಬೀಜಗಣಿತ, ಭೂಮಿತಿ, ಸಾಮಾನ್ಯಜ್ಞಾನ ಮತ್ತು ರಸಾಯನ ವಿಜ್ಞಾನ. ಒಟ್ಟು ೧,೨೦೦ ಗುಣಗಳು. ಮೇಲಿನ ವಿಷಯಗಳ ಜೊತೆಗೆ ಹಾಯರ್ ಮ್ಯಾಥಮೆಟಿಕ್ಸ್ ಅಥವಾ ಇಂಗ್ಲಂಡ್ ಇಲ್ಲವೆ ಹಿಂದುಸ್ಥಾನದ ಇತಿಹಾಸಗಳಲ್ಲಿ ಒಂದನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳಬೇಕಾಗುತ್ತದೆ. ೩೦೦ ಗುಣಗಳು. ಇಂಟರ್‌ವ್ಯೂಗೆ ೬೦೦ ಗುಣಗಳು. ಶರೀರಕ ಸುಸ್ಥಿತಿಗೆ ೨೦೦ ಗುಣಗಳು. ಈ ಅಭ್ಯಾಸ ಮುಗಿಸಿದವರು ಕೇವಲ ನೌಕಾಪಡೆಯಲ್ಲಿ ಅಧಿಕಾರಿಗಳಾಗಬಲ್ಲರು.

ಇದಕ್ಕೂ ಮೇಲೆ ಹೇಳಿದ ಹೊಸದಿಲ್ಲಿಯ ವಿಳಾಸಕ್ಕೆ ಅರ್ಜಿ ಮಾಡಿಕೊಳ್ಳಬೇಕು.

೫. ಆಫೀಸರ್ಸ್ ಟ್ರೇನಿಂಗ್ ಯುನಿಟ್ :-

ಎನ್. ಸಿ. ಸಿ. ಯಲ್ಲಿ ಅಧಿಕಾರಿಗಳಾಗಬಯಸು ವವರಿಗೆ. ಪ್ರತಿ ವರ್ಷ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ಇತರ ಪಥಕಗಳಲ್ಲೂ ೨೫೦ ಜನರನ್ನು ಸೇರಿಸಿಕೊಳ್ಳುತ್ತಾರೆ.

ವಯಸ್ಸು: ಟೆಕ್ನಿಕಲ್ ಪದವೀಧರರಿಗೆ ೨೦ ರಿಂದ ೨೬, ವೈದ್ಯಕೀಯ ಪದವೀಧರರರಿಗೆ ೨೦ ರಿಂದ ೩೦ ಮತ್ತು ಇತರ ಪಥಕಗಳಿಗೆ ೧೯ ರಿಂದ ೨೨.

ಪ್ರಿ-ಡಿಗ್ರಿ ಪಾಸಾಗಿ ಮೂರು ವರ್ಷಗಳಲ್ಲಿ ಪದವಿ ಸಂಪಾದಿಸಿದವರು ಮತ್ತು ಎನ್. ಸಿ. ಸಿ. ಯಲ್ಲಿಯ ಬಿ. ಅಥವಾ ಸಿ. ಸರ್ಟಿಫಿಕೇಟ್ ಪಡೆದವರು ಒಂದು ವರ ಮಿಲಿಟರಿ ಅಕಾಡೆಮಿಯಲ್ಲಿ ಶಿಕ್ಷಣಹೊಂದಿ ಅಧಿಕಾರಿಗಳಾಗಬಲ್ಲರು.

ಅರ್ಜಿಯ ಕಾಗದ ಎನ್. ಸಿ. ಸಿ. ಆಫೀಸ್ ಅಥವಾ ಎನ್. ಸಿ. ಸಿ. ಸರ್ಕಲ್ ಕಮಾಂಡರರಲ್ಲಿ ದೊರೆಯುತ್ತದೆ. ಅದನ್ನು ತುಂಬಿ ಅವರೆಡೆಗೆ ಕಳಿಸಬೇಕು. ಈ ಅಭ್ಯಾಸ ಕ್ರಮಕ್ಕೆ ಲೇಖಿ ಪರೀಕ್ಷೆ ಇರುವುದಿಲ್ಲ. ಆಯ್ಕೆ ಸಮಿತಿ ಉಮೇದುವಾರರ ಆಯ್ಕೆ ಮಾಡುತ್ತದೆ. ಆಯ್ಕೆ ಹೊಂದಿದ ವಿದ್ಯಾರ್ಥಿಗಳು ಓ. ಟಿ. ಯು. ಕ್ಯಾಂಪ್ಸ್ ಪೂರ್ಣ ಮಾಡಬೇಕಾಗುವುದು. ನಿಶ್ಚಿತ ಅವಧಿಯಲ್ಲಿ ಪದವೀ ಪರೀಕ್ಷೆ ಪಾಸು ಮಾಡಬೇಕಾಗುತ್ತದೆ. ಮತ್ತು ಸೈನ್ಯಶಾಖೆಯಲ್ಲಿ ನೌಕರಿ ಮಾಡುವೆನೆಂಬ ಪ್ರತಿಜ್ಞೆಯನ್ನು ಬರೆದು ಕೊಡಬೇಕಾಗುವುದು. (ಆಯ್. ಎ. ಎಸ್., ಆಯ್. ಎಫ್. ಎಸ್. ಗೆ ಹೋಗುವವರಿಗೆ ಈ ಕರಾರಿರುವುದಿಲ್ಲ.)

೬ ಏರ್‌ಫೋರ್ಸ್ ಟೆಕ್ನಿಕಲ್ ಆಫೀಸರ್ಸ್: ಎಂಜಿನಿಯರಿಂಗ್, ಇಲೆಕ್ಟ್ರಿಕಲ್, ಸಿಗಲ್ಸ್ ಮತ್ತು ಆರ್ಮಾಮೆಂಟ್ಸ್ ಬ್ರಾಂಚೆಸ್.

ವಯಸ್ಸು: ೧೮ ರಿಂದ ೨೮ ಶಿಕ್ಷಣ ಎಂಜಿನಿಯರಿಂಗ್ ಪದವಿ. ಕೆಲ ನಿಯಮಗಳಿಗೊಳಪಟ್ಟು ಎಂಜಿನಿಯರಿಂಗ್ ಡಿಪ್ಲೊಮಾ. ಸಿಗ್ನಲ್ಸ್‌ಗಾಗಿ ಎಂ. ಎಸ್‌ಎಸ್. ಸಿ. ರೇಡಿಯೋ ಕಾಪ್ ಆದವರು ಲಗ್ನವಾಗಿದ್ದರೂ ಈ ಅಭ್ಯಾಸ ಕ್ರಮಕ್ಕೆ ಅರ್ಹರಾಗುತಾರೆ.

ಇದಕ್ಕಾಗಿ ಅರ್ಜಿಯನ್ನು "ಡೈರೆಕ್ಟರೇಟ್ ಆಫ್ ಫರ್ಸನೆಲ್ ಓ (ಓ) ಇ, ಏರ್ ಹೆಡ್ ಕ್ವಾರ್ಟರ್ಸ್, ಹೊಸದಿಲ್ಲಿ" ಇವರಿಗೆ ಮಾಡಿಕೊಳ್ಳಬೇಕು. ಮಾಹಿತಿಗಾಗಿಯೂ ಇವರಿಗೆ ಬರೆದುಕೊಳ್ಳಬೇಕು.

೭. ಏರ್‌ಫೋರ್ಸ್ ನಾನ್‌ಟೆಕ್ನಿಕಲ್ ಆಫೀಸರ್ಸ್.

ಎಜ್ಯುಕೇಶನ್, ಅಕೌಂಟ್ಸ್, ಇಕ್ವಿಪ್‌ಮೆಂಟ್, ಅಡ್‌ಮಿನಿಸ್ಟ್ರೇಟಿವ್ ಮತ್ತು ಸ್ಪೆಶಲ್ ಡ್ಯೂಟೀಜ್ ಶಾಖೆಗಳಿಗಾಗಿ.

ಎಜ್ಯುಕೇಶನ್ ಶಾಖೆ: ವಯಸ್ಸು: ೨೧-೨೫.

ಶಿಕ್ಷಣ: ಆನರ್ಸ್ ಗ್ರಾಜ್ಯುಯೇಟ್ ಮತ್ತು ಶೈಕ್ಷಣಿಕ ಡಿಗ್ರಿ, ಅಥವಾ ಡಿಪ್ಲೊಮಾ. (ಇಲ್ಲವೆ ಎರಡು ವರ್ಷ ಶಿಕ್ಷಣವಿತ್ತ ಅನುಭವ.)

ಅಕೌಂಟ್ಸ್ ಶಾಖೆ: ವಯಸ್ಸು ೨೧ ರಿಂದ ೨೩ ಬಿ. ಕಾಮ್. ಪದವೀಧರರಾಗಿರಬೇಕು.

ಇಕ್ವಿಪ್‌ಮೆಂಟ್ ಶಾಖೆ: ವಯಸ್ಸು ೨೧ ರಿಂದ. ೨೩. ಆನರ್ಸ್ ಗ್ರಾಜ್ಯುಯೇಟ್.

ಅಡ್‌ಮಿನಿಸ್ಟ್ರೇಟಿವ್ ಮತ್ತು ಸ್ಪೆಶಲ್ ಡ್ಯೂಟೀಜ್ ಶಾಖೆ: ವಯಸ್ಸು ೧೯ ರಿಂದ ೨೩. ಆನರ್ಸ್ ಗ್ರಾಜ್ಯುಯೇಟ್ ಇಲ್ಲವೆ ಲಾ ಗ್ರಾಜ್ಯುಯೇಟ್.

ಹೆಚ್ಚಿನ ಮಾಹಿತಿ ಪಡೆಯಲು "ಡೈರೆಕ್ಟರೇಟ್ ಆಫ್ ಪರ್ಸನಲ್ ಓ (ಓ) ಇ, ಏರ್ ಹೆಡ್‌ಕ್ವಾರ್ಟರ್ಸ್, ಹೊಸದಿಲ್ಲಿ ೧೧" ಇವರಿಗೆ ಬರೆದುಕೊಳ್ಳಬೇಕು.

ಈ ಶಿಕ್ಷಣದ ಅವಧಿ ೫೨ ವಾರವಿದ್ದು ಏರ್‌ಫೋರ್ಸ್ ಅಡ್‌ಮಿನಿಸ್ಟ್ರೇಟಿವ್ ಕಾಲೇಜ್, ಕೊಯಿಮತ್ತೂರ್‌ನಲ್ಲಿ ನಡೆಯುವುದು.

೮. ಟೆಕ್ನಿಕಲ್ ಗ್ರಾಜ್ಯುಯೇಟ್ಸ್ ಕೋರ್ಸ್ (ಆರ್ಮಿ).

೧) ಎಂಜಿನಿಯರ್ಸ್: ವಯಸ್ಸು ೨೦ ರಿಂದ

೨೭. ಶಿಕ್ಷಣ ಇಂಜನಿಯರಿಂಗ್ ಪದವಿ.

೨) ಸಿಗ್ನಲ್ಸ್: ವಯಸ್ಸು ೨೦ ರಿಂದ ೨೭. ಶಿಕ್ಷಣ–ಎಂಜನಿಯರಿಂಗ್ ಪದವಿ ಇಲ್ಲವೆ ಫಿಜಿಕ್ಸ್, ಮ್ಯಾಥಮೆಟಿಕ್ಸ್ ತೆಗೆದುಕೊಂಡು ಆನರ್ಸ್ ಪದವಿ ಅಥವಾ ಫಿಜಿಕ್ಸ್ ತೆಗೆದುಕೊಂಡು ಎಂ. ಎಸ್‌ಸಿ. ಪದವಿ ( ರೇಡಿಯೊ ಇಲೆಕ್ಟ್ರಾನಿಕ್ಸ್ ಪದವಿಯೂ ನಡೆಯುವುದು )

ಇಂಡಿಯನ್ ಮಿಲಿಟರಿ ಅಕಾಡಮಿಯಲ್ಲಿ ಒಂದು ವರ್ಷ ಅಭ್ಯಾಸ ಮಾಡಬೇಕಾಗುವುದು. ಲೇಖಿ ಪರೀಕ್ಷೆಯಿಲ್ಲ. ಆಯ್ಕೆ ಸಮಿತಿಯು ಉಮೇದುವಾರರ ಆಯ್ಕೆ ಮಾಡುವುದು.

ಅರ್ಜಿ ಮಾಡುವ ಮತ್ತು ಮಾಹಿತಿ ಪಡೆಯುವ ಸ್ಥಳ: ಆರ್ಮಿ ಹೆಡ್‌ಕ್ವಾರ್ಟರ್ಸ್, ಅಡ್ಜುಟೆಂಟ್ ಜನರಲ್ಸ್ ಬ್ರ್ಯಾಂಚ್, ORG/SPZ, DHQ Po. ಹೊಸದಿಲ್ಲಿ ೧೧.

೯. ಇಂಡಿಯನ್ ನೇವಿ ಎಗ್ಜಿಕ್ಯೂಟಿವ್ ಆಫಿಸರ್ಸ್ : ವಯಸ್ಸು ೧೯ ರಿಂದ ೨೩

ಶಿಕ್ಷಣ : ಮ್ಯಾಥಮೆಟಿಕ್ಸ್ ಮತ್ತು ಫಿಜಿಕ್ಸ್ ತೆಗೆದುಕೊಂಡು ಪದವಿ ಪಡೆದಿರಬೇಕು ಇಲ್ಲವೆ ಸರ್ಟಿಫಿಕೆಟ್ ಆಫ್ ಕಾಂಪಿಟನ್ಸಿ ಮಿನಿಸ್ಟ್ರಿ ಆಫ್ ಟ್ರಾನ್ಸ್‌ಪೋರ್ಟ್ ಪಡೆದಿರಬೇಕು.

ಮಾಹಿತಿಗಾಗಿ "ನೇವಲ್ HQ. DHQ. Po. ಹೊಸದಿಲ್ಲಿ ೧೧" ಈ ವಿಳಾಸಕ್ಕೆ ಬರೆದುಕೊಳ್ಳಬೇಕು.

೧೦. ಇಂಡಿಯನ್ ನೇವಿ ಇನ್‌ಸ್ಟ್ರಕ್ಟರ್ ಆಫೀಸರ್ಸ್ : ವಯಸ್ಸು–೨೧ ರಿಂದ ೨೫.

ಶಿಕ್ಷಣ : ಫಿಜಿಕ್ಸ್ ಮತ್ತು ಮ್ಯಾಥಮ್ಯಾಟಿಕ್ಸ್‌ಗಳಲ್ಲಿ ಫಸ್ಟ್‌ಕ್ಲಾಸ್ ಅಥವಾ ಸೆಕೆಂಡ್‌ಕ್ಲಾಸ್ ಇಲ್ಲವೆ ಆನರ್ಸ ಪದವಿ ಪಡೆದಿರಬೇಕು. ಎಂಜಿನಿಯರಿಂಗ್ ಗ್ರಾಜ್ಯುಯೇಟರೂ ಅರ್ಹರಾಗಿರುತ್ತಾರೆ.

ಮಾಹಿತಿಗಾಗಿ " ನೇವಲ್ HQ. ( C & to Section) DHQ. Po. ಹೊಸದಿಲ್ಲಿ ೧೧" ಈ ವಿಳಾಸಕ್ಕೆ ಬರೆದುಕೊಳ್ಳಬೇಕು.

೧೧. ಸೈನಿಕರಿಗಾಗಿ ಕಮಿಶನ್ : ವಯಸ್ಸು: ೨೧ ರಿಂದ ೩೭.

ಶಿಕ್ಷಣ : ಮ್ಯಾಟ್ರಿಕ್ ಅಥವಾ ತತ್ಸಮ ಪರೀಕ್ಷೆ ಇಲ್ಲವೆ ಆರ್ಮಿ ಸ್ಪೆಶಲ್ ಪರೀಕ್ಷೆಯಾಗಿರಬೇಕು.

ಎರಡು ವರ್ಷ ನೌಕರಿ ಮಾಡಿದ ಮೇಲೆ ಕಮೀಶನ್ನಿಗಾಗಿ ಅರ್ಜಿ ಮಾಡಿಕೊಂಡು ಆಯ್ಕೆ ಸಮಿತಿಯೆದುರು ಹೋಗಲು ಬರುತ್ತದೆ. ಆಯ್ಕೆಯಾದ ನಂತರ ಎರಡು ವರ್ಷ ಮಿಲಿಟರಿ ಅಕಾಡಮಿಯಲ್ಲಿ ಶಿಕ್ಷಣ ಹೊಂದಿದ ಮೇಲೆ ಕಮಿಶನ್ ಸಿಗುತದೆ.

ರಿಕ್ರೂಟಿಂಗ್ ಆಫೀಸಿನಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದು. ಈ ಮೇಲಿನ ಕಮಿಶನ್ನುಗಳೆಲ್ಲ ಕ್ಲಾಸ್ ಒನ್ ಆಫೀಸರರದಾಗಿರುತ್ತವೆ. ಪ್ರಾರಂಭದ ಸಂಬಳ ರೂ. ೪೦೦ ಮತ್ತು ಭತ್ತೆ. ಭೂಪಡೆಯಲ್ಲಿ ಮೊದಲು ಸೆಕೆಂಡ್ ಲೆಫ್ಟನಂಟ್ ನೌಕಾಪಡೆಯಲ್ಲಿ ಸಬ್ ಲೆಫ್ಟನಂಟ್ ಮತ್ತು ವಾಯುಪಡೆಯಲ್ಲಿ ಪೈಲಟ್ ಆಫೀಸರ್. ತೀರ ಹೆಚ್ಚಿನ ಸಂಬಳವೆಂದರೆ ೧,೦೦೦ ರೂಪಾಯಿಗಳು. ೧೫ ವರ್ಷ ಸರ್ವೀಸಾದ ಮೇಲೆ ನಿವೃತ್ತಿವೇತನ ಪಡೆಯುವ ಹಕ್ಕು ಇದೆ.

೧೨ ಟೆರಿಟೋರಿಯಲ್ ಆರ್ಮಿ ಕಮಿಶನ್.

ವಯಸ್ಸು ೧೮ ರಿಂದ ೩೫. ಶಿಕ್ಷಣ ಮ್ಯಾಟ್ರಿಕ್ ಅಥವಾ ತತ್ಸಮ ಪರೀಕ್ಷೆ. ಆಯ್ಕೆ ಸಮಿತಿಯು ಉಮೇದುವಾರರನ್ನಾರಿಸುವುದು. ತಮ್ಮ ಉದ್ಯೋಗ ಮಾಡಿಕೊಂಡು ವರ್ಷದಲ್ಲಿ ೨-೩ ತಿಂಗಳು ನೌಕರಿ ಮಾಡುವವರಿಗೆ ಈ ಕಮಿಶನ್ ಉತ್ತಮ. ಸಂಬಳ ಮೇಲಿನ ಕಮೀಶನ್ನುಗಳಂತೆಯೆ. ಆದರೆ ಕೆಲಸಮಾಡುವ ಅವಧಿಯಲ್ಲಿ ಮಾತ್ರ ಸಿಗುವುದು. ನೌಕರಿ ಕಾಯಮ್ಮಾಗುವ ಸಂಭವವೂ ಉಂಟು.

ಕಮಾಂಡ್ ಹೆಡ್‌ಕ್ವಾರ್ಟರ್ಸ್ ಅಥವಾ ರಿಕ್ರೂಟಿಂಗ್ ಆಫೀಸಿನಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದು. ★



ಅವರು
ನಾವೆಣಿಸಿದ್ದ
ಕ್ಕಿಂತ ಹೆಚ್ಚು
ಸ್ವತಂತ್ರ
ರಿದ್ದರು.

# ವಿಜಯನಗರದ

ಪ್ರೊ. ಜಿ. ಆರ್

ಸ್ತ್ರೀಯರು ಹುಟ್ಟಿದಂದಿನಿಂದ ಸಾಯುವ ವರೆಗೂ ಪರಾಧೀನರಾಗಿ ಬಾಳಬೇಕಾಗಿತ್ತೆಂಬ ಭಾವನೆ ಮನುವಿನ ಕಾಲದಲ್ಲಿಯೇ ಅಲ್ಲ, ವಿಜಯನಗರದ ಸಾಹಿತಿಗಳ ಕಾವ್ಯದಲ್ಲಿ ಕೂಡ ಕಂಡುಬರುತ್ತದೆಂದು ನಮಗೆ ವ್ಯಕ್ತವಾಗುತ್ತದೆ. ಆದರೆ ಐತಿಹಾಸಿಕ ಆಧಾರಗಳು ಹೇಳುವ ಕಥೆಯೇ ಬೇರೆ. ಹೆಂಗಸರು ಆಸ್ತಿಗೆ ಅರ್ಹರು, ಕೈಗಾರಿಕೆ, ವ್ಯವಸಾಯ , ಅರಮನೆಯ ಊಳಿಗ ಮತ್ತಿತರ ಉದ್ಯೋಗಗಳಲ್ಲಿ ಅವರು ಭಾಗವಹಿಸುತ್ತಿದ್ದರು. ಸಂಗೀತ, ನೃತ್ಯ ಮುಂತಾದ ಲಲಿತ ಕಲೆಗಳಲ್ಲಿ ಸ್ತ್ರೀಯರು ಮೌರ್ಯರ ಕಾಲದಿಂದಲೂ ಪ್ರಾವೀಣ್ಯ ಪಡೆದಿದ್ದರು. ಅದರಲ್ಲಿಯೂ ದಕ್ಷಿಣ ಭಾರತದ ಸ್ತ್ರೀಯರು ಮೊದಲಿನಿಂದಲೂ ಅರಮನೆ ಮತ್ತು ವ್ಯವಹಾರ ಕ್ಷೇತ್ರಗಳಲ್ಲಿಯೇ ಅಲ್ಲದೆ ರಾಜ್ಯಾಡಳಿತದಲ್ಲಿಯೂ ಪ್ರಮುಖ ಪಾತ್ರ ವಹಿಸಿದ್ದರು.

ರಾಷ್ಟ್ರಕೂಟ ಕನ್ನರದೇವನ ಕಾಲದಲ್ಲಿ ಜಕ್ಕಿಯಬ್ಬೆಯು ತನ್ನ ಗಂಡನ ತರುವಾಯ ನಾಗರಖಂಡದ ನಾಡಗೌಡನ ಅಧಿಕಾರ ವಹಿಸಿ ಅತ್ಯುತ್ತಮ ರೀತಿಯಿಂದ ರಾಜ್ಯಾಡಳಿತ ನಡೆಸಿದ್ದಲ್ಲದೆ ಜೈನಶಾಸನವನ್ನು ರಕ್ಷಿಸಿದಳು. ಅವಳು ಅತಿ ಸುಂದರಿಯಾದ ಹೆಂಗಸೆಂದು ಹೆಸರು ಕೂಡ ಪಡೆದಳೆಂದು ಕ್ರಿ. ಶ. ೯೧೮ ರ ಶಾಸನವೊಂದು ಹೇಳುತ್ತದೆ. ರಾಣಿ ಸೋವಲದೇವಿಯು (೧೨ ನೇ ಶತಮಾನದಲ್ಲಿ) ಮಂತ್ರಿಯಾಗಿದ್ದಳು. ರಾಣಿ ರುದ್ರಾಂಬೆಯು ಕ್ರಿ. ಶ. ೧೨೬೦ ರಿಂದ "ಮಹಾಮಂಡಳೇಶ್ವರ ರುದ್ರದೇವ ಮಹಾರಾಯ"ನೆಂಬ ಹೆಸರಿಟ್ಟುಕೊಂಡು ಆಳುತ್ತಿದ್ದಳು. ಇದೇ ಕಾರಣದಿಂದ ಪಾಂಡ್ಯ ಅರಸ ವಿಕ್ರಮನು ತನ್ನ ದಂಡಯಾತ್ರೆಯನ್ನು ಮುಂದೂಡಿದನು. ಸ್ತ್ರೀಯರು ಧರ್ಮಸಂಸ್ಥೆಯ ಆಡಳಿತವನ್ನು ಕೂಡ ಕುಶಾಗ್ರಮತಿಯಿಂದ ನಡೆಸುತ್ತಿದ್ದರು.

# ರಮಣಿಯರು

ಕುಪ್ಪುಸ್ವಾಮಿ

ಪಾಂಡಿತ್ಯ, ಕಲೆ, ನಿರಾಡಂಬರ ಸೌಂದರ್ಯ, ವೇಷಭೂಷಣ, ಧರ್ಮನಿಷ್ಠೆ ಸಹಜ ಸ್ವಭಾವ ಎಲ್ಲದರಲ್ಲಿಯೂ ವಿಜಯನಗರದ ಸ್ತ್ರೀಯರು ಅವರ ಹಿಂದಿನ ಸೋದರಿಯರನ್ನು ಮೀರಿಸಿದ್ದರು. ವಿಜಯನಗರವು ಸ್ತ್ರೀ ಸ್ವಾತಂತ್ರ್ಯದ ನೆಲೆವೀಡಾಗಿತ್ತು. ಅಲ್ಲಿಯ ಅರಸರು ಸನಾತನ ಧರ್ಮಕ್ಕೆ ಕಟ್ಟುಬೀಳದೆ ಸ್ತ್ರೀಯರಿಗೆ ಸಮಾನತೆಯ ಹಕ್ಕುಗಳನ್ನು ಕೊಟ್ಟಿದ್ದರು. ಲಕ್ಷ್ಮೀಶ, ವೇಮನ ಮೊದಲಾದ ಕವಿಗಳಿಗೆ ಸ್ತ್ರೀಸ್ವಾತಂತ್ರ್ಯವು ಬೇಕಾಗಿರಲಿಲ್ಲ. ಅರಸರು ಕೂಡ ಸ್ತ್ರೀಸಮಾಜದಲ್ಲಿ ಹಿಂದಿನಿಂದ ನಡೆದುಬಂದ ಸಹಗಮನ ಪದ್ಧತಿ, ವೇಶ್ಯಾ ಸಂಸ್ಥೆ, ದೇವರಿಗೆ ಹರಕೆ ಹೊರುವುದು, ವರದಕ್ಷಿಣೆ ಮೊದಲಾದ ದೋಷಗಳನ್ನು ನಿರ್ಮೂಲ ಮಾಡುವ ಸಾಹಸಕ್ಕೆ ಹೋಗಿ ಕ್ರಾಂತಿಕಾರರೆಂದೆನಿಸಿಕೊಳ್ಳಲಿಲ್ಲ.

ವರದಕ್ಷಿಣೆ ಯಾವ ರೂಪದಲ್ಲಿ ಕೊಡುತ್ತಿದ್ದರೆಂಬುದು ನಿಶ್ಚಯವಿಲ್ಲದಿದ್ದರೂ ಕೂಡ, ಅನೇಕ ಸಲ ಅದರಿಂದ ದುಷ್ಪರಿಣಾಮಗಳು ಉಂಟಾಗುತ್ತಿದ್ದವು. ಪಡೆವೀಡು ರಾಜ್ಯದ ಬ್ರಾಹ್ಮಣರೆಲ್ಲರೂ ಕೂಡಿ ಈ ಪದ್ಧತಿಯನ್ನು ತಪ್ಪಿಸಲು ಸೂಕ್ತ ಕ್ರಮಗಳನ್ನು ಅನುಸರಿಸುವ ಒಪ್ಪಂದವೊಂದನ್ನು ಮಾಡಿಕೊಂಡರೆಂಬುದಾಗಿ ೧೪೨೫ನೇ ಸಂವತ್ಸರದ ಶಾಸನವೊಂದರಿಂದ ತಿಳಿದು ಬರುತ್ತದೆ. ಈ ಒಪ್ಪಂದಕ್ಕೆ ಕನ್ನಡಿಗರು, ತಮಿಳರು ಮತ್ತು ತೆಲುಗರು ಸಹಿ ಹಾಕಿದ್ದರು.

ಸ್ತ್ರೀಯರು ಸ್ವಾತಂತ್ರ್ಯದ ಹವೆ ಉಂಡಿದ್ದರು. ಆದರೆ ಸ್ವೇಚ್ಛಾಚಾರಿಗಳಾಗಿರಲಿಲ್ಲ. ಬ್ರಾಹ್ಮಣ ಸ್ತ್ರೀಯರು ರಾಜ್ಯದಲ್ಲಿಯೇ ಅತಿ ಸುಂದರ ಯುವತಿಯರಾಗಿದ್ದರು. ಆದರೆ ಅವರು ಸಾಮಾನ್ಯವಾಗಿ ಮನೆಯನ್ನು ಬಿಟ್ಟು ಹೊರಹೋಗುತ್ತಿರಲಿಲ್ಲ.

ವಿಜಯನಗರದ ಸ್ತ್ರೀಯರು ಅನೇಕ ನೌಕರಿಗಳಲ್ಲಿ ತೊಡಗಿದ್ದರು. ಸುಮಾರು ೧೨,೦೦೦ ಸ್ತ್ರೀಯರು ಕಹಳೆಯವರಿಂದ ಹಿಡಿದು ಕತ್ತಿವರಸೆ ಸಂಗೀತ, ನೃತ್ಯ, ಕುಸ್ತಿ. ಲೆಕ್ಕವಿಡುವುದು, ರಾಜರ ಅಂಗರಕ್ಷಣೆ, ಅಡಿಗೆ ಕೆಲಸ, ಅರಮನೆ ಕಾವಲುಗಾರಿಕೆ, ರಾಣಿಯರ ದಾಸ್ಯ, ಅಗಸಗಿತ್ತಿ ಮೊದಲಾದ ಅರಮನೆಯ ಕೆಲಸಗಳಲ್ಲಿದ್ದರು. ಕೆಲವರು ಕಣಿ, ಜ್ಯೋತಿಷ್ಯ ಹೇಳುವುದಲ್ಲದೆ ನ್ಯಾಯಾಧೀಶರಾಗಿಯೂ ಇದ್ದರು. ಯುದ್ಧದಲ್ಲಿಯೂ ಭಾಗವಹಿಸುತ್ತಿದ್ದರು. ಗಂಗಾದೇವಿ, ತಿರುಮಲಾಂಬೆ, ಮೋಹನಾಂಗಿಯರಂಥ ಕವಯಿತ್ರಿಯರಿದ್ದರು. ಒಂದು ತಾಸಿಗೆ ನೂರು ಪದ್ಯಗಳಂತೆ ನಾಲ್ಕುವಿಧ ಕಾವ್ಯಗಳನ್ನು ಎಂಟು ಭಾಷೆಗಳಲ್ಲಿ ರಚಿಸುವ ಅರ್ಹತೆಯನ್ನು ಪಡೆದ ಸ್ತ್ರೀ ಸಾಹಿತಿಗಳಿದ್ದರು. ವೀಣೆ ಮೊದಲಾದ ವಾದ್ಯಗಳನ್ನು ನುಡಿಸುವುದು, ಕರ್ನಾಟಕ ಮತ್ತು ದೇಶ ಪದ್ಧತಿಗಳಲ್ಲಿ ಹಾಡುಗಾರಿಕೆ ಇವುಗಳನ್ನು ಬಲ್ಲವರಿದ್ದರು.

ಸಮಕಾಲೀನ ಸಾಹಿತಿಗಳಾದ ಕುಮಾರ ವಾಲ್ಮೀಕಿ, ವಿರೂಪಾಕ್ಷ ಪಂಡಿತ ಮತ್ತು ಪಾಯಣ್ಣವ್ರತಿಯು ಸ್ತ್ರೀಯರ ಸಹಜ ಸೌಂದರ್ಯ, ಅವರ ವೇಷಭೂಷಣವನ್ನು ಮನಮುಟ್ಟುವಂತೆ



ಗಳ ವರ್ಣಿಸಿದ್ದಾರೆ. ಕುಮಾರ ವಾಲ್ಮೀಕಿಯು ತೊರವೆ ರಾಮಾಯಣದಲ್ಲಿ ಸ್ತ್ರೀ ಸೌಂದರ್ಯ, ಆಭರಣಗಳ ವೈಖರಿಯನ್ನು ವರ್ಣಿಸಿರುವ ರೀತಿ ಹೀಗಿದೆ:

ಚರಣಕಾಂತಿಗಳಿಂದ ನೂಪುರ
ಗುರು ನಿತಂಬದಿ ಕಾಂಚಿ ಕೋಮಲ
ಕರದಿ ಕಂಕಣ ಬೆರಳಿನಿಂದುಂ-
ಗುರವು ಕೊರಳಿಂದ
ಸರದ ಮುತ್ತುಗಳೋಲೆ ಕದಪಿಂ
ದಿರದೆ ಮೆಱೆದುವು ಸ್ಮರಕರಾಗ್ರ
ಸ್ಫುರಿತ ಚಾಪಕಲಾಪ ಶರದಭಿ-
ಮಾನ ದೇವತೆಯು
ಹೊಳೆಹೊಳೆವ ತನುಕಾಂತಿಯುಲಿ ಗಜ
ಗಲಿಸಿದವು ಹೊಂದೊಡವುಗಳು ಥಳ
ಥಳಿಸಿದುವು ಮುತ್ತುಗಳು ದಂತ-
ಪ್ರಭೆಯು ಲಹರಿಯುಲಿ
ಸುಲಲಿತಾಧರ ರಾಗದಿಂದು
ಜ್ವಲಿಸಿದವು ಮಾಣಿಕ್ಯಚಯುವಾ
ರಳವು ಹೊಗಟುವಡಬುಜಗಂಧಿಯು
ವಿಪುಳ ವಿಭ್ರಮುವ

ಕಪ್ಪಾದ ಹೆಂಗಸರನ್ನು ವಿಜಯನಗರವು ಕಡೆಗಣಿಸಿರಲಿಲ್ಲ. ಸ್ತ್ರೀಯರು ಕಪ್ಪಾಗಿದ್ದಷ್ಟೂ ಸುಂದರಿಯರು ಎಂಬ ತಿಳಿವಳಿಕೆಯಿತ್ತೆಂದು ವಿದೇಶಿ ಯಾತ್ರಿಕರು ಕೂಡ ಹೇಳಿದ್ದಾರೆ. ರಾಜನರ್ತಕಿಯರು ಬಹು ಮಟ್ಟಿಗೆ ಯುವತಿಯರು; ಅವರ ಕಪೋಲಗಳು ಚಂದ್ರನಂತೆ ಇದ್ದು ಮುಖಕಾಂತಿಯು ವಸಂತ ಮಾಸವನ್ನು ಮೀರಿಸುತ್ತಿತ್ತು. ಅವರ ವಸ್ತ್ರಗಳು ಸೂಚಿಸುತ್ತಿದ್ದ ಅಂಗಾಂಗ ಸೌಂದರ್ಯವು ಆಗಲೇ ಅರಳಿರುವ ಗುಲಾಬಿ ಹೂವಿನೋಪಾದಿಯಲ್ಲಿ ಮನುಷ್ಯರ ಮನಸ್ಸನ್ನು ಸೂರೆಗೊಳ್ಳುತ್ತಿತ್ತೆಂದು ಅಬ್ದುರ್‌ರಜಾಕ್ ಹೇಳಿದ್ದಾನೆ.

ಸರ್ವಸಾಧರಣವಾಗಿ ಸ್ತ್ರೀಯರು ಈಗಿನಂತೆಯೇ ೫ ಗಜ ಬಿಳಿ ಅರಿವೆ ಉಡುತ್ತಿದ್ದರು. ಕೆಲವು ವೇಳೆ ಅಂದವಾದ ರೇಷ್ಮೆ ಸೀರೆ ಉಡುತ್ತಿದ್ದರು. ರೇಷ್ಮೆ ಕಸೂತಿ ಹಾಕಿದ ಚರ್ಮದ ಎಕ್ಕಡ ಮೆಟ್ಟುತ್ತಿದ್ದರು. ತಲೆಗೆ ಮುಸುಕು ಹಾಕುತ್ತಿರಲಿಲ್ಲ; ತಮ್ಮ ಕೂದಲನ್ನು ಗಂಟು ಹಾಕಿ ಸುವಾಸನೆಯ ಹೂಗಳನ್ನು ಮುಡಿಯುತ್ತಿದ್ದರು. ಮೂಗು ಚುಚ್ಚಿ ಚಿನ್ನದ ತೆಳು ಕಂಬಿಯನ್ನು ದೂಡಿ ಅದಕ್ಕೆ ಮುತ್ತು ಪೋಣಿಸಿ ಇಟ್ಟುಕೊಳ್ಳುವ ವಾಡಿಕೆ. ಕಿವಿಯನ್ನು ಚುಚ್ಚಿಸಿ ಅನೇಕ ವಜ್ರಗಳಿಂದ ಕೂಡಿದ ಕಿವಿಯೋಲೆಯನ್ನು ಹಾಕಿಕೊಳ್ಳುತ್ತಿದ್ದರು. ಇದಲ್ಲದೆ ಸ್ತ್ರೀಯರು ಚಿನ್ನದ ಸರ, ಅಡ್ಡಿಕೆ, ಬಳೆ, ತೋಳ ಬಂದಿ, ವಡ್ಯಾಣ ಕಾಲ್ಕಡಗ ಮೊದಲಾದ ಆಭರಣಗಳನ್ನು ಧರಿಸುತ್ತಿದ್ದರು. ಒಟ್ಟಿನಲ್ಲಿ ಸ್ತ್ರೀಯರು ಧೀರರು, ಸುಂದರಿಯರು. ಸಣ್ಣ ವಯಸ್ಸಿನಿಂದಲೇ ನೃತ್ಯ, ಅಭಿನಯ ಮತ್ತು ಹಾಡುಗಾರಿಕೆಯಲ್ಲಿ ಶಿಕ್ಷಣ ಪಡೆಯುತ್ತಿದ್ದರು.

ಅರಸುಮನೆತನದವರು ಮೊದಲಾಗಿ ಐಶ್ವರ್ಯವಂತರು ಬಹುಪತ್ನಿಯರನ್ನು ಸ್ವೀಕರಿಸುವ ಪದ್ಧತಿಯು ವಿಜಯನಗರ ಸಮಾಜದ ವಿಶೇಷವಾಗಿತ್ತು. ಈ ಪದ್ಧತಿಯು ಪರಂಪರೆಯಿಂದ ಬೆಳೆದು ಬಂದಿದೆ. ಹೊಯ್ಸಳ ವಿಷ್ಣುವರ್ಧನನ ರಾಣಿ ಶಾಂತಲದೇವಿಗೆ ಸವತಿಯರಿದ್ದರು. ಅದೇ ವಂಶದ ನರಸಿಂಹದೇವನಿಗೆ ೩೮೪ ಹೆಂಡಂದಿರು. ವಿಜಯನಗರದ ಅರಸರಿಗೆ ೧೨,೦೦೦ ಹೆಂಡಂದಿರಿದ್ದರೆಂದೂ ಅವರಲ್ಲಿ ಎರಡು ಅಥವಾ ಮೂರು ಸಾವಿರ ಹೆಂಡಂದಿರು ಅರಸನ ಜೊತೆಯಲ್ಲಿ ಸಹಗಮನ ಮಾಡುತ್ತಿದ್ದರೆಂದೂ ನಿಕೊಲೊ ಕಾಂಟಿ ಹೇಳಿದ್ದಾನೆ. ಆದರೆ ಅಬ್ದುರ್‌ರಜಾಕ್‌ನ ಪ್ರಕಾರ ೭೦೦ ಮಂದಿ ರಾಣಿವಾಸದಲ್ಲಿದ್ದರು. ಮತ್ತು ಇಷ್ಟು ದೊಡ್ಡ ರಾಣಿವಾಸವನ್ನು ಇಡುವ ಸಾಮರ್ಥ್ಯಕ್ಕೆ ವೀಳ್ಯದೆಲೆಯ ಉತ್ತೇಜನ ಶಕ್ತಿಯೇ ಕಾರಣ ಎಂದು ಆತ ಹೇಳಿದ್ದಾನೆ.

ರಾಜರ ಹೆಂಡಂದಿರಲ್ಲಿ ಮೂರು ವಿಧ–ಮುಖ್ಯ ರಾಣಿಯರು, ನ್ಯಾಯಬದ್ಧವಾಗಿ ಮದುವೆ ಮಾಡಿ

ಕೊಂಡವರು, ಮತ್ತಿತರ ಅಂತಃಪುರ ನಿವಾಸಿಗಳು. ಮುಖ್ಯ ರಾಣಿಯರ ಮಕ್ಕಳೇ ರಾಜ್ಯಕ್ಕೆ ಅರ್ಹರು. ಸಾಮಾನ್ಯವಾಗಿ ಅರಸುಮನೆತನದವರ ಅಥವಾ ಸಾಮಂತ ಅರಸರ ಮಕ್ಕಳನ್ನು ರಾಣಿಯರನ್ನಾಗಿ ಮಾಡಿಕೊಳ್ಳುತ್ತಿದ್ದರು. ಕೆಲವು ವೇಳೆ ಅರಸರು ವೇಶ್ಯೆಯರನ್ನು ಕೂಡ ರಾಣಿಯ ಪದವಿಗೆ ಏರಿಸಿದ್ದ ಉದಾಹರಣೆಗಳುಂಟು. ಕೃಷ್ಣದೇವರಾಯನ ರಾಣಿಯರಲ್ಲಿ ನಾಗಲದೇವಿ ವೇಶ್ಯೆ (?); ಮೋಹನಾಂಗಿ ಒರಿಸಾದ ರಾಜನಾದ ಗಜಪತಿಯ ಮಗಳು ಮತ್ತು ತಿರುಮಲಾಂಬೆ ಶ್ರೀರಂಗಪಟ್ಟಣದ ಅರಸರ ಮಗಳು.

ರಾಜರ ಸೇವೆಗಾಗಿ ದೇಶದಲ್ಲಿಯೇ ಅತಿ ಸುಂದರ ದೃಢಕಾಯ ಯುವತಿಯರನ್ನು ಅವರ ತಂದೆ ತಾಯಿಗಳ ಅಪ್ಪಣೆ ಪಡೆದು ಅತಿ ವೈಭವದಿಂದ ರಾಣೀವಾಸಕ್ಕೆ ಕರೆತಂದು ಸೇರಿಸುತ್ತಿದ್ದರು. ಆದರೆ, ಒಮ್ಮೆ ರಾಣೀವಾಸ ಹೊಕ್ಕರೆ ಅವರನ್ನು ಅವರ ಸಂಬಂಧಿಕರು ಕೂಡ ನೋಡುವ ಹಾಗಿರಲಿಲ್ಲ. ಹೊರಗೆ ಹೋಗಬೇಕಾದರೆ ಪಲ್ಲಕ್ಕಿಯಲ್ಲಿ ಒಯ್ಯಲ್ಪಡುತ್ತಿದ್ದರು. ಜನರ ದೃಷ್ಟಿಗೆ ಬೀಳುತ್ತಿರಲಿಲ್ಲ. ಈ ಕಟ್ಟುಬಂಧನಗಳಿಗೋಸ್ಕರವೇ "ಮುದ್ಗಲ್ ಸುಂದರಿ" ಯೆಂದು ಹೆಸರು ಪಡೆದಿದ್ದ ಅಕ್ಕಸಾಲಿಗನ ಮಗಳೊಬ್ಬಳು ಅರಸನ ರಾಣಿಯಾಗಿ ವೈಭವದ ಸವಿ ಉಣ್ಣುವ ಅವಕಾಶವಿದ್ದರೂ ಕೂಡ ನಿರ್ದಾಕ್ಷಿಣ್ಯವಾಗಿ ಆ ಪದವಿಯನ್ನೂ ತ್ಯಜಿಸಿದಳು. ರಾಜರ ಪ್ರೀತಿಯನ್ನು ಸಂಪಾದಿಸಲು ಸ್ಪರ್ಧೆಯಿತ್ತು, ಮತ್ಸರವಿತ್ತು. ಇದಕ್ಕಾಗಿ ಕೊಲೆ ವಿಷಪಾನದ ಘಟನೆಗಳೂ ನಡೆಯುತ್ತಿದ್ದವು.

ವಿಜಯನಗರವು ಎರಡೇ ಎರಡು ವಿಷಯಗಳಲ್ಲಿ ತನ್ನ ಅಸಹಾಯತೆಯನ್ನು ತೋರಿಸಿತು. ಮೊದಲನೆಯದು ವೇಶ್ಯಾಪದ್ಧತಿ; ಎರಡನೆಯದು ಸತಿಹೋಗುವುದು. ಇವೆರಡೂ ವಿಜಯನಗರದ ವೈಭವಕ್ಕೆ ಕಲಂಕವಾಗಿದ್ದರೂ ಈ ಪದ್ಧತಿಗಳು ಪೂರ್ವಜರಿಂದ ಬಂದಿದ್ದುವೆಂಬುದನ್ನು ಮರೆಯಬಾರದು. ಸಾವಿರಾರು ವರ್ಷಗಳ ನಂತರವೇ ಇಂದು ಸಹಗಮನ ಪದ್ಧತಿ ಇಲ್ಲದಂತಾಗಿದೆ. ಆದರೆ ವೇಶ್ಯಾಪದ್ಧತಿ ಇನ್ನೂ ಇದೆ. ಆದ್ದರಿಂದ ವಿಜಯನಗರವು ಇವುಗಳನ್ನು ಸಹಿಸಿಕೊಂಡಿದ್ದರೆ ಅದರಲ್ಲಿ ಆಶ್ಚರ್ಯವೇನು? ವಿಜಯನಗರವು ವೇಶ್ಯಾಸ್ತ್ರೀಯರ ಕೇಂದ್ರವಾಗಿತ್ತೆಂದೂ ಅವರಿಂದ ಬಂದ ವರಮಾನವನ್ನು ನಗರದ ೧೨,೦೦೦ ರಕ್ಷಣೆಪಡೆಯ ವೆಚ್ಚಕ್ಕೆ ವಿನಿಯೋಗಿಸುತ್ತಿದ್ದರೆಂದೂ ರಜಾಕ್ ಹೇಳಿದ್ದಾನೆ.

ವಿಜಯನಗರದ ವೇಶ್ಯೆಯರು ಸಾಮಾನ್ಯರಾಗಿರಲಿಲ್ಲ. ಅವರ ಮನಮೋಹಕ ಸೌಂದರ್ಯ, ಆಕರ್ಷಣಶಕ್ತಿ, ನಿವಾಸಗಳ ವೈಭವ, ಆಭರಣಗಳ ವೈಖರಿ ವರ್ಣಿಸಲು ಸಾಧ್ಯವಿಲ್ಲವೆಂದು ವಿದೇಶಿ ಯಾತ್ರಿಕರು ಒಪ್ಪಿದ್ದಾರೆ. ಅವರಲ್ಲಿ ಕೆಲವರು ಸ್ಥಿರ ಆಸ್ತಿ ಪಡೆದಿದ್ದರು. ಅವರಿಗೆ ಸೇವಿಕೆಯರಿದ್ದರು. ತಮ್ಮ ಆಸ್ತಿಯನ್ನು ದಾನವಾಗಿ ಕೊಟ್ಟುಬಿಡುತ್ತಿದ್ದರು. ಅವರಲ್ಲಿ ನರ್ತಕಿಯರು ಮಹಾನವಮಿ ಮತ್ತಿತರ ವಿಶೇಷ ಅರಮನೆಯ ಕಾರ್ಯಗಳಲ್ಲಿ ಭಾಗ ವಹಿಸುತ್ತಿದ್ದರು. ಅವರಿಗೆ ಮತ್ತು ಕುಸ್ತಿಯಾಡುವವರಿಗೆ ಮಾತ್ರ ರಾಜರ ಸಮ್ಮುಖದಲ್ಲಿ ಎಲೆ ಅಡಿಕೆ ಹಾಕುವ ಅಧಿಕಾರವಿತ್ತು.





ಸಹಗಮನ ಪದತಿ ಎಲ್ಲ ಜಾತಿಗಳಲ್ಲಿಯೂ ಇರಲಿಲ್ಲ. ಕೆಲವು ಬಲಾತ್ಕಾರ ಪ್ರಯೋಗಗಳಿದ್ದರೂ ಕೂಡ ಒಟ್ಟಿನಲ್ಲಿ ಸ್ತ್ರೀಯರು ಸ್ವಂತ ಇಚ್ಛೆಯಿಂದ ಸಹಗಮನ ಮಾಡುತ್ತಿದ್ದರು. ಸಾಮಾನ್ಯವಾಗಿ ಗಂಡಸರು ಯುದ್ಧ ಕಾಳಗ ಮೊದಲಾದ ಸಾಹಸಕಾರ್ಯಗಳಲ್ಲಿ ಸತ್ತರೆ ಅವರ ಹೆಂಡಂದಿರು ಸತಿ ಹೋಗುತಿದ್ದರು. ಮತ್ತು ಅವರ ಜ್ಞಾಪಕಾರ್ಥವಾಗಿ ಸತಿಕಲ್ಲು ಅಥವಾ ಮಹಾಸತಿ (ಮಾಸ್ತಿ) ಕಲ್ಲುಗಳನ್ನು ನೆಡುತ್ತಿದ್ದರು. ತನ್ನ ಗಂಡನಲ್ಲಿದ್ದ ಪ್ರೀತಿಗೋಸ್ಕರವೇ ಸಂತೋಷದಿಂದ ಸ್ತ್ರೀಯು ಸತಿ ಹೋಗುತ್ತಿದ್ದಳೆಂದು ಕೆಲವರು ಹೇಳಿದ್ದಾರೆ. ಅನುಕೂಲಸ್ಥ ಮನೆತನದ ಹೆಂಗಸು ತನ್ನ ಗಂಡನು ಸತ್ತರೆ ಅವನ ಶವವನ್ನು ದಹನ ಮಾಡಿದ ನಂತರ ನೃತ್ಯಗೀತೆಗಳಲ್ಲಿ ಭಾಗವಹಿಸಿ, ಸಕಲ ಒಡವೆ ವಸ್ತ್ರಗಳನ್ನು ಧರಿಸಿ ನಗರದಲ್ಲೆಲ್ಲ ಮೆರವಣಿಗೆ ಮಾಡಿಸಿಕೊಂಡು ನಂತರ ವಸ್ತ್ರಗಳನ್ನು ಎಲ್ಲರಿಗೂ ಹಂಚಿ ಕೇವಲ ಒಂದು ಚಿಂದಿ ಬಟ್ಟೆಯನ್ನುಟ್ಟು ಸತಿ ಹೋಗುತ್ತಿದ್ದಳು. ಮೆರವಣಿಗೆಯ ಕಾಲದಲ್ಲಿ ಒಂದು ಕೈಯಲ್ಲಿ ಕನ್ನಡಿ ಮತ್ತೊಂದು ಕೈಯಲ್ಲಿ ಹೂವಿನ ಗೊಂಚಲು, ಕೆಲವು ವೇಳೆ ನಿಂಬೆಹಣ್ಣು ಹಿಡಿಯುತ್ತಿದ್ದಳು. ಕೊನೆಯ ಘಳಿಗೆಯಲ್ಲಿ ಹಳದಿ ಬಟ್ಟೆ ಉಡುವ ವಾಡಿಕೆ ಇತ್ತು. ಬೆಂಕಿಯ ರುದ್ರಸ್ವರೂಪ ಕಾಣದಿರಲೆಂದು ಚಾಪೆಯನ್ನು ಅವಳಿಗೆ ಮರೆಯಾಗಿ ಹಿಡಿಯುತ್ತಿದರು. ಅವಳ ಹಣಿಗೆ, ಕನ್ನಡಿ, ಅಕ್ಕಿ, ಅಡಿಕೆಗಳನ್ನು ಬೆಂಕಿಯಲ್ಲಿ ಹಾಕಿದ ನಂತರ ಅವಳು ಕೂಡ ಬೀಳುವಳು. ಕೂಡಲೆ ಅಲ್ಲಿ ನೆರೆದ ಜನರು ಕಟ್ಟಿಗೆ ಮೊದಲಾದ ಪದಾರ್ಥಗಳನ್ನು ಒಗೆದು ಅವಳ ಇಹಲೋಕಯಾತ್ರೆಯನ್ನು ಪೂರ್ತಿಮಾಡುತ್ತಿದ್ದರು.



# ಬಫೆಲೋಲ್ಯಾಂಡಿನಿಂದೊಂದು ವರದಿ

ವಿಶೇಷ ಸುದ್ದಿಗಾರನಿಂದ

ಬಫೆಲೋಲ್ಯಾಂಡ್—

ಜಗತ್ತಿನ ಅತ್ಯಂತ ಚಮತ್ಕಾರಿಕ ದೇಶದಿಂದ ನಾನು ಈ ವರದಿಯನ್ನು ಕಳಿಸುತ್ತಿದ್ದೇನೆ. ಬಫೆಲೋಲ್ಯಾಂಡ್ ಎಂಬ ದೇಶವು ನಿಮಗೆ ಯಾವ ಭೂಪಟದಲ್ಲಿಯೂ ಕಾಣಿಸಲಾರದು. ಆದರೂ ಅದು ಇರುವುದು ಸೂರ್ಯಚಂದ್ರರಷ್ಟೇ ನಿಜವಾದುದು. ಈ ದೇಶವು ನಕಾಶೆಗಳಲ್ಲಿ ಕಾಣಿಸದಿರುವುದಕ್ಕೆ ಇಲ್ಲಿಯವರು ಒಂದು ಕಾರಣ ಹೇಳುತ್ತಾರೆ. ಅದು ವಿಶ್ವಾಸಾರ್ಹವಲ್ಲವೆಂದು ಹೇಳಲು ಯಾವ ಕಾರಣವೂ ಸಿಗದ್ದರಿಂದ ಅದನ್ನಿಲ್ಲಿ ಕೊಡುತ್ತೇನೆ. ಬಹಳ ವರ್ಷಗಳ ಹಿಂದೆ ಈ ನಾಡಿನ ಬಹು ಸಂಖ್ಯಾಕರಾದ ಜನರು ಜಗತ್ತಿನಲ್ಲಿ ನಡೆಯುವ ಅನ್ಯಾಯ ಅಸಮಾನತೆಗಳಿಂದ ರೊಚ್ಚಿಗೆದ್ದು ಜಗತ್ತಿನಿಂದ ಹೊರಬೀಳಲು ನಿರ್ಧರಿಸಿದರಂತೆ. ಅವರು ತಮ್ಮ ರಾಜ್ಯದ ಸುತ್ತಲೂ ೧೩೫ ಅಡಿ ಆಳವಾದ ಕಂದಕವನ್ನು ತೋಡಿ ಲಕ್ಷಾಂತರ ಜಾಕುಗಳ ಸಹಾಯದಿಂದ ಇಡೀ ರಾಜ್ಯವನ್ನು ತಳಸಹಿತ ಮೇಲೆತ್ತಿ ಭೂಮಿಯ ಗುರುತ್ವಾಕರ್ಷಣ ಶಕ್ತಿಯ ಹೊರಗೆ ತಳ್ಳಿದರು. ಅಂದಿನಿಂದ ಈ ನಾಡು ಆಕಾಶದಲ್ಲಿ ತ್ರಿಶಂಕುವಿನಂತೆ ನೇತಾಡುತ್ತಿದೆ. ಬಾಹ್ಯ ಜಗತ್ತಿನ ಜನರು ಕಾಲಾಂತರದಲ್ಲಿ ಇದನ್ನು ಮರೆತೇಬಿಟ್ಟರು. ಅಂದಿನಿಂದ ಇಂದಿನ ವರೆಗೆ ಈ ನಾಡಿಗೆ ಭೆಟ್ಟಿಕೊಟ್ಟ ಭೂನಿವಾಸಿ ನಾನೊಬ್ಬನೇ. ದಯವಿಟ್ಟು ನಾನು ಇಲ್ಲಿಗೆ ಯಾವ ಮಾರ್ಗದಿಂದ ಬಂದನೆಂದು ಕೇಳಬೇಡಿ. ಅದು ಗುಪ್ತವಾದದ್ದು. ಇಲ್ಲಿನ ಜನ ಅನ್ಯಾಯಮಗ್ನವಾದ ಜಗತ್ತಿನ ಮೇಲೆ ತುಂಬ ಸಂಶಯಚಿತ್ತರಾಗಿದ್ದಾರೆ. ಈಚೆಗೆ ಭೂಮಿಯಲ್ಲಿ ಗ್ರಹಾಂತರ ಪ್ರವಾಸದ ಯತ್ನಗಳು ಸಫಲವಾಗಿ ಪ್ರಯೋಗಿಸಲ್ಪಡುತ್ತಿವೆಯೆಂದು ನನ್ನಿಂದ ತಿಳಿದು ಇವರು ತುಂಬಾ ಗಾಬರಿಯಾಗಿದ್ದಾರೆ. ಅವರು ಹೊರಗಿನ ಸಂಪರ್ಕದಿಂದ ಸಂಪೂರ್ಣ ಅಲಿಪ್ತರಾಗಿರಲು ಬಯಸುತ್ತಾರೆ.

ಈ ದೇಶದ ಹೆಸರು ಮೂಲತಃ ಬಫೆಲೋ-ಲ್ಯಾಂಡ್ ಎಂಬುದಾಗಿ ಇದ್ದಿಲ್ಲವೆಂದು ಇಲ್ಲಿನ ಇತಿಹಾಸ ಸಂಶೋಧಕರು ಅಭಿಪ್ರಾಯಪಡುತ್ತಾರೆ. ಇಲ್ಲಿನ ಸ್ಥಳೀಯ ಭಾಷೆಯಲ್ಲಿ ಇದಕ್ಕೆ ಬೇರೆ ಯಾವುದೋ ಹೆಸರಿತ್ತಂತೆ. ಆದರೆ ಬಫೆಲೋಲ್ಯಾಂಡಿನಲ್ಲಿ ಅನೇಕ ಭಾಷಾಭಾಷಿಕರಿದ್ದುದರಿಂದಲೂ ಅವರು ಈ ನಾಡಿನ ಮುಖ್ಯ ಭಾಷೆಯಲ್ಲಿರುವ ಹೆಸರು ಅಲ್ಪಸಂಖ್ಯಾಕ ಭಾಷಿಕರ ಮನಸ್ಸಿನಲ್ಲಿ ಸಂದೇಹವುಂಟುಮಾಡುವುದೆಂದು ಹೇಳಿದ್ದರಿಂದಲೂ ನಾಡಿನ ಯಾವ ಗುಂಪಿನ ಭಾಷೆಯೂ ಅಲ್ಲದ ಇಂಗ್ಲೀಷಿಗೆ ಮೂಲ ಹೆಸರನ್ನು ತರ್ಜುಮೆ ಮಾಡಿ "ಬಫೆಲೋಲ್ಯಾಂಡ್" ಎಂಬುದಾಗಿ ಮಾಡಲಾಯಿತಂತೆ. ಆ ಮೂಲ ಹೆಸರು ಹೇಗಿತ್ತೆಂದು ಈಗ ಯಾರಿಗೂ

ನೆನಪಿಲ್ಲ. ಕೆಲ ವರ್ಷಗಳ ಹಿಂದೆ ಬಿಸಿ ನೆತ್ತರದ ತರುಣರ ಒಂದು ಗುಂಪು ಈ ಮೂಲ ಹೆಸರಾವುದೆಂದು ಕಂಡುಹಿಡಿದು ಅದನ್ನೇ ಪುನಃ ಜಾರಿಗೆ ತರಬೇಕೆಂದು ಚಳವಳಿ ಹೂಡಿತು. ಸರಕಾರವು ಅವರನ್ನೆಲ್ಲ ತತ್ಕ್ಷಣ ಸೆರೆಮನೆ ಕಾಣಿಸಿ ಬಫೆಲೋಲ್ಯಾಂಡಿನ ಮೂಲ ಹೆಸರಿನ ಬಗ್ಗೆ ಸಂಶೋಧನೆ ಮಾಡುವವರಿಗೆ ಮರಣ ದಂಡನೆ ವಿಧಿಸುವುದಾಗಿ ಸುಗ್ರೀವಾಜ್ಞೆ ಹೊರಡಿಸಿತು. ಅಷ್ಟರಲ್ಲಿ ಒಬ್ಬ ವೃದ್ಧ ಇತಿಹಾಸ ಸಂಶೋಧಕನು ಆಗಲೇ ಮೂಲ ಹೆಸರನ್ನು ಕಂಡು ಹಿಡಿದಿದ್ದನೆಂದು ತಿಳಿದುಬಂತೆಂದೂ ಸರಕಾರವು ತಡವಿಲ್ಲದೆ ಅವನನ್ನು ಅವನ ಮನೆಯ ಗೋಡೆಗೆ ನಿಲ್ಲಿಸಿ ಅವನಿಗೆ ಗುಂಡು ಹಾಕಿಸಿತೆಂದೂ ಅವನ ಸಕಲ ಬರವಣಿಗೆಗಳ ಸಹಿತ ಅವನ ಮನೆಗೆ ಬೆಂಕಿ ಹಚ್ಚಲಾಯಿತೆಂದೂ ಹೇಳಲಾಗುತ್ತದೆ. ಸರಕಾರ ಇದನ್ನು ಬಲವಾಗಿ ನಿರಾಕರಿಸುತ್ತದಾದರೂ ಆ ಸಂಶೋಧಕನು ಪೋಲೀಸರು ಹಿಡಿದಾಗ ತಪ್ಪಿಸಿಕೊಂಡು ಗೋಡೆ ಹಾರಿ ಓಡಿಹೋಗಲು ಯತ್ನಿಸಿದ್ದರಿಂದ ಅವನಿಗೆ ಗುಂಡು ಹಾಕಬೇಕಾಯಿತೆಂದು ವಿವರಣೆ ಕೊಟ್ಟಿದೆ.

ಇದೆಲ್ಲವೂ ನಿಮಗೆ ಚೋದ್ಯವಾಗಿ ಕಾಣಬಹುದು. ಈ ದೇಶದ ಬೇರೆ ಸಂಗತಿಗಳನ್ನು ಕೇಳಿದರೆ ನೀವು ಇನ್ನಷ್ಟು ಚೋದ್ಯಪಡುವಿರಿ. ಜಗತ್ತಿನಲ್ಲಿ ಎಲ್ಲಿಯಾದರೂ ಪರಿಪೂರ್ಣವಾದ ನ್ಯಾಯವಿರುವುದಾದರೆ ಅದು ಇಲ್ಲಿದೆಯೆಂಬುದೇ ಆ ಚೋದ್ಯದ ಮೂಲವಾಗಿದೆ.

ಇಲ್ಲಿ ಎಲ್ಲವೂ ಜಾತೀಯ ನ್ಯಾಯದ ಆಧಾರದಿಂದ ನಡೆಯುತ್ತದೆಂದು ಮೊದಲೇ ಹೇಳಿಬಿಡುತ್ತೇನೆ. ಇಲ್ಲಿ ಒಟ್ಟು ಇನ್ನೂರಾಮೂವತ್ತೇಳೂವರೆ ಜಾತಿಗಳಿವೆಯೆಂದು ಜನರು ಹೇಳುತ್ತಾರೆ. ಅರೆ ಜಾತಿಯೆಂದರೇನೆಂದು ತಿಳಿದುಕೊಳ್ಳಲು ನಾನು ಸಾಕಷ್ಟು ಪ್ರಯತ್ನಪಟ್ಟೆ. ಆದರೆ ಯಶಸ್ವಿಯಾಗಲಿಲ್ಲ. ಆದರೆ ಬಡಪಾಯಿಗಳಾದ ಭೂಲೋಕ ನಿವಾಸಿಗಳಾದ ನಮಗೆ ಅರ್ಥವಾಗದ [illegible] ಅನೇಕ ಸಂಗತಿಗಳು ಇಲ್ಲಿರುವುದರಿಂದ ಈ ಬಗ್ಗೆ ನಾನು ವಿಶೇಷ ವ್ಯಥಿತನಾಗಲಿಲ್ಲ.

ಈ ರಾಜ್ಯಸ್ಥಾಪನೆಯಾದದ್ದೇ ನ್ಯಾಯಕ್ಕಾಗಿ ಎಂದು ಮೊದಲೇ ಹೇಳಿದೆನಲ್ಲ. ಕೆಲವು ಜಾತಿಯವರು ಮುಂದೆ ಮುಂದೆ ಸಾಗುತ್ತಿರುವಾಗ ಇನ್ನು ಕೆಲವು ಜಾತಿಯವರು ಹಿಂದೆ ಹಿಂದೆ ಜಾರುತ್ತಿರುವುದರ ಅನ್ಯಾಯವನ್ನು ನಿವಾರಿಸಬೇಕೆಂಬುದು ಇಲ್ಲಿನವರ ಪ್ರಮುಖ ಧ್ಯೇಯವಾಗಿತ್ತು. ಆದ್ದರಿಂದ ಅವರು ಪ್ರಥಮತಃ ಜಾತಿಗಳ ಒಂದು ಖಾನೇಸುಮಾರಿಯನ್ನು ತೆಗೆದರಂತೆ. ಆಗಲೇ ಮೇಲೆ ಹೇಳಿದಷ್ಟು ಜಾತಿಗಳು ಇಲ್ಲಿವೆಯೆಂದು ಸಿದ್ಧವಾದದ್ದು. ಆಯಾ ಜಾತಿಗಳ ಶಿಕ್ಷಣ ಪ್ರಮಾಣ, ಸರಕಾರಿ ನೌಕರಿಗಳಲ್ಲಿ ಅವರ ಪ್ರಮಾಣ, ಡಾಕ್ಟರ್, ಎಂಜಿನಿಯರ್ ಮೊದಲಾದವರು ಯಾವಯಾವ ಜಾತಿಯಲ್ಲಿ ಎಷ್ಟೆಷ್ಟಿದ್ದಾರೆ ಇತ್ಯಾದಿ ಸಾಧ್ಯವಿದ್ದ ಎಲ್ಲ ವಿವರಗಳನ್ನು ಕಲೆಹಾಕಲಾಯಿತು. ಅನಂತರ ಎಲ್ಲರಿಗೂ ನ್ಯಾಯ ದೊರಕಿಸಿಕೊಡುವ ಪ್ರಯತ್ನ ಪ್ರಾರಂಭವಾಯಿತು.

ನ್ಯಾಯ ದೊರಕಿಸಿಕೊಡುವ ಪ್ರಯತ್ನದ ಇತಿಹಾಸ ಒಂದು ರಾಮಾಯಣವೇ ಆಗಿದೆ. ಮೊಟ್ಟಮೊದಲು ಅವರು ಅನಕ್ಷರಸ್ಥರು ಹೆಚ್ಚಾಗಿದ್ದ ಜಾತಿಗಳ ಜನರಿಗೆ ಶಿಷ್ಯವೃತ್ತಿ ಮೊದಲಾದ ವಿಶೇಷ ನೆರವುಗಳನ್ನಿತ್ತು ಸುಶಿಕ್ಷಿತರನ್ನಾಗಿ ಮಾಡಿ ನೌಕರಿ ಮೊದಲಾದವುಗಳಲ್ಲಿ ಉಳಿದವರ ಸರಿಸರಿಗೆ ತರಲು ಯೋಜಿಸಿದರು. ಆದರೆ ಬೇಗನೆ ಹೀಗೆ ಇವರನ್ನು ಮುಂದೆ ತರಲು ಶತಮಾನಗಳೇ ಬೇಕಾದೀತೆಂದು ಅನುಭವಕ್ಕೆ ಬಂತು. ಮತ್ತು ನ್ಯಾಯಕ್ಕಾಗಿ ಹಾತೊರೆಯುತ್ತಿದ್ದ ಈ ದೇಶ ಅಷ್ಟು ಕಾಲ ಕಾಯಲು ಸಿದ್ಧವಿರಲಿಲ್ಲ. ಮೇಲಾಗಿ ಶತಮಾನಗಳ ಕಾಲದಲ್ಲಿ ಮುಂದುವರಿದವರು ಇನ್ನೂ ಹೆಚ್ಚು ಮುಂದುವರಿಯುವುದಿಲ್ಲೆಂದು ಹೇಗೆ ಹೇಳುವುದು? ಅನಂತರ ಹಿಂದುಳಿದವರಿಗೆ ಇತರ ರೀತಿಗಳಿಂದ ಪ್ರೋತ್ಸಾಹವೀಯುವ ಹಂಚಿಕೆಗಳಾದವು. ಅವರಿಗಾಗಿ ಸ್ಥಾನಗಳನ್ನು

ಕಾಯ್ದಿರಿಸುವುದು ಮತ್ತು ಆಯಾ ಜಾತಿಯ ಯೋಗ್ಯ ಉಮೇದುವಾರ ಸಿಕ್ಕಿದೊಡನೆ ಆ ಸ್ಥಾನವನ್ನವನಿಗೆ ಕೊಡುವುದು ಎಂದು ಯೋಜಿಸಲಾಯಿತು. ಈ ದಾರಿಯೂ ಶೀಘ್ರಗಾಮಿಯಲ್ಲೆಂದು ಗೊತ್ತಾದನಂತರ ಹಿಂದುಳಿದ ಜಾತಿಯವರ ೧೧, ೨೦, ೩೦, ೪೦.... ಗುಣಗಳು (ಆಯಾ ಜಾತಿಯ ಹಿಂದುಳಿಕೆಯ ಮಟ್ಟಕ್ಕನುಸಾರವಾಗಿ) ಮುಂದುವರಿದವರ ೧೦೦ ಗುಣಗಳಿಗೆ ಸರಿಯೆಂಬುದಾಗಿ ಸಾರಲಾಯಿತು. ಅದೂ ಸಾಲದೆ, ಮುಂದುವರಿದವರಿಗೆ ಶಾಲೆ ಕಾಲೇಜುಗಳ ಬಾಗಿಲನ್ನು ಸಂಪೂರ್ಣ ಮುಚ್ಚಲಾಯಿತು. ಆದರೆ ಯಾವುದೂ ಸಾಕಷ್ಟು ಶೀಘ್ರಗಾಮಿಯೆನಿಸಲಿಲ್ಲ. ಅಸೆಂಬ್ಲಿಯಲ್ಲಿ ಹಿಂದುಳಿದ ಜಾತಿಗಳ ಸದಸ್ಯರು ಕೋಲಾಹಲವೆಬ್ಬಿಸಿದರು. ಸಭೆ ಮೆರವಣಿಗೆಗಳಾದವು. ಖಂಡನಾ ಗೊತ್ತುವಳಿಗಳ ಸುರಿಮಳೆಯೇ ಬಂತು. ಸರಕಾರ ಉರುಳಿತು. ಅನೇಕ ವರ್ಷಕಾಲ ಅಸ್ಥಿರವಾದ ಆಡಳಿತದಿಂದ ದೇಶವೆಲ್ಲ ಅರಾಜಕತೆಯಿಂದ ಚಲವಿಚಲವಾಗಿಹೋಯಿತು.

ಬಫೆಲೋಲ್ಯಾಂಡನ್ನು ಇಂದಿನ ಸುವ್ಯವಸ್ಥಿತ(?) ರೂಪಕ್ಕೆ ತಂದ ಕೀರ್ತಿ ಮಹಮ್ಮದ್ ಬಿನ್ ತೊಗಲಖನಿಗೆ ಸೇರಬೇಕು. ಬಫೆಲೋಲ್ಯಾಂಡಿನ ಪ್ರತಿಶಹರಿನಲ್ಲೂ ಪುರುಷಪ್ರಮಾಣದ ತೊಗಲಖ ಪುತ್ತಳಿಗಳನ್ನು ಕಾಣಬಹುದು; ಪ್ರತಿಶಾಲೆಯಲ್ಲೂ ಅವನ ಚಿತ್ರಗಳು ತೂಗಾಡುತ್ತಲಿವೆ. ಈ ಮಹಮ್ಮದನಿಗೂ ದಿಲ್ಲಿಯಲ್ಲಿ ಶತಮಾನಗಳ ಹಿಂದೆ ಆಳಿದ ಬಾದಶಾಹನಿಗೂ ಯಾವ ರಕ್ತಸಂಬಂಧವೂ ಇಲ್ಲವೆಂದು ಇಲ್ಲಿ ಹೇಳುವುದಗತ್ಯ. ಇವನ ನಾಮಕರಣದ ಹೆಸರು ಬೇರೆಯೆ ಇತ್ತು. ಆದರೆ ಇವನು ಕಾಲೇಜಿನಲ್ಲಿ ಕಲಿಯುತ್ತಿದ್ದಾಗ್ಗೆ ದಿಲ್ಲಿಯ ಆ ಬಾದಶಾಹನ ಸಂಪೂರ್ಣ ಚರಿತ್ರೆಯೊಂದು ಇವನ ಕೈಗೆ ಬಿತ್ತಂತೆ. ಒಂದೇ ರಾತ್ರಿಯಲ್ಲಿ ಅವನು ಆ ಘನವಾದ ಗ್ರಂಥವನ್ನು ಓದಿ ಮುಗಿಸಿ ಆನಂದತುಂದಿಲನಾಗಿ ಬೀದಿಗಳಲ್ಲಿ ಕುಣಿದಾಡಿದನಂತೆ. ತೊಗಲಖ ಮಹಮ್ಮದನಿಂದ ಅವನೆಷ್ಟು ಪ್ರಭಾವಿತನಾದನೆಂದರೆ ಅವನು (ಮುಸ್ಲಿಮನಲ್ಲದಿದ್ದರೂ) ತನ್ನ ಹೆಸರನ್ನು ಹಾಗೆ ಬದಲಾಯಿಸಿಕೊಂಡನು. ಕೆಲವೇ ವರ್ಷಗಳಲ್ಲಿ ಅವನು ರಾಜಕಾರಣದಲ್ಲಿ ಸೇರಿ ಅತ್ಯಂತ ಜನಪ್ರಿಯ ನಾಯಕನಾಗಿ ಆರಿಸಿ ಬಂದನು. ಅಸೆಂಬ್ಲಿಯು ಅವನಿಗೆ ಇಪ್ಪತ್ತೈದು ವರ್ಷದ ಸರ್ವಾಧಿಕಾರವನ್ನು ಕೊಟ್ಟಿತು.

ಮಹಮ್ಮದ್ ಬಿನ್ ತೊಗಲಖನು ತನ್ನ ೨೫ ವರ್ಷದ ಅವಧಿಯನ್ನು ಮೀರಿ ಮತ್ತೆ ೨೫ ವರ್ಷ ಆಳಿದನೆಂಬುದರಿಂದ ಅವನ ಹಿರಿಮೆಯನ್ನು ಕಾಣಬಹುದು. ಅವನ ಸಾಹಸಗಳನ್ನು ಕುರಿತು ಅನೇಕ ಕಥೆಗಳು ಜನಜನಿತವಾಗಿವೆ. ಅವುಗಳಲ್ಲಿ ಕೆಲಮಟ್ಟಿಗೆ ಅತಿಶಯೋಕ್ತಿಯಿದೆಯೆಂದೊಪ್ಪಿದರೂ ಉಳಿದವೂ ಅದ್ಭುತವಾಗಿವೆ. ಅವನು ಒಂದೇ ದಿವಸ ಮುಂದುವರಿದ ಜಾತಿಗಳ ೫,೦೦೦ ಜನ ಆರಿಸಿದ ಬುದ್ಧಿಶಾಲಿಗಳನ್ನು ಸಾಲಾಗಿ ನಿಲ್ಲಿಸಿ ಗುಂಡುಹಾಕಿದನೆಂದು ಹೇಳಲಾಗಿದೆ. ಮರುದಿನವೇ ಮುಂದುವರಿದ ಜಾತಿಗಳವರ ಒಂದು ಪರಿಷತ್ತನ್ನು ಕರೆದು "ನಿನ್ನೆಯವರ ಗತಿಯನ್ನು ಉಳಿದ ನೀವೆಲ್ಲರೂ ಕಾಣಬಾರದೆಂದು ನಾನು ಹಾರ್ದಿಕವಾಗಿ ಹಾರೈಸುತ್ತೇನೆ. ಉಳಿದುಕೊಳ್ಳಲು ನಿಮಗೆ ಸುಲಭದಾರಿಯಿದೆ. ನೀವು ನಿಮ್ಮ ನಿಮ್ಮ ಕೆಲಸಗಳನ್ನು ಮಾಡಿಕೊಂಡು ದಿನಕ್ಕೆ ಆರು ತಾಸುಗಳ ವರೆಗೆ ಶಿಕ್ಷಣ ವೃತ್ತಿಯನ್ನು ನಡೆಸಬೇಕು. ನಿಮ ಕಡೆ ವಿದ್ಯಾರ್ಥಿಗಳನ್ನು ಕಳಿಸುತ್ತೇನೆ. ಅವರನ್ನು ಡಬಲ್ ಸ್ಪೀಡಿನಿಂದ ಸುಶಿಕ್ಷಿತರಾಗಿ ಮಾಡುವಿರೆಂದು ನಾನು ನಂಬಿದ್ದೇನೆ. ನಪಾಸಾದ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ನಿಮ್ಮನ್ನು ಗುಂಡಿನ ಬಾಯಿಗೆ ಕೊಡಬೇಕಾಗುವುದು. ಆದರೆ ನೀವು ಬುದ್ಧಿವಂತರು. ಆ ಪ್ರಸಂಗ ಬರಲಿಕ್ಕಿಲ್ಲೆಂದು ನನಗೆ ವಿಶ್ವಾಸವಿದೆ" ಎಂದು ನಗನಗುತ್ತ ಹೇಳಿದನು. ಕೂಡಲೆ ಮುಂದುವರಿದವರು ಇದಕ್ಕೆ ಒಪ್ಪಿಕೊಂಡು "ತೊಗಲಖ ಮಹ-

ಮ್ಮದ ಕೀ ಜೈ" ಎಂದು ಘೋಷಿಸುತ್ತ ಸಭಾ ಭವನದಿಂದ ಹೊರಬಂದರು.

ಹದಿನೈದು ವರ್ಷಗಳೊಳಗೆ ಮಹಮ್ಮದ ಬಿನ್ ತೊಗಲಖನು ಬಫೆಲೋಲ್ಯಾಂಡಿನಲ್ಲಿ ಜಾತೀಯ ನ್ಯಾಯವನ್ನು ಸ್ಥಾಪಿಸಲು ಸಮರ್ಥನಾದನೆಂದು ಇಲ್ಲಿನ ಇತಿಹಾಸ ಹೇಳುತ್ತದೆ. ಮುಂದುವರಿದ ಜಾತಿಗಳ ಮಕ್ಕಳನ್ನೆಲ್ಲ ತನ್ನ ವಶಕ್ಕೆ ತೆಗೆದುಕೊಂಡು ಅವರನ್ನು ಕೋಟಾ ಪ್ರಮಾಣದಂತೆ ಮಾತ್ರ ವಿದ್ಯಾಭ್ಯಾಸಕ್ಕೆ ಕಳಿಸಿದನು. ಒಂದೇ ತಲೆಮಾರಿನಲ್ಲಿ ಮುಂದುವರಿದವರ ಶಿಕ್ಷಣ ಪ್ರಮಾಣ ಇಳಿದುಹೋದುದರಿಂದ ಅವರು ಸರಾಸರಿಗಿಂತ ಹೆಚ್ಚಿನ ಮಟ್ಟಕ್ಕೇರುವುದೇ ಅಸಾಧ್ಯವಾಯಿತು. ಅತಿ ಬುದ್ಧಿವಂತ ಹುಡುಗರನ್ನೇ ಮಹಮ್ಮದನು ಅಶಿಕ್ಷಿತರಾಗಿರಿಸುತ್ತಿದ್ದನಂತೆ.

ಇಂದು ಈ ದೇಶದಲ್ಲಿ ಪ್ರತಿಯೊಂದು ಚಟುವಟಿಕೆಯೂ ಕೋಟಾ ಪದ್ಧತಿಯಿಂದ ನಡೆಯುತ್ತದೆ. ಸಾಧಾರಣವಾಗಿ ಎಲ್ಲ ಜಾತಿಗಳ ಶಿಕ್ಷಣ ಮತ್ತು ಬುದ್ಧಿಶಕ್ತಿ ಪ್ರಮಾಣ ಇಂದು ಒಂದೇ ಮಟ್ಟದಲ್ಲಿದೆಯಾದರೂ ಪುನಃ ಒಂದು ಜಾತಿಯು ಇನ್ನೊಂದನ್ನು ಹಿಂದಿಕ್ಕುವ ಸಂಭವವು ಈ ಜನರನ್ನು ಯಾವಾಗಲೂ ದುಃಸ್ವಪ್ನದಂತೆ ಬಾಧಿಸುತ್ತಿದೆ. ಅದನ್ನು ತಡೆಯಲು ಅವರು ಎಷ್ಟು ದೂರ ಹೋಗಲೂ ಸಿದ್ಧರು. ಇಲ್ಲಿ ಶಾಲೆ ಕಾಲೇಜುಗಳಲ್ಲಿ ಕೋಟಾ, ಸರಕಾರಿ ನೌಕರಿಗಳಲ್ಲಿ ಕೋಟಾ, ವ್ಯಾಪಾರ ವಾಣಿಜ್ಯಗಳಲ್ಲಿ ಕೋಟಾ. ಎಲ್ಲ ಜಾತಿಗಳಿಗೆ ಅವರವರ ಸಂಖ್ಯಾನುಗುಣವಾಗಿ ಕೋಟಾ ಸಿಗುತ್ತದೆ. ಅದರಲ್ಲಿ ಕೂದಲೆಳೆಯ ಏಳು ಭಾಗದಷ್ಟು ಅಂತರವಾಗುವಂತಿಲ್ಲ.

ನಾನಿಲ್ಲಿ ಕೋಟಾ ಪದ್ಧತಿಯ ಕೆಲ ಹೆಚ್ಚು ಸ್ವಾರಸ್ಯವಾದ ಅಂಶಗಳನ್ನು ಉಲ್ಲೇಖಿಸುತ್ತೇನೆ. ರಾಜಧಾನಿಯಾದ ತೊಗಲಖಪುರದ ಹುಚ್ಚರಾಸ್ಪತ್ರೆಯಲ್ಲಿನ ನಿವಾಸಿಗಳ ಜಾತೀಯ ಪರಿಸ್ಥಿತಿಯ ಬಗ್ಗೆ ಕೆಲ ತಿಂಗಳ ಹಿಂದೆ ಇಲ್ಲಿ ಒಂದು ಚಿಕ್ಕ ಗಲಾಟೆಯಾಯಿತು. ಇಲ್ಲಿದ್ದ ಹುಚ್ಚರ ಪೈಕಿ ಅರ್ಧದಷ್ಟು ಜನರು ಒಂದು ವಿಶಿಷ್ಟ ಜಾತಿಯವರೆಂದು ಯಾವನೋ ಒಬ್ಬನು ಲೆಕ್ಕ ತೆಗೆದು ಪ್ರಕಟಿಸಿದನು. ಈ ವಿಶಿಷ್ಟ ಜಾತಿಯು ಕೆಲವೇ ವರ್ಷಗಳ ಹಿಂದೆ ಮುಂದುವರಿದದ್ದೆಂದು ಗಣಿಸಲ್ಪಟ್ಟದ್ದಾಗಿದ್ದುದರಿಂದ ವಾತಾವರಣ ಬಲು ಬೇಗನೆ ಬಿಸಿಯೇರಿತು "ಹುಚ್ಚರಾಸ್ಪತ್ರೆ ಮುಂದುವರಿದ ಜಾತಿಯವರ ಗುತ್ತಿಗೆಯಾಗಿದೆ!" ಎಂದೊಬ್ಬ ಟೀಕಾಕಾರ ಬರೆದ. ಇದರಲ್ಲಿ ಮುಂದುವರಿದ ಜಾತಿಯವರ ಯಾವುದೋ ಕುಹಕ ಅಡಗಿರಬೇಕೆಂಬ ಸಂಶಯ ಬಲವಾಗಿ ವ್ಯಕ್ತಗೊಳಿಸಲ್ಪಟ್ಟಿತು. ಆ ಕುಹಕ ಏನೆಂದು ಯಾರಿಗೂ ಹೇಳಲಾಗಲಿಲ್ಲವಾದರೂ ಇತರ ಜಾತಿಯವರಿಗೆ ಇದರಿಂದಾಗಬಹುದಾದ ಭಾವಿ ಹಾನಿಯನ್ನು ತಪ್ಪಿಸಲು ಕೋಟಾ ಪ್ರಕಾರ ಅವರಿಗೂ ಆಸ್ಪತ್ರೆಯಲ್ಲಿ ಅಷ್ಟು ಸ್ಥಳಗಳನ್ನು ಕೊಡಬೇಕಾಯಿತು.

ಯಾವ ಯಾವಾಗ ಈ ದೇಶದಲ್ಲಿ ಪಿಡುಗು ಮತ್ತು ಇತರ ದೈವಿಕ ವಿಪತ್ತುಗಳು ಬರುತ್ತವೋ ಆವಾಗೆಲ್ಲ ಜಾತೀಯ ಪರಿಸ್ಥಿತಿ ಕೆಡುತ್ತದೆ. ಯಾವ ಜಾತಿಯ ಜನರು ಕಡಿಮೆ ಸಾಯುತ್ತಾರೋ ಅವರ ಮೇಲೆ ರೇಗಾಟ ಪ್ರಾರಂಭವಾಗುತ್ತದೆ. ಇತರ ಜಾತಿಯವರ ಸಂಖ್ಯೆಯನ್ನು ಕಡಿಮೆ ಮಾಡಲು ಅವರು ಹೂಡಿದ ಕುತಂತ್ರವಿದೆಂದು ಭಾವಿಸಲಾಗುತ್ತದೆ. ಇತರ ಜಾತಿಗಳ ಕೋಪದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಅವರು ಯಾವುದಾದರೂ ಪಿಡುಗಿನ ಲಕ್ಷಣಗಳು ಕಾಣಿಸಿದೊಡನೆ ಇತರ ಜಾತಿಯವರ ವಸತಿಗಳಲ್ಲಿ ಹೋಗಿ ಸ್ವಯಂಪ್ರೇರಣೆಯಿಂದ ಸಾರ್ವಜನಿಕ ಆರೋಗ್ಯ ಚಟುವಟಿಕೆಗಳನ್ನು ಕೈಕೊಳ್ಳುತ್ತಾರೆ. ಕೆಲವೇ ವರ್ಷಗಳ ಹಿಂದಿನ ಸ್ಥಿತಿಯನ್ನವರು ಮರೆತಿಲ್ಲ. ಒಂದು ಕಾಲರಾ ಪಿಡುಗಿನಲ್ಲಿ ಕೆಲ ಜಾತಿಗಳಲ್ಲಿ ವಿಶೇಷ ಪ್ರಾಣಹಾನಿಯಾದ ಮೇಲೆ ಸರಕಾರದವರು ಪ್ರಾಣಹಾನಿಯಾಗದ ಅಥವಾ ಕಡಮೆ ಆದ ಜಾತಿಗಳ

ನೂರಾರು ಜನರನ್ನು ಒಯ್ದು ಗುಂಡುಹಾಕಿ ಕೋಟಾ ಪದ್ಧತಿಯನ್ನು ಪಾಲಿಸಿದರಂತೆ.

ಸುದೈವದಿಂದ ಈಗ ಇಂಥ ಕಠೋರ ನಿಯಮಗಳನ್ನು ಸಡಿಲಿಸಲಾಗಿದೆ. ಯಾವುದಾದರೊಂದು ಜಾತಿಯಲ್ಲಿ ವಿಶೇಷ ಪ್ರಾಣಹಾನಿಯಾದರೆ ಅವರ ಜನನ ಕೋಟಾವನ್ನು ಹೆಚ್ಚಿಸಿ ಕಡಿಮೆ ಪ್ರಾಣಹಾನಿಯಾದವರ ಜನನ ಕೋಟಾ ಕಡಿಮೆ ಮಾಡಲಾಗುತ್ತದೆ. ಯಾರನ್ನೂ ಈಗ ಗುಂಡು ಹಾಕುವುದಿಲ್ಲ.

"ಜನನ ಕೋಟಾ"ದ್ದೇ ಒಂದು ಕಥೆ ಇದೆ. ಇಲ್ಲಿ ಪ್ರತಿ ಹತು ವರ್ಷಕ್ಕೊಮ್ಮೆ ಖಾನೇಸುಮಾರಿ ತೆಗೆಯಲಾಗುತ್ತದೆ; ಮತ್ತು ಪ್ರತಿ ಜಾತಿಯ ಜನಸಂಖ್ಯಾವೃದ್ಧಿಯನ್ನು ಜಾಗರೂಕತೆಯಿಂದ ಲೆಕ್ಕಿಸಲಾಗುತ್ತದೆ.ಯಾವ ಜಾತಿಗೂ ಉಳಿದ ಜಾತಿಗಳಿಗಿಂತ ಹೆಚ್ಚು ಜನಸಂಖ್ಯೆ ಬೆಳೆಸಲು ಸಂದರ್ಭವೀಯಲಾಗುವುದಿಲ್ಲ. ಕಾಲಾಂತರದಲ್ಲಿ ಕೆಲವು ಜಾತಿಗಳು ಇತರ ಜಾತಿಗಳನ್ನು ಜನಸಂಖ್ಯೆಯಲ್ಲಿ ಹಿಂದೆ ಹಾಕಿ ತಮ್ಮ ಸರ್ವಾಧಿಕಾರ ಸ್ಥಾಪಿಸುವುದು ಇಲ್ಲಿನ ಜನರಿಗೆ ಬೇಕಾಗಿಲ್ಲ.

ಅನೇಕ ವರ್ಷಗಳ ಹಿಂದೆ ಲಗತ್ತಾಗಿ ಮೂರು ಖಾನೇಸುಮಾರಿಗಳಲ್ಲಿ ಕೆಲವು ಜಾತಿಗಳ ಜನಸಂಖ್ಯೆ ಇತರ ಜಾತಿಗಳಿಗಿಂತ ಹೆಚ್ಚು ರಭಸದಿಂದ ಬೆಳೆಯುವುದು ಕಂಡುಬಂದ ಮೇಲೆ ಇತರ ಜಾತಿಗಳು ಗಾಬರಿಗೊಂಡವು. ಅಸೆಂಬ್ಲಿಯಲ್ಲಿ ಆಯಾ ಜಾತಿಗಳ ಹೆಚ್ಚಾದ ಜನಸಂಖ್ಯೆಯಷ್ಟು ಜನರನ್ನು ತೋಫಿನ ಬಾಯಿಗೆ ಕೊಡಬೇಕೆಂಬ ಒಂದು ಮಸೂದೆ ಮಂಡಿಸಲ್ಪಟ್ಟಿತು. ಅದು ಪಾಸಾಗುವುದರಲ್ಲಿದ್ದಾಗ ಇಲ್ಲಿನ ರೆಡ್ ಸರ್ಕಲ್ ಸೊಸೈಟಿ (ನಮ್ಮ ರೆಡ್‌ಕ್ರಾಸಿನಂಥದು)ಯ ಅಧ್ಯಕ್ಷರು ಒಂದು ಭೂತದಯಾಪರ ಸೂಚನೆಯನ್ನು ಮಂಡಿಸಿ ಕಗ್ಗೊಲೆಯನ್ನು ತಪ್ಪಿಸಿದರು. ಜನಸಂಖ್ಯೆ ಹೆಚ್ಚಿದ ಜನರು ಇನ್ನು ಮುಂದಿನ ಮೂರು ದಶಕಗಳಲ್ಲಿ ಅತಿ ಕಡಿಮೆ ಪ್ರಮಾಣದಲ್ಲಿ ಮಕ್ಕಳನ್ನು ಹಡೆದು ಮೂಲ ಜಾತೀಯ ಪ್ರಮಾಣಕ್ಕೇ ಮರಳುವುದಾಗಿ ವಚನವಿತ್ತಿದ್ದಾರೆಂದು ಸಾರಲಾಯಿತು.

ಅದರ ನಂತರವೇ ಜನನ ಕೋಟಾ ಪದ್ಧತಿ ಬಂದದ್ದು. ಪ್ರತಿಯೊಂದು ಜಾತಿಗೂ ಜನನ ಕೋಟಾವನ್ನು ಗೊತ್ತುಪಡಿಸಲಾಗುತ್ತದೆ. ಪ್ರತಿ ವರ್ಷವೂ ಜನನ ಸಂಖ್ಯೆಯನ್ನು ಜಾತಿವಾರು ವಿಂಗಡಿಸಿ ನೋಡಿ ಯಾರಾದರೂ ಕೋಟಾದಿಂದ ಹಿಂದೆ ಮುಂದೆ ಸರಿಯುತ್ತಿದ್ದಾರೆಯೋ ಎಂದು ಪರೀಕ್ಷಿಸಿ ಅಂಥ ಜಾತಿಗಳಿಗೆ ಸಾರ್ವಜನಿಕವಾಗಿ ಎಚ್ಚರಿಕೆಯೀಯಲಾಗುತ್ತದೆ. ಮುಂದಿನ ವರ್ಷದೊಳಗೆ ಈ ಹೆಚ್ಚು ಕಡಿಮೆಯನ್ನವರು ಸರಿಪಡಿಸಿಕೊಳ್ಳಬೇಕು. ಮರಣ ಪ್ರಮಾಣದ ಮೇಲೂ ಹೀಗೆಯೆ ಲಕ್ಷ್ಯವಿಡಲಾಗುತ್ತದೆ. ಆದರೆ "ಕೋಟಾ" ಪದ್ಧತಿ ಇಲ್ಲ. ಎಷ್ಟೇ ಪ್ರಯತ್ನ ಮಾಡಿದರೂ ಒಂದು ಜಾತಿಯಲ್ಲಿ ಇಂತಿಷ್ಟೇ ಜನ ಸಾಯಬೇಕು ಎಂಬ ನಿಯಮವನ್ನು ಜಾರಿಗೆ ತರಲು ಸರಕಾರಕ್ಕೆ ಸಾಧ್ಯವಾಗಿಲ್ಲ. ಆದ್ದರಿಂದ ಅದೀಗ ಮರಣ ಕೋಟಾವನ್ನು ಜನನ ಕೋಟಾದಲ್ಲೇ ಸೇರಿಸಿ ಕಾಯಿದೆ ಮಾಡಿದೆ. ಯಾವುದಾದರೊಂದು ಜಾತಿಯಲ್ಲಿ ಒಂದು ಅವಧಿಯಲ್ಲಿ ಹೆಚ್ಚು ಮರಣಗಳಾದರೆ ಅದರ "ಜನನ ಕೋಟಾ"ವನ್ನು ಹೆಚ್ಚಿಸಲಾಗುತ್ತದೆ. ಅಂದರೆ ಅಷ್ಟು ಹೆಚು ಮಕ್ಕಳನ್ನು ಅದು ಮುಂದಿನ ಅವಧಿಯಲ್ಲಿ ಹಡೆಯಬಹುದು. ಯಾವುದೊಂದು ಜಾತಿಯಲ್ಲಿ ಮಿತಿಮೀರಿ ಮರಣಗಳಾಗಿ ಅದನ್ನು ಸದ್ಯ ಭವಿಷ್ಯತ್ತಿನಲ್ಲಿ ಹೆಚ್ಚಿನ ಜನನ ಮೂಲಕ ಸರಿಪಡಿಸಿಕೊಳ್ಳಲು ಅಸಾಧ್ಯವೆನಿಸಿದರೆ ಆಗ ಇತರ ಜಾತಿಗಳ ಜನನ ಕೋಟಾಗಳನ್ನು ಇಳಿಸಿ ಜಾತೀಯ ಸಮತೋಲವನ್ನು ಕಾಪಾಡಲಾಗುತ್ತದೆ.

ಇಂಥ ಕೋಟಾ ಪದ್ಧತಿಯಲ್ಲಿ ಎಲ್ಲರೂ ಸಹಕರಿಸುತ್ತಾರೆಯೆ? ಹೌದು. ಪ್ರತಿಯೊಂದು ಜಾತಿಯೂ ತನ್ನ ಹಕ್ಕುಗಳ ಬಗ್ಗೆ ತುಂಬ ಜಾಗ್ರತವಾಗಿರುವುದರಿಂದ ಈ ಪದ್ಧತಿ ಇಲ್ಲಿ

ಸರಿಯಾಗಿಯೆ ನಡೆಯುತ್ತಿದೆ; ಒಂದು ದುಃಖ ದಾಯಕ ಅಪವಾದ ಹೊರತು. ಒಂದಾನೊಂದು ಜಾತಿಯ ಜನ ತೊಗಲಖನ ಪ್ರಥಮ ಖಾನೇಸುಮಾರಿಯಲ್ಲಿ ಸೇಕಡಾ ಅರ್ಧದಷ್ಟಿದ್ದರು. ಇಂದು ಆ ಜಾತಿಯ ಕೊನೆಯ ಮನುಷ್ಯನಿಗೆ ೭೫ ವರ್ಷವಾಗಿವೆ. ಈ ಜಾತಿಯು ಮನಃಪೂರ್ವಕವಾಗಿ ಆತ್ಮಹತ್ಯೆ ಮಾಡಿಕೊಂಡಿತು. ಅದೊಂದು ಸ್ವಾತಂತ್ರ್ಯಪ್ರಿಯ ಸಂಚಾರಿ ಜಾತಿಯಾಗಿತ್ತು. ಖಾನೇಸುಮಾರಿ ಗಲಾಟೆ ಮೊಟ್ಟಮೊದಲು ಎದ್ದಾಗ ಭರದಿಂದ ಬೆಳೆಯುತ್ತಿದ್ದ ಜಾತಿಗಳಲ್ಲಿ ಅದೂ ಒಂದಾಗಿತ್ತು. ಸರಕಾರವು ಜನನ ಕೋಟಾ ಪದ್ಧತಿಯನ್ನು ಹೇರಿದಾಗ ಅದು ಸಹಕರಿಸಲು ನಿರಾಕರಿಸಿತು. ಸರಕಾರ ಅದರ ಕೋಟಾಮೀರಿದ ಮಕ್ಕಳನ್ನು ಕೊಲ್ಲಿಸುವುದಾಗಿ ಹೆದರಿಕೆ ಹಾಕಿತು. ಆಗ ಆ ಜಾತಿಯ ಪಂಚರು ಅವೊತ್ತಿನಿಂದ ಒಂದೇ ಒಂದು ಮಗುವನ್ನು ಹಡೆಯತಕ್ಕದ್ದಲ್ಲೆಂದು ನಿರ್ಧರಿಸಿದರು. "ಈ ಕೋಟಾ ದೇಶದಲ್ಲಿ ಬದುಕುವ ಇಚ್ಛೆ ನಮ್ಮ ಜಾತಿಗೆ ಇಲ್ಲ" ಎಂದು ಅವರು ಸಾರಿದರು. ಮದುವೆಗಳು ನಿಂತುಹೋದವು. ಎಲ್ಲರೂ ಬ್ರಹ್ಮಚರ್ಯೆ ಪಾಲಿಸಿದರು. ಈಗ ೭೫ ಆದವನು ಈ ಜಾತಿಯಲ್ಲಿ ಹುಟ್ಟಿದ ಕೊನೆಯ ಮನುಷ್ಯ. ಸರಕಾರ ಏನು ಮಾಡಿದರೂ ಈ ಜನ ತಮ್ಮ ಪ್ರತಿಜ್ಞೆಯನ್ನು ಬದಲಿಸಲಿಲ್ಲ.

ಈ ನಾಡಿನಲ್ಲಿ ಜನರು ಸುಖಿಗಳಾಗಿದ್ದಾರೆಯೆ ಎಂದು ನೀವು ಕೇಳುತ್ತೀರಿ. ನಿಸ್ಸಂಶಯವಾಗಿಯೂ ಹೌದು. ತಮ್ಮ ಜಾತಿಗೆ ಮುಂದೆ ಹೋಗಲು ಸಾಧ್ಯವಿಲ್ಲದಿದ್ದರೆ ಆಚೆ ಜಾತಿಯವರಿಗೂ ಸಾಧ್ಯವಿಲ್ಲವಲ್ಲ. ಇದಕ್ಕಿಂತ ಹೆಚ್ಚಿನ ಸುಖ ಅವರಿಗೆ ಬೇಕಾಗಿಲ್ಲ. ✱

---

## ನಂಬಿದರೆ ನಂಬಿ . . . .

ಮುಂಬಯಿಯ ಮಸುದಿಯಾ ದೀನ ಎಂಬವರ ಮೀಸೆ ಒಂದು ತುದಿಯಿಂದ ಇನ್ನೊಂದು ತುದಿಯ ವರೆಗೆ ಎಂಟೂವರೆ ಫೂಟು ಉದ್ದವಿದೆ.

* * *

ರಶಿಯದ ಫೇಡೋರ್ ವಾಸಿಲೆಟ್ ಎಂಬವರ ಪತ್ನಿ ೬೯ ಮಕ್ಕಳನ್ನು ಹೆತ್ತಿದ್ದಳು. ಅವರಲ್ಲಿ ೧೬ ಹೆರಿಗೆಗಳು ಎರಡೆರಡು ಮಕ್ಕಳವು, ೭ ಮೂರು ಮೂರರವು ಮತ್ತು ನಾಲ್ಕು ನಾಲ್ಕನಾಲ್ಕರವು ಇದ್ದವು. ಇವಳು ೧೮ ನೇ ಶತಮಾನದಲ್ಲಿದ್ದಳು.

* * *

ಗಂಡು ರೇಶಿಮೇಹುಳ ಹೆಣ್ಣು ರೇಶಿಮೇಹುಳದ ವಾಸನೆಯನ್ನು ಎರಡು ಮೈಲು ದೂರದಲ್ಲೇ ಹಿಡಿಯಬಹುದು.

* * *

ಅತಿ ಉದ್ದ ಹೆಸರುಳ್ಳ ಊರು ಒಂದು ಹಳ್ಳಿ. ಇದು ನ್ಯೂಝೀಲಂಡಿನಲ್ಲಿದೆ. ಇಂಗ್ರೇಜಿಯಲ್ಲಿ ಬರೆದಾಗ ಇದರಲ್ಲಿರುವ ಅಕ್ಷರಗಳು ೮೦. ಟೋಮಾಟಾವ್ಹಾಕಾ-ಟಂಗಿಹಂಗಕೋವು ಟಾಮಾಟೇಟುರಿಫು ಕಾಕಾಪಿಕಿಮಾವುಂಗಿಹೊರೊನುಕುಪೋಕಾಯಿವ್ಹೇನೌಕಿಟನಟಹು. —ಇದು ಅದರ ಹೆಸರು.

* * *

ಇಂಗ್ಲಂಡಿನ ಸೆಜ್‌ಫೀಲ್ಡ್ ಜನರಲ್ ಹಾಸ್ಪಿಟಲ್‌ನಲ್ಲಿ ೪೨೪ ನಾಣ್ಯಗಳನ್ನು ನುಂಗಿದ ಒಬ್ಬ ಮನುಷ್ಯನ ಹೊಟ್ಟೆಯೊಳಗಿಂದ ಅಷ್ಟೂ ನಾಣ್ಯಗಳನ್ನು ತೆಗೆದ ಬಗ್ಗೆ ವರದಿಯಾಗಿದೆ.

ಒಂದು ಕಥೆ

# ಆ ನಿರುದ್ಯೋಗಿ

ಪಿ. ವೆಂಕಟರಮಣಾಚಾರ್ಯ

ಮತ್ತೂ ಮತ್ತೂ ನನ್ನನ್ನೇ ನಾನು ಪುಸಲಾಯಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ— ಅವನನ್ನು ನಾನು ಕೊಂದದ್ದಲ್ಲ; ಅವನ ಸಾವಿಗೆ ನಿಮಿತ್ತಮಾತ್ರನಾದೆ, ಅಷ್ಟೆ—ಎಂದು. ಆದರೆ ಪುನಃ ಪುನಃ ಅದೇ ಭ್ರಾಂತಿ ಬಂದು ಪೀಡಿಸುತ್ತದೆ. ನಾನು ಅವನನ್ನು ತಿದ್ದುವ ಗೊಡವೆಗೆ ಹೋಗಿರದಿದ್ದರೆ ಅವನು ಬದುಕಿ ಉಳಿಯುತ್ತಿದ್ದನೋ ಏನೊ, ಯಾರಿಗೆ ಗೊತ್ತು?

ಅವನೇನೋ ಹುಟ್ಟಾ ನಿರುದ್ಯೋಗಿ—ಅದರಲ್ಲಿ ನನಗೇನೂ ಸಂಶಯವಿಲ್ಲ. ಆದರೆ ಗ್ರಹಚಾರ ಕೆಟ್ಟ ನನಗೇಕೆ ಬೇಕಿತ್ತು, ಅವನನ್ನು ಉದ್ಯೋಗಕ್ಕೆ ಹಚ್ಚುವ ಹವ್ಯಾಸ?

ಹೇಳಿದೆನಲ್ಲ, ಹುಟ್ಟಾ ನಿರುದ್ಯೋಗಿ ಆತ— ಎಂದು. ಬಾಲ್ಯದಲ್ಲಿ ಒಡನಾಡಿಯಾಗಿ, ಹುಡುಗತನದಲ್ಲಿ ಸಹಪಾಠಿಯಾಗಿ, ಕಡೆಗೆ ಅವನ ಕೊನೆಯ ದಿನಗಳಲ್ಲಿ ಬಂದೀಖಾನೆಯಲ್ಲಿ ಸಹಬಂದಿಯಾಗಿ ಅವನ ಜೀವನವನ್ನು ನಿರೀಕ್ಷಿಸಿದ್ದೇನೆ: ಅವನಲ್ಲಿ ಉದ್ಯಮದ ಬೀಜವೇ ಇರಲಿಲ್ಲ. ಬರಿಯ ಬೀದಿಬಸವತನ ಬೇರೂರಿತ್ತು.

ಶ್ರೀನಿವಾಸ ನಮ್ಮ ನೆರೆಮನೆಯ ಬಡ ವಿಧವೆ ಸೀತಮ್ಮನ ಮಗ. ಬಡವೆಯಾದರೂ ಕೈಕಾಲು ಗಟ್ಟಿಯಿದ್ದುದರಿಂದ, ಬೇರೆಯವರ ಮನೆಯ ಮುಸುರೆ ತೊಳೆದಾದರೂ ಒಬ್ಬನೇ ಮಗನಾದ ಶೀನೂಗೆ ಏನೂ ಕಡಿಮೆ ಮಾಡುತ್ತಿದ್ದಿಲ್ಲ. ತನ್ನ ಮಗ ಒಬ್ಬರ ಹಾಗೆ ಆಗಬೇಕು. ಮನೆಮಾರು ಕಟ್ಟಬೇಕು, ಸಂಸಾರ ಹೂಡಬೇಕು; ತಾನು ಒದ್ದಾಡಿದರೂ ಚಿಂತೆಯಿಲ್ಲ; ಇದು ಹೆಂಗಸಿನ ಹಸಿ ಹಂಬಲ. ಈ ಹಂಬಲವನ್ನು ಹೊಂದುವುದಕ್ಕಾಗಿ ಆಕೆ ಬೆವರು ಹರಿಸಿದ ದುಡಿಮೆಯ ಹಣವನ್ನು ಮಗನ ವಿದ್ಯಾಭ್ಯಾಸಕ್ಕೆ ವಿನಿಯೋಗಿಸುತ್ತಿದ್ದಳು; ತನ್ನ ಹೊಟ್ಟೆ ಹಸಿದಿದ್ದರೂ ಮಗನ ಗಂಟಲು ಒಣಗದ ಹಾಗೆ ನೋಡಿಕೊಳ್ಳುತ್ತಿದ್ದಳು.

ಆತ್ಮಸಂತೋಷದಿಂದ ತಾಯಿ ಮಾಡಿದ ಈ ಎಲ್ಲ ತ್ಯಾಗಗಳ ಹಣ್ಣನ್ನುಂಡು ಶ್ರೀನಿವಾಸನ ದೇಹವೇನೋ ಬೆಳೆಯಿತು. ಬುದ್ಧಿಯೂ ಬೆಳೆದಿರಬಹುದು. ಆದರೆ ಸೀತಮ್ಮ ಯಾವ ಆಶೋತ್ತರಗಳ ಲಾಭಕ್ಕಾಗಿ ತನ್ನ ಸ್ವಸುಖವನ್ನು ಬಲಿದಾನ ಮಾಡಿದ್ದರೋ ಅವುಗಳ ಪಡಿಯಚ್ಚಂತಿರಲಿ, ನೆರಳು ಕೂಡ ಅವರ ಮಗನ ಸ್ವಭಾವದ ಮೇಲೆ ಬೀಳದೇ ಇದ್ದದ್ದು ಪರಮಾಶ್ಚರ್ಯ.



ಯಾವುದೋ ಒಂದು ವಿಚಿತ್ರ ಗ್ರಹಗತಿಯಲ್ಲಿ ಅವನು ಭೂಮಿಯ ಮೇಲೆ ಬಿದ್ದಿರಬೇಕು. ಅದಲ್ಲದಿದ್ದರೆ ಅವನು ಆ ರೀತಿಯ ನಿರುದ್ಯೋಗಿಯಾಗಲು ಬೇರಾವ ಕಾರಣವನ್ನೂ ಹೇಳಲಾಗುವುದಿಲ್ಲ.

ಶಾಲೆಗೆ ಹೋಗುತ್ತಿದ್ದಾಗಿನ ಅವನ ರೀತಿ ನೀತಿಗಳು ನನಗಿನ್ನೂ ನೆನಪಿನಲ್ಲಿವೆ. ಸ್ವಚ್ಛತೆ–ಮಲಿನತೆಗಳ ಹೆಚ್ಚು ಕಡಿಮೆಗಳ ಅರಿವಾಗುವ ವಯಸ್ಸಾದ ಮೇಲೂ ಅವನಿಗೆ ಬಟ್ಟೆಬರೆಗಳ ಮಾಲಿನ್ಯದ ಕಡೆಗೆ ಲಕ್ಷ್ಯವೇ ಇರುತ್ತಿದ್ದಿಲ್ಲ. ಎಂದಾದರೊಮ್ಮೆ ಶಾಲೆಯ ಶಿಕ್ಷಕರ ಬೆದರಿಕೆ, ಹುಡುಗರ ನಗೆ, ತಾಯ ಒತ್ತಾಸೆಗಳಿಂದ ವಸ್ತ್ರ ವೊಗೆಯುವುದಕ್ಕೆ ತೊಡಗಿದರೂ ಒಂದೆರಡನ್ನು ಒಗೆದು ಹಾಕುವ ಮೊದಲೇ ಅವನ ಒಡಹುಟ್ಟಿದ ಆ ಸೋಮಾರಿತನ ಬಂದು ಮುಸುಕಿ ಬಿಡುತ್ತಿತ್ತು. ಅದರಿಂದಾಗಿ ಉಳಿದ ವಸ್ತ್ರಗಳು ಸಾಬೂನು ಕಾಣದೇ ಹಾಗೇ ಹಿಂಡಿ ಸರಿಸಲಡುತ್ತಿದ್ದವು.

ಪುಸ್ತಕಗಳನ್ನು ಮುಟ್ಟಿನೋಡುವ ಅಭ್ಯಾಸ ಇಲ್ಲದಿದ್ದರೂ ಯಾರ ಪುಣ್ಯದಿಂದಲೋ ಶಾಲೆಗೊಂದು ಸರಿಯಾಗಿ ಬರುತ್ತಿದ್ದ. ಬಂದಮೇಲಲ್ಲವೇ? ಅವನಿಚ್ಛೆಯಿಲ್ಲದೇ ಕೆಲವೊಂದು ಪಾಠಗಳು ಅವನಿಗೆ ತಿಳಿದುಹೋಗುತ್ತಿದ್ದವು. ಹೀಗಾಗಿ ಪ್ರತಿವರ್ಷವೂ ಕಷ್ಟದಿಂದಾದರೂ ತೇರ್ಗಡೆಯಾಗುತ್ತ ಹೋಗುತ್ತಿದ್ದ. ಹಾಗೇನೂ ಶೀನು ಮೆದುಳಿಲ್ಲದ ಮೊದ್ದು ಜಂತುವಾಗಿದ್ದಿಲ್ಲ.

ಪರೀಕ್ಷೆಗಳ ಸಮಯ ಮೊದಲು ಉತ್ತರಪತ್ರ (answer paper) ಗಳನ್ನು ಒಪ್ಪಿಸಿ ಹೋಗುವಾತ ಶೀನುವೇ. ಪ್ರಶ್ನೆಗಳ ಉತ್ತರ ಚೆನ್ನಾಗಿ ತಿಳಿದೇ ಇದ್ದರೂ ಬರೆದುಹಾಕುವುದಕ್ಕೆ ಚಪಲ ಬಿಡಬೇಕಲ್ಲ!

*

ಮ್ಯಾಟ್ರಿಕ್ ಕ್ಲಾಸಿನ ವರೆಗೆ ಶೀನೂ ನಾನೂ ಒಂದೇ ಶಾಲೆಯಲ್ಲಿ ಒಂದೇ ಕ್ಲಾಸಿನಲ್ಲಿ ಕಲಿಯುತ್ತ ಇದ್ದೆವು. ಮ್ಯಾಟ್ರಿಕ್‌ನಲ್ಲಿ ಅವ—ನ್ಯಾಯವಾಗಿ—ಫೈಲಾದ. ನಾನು ಮೇಲೆ ಬಿದ್ದಿದ್ದರಿಂದ ಮಂಗಳೂರಿನಲ್ಲಿ ಬಿಡಾರಮಾಡಿ ಕಾಲೇಜಿಗೆ ಹೋಗಹತ್ತಿದೆ.

ಆಗಾಗ್ಗೆ ರಜೆ ದೊರೆತಾಗ ಮನೆಗೆ ಬಂದು ಹೋಗುತ್ತಿದ್ದೆ. ಆಗ ಶೀನೂನ ಸಮಾಚಾರ ತಿಳಿದುಬರುತ್ತಿತ್ತು. ಊರುಬಿಟ್ಟು ಎಲ್ಲಿಯೋ ಹೊರಟು ಹೋಗಿದ್ದನಂತೆ. ಒಂದು ಕಾಗದ ಕೂಡ ಬರೆಯುತ್ತಿದ್ದಿಲ್ಲವಂತೆ. ಸೀತಮ್ಮ ಕಣ್ಣೀರು ತುಂಬಿ ಮಗನ ಬುದ್ಧಿಯನ್ನು ಬಣ್ಣಿಸುತ್ತಿದ್ದರು, ನನ್ನ ಕೂಡ.

*

ನಾನು ಮ್ಯಾಟ್ರಿಕ್ ಪಾಸಾದ ಮೇಲೆ ಮೊದಲನೆಯ ಬಾರಿ ಶೀನುವನ್ನು ಕಂಡದ್ದು ಸತ್ತರೂ ಮರೆತುಹೋಗದು. ಕಾಲೇಜು ಬಿಟ್ಟು ಕೆಲವು ದಿನಗಳಾಗಿದ್ದವು. ಕಾಂಗ್ರೆಸ್ ಸದಸ್ಯರನ್ನು ಸೇರಿಸುವುದಕ್ಕಾಗಿ ನಾನೊಂದು ಹಳ್ಳಿಯಲ್ಲಿ ಸಂಚಾರ ಮಾಡುತ್ತಿದ್ದೆ. ಮಧ್ಯಾಹ್ನದ ವರೆಗೆ ತಿರುತಿರುಗಿ ಕಪಾಲ ತಿರುಗಿಹೋಗಿತ್ತು. ಸ್ವಲ್ಪ ಶರಬತ್ತಾದರೂ ಕುಡಿಯೋಣ ಎಂತ ಆ ಹಳ್ಳಿಯ ಹೋಟೆಲಿಗೆ ಹೋದೆ. ಹೋಟೆಲಿನ ಬಾಗಿಲ ಹೊರಗೆ ಇರಿಸಿದ್ದ ಒಂದು ಮುರುಕು ಬೆಂಚಿನ ಮೇಲೆ ಬಡಕಲು ಮೈಯ, ಧೂಳು ತುಂಬಿ ಕೆಂಪಾಗಿ ಹೋಗಿದ್ದ ಬಟ್ಟೆಗಳ, ಎಣ್ಣೆಯ ಸೋಂಕಿಲ್ಲದೆ ಕೆಂಚುಗಟ್ಟಿ ಕೆದರಿ ಹಾರುತ್ತಿದ್ದ ಕೂದಲುಗಳ, ಮಲಿನ ಮುಖದ ಮೂರ್ತಿಯೊಂದು ನಿರ್ವೇದಭಾವದಿಂದ ಕುಳಿತ್ತು. ನಾನು ಹೋಟೆಲಿನೊಳಗೆ ಹೋಗುವುದನ್ನು ನೋಡಲಿಕ್ಕೆ ಆ ಮೂರ್ತಿ ಕೊಂಚ ತಿರುಗಿತು. ಎಲ್ಲೋ ಕಂಡ ಮುಖ. ಆದರೂ ಸ್ವಲ್ಪ ಹೊತ್ತು ಗುರುತೇ ಹತ್ತಲಿಲ್ಲ. ಕಡೆಗೆ ಅಂದಾಜು ಮಾಡಿಕೊಂಡು ಕೇಳಿದೆ—

"ನೀನು . . . ಶ್ರೀನಿವಾಸ, ಅಲ್ಲವೆ ?"

ಶೀನು ಕೂತಲ್ಲಿಂದ ಕದಲದೆ ಒಣನಗೆಯೊಂದನ್ನು ನಕ್ಕ. ಅದು ಸಂಮತಿ ಸೂಚಕವೆಂದು ನೆನಸಿಕೊಂಡೆ.

"ಇಲ್ಲೇನು ಹೀಗೆ ಕೂತಿದ್ದೀ, ಶೀನು ?"

"ಹೀಗೆಯೇ!" ಶೀನೂನ ಉದಾಸೀನ ಉತ್ತರ.

"ಊಟ ಆಗಿದೆಯೇ ?"

ಅವನನ್ನು ಕಂಡರೆ ಮೂರು ದಿನ ಅನ್ನ ಕಂಡಿಲ್ಲದಂತಿತ್ತು.

"ಇಲ್ಲ !"

"ಬಾ, ಒಂದು ಲೋಟ ಶರಬತ್ತು ಕುಡಿ," ಹೋಟೆಲಿನೊಳಗೆ ಕಾಲಿಡುತ್ತಾ ಅವನನ್ನಾಮಂತ್ರಿಸಿದೆ.

ಶೀನು ತನ್ನ ಭದ್ರಾಸನದಿಂದ ಮೆಲ್ಲನೆದ್ದು ಒಳಗೆ ಬಂದು ಕುಳಿತ. ಶರಬತ್ತು ಕುಡಿಯುತಾ ವಿಚಾರಿಸಿದೆ.

"ಏನಪ್ಪಾ, ಎಲ್ಲಿದ್ದೀ ಈಗ, ಏನು ಮಾಡುತ್ತಿದ್ದಿ ? ಬಹಳ ಸೊರಗಿಹೋಗಿದ್ದೀಯೆ," ನಾನು ಸಹಜವಾದ ಸಹಾನುಭೂತಿಯಿಂದ ಕೇಳಿದೆ.

ಇಡೀ ಲೋಟವನ್ನು ಬಾಯೊಳಗೆ ಬಗ್ಗಿಸಿ ಒಂದೇ ಗುಟುಕಿಗೆ ಪಾನಕವನ್ನು ಆಪೋಶನ ಮಾಡಿ ಲೋಟವನ್ನು ಮೇಜಿನ ಮೇಲಿರಿಸುತ್ತಾ ಶೀನು ನುಡಿದ—

"ಹೀಗೇ ಇದ್ದೇನೆ ಸದ್ಯ !"

ಅವನ ಬಾಯಾರಿಕೆ ಹಿಂಗದ್ದು ನನಗೆ ತಿಳಿದು "ಇನ್ನೊಂದು ಲೋಟ ಶರಬತ್ತು ಕೊಡಿಸಲೆ?"

"ಹೂಂ ಇದ್ದರೆ ಕುಡಿಯುತ್ತಿದ್ದೆ."

ಇನ್ನೊಂದು ಲೋಟ ಶರಬತ್ತು ಕೊಡಿಸಿದೆ ನಾನು. ಶೀನು ಅದನ್ನು ಕುಡಿದು ಸ್ವಲ್ಪ ಸಮಾಧಾನಪಟ್ಟನೆಂದು ತೋರಿತು.

"ಏನಪ್ಪಾ ಊರಿಗೆ ಬರುತ್ತೀಯಾ ? ಸಂಜೆಗೆ ನಾನು ಹೋಗುತ್ತಿದ್ದೇನೆ. ಬರುತ್ತೀಯಾದರೆ ನನ್ನ ಜತೆಗೆ ಬಾ," ಎಂದೆ.

"ಇಲ್ಲಪ್ಪಾ, ಕೈಯಲ್ಲಿ ಕಾಸಿಲ್ಲ ಹೇಗೆ ಬರಲಿ? ನೀನು ಬಸ್ಸಿನಲ್ಲಿ ಹೋಗುತ್ತಿರಬಹುದು. ಮಂಗಳೂರಿನಿಂದ ಇಲ್ಲಿಯ ವರೆಗೆ ಹೇಗಾದರೂ ಕಾಲೆಳೆಯುತ್ತಾ ಬಂದೆ. ಇನ್ನು ಈಹೊತ್ತು ಮುಂದೆ ಸಾಗಲಾರೆ. ಎಲ್ಲಿಯಾದರೂ ಮರದಡಿ ಈ ರಾತ್ರಿ ಮಲಗಿ ನಾಳೆ ಬೆಳಿಗ್ಗೆ ಹೊರಡುತ್ತೇನೆ."

ತಾಯ ವಾತ್ಸಲ್ಯದ ಪರಿಪೋಷಣೆಯಿಂದ ಶೀನೂನ ಸ್ವಭಾವದಲ್ಲಿ ಯಾಚನೆಯ ಮತ್ತು ಪರಾಶ್ರಯದ ಕಲೆಯು ಬೆಳೆದಿರಲಿಲ್ಲ. ಮಾರುದ್ದದ ಮೈಯನ್ನು ಗೇಣುದ್ದ ಮಾಡಿ ಮಾತಾಡಲು ಅವನಿಂದಾಗುತ್ತಿರಲಿಲ್ಲ. ಅದರಿಂದಲೇ ಒತ್ತಾಯ ಪಡಿಸಿದೆ.

"ಪರವಾ ಇಲ್ಲ ಬಿಡು. ಬಸ್ಸಿನ ಕಾಸು ನಾನು ಕೊಡುತ್ತೇನೆ. ಸಿಕ್ಕಸಿಕ್ಕಲ್ಲಿ ಹೀಗೆ ಉಪವಾಸ ಅಲೆದು ಯಾವ ಸುಖ ಹೇಳು ? ಬಾ."

"ಸುಖವೆಂದು ಅಲೆಯುತ್ತೇನೆಯೆ ? ನನ್ನ ಪ್ರಾರಬ್ಧ ಹಾಗೆ. ಅದನೆಲ್ಲ ಮಾತಾಡಿ ಏನು ಫಲ ?" ಕರುಣಾರ್ದ್ರವಾದ ಅಭಾವವೈರಾಗ್ಯದಿಂದ ಶೀನು ನನ್ನೊಡನೆ ಹೆಜ್ಜೆ ಹಾಕುತ್ತ ಮೆಲ್ಲನೆ ನುಡಿದ.

ಸ್ನೇಹಿತನೊಬ್ಬನಲ್ಲಿಗೆ ಅವನನ್ನು ಕರೆದುಕೊಂಡು ಹೋಗಿ ಮೀಯಿಸಿ ಊಟ ಮಾಡಿಸಿದೆ. ಊಟ ಮುಗಿದ ಮೇಲೆ ವಿಚಾರಿಸಿ ತಿಳಿದೆ ಅವನ ಕತೆ.

ಮ್ಯಾಟ್ರಿಕಿನಲ್ಲಿ ಫೇಲಾದಮೇಲೆ ಪುನಃ ಶಾಲೆಗೆ ಸೇರುವುದು ಅವನಿಗೆ ಸರ್ವಥಾ ಸೇರಲಿಲ್ಲ. ಊರಲ್ಲಿಯೆ ಕೆಲವು ದಿನ ಯಾತಾಯಾತ ಹಾಕುತ್ತಿದ್ದ. ಆದರೆ ಬಹಳ ದಿನ ಈ ಕಾರ್ಯಕ್ರಮವನ್ನು ಮುಂದುವರಿಸಲಾಗಲಿಲ್ಲ. ಯಾವ ರೀತಿಯಲ್ಲಿಯೂ ಊರಲ್ಲಿ ಪಥ ಸಾಗಲಾರದೆ ಕಿವಿಯಲ್ಲಿದ್ದ ಒಂಟಿಯ ಜತೆಯನ್ನು—ಅವನ ದೇಹದಲ್ಲಿದ್ದ ಏಕಮಾತ್ರ ಸೊತ್ತನ್ನು—ಒತ್ತೆಯಿಟ್ಟು, ಪರವೂರಿಗೆ ಹೋಗಿಬಿಟ್ಟ. ಯಾವೂರಿಗೆ ಹೋದರೇನು ? ಉದ್ಯೋಗ ಮಾಡಲಾರದ ಮನುಷ್ಯ ಎಷ್ಟು ದಿನ ತಾನೇ ಜೀವನ ನಡೆಯಿಸಿಯಾನು ? ಹುಬ್ಬಳ್ಳಿಯ ಹೋಟೆಲೊಂದರಲ್ಲಿ ಕೆಲಸಕ್ಕೆ ನಿಂತ. ಆದರೆ ದಿನ ಬೆಳಗಾದರೆ ಹನ್ನೆರಡು ಗಂಟೆ ಹಗಲು, ನಾಲ್ಕು ಗಂಟೆ ರಾತ್ರಿ ಒಂದೇ ರೀತಿ ಗಾಡಿಯೆತ್ತಿನ ಹಾಗೆ ದುಡಿಯುವುದು, ಎಂಟು ಗಂಟೆಯಾಗದೆ ಹಾಸಿಗೆ ಬಿಟ್ಟೇಳಲರಿಯದ ಶ್ರೀನಿವಾಸನಿಗೆ ಸಾಧ್ಯವೇ ? ಅಲ್ಲಿಂ-

ದೊಂದು ದಿನ ಓಟ ಕಿತ್ತ. ಆವೂರು ಈವೂರಿನ್ನದೆ ಎಲ್ಲ ಕಡೆ ಅಲೆದ. ಬೊಂಬಾಯಿಗೂ ಹೋದ. ಅಲ್ಲಿ ಹಲವಾರು ಆಫೀಸುಗಳಲ್ಲಿ ಕೆಲಸ ಮಾಡಿದ. ಎಲ್ಲಿಯೂ ಒಂದು ತಿಂಗಳಿಗಿಂತ ಹೆಚ್ಚು ನಿಲ್ಲುತ್ತಿರಲಿಲ್ಲ.

ಅವನ ಸಮಾಚಾರ ಕೇಳಿ ಕಡೆಗೆ ನಾನೆಂದೆ–

"Rolling stone gathers no moss ಅಂತೆ! ಹಾಗೆ ಯಾವ ಕೆಲಸದಲ್ಲೂ ರುಚಿ ಕಂಡು ಬರುವ ಮುಂಚೆ ನೀನು ಅದನ್ನು ಬಿಡುತ್ತಾ ಬಂದರೆ ಹೇಗೆ? ಕೆಲವು ದಿನ ಮನಸ್ಸನ್ನು ಬಿಗಿಹಿಡಿದು ಕೆಲಸ ಮಾಡಿದರೆ ಎಲ್ಲ ಸರಿಹೋಗುತ್ತಿತ್ತು."

"ಅದು ನನಗೂ ಗೊತ್ತು, ರಾಮೂ. ಚಿಕ್ಕಂದಿನಲ್ಲಿ ಶಾಲೆಗೆ ಹೋಗುತ್ತಿದ್ದಾಗಿಗಿಂತ ಈಗ ನನ್ನ ಬುದ್ಧಿ ಬೆಳೆದಿದೆ. ಅನುಭವವೂ ಬೆಳೆದಿದೆ. ಕೆಲಸ ಮಾಡಲಾರದವನು ಉಪವಾಸ ಬೀಳಬೇಕೆಂಬ ತತ್ವ ನನಗೂ ಮಂದಟ್ಟಾಗಿದೆ. ಏನು ಮಾಡಲಿ ಹೇಳು? ಶತಪ್ರಯತ್ನಮಾಡಿ ಸ್ವಲ್ಪ ಸಹನೆಯನ್ನು ಅಭ್ಯಾಸ ಮಾಡಿದ್ದೇನೆ, ಒಂದು ಕೆಲಸ ನನಗೆ ಬೇಡವೆಂದು ಕಂಡಕೂಡಲೆ ಬಿಟ್ಟು ಬೇಜವಾಬ್ದಾರಿಯಿಂದ ಹೊರಟುಹೋಗುವುದನ್ನೂ ಬಿಟ್ಟುಬಿಟ್ಟಿದ್ದೇನೆ. ಇನ್ನೊಂದು ದಿನ ಇದೇ ಕೆಲಸ ಮಾಡಿದರೆ ಖಂಡಿತ ಹುಚ್ಚು ಹಿಡಿಯುತ್ತದೆಂದೆನಿಸುವವರೆಗೂ ಸಹಿಸಿದ್ದೇನೆ... ಈ ಹಸಿವೆ ನೀರಡಿಕೆ, ಈ ಪರಾಶ್ರಯ, ಈ ಕಾಲುನಡಿಗೆ ಇದೆಲ್ಲ ನನಗೆ ಸುಖವಾಗುತ್ತದೆ ಎಂದು ತಿಳಿದಿದ್ದೀಯಾ? ನಾನು ಪಟ್ಟಪಾಡನ್ನು ನೆನೆಸಿಕೊಂಡರೆ, ಈವರೆಗೆ ಹೇಗೆ ಬದುಕಿದ್ದೇನೆಂದೇ ಆಶ್ಚರ್ಯವಾಗುತ್ತದೆ.. ಎಷ್ಟು ಉಪವಾಸ, ಎಷ್ಟು ಪ್ರವಾಸ, ಎಂಥೆಂಥ ಅವಮಾನ.. ಅಯ್ಯೋ....ನನಗೆ ಹಿಡಿಯುವ ಕೆಲಸ ಈ ಜಗತ್ತಿನಲ್ಲಿನ್ನೂ ಆಗಿಲ್ಲವೋ ಏನೋ?"

ವಿದ್ಯಾರ್ಥಿ ಜೀವನದ ನಿಶ್ಚಿಂತ ಸೌಖ್ಯದ ಕಾಲದಲ್ಲಿ ಈ ಮನುಷ್ಯನ ವಿಚಿತ್ರ ಸ್ವಭಾವದ ಕುರಿತು ಚಿಂತಿಸುವ ಅಗತ್ಯವಾಗಲಿ, ಇಚ್ಛೆಯಾಗಲಿ, ವಿಚಾರಶಕ್ತಿಯಾಗಲಿ ನನಗಿದ್ದಿಲ್ಲ. ಆದರೆ ನಿರುದ್ಯೋಗದ ಮೂರ್ತಸ್ವರೂಪವೇ ಆಗಿ ಆತ ನನ್ನ ಮುಂದೆ ನಿಂತಾಗ, ಅವನನ್ನು ದಾರಿಗೆ ಹಚ್ಚುವುದು ಸಾಧ್ಯವೇ, ಅಲ್ಲವೇ ಯತ್ನಿಸೋಣವೆನಿಸಿತು. ಅಂದೇ ಸಾಯಂಕಾಲ ಅವನನ್ನು ಊರಿಗೆ ಕರೆತಂದೆ.

ನನ್ನ ವಿಚಾರಧಾರೆ ಹೀಗೆ ಹರಿಯಿತು: ಶೀನು ಉದ್ಯೋಗ ಶತ್ರುವೇನೋ ನಿಜ. ಆದರೆ ನಾಲ್ಕಾರು ವರ್ಷಗಳ ದುಃಖಮಯ ಜೀವನದ ಕಟು–ಅನುಭವಗಳ ಉರಿಯಲ್ಲಿ ಕಾದು ಕೆಂಪೇರಿದ್ದ ಅವನ ಸ್ವಭಾವದ ಸಬಳವನ್ನು ಪ್ರಯತ್ನಪೂರ್ವಕವಾಗಿ ಬಗ್ಗಿಸಿದರೆ ಬಗ್ಗಿಸಲೂಬಹುದೆಂದು ಆಸೆಯಾಯಿತು. ಅದನ್ನು ಬಗ್ಗಿಸುವ ಹವ್ಯಾಸದಲ್ಲಿ ಸಬಳವೇ ಮುರಿದುಹೋದೀತೆಂಬ ಕಲ್ಪನೆ ನನಗಾಗಲಿಲ್ಲ.

ಸರಿ, ನನ್ನ ಪ್ರಯೋಗಗಳಿಗಾರಂಭವಾಯಿತು. ನಾನು ಆರೆಂಟು ತಿಂಗಳುಗಳ ವರೆಗೆ ನಡೆಸಿದ ಎಲ್ಲ ಪ್ರಯತ್ನಗಳ ವಿವರವನ್ನಿಲ್ಲಿ ಕೊಟ್ಟರೆ ನಿಮಗೆ ತಲೆ ಸಿಡಿಯಬಹುದು. ಅಂತೂ ಇಷ್ಟು ಹೇಳಬಲ್ಲೆ—ಕಾಂಗ್ರೆಸ್ ಕೆಲಸದಿಂದ ಹಿಡಿದು ಬೇಸಾಯ ಕೆಲಸದ ವರೆಗಿನ ಎಲ್ಲ ವಿಧದ ಉದ್ಯೋಗಗಳನ್ನೂ ಅವನಿಗೆ ದೊರಕಿಸಿಕೊಟ್ಟು ನೋಡಿದೆ. ಎಲ್ಲ ಪ್ರಯೋಗಗಳ ಫಲವೂ ಒಂದೆ. ಪರಮಾವಧಿಯೆಂದರೆ ಒಂದು ತಿಂಗಳ ವರೆಗೆ ಸುಗಮವಾಗಿ ಕೆಲಸ ಸಾಗುತ್ತಿತ್ತು—ಆಮೇಲೆ ಪುನಃ ನಾಯಿಯ ಬಾಲ ಅಂಡೆಯಲ್ಲಿ ಹಾಕಿರಿಸಿದಂತೆ.

ಕೊನೆಗೆ ನನ್ನ ಸಹನೆಯೂ ಮೀರಿತು. ಅಂತಿಮ ಪ್ರಯತ್ನವೊಂದನ್ನು ಮಾಡಿ ಈ ಬೇಸರಗೇಡಿ ಕೆಲಸಕ್ಕೆ ತಿಲಾಂಜಲಿ ಕೊಡೋಣವೆಂದು ನಿರ್ಧರಿಸಿದೆ.

ನಾನು ಅವನನ್ನು ಜೈಲಿಗೆ ಕಳಿಸಿದೆ—ಹೌದು, ಗಾಬರಿಯಾಗಬೇಡಿ, ನಿಜವಾಗಿಯೂ ನಾನು ಅವನನ್ನು ಜೈಲಿಗೆ ಕಳಿಸಿದೆ. ಅದೇ ನನ್ನ ಕೊನೆಯ ಪ್ರಯತ್ನ ಚಿಲ್ಲರೆ ಪ್ರಯೋಗಗಳನ್ನು

ಮಾಡಿ ಫಲವಿಲ್ಲೆಂದು ನನಗೆ ಮುಂದಟ್ಟಾಯಿತು. ಅದಕ್ಕೇ ಈ ಮಹಾಪ್ರಯೋಗಕ್ಕೆಳಿದದ್ದು. ಕೆಲಸ ಮಾಡುವ ಅಥವಾ ಬಿಡುವ ಅಧಿಕಾರ ವನ್ನವನಿಗೇ ಕೊಟ್ಟರೆ ಕೆಲಸ ಸಾಗದು. ಹೆಚ್ಚು ಒತ್ತಾಯ ಮಾಡಿದರೆ ಊರು ಬಿಟ್ಟು ಓಡುವುದೇ ಪರಿಣಾಮ; ಕಡಿಮೆಯೆಂದರೆ ಆರು ತಿಂಗಳಾ ದರೂ ಒತ್ತಾಯದಿಂದ ಒಂದೇ ಕೆಲಸ ಮಾಡಿಸಿ ದರೆ ಮಾತ್ರ ಅವನ ಸ್ವಭಾವ ಬದಲಾಯಿಸಬಹು ದೆಂದೆನಿಸಿತು ನನಗೆ. ಸ್ವತಂತ್ರನಾಗಿದ್ದರೆ ಅವ ನಿಂದ ಕೆಲಸ ಮಾಡಿಸುವ ಆಸೆಯೇ ಇರಲಿಲ್ಲ. ಅದಕ್ಕಾಗಿ ಯಾವುದೋ ನಡೆಯದ ಕಳವಿನ ಸುಳ್ಳು ಆರೋಪವನ್ನು ಅವನ ತಲೆಯ ಮೇಲೆ ಹೊರಿಸಿ ಆರು ತಿಂಗಳು "ದೊಡ್ಡಮನೆ"ಯ ಆತಿಥ್ಯಕ್ಕಾಗಿ ಕಳಿಸಿದೆ. ಇದೊಂದರ ಸುಳಿವೂ ಅವನಿಗೆ ಹತ್ತದಂತೆ ಎಚ್ಚರವಾಗಿದ್ದೆ.

ಅವನನ್ನು ಕನ್ನಾನೂರಿಗೆ ಕಳಿಸುವಂದು ನಾನೂ ಬೀಳ್ಕೊಡಲು ಹೋಗಿದ್ದೆ. ಕಣ್ಣಲ್ಲಿ ಸಹಾನುಭೂತಿಯ ಕಂಬನಿಗಳು ತುಂಬಿರಲು, ಆರು ತಿಂಗಳ ಬಂಧನವಾದರೂ ಅವನ ಜೀವನ ದಲ್ಲಿ ಇಚ್ಛಿತವಾದ ಸ್ವಭಾವಪರಿವರ್ತನೆಯ- ನ್ನುಂಟುಮಾಡಲೆಂದು ಬಯಸಿದೆ. ಪಾಪದ ಶೀನು! ನನ್ನ ಛಿತೂರಿಯ ಗಾಳಿಯಾದರೂ ಅವನಿಗೆ ಹತ್ತಿರಲಿಲ್ಲ. ಅದೇ ನನ್ನ ಜೀವನವನ್ನು ಕೊರೆಯುವ ಸಂಗತಿ.

ಮುಂದೆ ಕೆಲವೇ ದಿನಗಳಲ್ಲಿ ದೇಶದಲ್ಲೆಲ್ಲಾ ಹಬ್ಬಿದ ಸತ್ಯಾಗ್ರಹಾಂದೋಲನದಲ್ಲಿ ನಾನೂ ಹದಿಮೂರು ತಿಂಗಳ ಸಜೆಯನ್ನನುಭವಿಸಬೇ- ಕಾಗಿ ಬಂತು. ಅದೇ ಕನ್ನಾನೂರು ಜೇಲಿಗೆ ನಮ್ಮನ್ನೂ ರವಾನಿಸಿದರು.

ಶೀನು ಅಲ್ಲಿ ಕ್ರಿಮಿನಲ್ ಕೈದಿಯಾಗಿ ಜೀವನ ಸಾಗಿಸುತ್ತಿದ್ದ. ಅವನು ಮಾಡದ ಅಪರಾಧ ಕ್ಕಾಗಿ ಶಿಕ್ಷೆ ಅನುಭವಿಸುತ್ತಿದ್ದ. ಕನ್ನಾನೂರಲ್ಲಿ ಮೊದಲ ಬಾರಿ ಅವನನ್ನು ಕಾಣುವ ಸಂದರ್ಭ ಒದಗಿದಾಗಲೇ ನಾನು ಮಾಡಿದ ತಪ್ಪನ್ನು ಕಂಡುಕೊಂಡೆ. ಆ ಅಮಾನುಷ "ಇಡ್ಲಿ" ಮತ್ತು "ಪಚ್ಚೇಕರಿ"ಯ ಆಹಾರದಿಂದ ಮೈಯಲ್ಲಿ ಯಾರಾದರೂ ಸೊರಗಿದರೆ ಅದಕ್ಕಾಗಿ ಆಶ್ಚರ್ಯ ಪಡಬೇಕಾಗಿಲ್ಲ. ನ್ಯಾಯವಾಗಿ ಶೀನುವೂ ಸೊರಗಿದ್ದ. ಆದರೆ ನನ್ನ ಮನಸ್ಸಿಗೆ ನಾಟಿದ್ದು ಅದಲ್ಲ. ಅವನ ಮುಖ, ಅವನ ನಿಸ್ತೇಜ ದೃಷ್ಟಿ. ಅವನು ಅಲ್ಲಿ ಇರತೊಡಗಿ ಎರಡೇ ತಿಂಗಳಾಗಿ ದ್ದರೂ ಅಂಥ ಭಯಂಕರ ಪರಿವರ್ತನೆಯಾಗಿತ್ತು. ಅವನ ಮುಖದಲ್ಲಿ. ಜೀವನದಲ್ಲಿ ಇನ್ನೇನಾದರೂ ಬಯಕೆಯಿಲ್ಲವೆಂಬಂಥ ನಿರಾಶೆಯು ಮನೆಮಾ ಡಿತ್ತು ಅವನ ಹಣೆಯ ಮೇಲೆ.

ಕೆಲವೇ ದಿನಗಳಲ್ಲಿ ಅವನೊಡನೆ ಮಾತನಾ- ಡುವ ಅವಕಾಶವೂ ದೊರೆಯಿತು. ಅಂದಿನ ಸಂಭಾಷಣೆಯ ಪ್ರತಿ ಶಬ್ದವೂ ನನ್ನ ನೆನಪಿನಲ್ಲಿ ಅಚ್ಚಳಿಯದೇ ಹಾಗೇ ಉಳಿದಿದೆ. ಅವನು ನನ್ನ ಮುಂದೆ ನಿಂತು ಬಹಳ ಹೊತ್ತಿನ ವರೆಗೆ ಮೌನ- ವನ್ನೊಡೆಯುವುದು ನನ್ನಿಂದಾಗಲಿಲ್ಲ.

"ಏನು ಶೀನು? ಹೇಗೆ ಸಾಗುತ್ತಿದೆ ಇಲ್ಲಿ ನಿನ್ನ ಜೀವನ?"

"ಸಾಗುತ್ತಿಲ್ಲ—ಎಳೆಯುತ್ತಿದೆ ...ಅಷ್ಟೆ.... ನನ್ನ ಜೀವನದ ಮುಂದಾಳು ನಾನಲ್ಲ ಈಗ... ಈ ನನ್ನ ಭಾಗ್ಯವಿಧಾತರು...."

ಮುಂದೇನು ಹೇಳಬೇಕೆಂದು ನನಗೆ ತೋಚ ಲಿಲ್ಲ ಸ್ವಲ್ಪ ಹೊತ್ತು ಯೋಚಿಸಿ ಒತ್ತಾಯದ ಆಶಾವಾದದಿಂದ ಹೇಳಿದೆ.

"ಮತ್ತೆ ಯಾವ ಕಷ್ಟಗಳೇ ಇರಲಿ....ನಿನ್ನ ಸ್ವಭಾವ ಪರಿವರ್ತನೆಗೆ ಇದೊಂದು ಸುಸಂ- ದರ್ಭ....ಆರು ತಿಂಗಳ ದುಃಖಭೋಗದಿಂದ ನಿನ್ನ ಜೀವನದಲ್ಲಿ ಹೊಸ ಬೆಳಕು ಬರುವುದೆಂದು ನನ್ನ ಹೃದಯ ಹೇಳುತ್ತಿದೆ...."

ನಿಜವಾಗಿ ನನ್ನ ಹೃದಯ ಹಾಗೆ ಹೇಳುತ್ತಿರ ಲಿಲ್ಲ. ಅಲ್ಲಿ ಪಶ್ಚಾತ್ತಾಪದ ಜ್ವಾಲೆಯು ನಾಲಗೆ ಯೊಂದು ನೀಲಚ್ಛಾಯೆಯನ್ನು ಬೀರುತ್ತಿತ್ತಷ್ಟೆ!

"ನಿನ್ನ ಹೃದಯ ಹೇಳುತ್ತಿರಬಹುದು.... ನನ್ನ ಹೃದಯ...ಇಲ್ಲ.. ಅದು ಏನೂ ಹೇಳುತ್ತಿಲ್ಲ."

"ನಿರಾಶನಾಗಬೇಡ ಶೀನೂ. . . .ಈ ದುಃಸಂದರ್ಭದ ಒಳ್ಳೆಯ ಉಪಯೋಗ ಮಾಡಿಕೋ. ನಿನ್ನಸ್ವಭಾವ ತಿದ್ದಿಕೋ." ನನ್ನಉಪದೇಶ.

"ನಾನೇನು ತಿದ್ದಿಕೊಳ್ಳಲಿ . . . ಬ್ರಹ್ಮ ತಿದ್ದಿಕೊಂಡಾನು . . . . . ನಿಜವಾಗಿ ಇದು ಅವನಿಗೊಂದು ಸಂದರ್ಭ . . ."

"ಜೈಲಿನ ವಾತಾವರಣದಲ್ಲಿ ಒಂದು ಶಕ್ತಿಯಿದೆ. ಅದು ಹುಲಿಯನ್ನು ಇಲಿ ಮಾಡುವ ಶಕ್ತಿಯುಳ್ಳದ್ದು . . . . ನೀನೇ ನೋಡು. ಜೈಲನ್ನು ಬಿಟ್ಟುಹೋಗುವಂದು ನೀನು ಹೇಗೆ ಮಾರ್ಪಾಡು ಹೊಂದುತ್ತಿಯೆಂದು," ಇಲ್ಲದ ಸಂತೋಷವನ್ನು ತಂದುಕೊಂಡು ನಾನೆಂದೆ.

"ಈ ಜೈಲನ್ನು ನಾನು ಬಿಟ್ಟುಹೋಗುವಹಾಗಿಲ್ಲ ರಾಮೂ ! ಇಲಿಯನ್ನು ಗೋಣಿಯೊಳಗೆ ಎಷ್ಟು ದಿನ ಹೊಲಿದಿಡಬಹುದು."

*

ಶೀನೂನನ್ನು ಹಗ್ಗ ಹೊಸೆಯುವ ಕೆಲಸಕ್ಕೆ ಹಾಕಿದ್ದರು. ಅವನ ಅದೃಷ್ಟಕ್ಕೇ ಅಂಥಾ ಕೆಲಸ ಸಿಕ್ಕಿತೋ ಏನೋ. ನಾವು ರಾಜಕೀಯ ಕೈದಿಗಳು "ಅರಸನ ಅತಿಥಿ"ಗಳು. ಕೆಲಸ ಮಾಡುವ ಪಾಡಿಲ್ಲ. ಕ್ರಿಮಿನಲ್ ಕೈದಿಗಳು ಮೈಮುರಿದು ದುಡಿಯಬೇಕು—ದುಡಿಯಲೇ ಬೇಕು. ದುಡಿಯದಿರಲೂ ಸಾಧ್ಯವಿಲ್ಲ. ಬೇಡವೆಂದರೆ ಬಿಟ್ಟು ಹೋಗಲಾಸ್ಪದವಿಲ್ಲ. ಹೀಗೆ ಈ ಅನಿವಾರ್ಯ ಉದ್ಯೋಗವೇ ಶೀನೂನ ಅನಂತ ಚಿಂತೆಗೆ ಮೂಲ.

ಅಪರಾಧಿಗಳನ್ನು ದಂಡಿಸುವ ಉದ್ದೇಶದ ನಮ್ಮ ಜೈಲುಗಳಲ್ಲಿ ಕೈದಿಗಳ ಮಾನಸಿಕ ಭಾವನೆಗಳನ್ನು ಕುರಿತು ಯಾರು ಲಕ್ಷಿಸುತ್ತಾರೆ? ಬೆಳಿಗ್ಗೆ ಏಳುವುದರಿಂದ ತೊಡಗಿ ಸಂಜೆ ಲಾಕಪ್ಪಿಗೆ ಸೇರುವವರೆಗೆ ಎಲ್ಲ ಯಂತ್ರದಂತೆ ಹೊತ್ತು ತಪ್ಪದೇ ಆಗಬೇಕು. ಊಟ ಮಾಡಬೇಕು—ಮಾಡಲೇ ಬೇಕು, ಕೆಲಸ ಮಾಡಬೇಕು—ಮಾಡಲೇ ಬೇಕು. ಅದು ಜೈಲಿನ ಶಿಸ್ತು. ಈ ಶಿಸ್ತೇ ಶೀನೂನ ಬಾಳಿನ ಬೀಳನ್ನು ಹರಿದು ಹಾಕಿತು.

*

ಒಂದು ದಿನ ಬೆಳಿಗ್ಗೆ ಕೈದಿಗಳ ಕೋಣೆಯ ಬೀಗ ತೆರೆವ ಹೊತ್ತಿಗೆ ಗಲಭೆಯೆದ್ದಿತು. ವಿಚಾರಿಸುವಾಗ ಕೈದಿ ನಂ. ೬೧೫ ಶ್ರೀನಿವಾಸರಾವ್ ಆತ್ಮಹತ್ಯೆ ಮಾಡಿಕೊಂಡಿದ್ದು ತಿಳಿದುಬಂತು. ನನಗೆ ಸಿಡಿಲು ಬಡಿದ ಹಾಗಾಯಿತು.

ಕನ್ನಾನೂರಿನಲ್ಲಿ ಕೈದಿಗಳು ಮಲಗುವುದಕ್ಕೆ ಹುರಿಹಗ್ಗದ ಚಾಪೆ. ಶೀನೂ ಆ ಚಾಪೆಯನ್ನು ಬಿಡಿಸಿ ಗಟ್ಟಿಯಾದ ಕಣ್ಣಿ ಹೊಸೆದು ಜೈಲಿನ ಕಿಡಿಕಿಯಿಂದ ಅದನ್ನಿಳಿಸಿ ನೇತುಹಾಕಿಕೊಂಡಿದ್ದ. ಎಂಥ ಭಯಾನಕ ದೃಶ್ಯ ಅದು !

ನೆಲದ ಮೇಲಿನ ಧೂಳನ್ನುಬೆರಳಿಂದೆತ್ತಿ ಬಿಳಿಯ ಗೋಡೆಯ ಮೇಲೆ ಬರೆದಿದ್ದ—

"ಉದ್ಯೋಗವಿಲ್ಲದೆ ಜೀವನ ಸಾಗಿಸಲು ಈ ಜಗತ್ತಿನಲ್ಲಿ ಸಾಧ್ಯವಿಲ್ಲ. ಉದ್ಯಮದೊಡನೆ ಜೀವನವನ್ನೆಳೆಯಲು ನನ್ನಿಂದಾಗದು. ಅದಕ್ಕಾಗಿ ಈ ಉದ್ಯೋಗ ಮಾಡಿದ್ದೇನೆ. ಯಾರೂ ಮರುಗಬೇಕಾಗಿಲ್ಲ."

*

ಈಗ ಹೇಳಿ, ನನ್ನ ಅಪರಾಧಕ್ಕೇನು ಶಿಕ್ಷೆ? *

"ಜಯ ಕರ್ನಾಟಕ" ದಿಂದ

---

ಮೊಟ್ಟಮೊದಲ ಮಗು ಮೊದಲ ನಗು ನಕ್ಕಾಗ ಆ ನಗು ಲಕ್ಷಾಂತರ ತುಣುಕುಗಳಾಗಿ ದಿಕ್ಕು ದಿಕ್ಕುಗಳಿಗೆ ನೆಗೆಯಿತು. ಅವರೇ ದೇವತೆಗಳು.

—ಜೆ. ಎಂ. ಬಾರಿ

ಜನರು ಧರ್ಮಕ್ಕೋಸ್ಕರ ಹೋರಾಡಬಲ್ಲರು, ಬರೆಯಬಲ್ಲರು, ಸಾಯಲು ಕೂಡ ಬಲ್ಲರು; ಆದರೆ ಅದನ್ನು ಆಚರಿಸಲು ಮಾತ್ರ ಒಲ್ಲರು. —ಡಿಬ್ಬಿ ಟಾಜ್



ಟಾಟಾರವರ
ಓ ಡಿ
ಕೊಲೋನ್
ಸಾಬೂನು




ಓ ಡಿ ಕೊಲೋನಿನಿಂದ ಕೂಡಿದ್ದು, ಬಂಗಾರ ಬಣ್ಣದ ಕಾಗದದಿಂದ (ಫೊಯಿಲ್) ಪ್ಯಾಕ್ ಮಾಡಲ್ಪಟ್ಟಿರುತ್ತದೆ.

TESY-14

# ನಿಮ್ಮ ಬುದ್ಧಿಬಲಕ್ಕೊಂದು ಸವಾಲು


ಎಚ್. ಎಸ್. ನಾರಾಯಣಸ್ವಾಮಿ

## ೧. ಕಾಣೆಯಾದ ರೂಪಾಯಿ

ಮೂರು ಜನರು ಹೋಟೆಲಿನಲ್ಲಿ ಉಪಾಹಾರ ಮಾಡಿದ್ದಕ್ಕೆ ರೂ. ೩೦ (ಮೂವತ್ತು ರೂಪಾಯಿಗಳು) ಬಿಲ್ಲಾಗುತದೆ. ಪ್ರತಿಯೊಬ್ಬರೂ ರೂ. ೧೦ರ ನೋಟನ್ನು (ಹತ್ತು ರೂಪಾಯಿ) ಮ್ಯಾನೇಜರರಿಗೆ ಕೊಡುವಂತೆ ಸೇವಕನ ಹತ್ತಿರ ಕೊಟ್ಟು ಕಳಿಸುವರು. ಸೇವಕನು ಹಣ ಕೊಡಲು ಹೋದಾಗ, ಮ್ಯಾನೇಜರನು, ಬಿಲ್ಲು ಒಟ್ಟು ರೂ. ೨೫ ಇರಬೇಕಾಗಿತ್ತೆಂದೂ ರೂ. ೩೦ ಕ್ಕೆ ಅಲ್ಲವೆಂದೂ ಹೇಳಿ, ೨೫ ರೂ. ಗಳನ್ನು ತೆಗೆದುಕೊಂಡು, ೫ ರೂಪಾಯಿಗಳನ್ನು ವಾಪಸ್ಸು ಕೊಡುವನು. ಬುದ್ಧಿವಂತನಾದ ಸೇವಕ, ಈ ರೂ. ೫ ನ್ನೂ ಮೂವರಲ್ಲಿ ಸರಿಯಾಗಿ ಹಂಚಲು ಕಷ್ಟವೆಂದು, ಅದೂ ಅಲ್ಲದೆ, ಅವರಿಗೆ ಸರಿಯಾದ ಬಿಲ್ಲಿನ ಮೊತ್ತ ತಿಳಿದಿಲ್ಲವೆಂದು ಯೋಚಿಸಿ, ರೂ. ೫ ರಲ್ಲಿ ರೂ. ೨ನ್ನು ತನ್ನ ಜೇಬಿಗಿಳಿಸಿ, ಉಳಿದ ರೂ. ೩ನ್ನು ಆ ಮೂರು ಜನರಿಗೆ ಪ್ರತಿಯೊಬ್ಬರಿಗೂ ಒಂದೊಂದು ರೂಪಾಯಿಯಂತೆ ಹಂಚುವನು. ಈಗ ಅವರುಗಳು ಪ್ರತಿಯೊಬ್ಬರೂ ೯ ರೂ. ಗಳನ್ನು ಕೊಟ್ಟಂತಾಯಿತು. ಆದ್ದರಿಂದ ೯ × ೩ = ೨೭. ಸೇವಕನ ಜೇಬಿನಲ್ಲಿ ೨ ರೂ. ಗಳಿವೆ. ೨೭ + ೨ = ೨೯ ಹಾಗಾದರೆ ಇನ್ನೊಂದು ರೂಪಾಯಿ ಎಲ್ಲಿ ಹೋಯಿತು?

## ೨. ಗೆದ್ದಲು ಓದಿದ ಪುಸ್ತಕ

ಒಂದು ಗದ್ದಲು ಹುಳ, ಕೆಲವು ಪುಸ್ತಕಗಳ ಜೋಡಣೆಯಲ್ಲಿ ಮೊದಲ ಪುಸ್ತಕದ ರಕ್ಷಾ ಕವಚದ ಮುಂಭಾಗದಿಂದ ಹೊರಟು, ಪುಸ್ತಕಗಳನ್ನು ಕೊರೆಯುವುದಕ್ಕೆ ಪ್ರಾರಂಭಿಸಿ ಮೂರನೇ ಪುಸ್ತಕದ ರಕ್ಷಾಕವಚದ ಹಿಂಭಾಗವನ್ನು ಮುಟ್ಟುತ್ತದೆ. ಪ್ರತಿಯೊಂದು ಪುಸ್ತಕವೂ ಒಂದು ಇಂಚು ದಪ್ಪವಾಗಿದ್ದರೆ, ಹುಳ ಮೂರು ಇಂಚುಗಳನ್ನು ಕೊರೆಯಬೇಕಾಗುತ್ತದೆ. ನಿಜವೇ? ಇಲ್ಲ, ಸುಳ್ಳು. ಈ ಕೆಳಗೆ ಕೊಟ್ಟಿರುವ ಚಿತ್ರವನ್ನು ಕ್ಷಣ ಕಾಲ ಪರೀಕ್ಷಿಸಿದರೆ ಆ ಹುಳ ಮೇಲೆ ಹೇಳಿದಂತೆ ಮಾಡಬೇಕಾದಲ್ಲಿ, ಒಂದು ಇಂಚು ಕೊರೆಯಬೇಕಾಗುತ್ತದೆ ಎಂದು ತಿಳಿಯುತ್ತದೆ.




ನೀವು ಈ ರೀತಿ ಮೂರು ಪುಸಕಗಳನು ಜೋಡಿಸಿ, ಪರೀಕ್ಷಿಸಿದರೆ ಅರ್ಥವಾಗುತ್ತದೆ. (ಇಲ್ಲದಿದ್ದಲ್ಲಿ ಉತ್ತರಕ್ಕಾಗಿ ೯೬ನೇ ಪುಟ ನೋಡಿರಿ)

# ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

## ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾಗಿ ಅರ್ಥಗಳನ್ನು ವಿವರಿಸಿದೆ.

೧. ಉಪವರ
(ಅ) ಮದುವೆಗೆ ನೆರೆದ (ಆ) ಕೈತೋಟ (ಇ) ಉಡುಗರೆ (ಈ) ವ್ಯಭಿಚಾರಿ

೨. ಉಪಜಾಪ
(ಅ) ತಡಮಾಡುವಿಕೆ (ಆ) ಊಟ (ಇ) ಚಾಡಿ (ಈ) ಕೆಲಸ

೩. ಖಿಲ
(ಅ) ನಗು (ಆ) ಆಟ (ಇ) ಅರಳುವಿಕೆ (ಈ) ಹಾಳುಬಿದ್ದ

೪. ಹೃದ್ಯ
(ಅ) ಹೆಂಡ (ಆ) ಅಜ್ಞಾನ (ಇ) ಮನ ಮೆಚ್ಚುವ (ಈ) ಹಾಡು

೫. ಹೇವರಿಸು
(ಅ) ಕುದುರೆಯಂತೆ ಕೂಗು (ಆ) ಹೇಸು (ಇ) ಮೈದಡವು (ಈ) ಅವಮಾನಿಸು

೬. ಸಂಹಿತೆ
(ಅ) ಒಳಿತು (ಆ) ಕೊಲೆ (ಇ) ಕೂಗಾಟ (ಈ) ಸಂಗ್ರಹ

೭. ಮುಂಕಣಿಸು
(ಅ) ಮುಂದುವರಿ (ಆ) ದಾರಿ ತೋರಿಸು (ಇ) ಭವಿಷ್ಯ ಹೇಳು (ಈ) ಅಂದಗೆಡು

೮. ಬಾಗಿನ
(ಅ) ಬಿಲ್ಲು (ಆ) ಉಡುಗರೆ (ಇ) ಪಾಲು (ಈ) ಮಾತುಗಾರ

೯. ಪೀವರ
(ಅ) ನೀರಡಿಕೆ (ಆ) ಅರಸಿಣ (ಇ) ಉಬ್ಬಿದ (ಈ) ಮದುಮಗ

೧೦. ಪುಂಶ್ಚಲಿ
(ಅ) ಗೊಂಚಲು (ಆ) ಗಂಡುಬೀರಿ (ಇ) ಬೊಗಸೆ (ಈ) ಪೌರುಷವುಳ್ಳವ

೧೧. ಪರಿಚರ್ಯೆ
(ಅ) ತಿರುಗಾಟ (ಆ) ಸಂನ್ಯಾಸಿನಿ (ಇ) ಅಂಗಿ (ಈ) ಸೇವೆ

೧೨. ಆಪ್ಯಾಯನ
(ಅ) ಸಂತುಷ್ಟಿ (ಆ) ತುಪ್ಪ (ಇ) ಓಟ (ಈ) ಸಂಪಾದನೆ

# ‘ ಶಬ್ದಭಾಂಡಾರ ’ ದ ಸರಿಯಾದ ಅರ್ಥಗಳು

೧. **ಉಪವರ** (ಅ) ಮದುವೆಗೆ ನೆರೆದ, ವಿವಾಹಯೋಗ್ಯ. ಉದಾ.— ಉಪವರಳಾದ ಕನ್ಯೆಯನ್ನು ಮನೆಯಲ್ಲಿಟ್ಟುಕೊಂಡ ಅವನಿಗೆ ಚಿಂತೆ ಹತ್ತಿತ್ತು. [ಸಂ. ಉಪ = ಹತ್ತಿರ, ವರ]

೨. **ಉಪಜಾಪ** (ಇ) ಚಾಡಿ, ಗುಟ್ಟಾಗಿ ಕಿವಿಯಲ್ಲಿ ಪಿಸುಗುಡುವಿಕೆ, ಜಗಳ ಹಚ್ಚುವಿಕೆ. [ಸಂ ಉಪ=ಹತ್ತಿರ, ಜಪ=ಗುಣುಗುಡುವಿಕೆ ]

೩. **ಖಿಲ** (ಈ) ಹಾಳುಬಿದ್ದ; ನಿರರ್ಥಕವಾದ; ಅಳಿದುಳಿದ ಅಂಶ. ಉದಾ.— ಹಿಂದೂ ಸಂಸ್ಕೃತಿಯು ಖಿಲವಾಗುತ್ತ ಬಂತು. [ ಸಂ. ]

೪. **ಹೃದ್ಯ** (ಇ) ಮನಮೆಚ್ಚುವ, ಮನ ಮುಟ್ಟುವ; ಸುಂದರ; ಪ್ರಿಯ. ಉದಾ. ಅವನ ವಿಚಾರ ಹೃದ್ಯವಾಗಿತ್ತು. [ಸಂ. ಹೃದ್ = ಹೃದಯ ಎಂಬುದರಿಂದ]

೫. **ಹೇವರಿಸು** ( ಆ ) ಹೇಸು, ಹೇಸಿ ಹಿಂಜರಿ. ಉದಾ— ರಾಜಕಾರಣಕ್ಕೆ ಅವನ ಮನ ಹೇವರಿಸುತ್ತಿತ್ತು. [ಕನ್ನಡ, “ಹೇವ” ದಿಂದ]

೬. **ಸಂಹಿತೆ** (ಈ) ಸಂಗ್ರಹ, ಕಲೆಹಾಕಿದ್ದು; ಜೋಡಿಸಿದ್ದು, ಕೂಡಿಸಿದ್ದು, ಕೂಟ. ಉದಾ: ಋಗ್ವೇದ ಸಂಹಿತೆ ಅಂದರೆ ಋಗ್ವೇದದ ಮಂತ್ರಗಳ ಸಂಗ್ರಹ. [ಸಂ].

೭. **ಮುಂಕಣಿಸು** (ಅ) ಮುಂದುವರಿ, ಮುಂದೆ ಸಾಗು, ಮುನ್ನಡೆ; ಮುಂದೆ ಚಾಚು [ಕನ್ನಡ.]

೮. **ಬಾಗಿನ** (ಆ) ಉಡುಗರೆ, ಕಾಣಿಕೆ, ದಾನ. [ಸಂ. ವಾಯನ = ಉಪವಾಸ ದಿನ ಕೊಡುವ ಸಿಹಿ ತಿಂಡಿಯ ದಾನ.]

೯. **ಪೀವರ** (ಇ) ಉಬ್ಬಿದ, ತುಂಬಿದ, ದುಂಡಾದ; ಮಾಂಸಯುಕ್ತ; ಕೊಬ್ಬಿದ- ಉದಾ: ಪೀವರ ಸ್ತನಗಳು. [ಸಂ.]

೧೦. **ಪುಂಶ್ಚಲಿ** (ಆ) ಗಂಡುಬೀರಿ, ಗಂಡಸರ ಬೆಂಬತ್ತಿ ಹೋಗುವವಳು; ಹಾದರಗಿತ್ತಿ. [ಸಂ. ಪುಂಸ್=ಗಂಡು, ಚಲಿ=ನಡೆಯುವವಳು.]

೧೧. **ಪರಿಚರ್ಯೆ** (ಈ) ಸೇವೆ ; ಪೂಜೆ; ಉದಾ.— ರಾಜನ ಪರಿಚರ್ಯೆಗಾಗಿ ನೂರಾರು ಸ್ತ್ರೀಯರಿದ್ದರು. [ಸಂ. ಪರಿ= ಸುತ್ತಲೂ, ಚರ=ಓಡಾಡು.]

೧೨. **ಆಪ್ಯಾಯನ** (ಅ) ಸಂತುಷ್ಟಿ, ಸಮಾಧಾನ; ಪೂರ್ಣವಾಗುವಿಕೆ, ಸೌಖ್ಯ ಹೆಚ್ಚುವಿಕೆ; ಆನಂದವಾಗುವಿಕೆ. ಉದಾ — ಸಂಗೀತವು ಕಿವಿಗೆ ಆಪ್ಯಾಯನವಾಗಿತ್ತು. [ಸಂ ]

---

## ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ .... ಸಾಧಾರಣ
೯—೧೦ ,, .... ಉತ್ತಮ
೧೧—೧೨ ,, .... ಅತ್ಯುತ್ತಮ

ಈ ಸಮಸ್ಯೆಯನ್ನು
ಕಾಳಿದಾಸನೊಬ್ಬನೇ
ಬಿಡಿಸಬಲ್ಲವನಾದ

# ಟಂಟಂಟಟಂಟಂ.....

ಬಿ. ಶ್ರೀನಿವಾಸ ಮೂರ್ತಿ

ಭೋಜ-ಕಾಳಿದಾಸರನ್ನು ಕುರಿತ ದಂತಕಥೆಗಳು ಅನೇಕವಿವೆ. ಒಂದೇ ಕಥೆಯನ್ನೇ ಇಬ್ಬರು ಅಥವಾ ಮೂವರು ಹೇಳುವಾಗ ಬೇರೆ ಬೇರೆ ರೀತಿಯಲ್ಲಿ ಹೇಳುವುದುಂಟು. ಯಾರದು ಸತ್ಯವೋ ಯಾರದು ಮಿಥ್ಯೆಯೋ ಯಾರಿಗೂ ತಿಳಿಯದು. ಇದರ ಸತ್ಯಾಸತ್ಯತೆಯ ಮಾತು ಈಗ ಬೇಡ. ಆದರೆ ಈ ಕಥೆಗಳೆಲ್ಲವೂ ಸ್ವಾರಸ್ಯವಾಗಿದ್ದು ರಸಿಕ ಜನ-ಮನೋರಂಜಕವಾಗಿರುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇಂಥ ದಂತಕಥೆಗಳಲ್ಲಿ ಇದೂ ಒಂದು.—

ರಾಜಾಭಿಷೇಕೇ ಮದವಿಹ್ವಲಾಯಾಃ
ಹಸ್ತಾತ್ ಚ್ಯುತೋ ಹೇಮಘಟಸ್ತ-
ರುಣ್ಯಾಃ ।
ಸೋಪಾನಮಾರ್ಗೇ ಪತಿತಃ ಕರೋತಿ
ಟಂಟಂಟಟಂಟಂ ಟಟಟಂಟಟಂಟಃ ॥

ಧಾರಾ ನಗರದ ಭೋಜರಾಜನು ಸಮಸ್ತ ರಾಜ ವೈಭವಗಳಿಂದಲೂ ಸುಖಿಯಾಗಿದ್ದವನು. ಪಂಡಿತ ಪಕ್ಷಪಾತಿಯಾಗಿದ್ದುದು ಮಾತ್ರವಲ್ಲದೆ ಸ್ವಯಂ ಪಂಡಿತನೂ ಆಗಿದ್ದ. ತನ್ನ ಜೀವನದಲ್ಲಿ ಅನುಭವಕ್ಕೆ ಬಂದ ನಾನಾ ರಸಭರಿತವಾದ ಘಟನೆಗಳನ್ನು ಆಸ್ಥಾನದ ಪಂಡಿತರ ಮುಂದೆ ಸಮಸ್ಯೆಯಾಗಿ ಹೇಳಿ ಅದನ್ನು ಅವರಿಂದ ಪೂರ್ಣ ಮಾಡಿಸಿ ಸಂತೋಷಪಡುತ್ತಿದ್ದ.

( ಸಮಸ್ಯೆಯಲ್ಲಿ ಒಂದು ವಿಧ ಹೀಗೆ: ಯಾವುದಾದರೊಂದು ಸನ್ನಿವೇಶವನ್ನು ಮನಸಿನಲ್ಲಿ ಕಲ್ಪಿಸಿಕೊಂಡು ಅದರ ಪರಾಕಾಷ್ಠೆಯ ಅಂಶವನ್ನು ಒಂದು ಶ್ಲೋಕದ ಒಂದು ಪಾದವಾಗಿ ರಚಿಸಿ ಹೇಳುವುದು. ಪಂಡಿತರು ತಮ್ಮ ತಮ್ಮ ಪ್ರತಿಭೆಗನುಗುಣವಾಗಿ ಉಳಿದ ಮೂರು 'ಪಾದಗಳನ್ನು ಕಟ್ಟಬೇಕು; ಅದು ಮೊದಲು ಹೇಳಲಾದ ಸಮಸ್ಯಾ ಪಾದಕ್ಕೆ ಸುಸಂಗತವಾಗಿರಬೇಕು. )

ರಸಿಕನೂ ಸರಸಿಯೂ ವಿಲಾಸಪ್ರಿಯನೂ ಆದ ಭೋಜರಾಜನು ಒಮ್ಮೆ ಅಭ್ಯಂಜನ ಮಾಡಿಕೊಳ್ಳುವ ಸಮಯದಲ್ಲಿ ನಡೆದ ಶೃಂಗಾರ ಘಟನೆಯೊಂದನ್ನು "ಟಂಟಂಟಟಂಟಂ ಟಟಟಂ ಟಟಂಟಃ" ಎಂದು ಹೇಳುತ್ತಾನೆ. ಈ ಸಮಸ್ಯೆಯನ್ನು ಬಿಡಿಸುವುದರಲ್ಲಿ ಕಾಳಿದಾಸನನ್ನು ಬಿಟ್ಟು ಎಲ್ಲ ಪಂಡಿತರು ವಿಫಲರಾಗುತ್ತಾರೆ. ರಾಜನ ಭಾವವನ್ನು ಗ್ರಹಿಸಿ ಮುಗುಳ್ನಗೆಯಿಂದ ಕೂಡಿದ ಕಾಳಿದಾಸನನ್ನು ಭೋಜನು ನೋಡಿ ಕೇಳಿದಾಗ ಕವಿಕುಲತಿಲಕನಾದ ಅವನು ಮೇಲಿನ ಶ್ಲೋಕವನ್ನು ಹೇಳುತ್ತಾನೆ.

ಅಭ್ಯಂಜನಕ್ಕಾಗಿ ಭೋಜನಿಗೆ ಸುಂದರ ತರುಣಿಯರು ನಾನಾಬಗೆಯ ಸುವಾಸನೆಯ ತೈಲಗಳನ್ನು ಮೈಗೆ ತಿಕ್ಕುವುದು ಸಂಪ್ರದಾಯ. ಹಾಗೆ ತಿಕ್ಕುತ್ತಿರುವಾಗ ರಾಜನ ಸೌಂದರ್ಯದಿಂದ ಮೊದಲೇ ಪರವಶಳಾಗಿದ್ದ ತರುಣಿಯೋರ್ವಳಿಗೆ ಸುಂದರವೂ ಸುವರ್ಣವೂ ಸುಪುಷ್ಟವೂ ಆದ ರಾಜನ ಮೈಯ ಸಂಪರ್ಕದಿಂದ ಚಿತ್ತವು ಚಂಚಲಿಸಿ ಎಚ್ಚರ ತಪ್ಪುತ್ತಾಳೆ. ಹೇಗೋ ಕಷ್ಟಪಟ್ಟು ಎಣ್ಣೆಯನ್ನು ತಿಕ್ಕಿಯಾದ ಮೇಲೆ ಸುವರ್ಣಕಲಶದಿಂದ ( ತಂಬಿಗೆ ) ನೀರನ್ನು ರಾಜನ ಮೈಮೇಲೆ ಹಾಕುವಾಗ ಅವಳ

ಕಲಶದ ನೀರು ಕ್ರಮವಾಗಿ ಬೀಳುತ್ತಿರುವುದಿಲ್ಲ. ತೈಲವನ್ನು ತಿಕ್ಕುತ್ತಿರುವಾಗಲೇ ರಸಿಕನಾದ ಭೋಜನು ಅವಳು ಪಂಚಶರನ ಬಾಣದಿಂದ ಪರಿತಪಿಸುತ್ತಿದ್ದುದನ್ನು ಗಮನಿಸಿದ್ದ. ಈಗ ನೀರು ಕ್ರಮವಾಗಿ ಬೀಳದಿರುವುದನ್ನು ಗಮನಿಸಿ ಕುತೂಹಲದಿಂದ ಅವಳ ಮುಖಭಾವವನ್ನು ಕದ್ದು ನೋಡಬೇಕೆಂದು ಪ್ರಯತ್ನಪಟ್ಟಾಗ ಆ ರಸ ಸನ್ನಿವೇಶದಲ್ಲಿ ಅವಳೂ ಅವನ ಕಡೆ ನೋಡುತ್ತಾಳೆ. ಆಗ ತನ್ನ ಗುಟ್ಟು ರಟ್ಟಾಯಿತೆಂಬ ತೀವ್ರವಾದ ನಾಚಿಕೆಯಿಂದ ಅವಳ ಮುಖವು ಕೆಂಪೇರಿ ಕೈಲಿದ್ದ ಚಿನ್ನದ ತಂಬಿಗೆಯು ಕೆಳಗೆ ಮೆಟ್ಟಿಲುಗಳ ಮೇಲೆ ಬಿದ್ದು ಉರುಳಿಕೊಂಡು ಹೋಗುವುದು. ಅನಂತರ ಅಲ್ಲಿ ನಿಲ್ಲಲು ಅವಳಿಗೆ ನಾಚಿಕೆಯಿಂದ ಸಾಧ್ಯವಾಗದೆ ಅಲ್ಲಿಂದ ಓಡಿಹೋದಳು.

ಮೆಟ್ಟಿಲುಗಳ ಮೇಲೆ ಬಿದ್ದ ತಂಬಿಗೆಯು ಶಬ್ದ ಮಾಡಿಕೊಂಡು ಬಿದ್ದರೀತಿಯನ್ನೇ ಸಮಸ್ಯೆಯನ್ನಾಗಿ ಮಾಡಿ ಭೋಜರಾಜನು ಹಾಗೆ ಹೇಳುತ್ತಾನೆ. ಶ್ಲೋಕದ ಅರ್ಥವಿದು :—

" ರಾಜನ ಅಭ್ಯಂಜನ ಕಾಲದಲ್ಲಿ ಮದದಿಂದ ವಿಹ್ವಲಚಿತ್ತಳಾದ ತರುಣಿಯ ಕೈಯಲ್ಲಿದ್ದ ಚಿನ್ನದ ಕಲಶವು ( ತಂಬಿಗೆ ) ಜಾರಿ ಮೆಟ್ಟಿಲುಗಳ ಮೇಲೆ ಬಿದ್ದು ಮಾಡಿದ ಶಬ್ದವೇ ಟಂಟಂ ಟಟಂಟಂ ಟಟಟಂಟಟಂಟಃ ॥ " ★

ಒಂದು ದಿನ ಜಾರ್ಜ್ ಬರ್ನಾರ್ಡ್ ಶಾರು ತಮ್ಮೊರ್ವ ಚೀನೀ ಮಿತ್ರನೊಡನೆ ಹೀಗೆಂದರು : "ವೆಂಗ್ ! ನಾನು ಚೀನೀ ಭಾಷೆ ಬರೆಯಲು ಕಲಿತಿದ್ದೇನೆ.''

ಇದನ್ನು ಕೇಳುತ್ತಲೇ ವೆಂಗ್ ಆಶ್ಚರ್ಯಚಕಿತನಾಗಿ—"ಹಾಗಾದರೆ ನೀವು ಕಲಿತುದುದನ್ನು ನನಗೆ ಚೀನೀ ಭಾಷೆಯಲ್ಲಿ ಬರೆದು ತೋರಿಸಿ ನೋಡೋಣ'' ಎಂದ.

ಶಾ ಕೂಡಲೇ ಒಂದು ಕಾಗದದ ಮೇಲೇ ಕೆಲವು ಓರೆ-ಕೋರೆ ರೇಖೆಗಳನ್ನು ಎಳೆದು 'ನೋಡು' ಎಂದರು.

ಆ ಓರೆ-ಕೋರೆ ರೇಖೆಗಳನ್ನು ನೋಡಿದ ವೆಂಗ್ ನಕ್ಕ. "ಸ್ವಾಮೀ ! ಅದು ಸರಿ. ಈಗ ದಯವಿಟ್ಟು ನೀವು ಬರೆದುದನ್ನು ಒಮ್ಮೆ ಓದಿಬಿಡಿ" ಎಂದ.

ಶಾ ಉತ್ತರವಿತ ರು : "ನನಗೆ ಚೀನೀ ಭಾಷೆ ಬರೆಯಲು ಮಾತ್ರ ಬರುತ್ತದೆ. ಓದಲು ಗೊತ್ತಿಲ್ಲ.''

—ಎನ್ ನಾರಾಯಣ ಬಲ್ಲಾಳ



# ಜೇಡರ ಹುಳದ ಕುಲಕಥೆ

ಡಿ. ಎನ್. ಶಂಕರಭಟ್ಟ

ಮೂವತ್ತು ಕೋಟಿ ವರ್ಷಗಳಿಂದ ಭೂಮಿಯಲ್ಲಿ ಬಾಳಿ ಬರುತ್ತಿರುವ ಜೇಡಗಳು ಇದು ವರೆಗೆ ಎಷ್ಟೆಷ್ಟೋ ಬಲೆಗಳನ್ನು ಹೆಣೆದು ಹಾಕಿವೆ. ಅವುಗಳೊಡನೆ ಬಾಳಬೇಕಾಗಿ ಬಂದ ಮಾನವನು ಕೂಡ, ಅಷ್ಟೇ ಸಂಖ್ಯೆಯ ಕತೆಗಳನ್ನು ಅವುಗಳ ಮೇಲೆ ಕಟ್ಟಿ ಹಾಕಿದ್ದಾನೆ. ಕೆಲವು ದೇಶಗಳಲ್ಲಿ ಜನರು ಈ ಜಂತುವನ್ನು ಕಂಡರೇನೇ ಹೆದರಿಬೀಳುತ್ತಿದ್ದರು. ಇನ್ನು ಕೆಲವರು ಕಂಡಕಂಡಲ್ಲಿ ಅವನ್ನು ಕೊಂದುಹಾಕುತ್ತಿದ್ದರು. ಇನ್ನು ಕೆಲವರು ಔಷಧಿಗೆಂದು, ಕೆಲವರು ತಮಾಷೆಗೆಂದು ಅವನ್ನು ಹಿಡಿದಿಡುತ್ತಿದ್ದರು. ಹಕ್ಕಿಗಳು ಇಂದಿಗೂ ಅವನ್ನೆತ್ತಿ ಕೊಂಡು ಹೋಗಿ ತಮ್ಮ ಮರಿಗಳಿಗೆ ಉತ್ತಮ ಆಹಾರವೆಂದು ಉಣಿಸುತ್ತಿವೆ. ಕಣಜದ ಹುಳಗಳು, ತಮ್ಮ ಮರಿಗಳು ಹುಟ್ಟಿಬಂದಾಗ ತಿನ್ನಲೇನಾದರೂ ಇರಲೆಂದು ಅವುಗಳನ್ನು ಕಡಿದು ನಿಶ್ಚೇಷ್ಟಿತಗೊಳಿಸಿ ತಮ್ಮ ತತ್ತಿಗಳೊಡನೆ ಇರಿಸುತ್ತವೆ. ಜೇಡಗಳೂ ಕೂಡ ಒಂದನ್ನೊಂದು ಕಚ್ಚಿ ತಿಂದುಹಾಕುತ್ತವೆ. ಹೀಗೆ, ಹೆರವರಿಂದ ಮಾತ್ರವಲ್ಲ, ತನ್ನ ಜಾತಿಗೆ ಸೇರಿದವರಿಂದಲೂ ತಿನ್ನಲ್ಪಡುವ ಈ ಜೇಡಗಳು ಇನ್ನೂ ಈ ಪ್ರಪಂಚದಲ್ಲಿ ತಮ್ಮ ಹಕ್ಕನ್ನು ಭದ್ರವಾಗಿ ಉಳಿಸಿಕೊಂಡು ಬಂದಿರುವುದು ಪರಮಾತ್ಮನ ಲೀಲೆಯೇ ಸರಿ!

ಜೇಡನ ಕಥೆ ಬಹಳ ವಿಚಿತ್ರವಾದುದು. ಮೊನ್ನೆಮೊನ್ನೆ ವರೆಗೂ ವೈದ್ಯರು ಜೇಡನನ್ನೂ ಅದರ ಬಲೆಯನ್ನೂ ಬೇರೆ ಬೇರೆ ರೀತಿಯಲ್ಲಿ ಔಷಧಿಯಾಗಿ ಉಪಯೋಗಿಸುತ್ತಿದ್ದರು. ರೋಗಿಗಳಿಗೆ ಅವನ್ನು ತಿನ್ನಲು ಕೊಡುತ್ತಿದ್ದರು; ಅವರ ಗಾಯಗಳಿಗೆ ಅವನ್ನು ಉಜ್ಜಿ, ಬಲೆಯನ್ನಿಟ್ಟು ಕಟ್ಟುತ್ತಿದ್ದರು. ಜ್ವರ ಬಂದಾಗ ಜೇಡನ ಕಷಾಯ ಮಾಡಿ ಕುಡಿಸುತಿದ್ದರು. ಕಿವಿ ನೋವಾದಾಗ, ಅದನ್ನು ಎಣ್ಣೆಯಲ್ಲಿ ಹುರಿದು ಕಿವಿಯೊಳಗೆ ಸುರಿಯುತಿದ್ದರು. ಮತ್ತು ಪ್ಲೇಗು, ಸಿಡುಬು, ಅರಸಿನ ಮುಂಡ ಮೊದಲಾದ ಭಾರೀ

ಭಾರೀ ರೋಗಗಳಿಗೆ ಅದು ಅತ್ಯುತ್ತಮ ಔಷಧ ವೆಂದು ನಂಬುತ್ತಿದ್ದರು. ಜನರು ಜೇಡಗಳನ್ನು ಕುತ್ತಿಗೆಗೆ ಕಟ್ಟಿ ನೇತಾಡಿಸಿಕೊಳ್ಳುತ್ತಿದ್ದರು. ಸಯಾಮಿನವರು ಆಹಾರದಲ್ಲಿ ಪ್ರೋಟೀನ್ ಸಾಕಷ್ಟಿರಲೆಂದು ಜೇಡಗಳನ್ನು ಹಾಗೆಯೇ ಕಚ್ಚಿ ತಿನ್ನುತ್ತಿದ್ದರು. ಹವಾನಾದಲ್ಲಿ ಮಕ್ಕಳು ಹುಟ್ಟಿದೊಡನೆ ಅವುಗಳ ಹೊಕ್ಕಳೊಳಗೆ ಜೇಡನನ್ನು ಹಾಕುತ್ತಿದ್ದರು. ಈ ಪದ್ಧತಿಯನ್ನು ನಿಲ್ಲಿಸಿದ್ದರಿಂದಾಗಿ, ಅಲ್ಲಿನ ಶಿಶುಮರಣದ ಸಂಖ್ಯೆ ಬಹಳಷ್ಟು ಕಡಿಮೆಯಾಗಿದೆ.

ಈವತ್ತು ಜೇಡಗಳು ಡಾಕ್ಟರರ ಕೈಯಲ್ಲಿ ಔಷಧವಾಗಿ ಪ್ರಯೋಗಿಸಲ್ಪಡದಿದ್ದರೂ ಪ್ರಯೋಗ ಶಾಲೆಯಲ್ಲಿ ಪರೀಕ್ಷಾಪ್ರಾಣಿಯಾಗಿ ಉಪಯೋಗಿಸಲ್ಪಡುತ್ತಿವೆ. ಕೇಂದ್ರ ನರಮಂಡಲದ ಮೇಲೆ ವಿವಿಧ ಔಷಧಗಳ ಪರಿಣಾಮವೇನೆಂಬುದನ್ನು ತಿಳಿಯಲು ಇದರಷ್ಟು ಯೋಗ್ಯವಾದ ಪ್ರಾಣಿ ಇನ್ನೊಂದಿಲ್ಲ. ಬೇರೆ ಬೇರೆ ಔಷಧಿಗಳನ್ನು ಅವಕ್ಕೆ ಕೊಟ್ಟು, ಅವು ಯಾವ ರೀತಿಯಲ್ಲಿ ಬಲೆ ಹೆಣೆಯುತ್ತವೆಂದು ನೋಡಿದರೆ, ಔಷಧಿಯ ಶಕ್ತಿಯನ್ನು ತಿಳಿಯಬಹುದು. ಉದಾಹರಣೆಗಾಗಿ, ಒಂದು ಡೋಸ್ ಕೆಫೀನನ್ನು ಸೇವಿಸಿದ ಜೇಡನು ಓರೆಕೋರೆಯಾದ ಬಲೆಯನ್ನು ದಿಕ್ಕು ದಿಕ್ಕುಗಳಲ್ಲಿ ಹೆಣೆಯುವುದು. ಎಫೆಂಟಾಮಿನ್ ತಿಂದ ಜೇಡನು ಬಲೆಯನ್ನು ಹಿಂದಕ್ಕೂ ಮುಂದಕ್ಕೂ ಗಡಗಡನೆ ನಡುಗುತ್ತ ಹೆಣೆಯುವುದು. ಡಿ-ಲಿಸರ್ಜಿಕ್ ಆಮ್ಲವನ್ನು ಸೇವಿಸಿದ ಜೇಡನು ಎಂದಿಗಿಂತಲೂ ಸುಂದರವಾದ, ಅತ್ಯುತ್ತಮವಾದ ಬಲೆಯನ್ನು ಹೆಣೆಯುತ್ತದೆ.

ಜೇಡನ ದೇಹದ ರಚನೆ ಕೂಡ ಬಹಳ ವಿಚಿತ್ರವಾಗಿದೆ. ಎರಡು ಇಲ್ಲವೇ ಮೂರು ಸಾಲುಗಳಲ್ಲಿ ಅಣಿಗೊಳಿಸಲ್ಪಟ್ಟ ಎಂಟು ಕಣ್ಣುಗಳು ಇದಕ್ಕೆ! ಎಂಟು ಕಣ್ಣುಗಳು, ಮತ್ತು ಅವನ್ನು ಬೇಕಾದ ಹಾಗೆ ಆಚೆ ಈಚೆ ಚಲಿಸಲು ಐವತ್ತಾರು ಕಾಲ ಗಂಟುಗಳು! ಜೇಡನ ದವಡೆಗಳು ಅಡ್ಡಕ್ಕೆ ಮಾತ್ರವಲ್ಲ, ಓರೆಯಾಗಿಯೂ ಚಲಿಸಬಲ್ಲವು. ತಮ್ಮ ಬಲೆಗೆ ಬಿದ್ದ ಪ್ರಾಣಿಗಳ ಮೇಲೆ ವಿಷವನ್ನೆರಚಲು ಒಂದು ಜತ ದವಡೆಗಳು; ಮತ್ತು ಆ ಪ್ರಾಣಿಗಳ ದೇಹದಿಂದ ರಕ್ತವನ್ನು ಹಿಂಡಿ ಹೀರಲು ಬೇರೆಯೇ ದವಡೆಗಳು ಅದಕ್ಕೆ!

ಜೇಡನಲ್ಲಿ ಸುಮಾರು ೨೫,೦೦೦ ಜಾತಿಗಳಿವೆಯೆಂದು ಅಂದಾಜು ಮಾಡಲಾಗಿದೆ. ಇವುಗಳಲ್ಲಿ ಮನುಷ್ಯನಿಗೆ ಉಪದ್ರವ ಕೊಡುವಂತಹವುಗಳು ಹತ್ತು ಹನ್ನೆರಡು ಜಾತಿಗಳವು ಮಾತ್ರ. ಕೆಲವು ಕಪ್ಪಾದ ಜೇಡಗಳು ಬಹಳ ವಿಷಕರವಾದವುಗಳು. ತರಂತುಲಾ ಎಂಬ ಜಾತಿಯವು ಎಂಟು ಇಂಚು ಅಗಲಕ್ಕೆ ಬೆಳೆಯಬಲ್ಲ ದೈತ್ಯ ಜೇಡಗಳು. ಅವು ಇಪ್ಪತ್ತೈದು ವರ್ಷಗಳ ವರೆಗೂ ಬಾಳಬಲ್ಲುವು. ಆದರೆ, ಮನುಷ್ಯನನ್ನು ಅವು ಕಚ್ಚಿದರೆ, ಒಂದು ಕಣಜದ ಹುಳ ಕಚ್ಚಿದುದಕ್ಕಿಂತ ಹೆಚ್ಚು ನೋವಾಗದು. ಈ ತರದ ಜೇಡಗಳನ್ನು ಕೆಲವರು ಮನೆಗಳಲ್ಲಿ ತಮಾಷೆಗೆಂದು ಸಾಕುತ್ತಾರೆ.

ನೆಗೆಯುವ ಜೇಡಗಳಿಗೆ ಉಳಿದವುಗಳಿಂತ ದೊಡ್ಡದಾದ ಕಣ್ಣುಗಳಿವೆ ಬಿಸಿಲಲ್ಲಿ ಓಡುತ ನೆಗೆಯುತ್ತ ಇರುವುದೆಂದರೆ ಅವಕ್ಕೆ ಬಹಳ ಆನಂದ. ಅವುಗಳ ಬಣ್ಣವೂ ವಿಧವಿಧವಾಗಿದೆ. ತಮ್ಮನ್ನು ಹಿಡಿಯಲು ಬರುವ ಹಕ್ಕಿ, ಕಣಜದ ಹುಳ ಮೊದಲಾದ ಶತ್ರುಗಳಿಂದ ತಪ್ಪಿಸಿಕೊಳ್ಳಲು ಈ ಬಣ್ಣ ಸಹಾಯಕವಾಗುತ್ತದೆ. ಕೆಲವು ಜೇಡಗಳು ನೋಡಲು ಇರುವೆಗಳ ಹಾಗೆಯೇ ಇರುತ್ತವೆ. ಕೆಲವು ಏಡಿಗಳ ಹಾಗೆ ಅಡ್ಡಕ್ಕೆ ಓಡುತ್ತವೆ. ಕೆಲವಕ್ಕೆ ನೀರ ಮೇಲೆ ಸುಲಭದಲ್ಲಿ ನಡೆಯಲು ಸಾಧ್ಯವಾಗುವಂತಹ ವಿಶಿಷ್ಟ ಅಂಗಗಳಿವೆ. ಅಪಾಯ ಬಂದಾಗ ಅವು ಉಸುರಾಡಲು ತಮ್ಮೊಡನೆ ನೀರಿನ ಗುಳ್ಳೆಯೊಂದನ್ನು ಕಟ್ಟಿಕೊಂಡು ನೀರಿನೊಳಗಿರುವ ಹುಲ್ಲು, ಗಿಡಗಳೆಡೆಯಲ್ಲಿ ಬಹಳ ಹೊತ್ತು ಮುಳುಗಿ ಇರಬಲವು.

ಜೇಡನು ತಯಾರಿಸುವ ನೂಲು ಅಷ್ಟೇ ಸೂಕ್ಷ್ಮವಾದ ಉಕ್ಕಿನ ಎಳೆಗಿಂತ ಎಷ್ಟೋ ಪಾಲು ಗಟ್ಟಿ

ಯಾದುದು. ತನ್ನಲ್ಲಿರುವ ನೂರಾರು ನಾಳಗಳಿಂದ ನಾರನ್ನು ಹೊರಬಿಟ್ಟು, ಅವನ್ನೆಲ್ಲ ಒಟ್ಟು ಸೇರಿಸಿ ಜೇಡನು ಒಂದು ನೂಲಿನ ಎಳೆಯನ್ನು ತಯಾರಿಸುತ್ತದೆ. ಈ ಎಳೆಯ ದಪ್ಪ $\frac{1}{30,000}$ ಇಂಚಿನಷ್ಟಿರಬಹುದು. ಮನುಷ್ಯನ ಒಂದು ರೋಮದಷ್ಟು ದಪ್ಪದ ನೂಲಾಗಬೇಕಾದರೆ, ಕಡಿಮೆಯೆಂದರೆ ಇಂತಹ ನೂರು ಎಳೆಗಳನ್ನಾರೂ ಒಟ್ಟು ಸೇರಿಸಬೇಕು.

ಒಂದು ಜೇಡನು ತನ್ನ ಜೀವಮಾನದಲ್ಲಿ ಒಟ್ಟು ೧೨ ಸಾವಿರ ಅಡಿಗಳಿಗಿಂತಲೂ ಹೆಚ್ಚು ನೂಲನ್ನು ಬಿಡಬಲ್ಲದು. ಸಾಮಾನ್ಯವಾಗಿ ಒಂದು ಬಲೆಯನ್ನು ಹೆಣೆಯಲು ಅದಕ್ಕೆ ಒಂದು ಗಂಟೆ ಹಿಡಿಯುತ್ತದೆ. ಮೊದಲು ಸಮಾನಾಂತರವಾಗಿ ಎರಡು ನೂಲುಗಳನ್ನು ಕಟ್ಟಿ, ಅನಂತರ ಇಪ್ಪತ್ತೋ ಇಪ್ಪತ್ತೈದೋ ಚಕ್ರದ ಅರಗಳಂತಿರುವ ಏಕಕೇಂದ್ರಿಯ ಎಳೆಗಳನ್ನು ಹಾಕುತ್ತದೆ. ಈ ಅರಗಳನ್ನು ಜೋಡಿಸಲು ಅನಂತರ ಉರುಟುರುಟಾದ ನೂಲಿನ ಸುತ್ತುಗಳು—ಹಾತೆ ಬಂದು ಕುಳಿತೊಡನೆ ಅದರ ಕಾಲಿಗೆ ಅಂಟಿಕೊಳ್ಳಲು! ಕೆಲವು ಜೆಡುಗಳು ಉರುಟಾದ ಬಲೆಯ ಬದಲು ತ್ರಿಕೋಣಾಕಾರದ ಇಲ್ಲವೇ ಚಚ್ಚೌಕಾದ ಬಲೆಗಳನ್ನು ಹೆಣೆಯುತ್ತವೆ. ಇನ್ನು ಕೆಲವು ರೇಶಿಮೆಯ ಬಟ್ಟೆಯನ್ನೇ ರಚಿಸಿ, ಹುಲ್ಲಿನ ಮೇಲೆ ಹರಡುತ್ತವೆ. ಬೆಳಗ್ಗಿನ ಹಿಮ ಇದರ ಮೇಲೆ ಚೆಲ್ಲಿ ಸೂರ್ಯನ ರಶ್ಮಿಯಲ್ಲಿ ಮಿಂದು ಹೊಳೆಯುವ ಅಂದವೇ ಅಂದ. ರಾತ್ರಿಯೆಲ್ಲ ಎಲ್ಲೋ ಕೊಚ್ಚೆಯಲ್ಲಿ ಬಿದ್ದು ಜಾಗರಣೆ ಮಾಡಿದ ಬಡ ಹಾತೆಗಳು ಈ ಸುಪ್ಪತ್ತಿಗೆಯನ್ನು ಕಂಡು ಆನಂದದಿಂದ ಮಲಗಲು ಬರುತ್ತವೆ. ಪ್ರತಿದಿನ ಸಂಜೆ, ಜೇಡಗಳು ತಮ್ಮ ಬಲೆಗಳನ್ನು ದುರಸ್ತಿ ಮಾಡಿಕೊಳ್ಳುತ್ತವೆ; ಇಲ್ಲವೇ ಹಳೆಯ ಬಲೆಗಳನ್ನು ತ್ಯಜಿಸಿ ಹೊಸ ಬಲೆಗಳನ್ನು ಕಟ್ಟಿಕೊಳ್ಳುತ್ತವೆ—ರಾತ್ರಿ ಕಣ್ಣು ಕಾಣದೆ ತಿರುಗಾಡುವ ಗಿರಾಕಿಗಳನ್ನು ಮೋಸದಿಂದ ಹಿಡಿದು ಹೊಡೆಯುವ ದರೋಡೆಖೋರರು!

ಇಷ್ಟೊಂದು ಸುಂದರವಾದ ಬಲೆಯನ್ನು ಹೆಣೆಯಬೇಕಿದ್ದರೆ, ಜೇಡಗಳಿಗೆ ಎಷ್ಟೊಂದು ಬುದ್ಧಿ ಬೇಡ? ಎಂದು ನೀವು ಭಾವಿಸಬಹುದು. ಆದರೆ, ಜಗತ್ತಿನಲ್ಲಿ ಬುದ್ಧಿಹೀನವಾದ ಪ್ರಾಣಿ ಯಾವುದಾದರೂ ಇದ್ದರೆ, ಅದು ಜೇಡ. ಬಲೆ ಹೆಣೆಯುವುದು ಅವುಗಳ ಹುಟ್ಟುಸ್ವಭಾವ ಅಷ್ಟೆ. ಇದರಲ್ಲಿ ಅವು ಸ್ವಲ್ಪವೂ ಬುದ್ಧಿ ಉಪಯೋಗಿಸುವುದಿಲ್ಲ. ಉದಾಹರಣೆಗಾಗಿ ಬಲೆಯಲ್ಲಿ ಸುತ್ತುಸುತ್ತಾಗಿರುವ ನೂಲನ್ನು ಹಾಕಲು ಅವು ತಮ್ಮ ಮುಂಗಾಲನ್ನು ಅಳತೆಗೋಲಾಗಿ ಉಪಯೋಗಿಸುತ್ತವೆ. ಈ ಕಾಲು ಮುರಿದು ಹೋಯಿತೆಂದರೆ, ಅನಂತರ ಆ ಜೇಡ ಹೆಣೆದ ಬಲೆ ಯಾರಿಗೂ ಬೇಡ. ಜೇಡನ ಬಲೆಯ ಮೇಲೆ ಒಂದು ಸಣ್ಣ ಕಾಗದದ ಚೂರನ್ನು ಬೀಳಿಸಿದರೂ ಕೂಡ, ಅದು ಓಡಿ ಹೋಗಿ ಆ ಕಾಗದದ ಸುತ್ತ ಬಲೆ ಸುತ್ತುವುದು. ತನ್ನ ಆಹಾರವಲ್ಲ, ಅದು ಬರಿಯ ಕಾಗದ ಎಂದು ತಿಳಿಯುವಷ್ಟು ಬುದ್ಧಿ ಕೂಡ ಅದಕ್ಕಿಲ್ಲ! ತತ್ತಿಗಳನ್ನು ಹೊತ್ತುಕೊಂಡು ತಿರುಗುವ ಜೇಡಗಳು ಸುಮ್ಮಗೆ ತತ್ತಿಯ ಚೀಲವನ್ನು ಎಳೆಯ ಹೋದರೆ ಸುಲಭದಲ್ಲಿ ಬಿಟ್ಟುಕೊಡುವುದಿಲ್ಲ. ಆದರೆ, ಆ ಚೀಲವನ್ನೆಳೆದುಕೊಂಡು, ಅದಕ್ಕೆ ಬದಲಾಗಿ ಒಂದು ಕಾರ್ಕಿನ ತುಂಡನ್ನು ಕೊಟ್ಟರೂ, ಅವು ಅದನ್ನು ಹೊತ್ತುಕೊಂಡು ತಿರುಗುವುವು.

ತಮ್ಮ ಶತ್ರುಗಳಿಂದ ತಪ್ಪಿಸಿಕೊಳ್ಳಲು ಅವು ಮಾಡುವ ಪ್ರಯತ್ನಗಳೆಲ್ಲ ಸ್ವಭಾವದಿಂದ ಬಂದ ಗುಣಗಳು. ಕೆಲವು ಬಲೆಯಲ್ಲಿ ಓರೆಕೋರೆಯಾದ ರಚನೆಯನ್ನು ಮಾಡಿ ಅವುಗಳೆಡೆಯಲ್ಲಿ ಅಡಗಿ ಕುಳಿತುಕೊಳ್ಳುವುವು. ಇನ್ನು ಕೆಲವು ತಾವು ತಿಂದು ಬಿಟ್ಟ ಹಾತೆಗಳನ್ನು ತಮ್ಮ ಹಾಗೆಯೇ ಕಾಣುವಂತೆ ಮಾಡಿ ಬಲೆಯ ನಡುವೆ ಇರಿಸಿ, ಶತ್ರುಗಳನ್ನು ಮೋಸಗೊಳಿಸುವುವು. ಕೆಲವಕ್ಕೆ ದೇವರೇ ಸನ್ನಿವೇಶಕ್ಕನುಸಾರವಾದ ಬಣ್ಣಗಳನ್ನು ಕರುಣಿಸಿದ್ದಾನೆ.

ಎಲ್ಲಾ ಜೇಡಗಳೂ ಬಲೆ ಹೆಣೆದು ತಮ್ಮ

ಆಹಾರವನ್ನು ಸಂಪಾದಿಸುವುದಿಲ್ಲ. ಏಡಿಯಂತಿರುವ ಜೇಡಗಳು, ನೆಗೆಯುವ ಜೇಡಗಳು ಮತ್ತು ತೋಳ ಜೇಡಗಳು ತಮ್ಮ ಗಿರಾಕಿಗಳನ್ನೋಡಿಸಿಯೋ, ಕಚ್ಚಿ ಎಳೆದೋ ತಿಂದುಬಿಡುತ್ತವೆ. ಟ್ರೇಪ್-ಡೋರ್ ಜೇಡಗಳು ನೆಲದಲ್ಲಿ ತೂತು ಕೊರೆದು, ಮಣ್ಣು ಮತ್ತು ಬಲೆಯಿಂದ ಮಾಡಿದ ಬಾಗಿಲನ್ನು ಜೋಡಿಸಿ, ಅದರೊಳಗೆ ಕಾದು ಕುಳಿತುಕೊಳ್ಳುತ್ತವೆ. ರೇಪ್ ಜೇಡಗಳು ನೂಲಿನಿಂದ ಎಳೆಗಳನ್ನು ಜೋಡಿಸಿಟ್ಟು ಅವುಗಳ ಮೂಲಕ ತಮ್ಮ ಆಹಾರವನ್ನು ಪಡೆಯುವುವು.

ಮರಿ ಜೇಡಗಳು ಹುಟ್ಟಿದೊಡನೆಯೇ ಆಹಾರವನ್ನು ತಿನ್ನಲು ಪ್ರಾರಂಭಿಸುವುದಿಲ್ಲ. ಯಾಕೆಂದರೆ, ಆಗ ಅವುಗಳ ಜೀರ್ಣಾಂಗಗಳು ಕೆಲಸಕ್ಕೆ ಸಿದ್ಧವಾಗಿರುವುದಿಲ್ಲ. ಅವು ಹುಟ್ಟುವಾಗಲೇ ದೇಹದಲ್ಲಿ ಸಾಕಷ್ಟು ಆಹಾರ ಸಂಗ್ರಹವನ್ನಿಟ್ಟುಕೊಂಡು ಹುಟ್ಟುತ್ತವೆ. ಜೀರ್ಣಾಂಗಗಳು ಸಂಪೂರ್ಣ ಬೆಳವಣಿಗೆಯನ್ನು ಪಡೆಯುವುದೂ ಈ ಆಹಾರ ಸಂಗ್ರಹ ಮುಗಿಯುವುದೂ ಸರಿಯಾಗುತ್ತದೆ. ಕೆಲವು ಜಾತಿಗಳಲ್ಲಿ ಮರಿಗಳ ಮೊಟ್ಟೆಯೊಡೆದು ಬಂದಮೇಲೆ ಕೆಲವು ದಿನಗಳ ತನಕ ತಮ್ಮ ತಾಯಿಯ ಹೊಟ್ಟೆಯಡಿಯಲ್ಲೇ ಉಳಿದುಕೊಳ್ಳುತ್ತವೆ. ಕೈಕಾಲುಗಳು ಬಲಿತೊಡನೆ ಅವು ತಮ್ಮ ತಾಯನ್ನು ಬಿಟ್ಟು ದೊಡ್ಡ ಮರವನ್ನೋ ಎತ್ತರವಾದ ಗೋಡೆಯನ್ನೋ ಏರಿ ನೂಲನ್ನು ಬಿಡುತ ಗಾಳಿಯಲ್ಲಿ ತೇಲುತ್ತವೆ. ಗಾಳಿ ಅವನ್ನು ಹೊಸ ಸ್ಥಳಕ್ಕೆ ಕೊಂಡೊಯ್ಯುತ್ತದೆ.

ಕೆಲವು ಜೇಡಗಳು ಮೊಟ್ಟೆಯಿಡುವ ಕ್ರಮ ತೀರ ವಿಚಿತ್ರವಾಗಿದೆ. ಯುರೋಪಿನಲ್ಲಿರುವ ಒಂದು ಜಾತಿಯ ಜೇಡ ಮರದ ಕೊಂಬೆಗೆ ನೂಲನ್ನು ಕಟ್ಟಿ ಅದರ ಮೂಲಕ ನೀರಡಿಗೆ ಇಳಿದು ಅಲ್ಲಿ ಒಂದು ಸುಂದರವಾದ ಬಲೆಯ ಡೇರೆಯನ್ನೇ ಹೆಣೆಯುತ್ತದೆ. ಅನಂತರ ನೀರಿನ ಮೇಲಕ್ಕೆ ಬಂದು, ತನ್ನ ದೇಹದಡಿಯಲ್ಲೊಂದು ನೀರಿನ ಗುಳ್ಳೆಯನ್ನು ಕಟ್ಟಿಕೊಂಡು ಪುನಃ ಕೆಳಗಿಳಿಯುತ್ತದೆ. ಈ ನೀರಿನ ಗುಳ್ಳೆಯನ್ನು ಡೇರೆಯ ಅಡಿಯಲ್ಲಿ ಬಿಟ್ಟಿತೆಂದರೆ, ಗುಳ್ಳೆ ಅಲ್ಲೇ ಸ್ಥಿರವಾಗಿ ಉಳಿಯುತ್ತದೆ. ನೀರಿನಿಂದ ಆವರಿಸಲ್ಪಟ್ಟು ಸುರಕ್ಷಿತವಾಗಿರುವ ಈ ಡೇರೆಯೊಳಗೆ ಜೇಡನು ತನ್ನ ಮೊಟ್ಟೆಗಳನ್ನಿರಿಸಿ ಮರಿಗಳನ್ನು ಸಾಕುತ್ತದೆ.

ಫ್ರಾನ್ಸಿನಲ್ಲೊಮ್ಮೆ ಜೇಡಗಳ ಒಂದು ಕಾರ್ಖಾನೆಯನ್ನೇ ಸ್ಥಾಪಿಸಿದ್ದರು. ಅವುಗಳಿಂದ ನೂಲನ್ನು ಪಡೆದು, ಕೈಚೀಲ, ಕಾಲುಚೀಲ ಮೊದಲಾದುವನ್ನು ತಯಾರಿಸುವುದು ಅವರ ಉದ್ದೇಶವಾಗಿತ್ತು. ಆದರೆ ಕೆಲವೇ ತಿಂಗಳುಗಳಲ್ಲಿ ಈ ಕಾರ್ಖಾನೆ ದಿವಾಳಿಯೇಳಬೇಕಾಯಿತು. ಕಾರಣವೇನೆಂದರೆ, ಜೇಡಗಳಿಗೆ ಸಹಕರಿಸಿ ಬಾಳಲು ತಿಳಿಯದು. ಅವು ಒಂದನ್ನೊಂದು ತಿಂದು ಬದುಕುವ ಕಾಡು ಪ್ರಾಣಿಗಳು. ಹಾಗಾಗಿ, ಅವನು ಸಾಕಬೇಕೆಂದಿದ್ದರೆ ಒಂದೊಂದಕ್ಕೂ ಒಂದೊಂದು ಗೂಡಾಗಬೇಕು, ಒಂದೊಂದಕ್ಕೂ ಬೇರೆಬೇರೆಯಾಗಿ ಆಹಾರ ಒದಗಿಸಬೇಕು; ಬಲೆ ಹೆಣೆಯಲು ಬಹಳಷ್ಟು ಜಾಗ ಕೊಡಬೇಕು. ಇಷ್ಟೆಲ್ಲ ಖರ್ಚು ಮಾಡಿ ರೇಶೆಯನ್ನು ಪಡೆದರೂ ಅದನ್ನು ಕೊಂಡುಕೊಳ್ಳುವವರು ಯಾರಿದ್ದಾರೆ? *

ಮಿತ್ರನಿಲ್ಲದೆ ಹೋದರೆ ಅವನಿಗಾಗಿ ಹುಡುಕಾಡಿ; ಆತ ಸಿಕ್ಕ ಮೇಲೆ ಅವನನ್ನು ಕಳಕೊಳ್ಳಬೇಡಿ. ಗೆಳೆಯುನನ್ನು ಆಗಾಗ ಭೆಟ್ಟಿಯಾಗುತ್ತಿರಿ. ಇಲ್ಲವಾದರೆ ಅವನ ಮನೆಯ ಮಾರ್ಗದಲ್ಲಿ ಹುಲ್ಲುಕಂಟಿ ಬೆಳೆದುಬಿಟ್ಟೀತು. — ರಶಿಯನ್ ನುಡಿ

# ಕುರೂಪದಿಂದ ಸ್ವರೂಪ

ಮೂಲ:
ಪಾಲಿ ವೈಟ್

ಅನುವಾದ:
ಬಳ್ಕೂರು ಸುಬ್ರಾಯ ಅಡಿಗ

ವಾಶಿಂಗ್ಟನ್ನಿನ ನ್ಯಾಯಾಲಯದಲ್ಲಿ ಕರಿ ಯುಡುಗೆಯನ್ನುಟ್ಟ ಎಂಟು ಜನ ನ್ಯಾಯಾಧೀಶರು ಹೊಂಗೂದಲಿನ ಸುಂದರ ಯುವತಿಯ ಕಡೆ ನೋಡುತ್ತಿದ್ದರು. ಅವಳು ತನ್ನ ಚಂಚಲ ಬೆರಳುಗಳಿಂದ ಮುಖದ ಎಡಬದಿಗೆ ಕೋಲ್ಡ್ ಕ್ರೀಮ್ ಹಚ್ಚಿ ತಕ್ಷಣವೇ ಕರವಸ್ತ್ರದಿಂದ ಉಜ್ಜಿಬಿಟ್ಟಳು. ತರುಣಿಯ ಮುಖವಿಡೀ ಕಡುಕೆಂಪು ಬಣ್ಣದ ಜನ್ಮಜಾತ ಕಲೆಗಳಿಂದ ತುಂಬಿಹೋಗಿ ಅಸಹ್ಯವಾಗಿದ್ದುದು ನ್ಯಾಯಾಧೀಶರ ಗಮನಕ್ಕೆ ಬಂತು. ಆ ಕಲೆಗಳಿಲ್ಲದಿದ್ದರೆ ಅವಳ ಸುಂದರ ಕೇಶರಾಶಿ, ನೀಲಿ ಕಂಗಳು ಹಾಗೂ ಮನೋಹರ ಆಕೃತಿಯು ತುಂಬ ಆಕರ್ಷಕವೆನಿಸುತ್ತಿದ್ದವು.

ಆ ಬಳಿಕ ಅವಳು ತನ್ನ ಮುಖದ ಮೇಲೆ ಪೇಸ್ಟ್ ಹಾಗೂ ಪೌಡರ್ ಹಚ್ಚಿಕೊಂಡಳು. ಎರಡೇ ನಿಮಿಷಗಳಲ್ಲಿ ಅವಳ ಕುರೂಪವೆಲ್ಲವೂ ಮಾಯವಾಗಿ, ಅವಳು ಮತ್ತೆ ಸುಂದರಿಯೆನಿಸಿದಳು. ಕ್ಷಣಕಾಲದಲ್ಲಿ ಘಟಿಸಿದ ಈ ಬದಲಾವಣೆಯನ್ನು ಕಂಡು ನ್ಯಾಯಾಧೀಶರು ನಿಬ್ಬೆರಗಾದರು. ಈ ತರುಣಿಯು ಮುಖಾಕೃತಿಯನ್ನು ಸುಂದರಗೊಳಿಸುವ ಸಾಧನವನ್ನು ಪೇಟೆಂಟ್‌ಗೊಳಿಸಲೆಂದು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಳು. ಇದುವರೆಗೆ ಯಾರೂ ಇಂಥ ಸಾಹಸ ಮಾಡಿರಲಿಲ್ಲ. ತನ್ನ ಮುಖವನ್ನು ಚಂಚಲ ಬೆರಳುಗಳ ನೆರವಿನಿಂದ ಅಂದಗೊಳಿಸುತ್ತ ಅವಳು ನ್ಯಾಯಾಧೀಶರಿಗೆ ತನ್ನ ಕತೆ ಹೇಳತೊಡಗಿದಳು.

ಅವಳ ಹೆಸರು ಕುಮಾರೀ ಲೀಡಿಯಾ ಓಲೀಯರಿ. ಕಲೆಗಳಿಂದಾಗಿ ಅವಳ ಮುಖವಿಡೀ ಕುರೂಪವಾಗಿತ್ತು. ಬಾಲ್ಯಜೀವನವೂ ಅದರಿಂದಲೇ ದುಃಖಕರವೆನಿಸಿತ್ತು. ತನ್ನ ಕುರೂಪದಿಂದಾಗಿ ಅವಳು ಓರಗೆಯ ಹುಡುಗಿಯರೊಡನೆ ಬೆರೆಯುತ್ತಿರಲಿಲ್ಲ. ಶಾಲೆಯಲ್ಲೂ ತನ್ನ ಸಹಪಾಠಿನಿಯರೊಂದಿಗೆ ಸೇರ್ಪಡೆ ಹೊಂದದೆ ಒಬ್ಬಳೇ ವಿಶ್ರಾಂತಿ ಕೋಣೆಯಲ್ಲಿ ಕುಳಿತಿರುತ್ತಿದ್ದಳು. ಹುಡುಗಿಯ ತಾಯಿತಂದೆಗಳು ಈ ಕಲೆಗಳನ್ನು ದೂರಗೊಳಿಸಲು ಸಾವಿರಾರು ಡಾಲರುಗಳನ್ನು ಖರ್ಚು ಮಾಡಿದರು. ಆದರೆ ಹುಟ್ಟುವಾಗಲೇ ಇದ್ದ ಈ ಕೆಂಪು ಕಲೆಗಳನ್ನು ಹೋಗಲಾಡಿಸುವ ಯಾವ ಔಷಧವೂ ಚಿಕಿತ್ಸಾಜಗತ್ತಿನಲ್ಲಿ ಶೋಧಿಸಲ್ಪಟ್ಟಿರಲಿಲ್ಲ

ಆದರೆ ಹುಡುಗಿ ತುಂಬ ಸಾಹಸಿಯಿದ್ದಳು. ತನ್ನ ಕುರೂಪಕ್ಕಾಗಿ ಚಿಂತಿಸುವುದಿಲ್ಲವೆಂದೂ ಎಂಥ ಪರಿಸ್ಥಿತಿ ಬಂದರೂ ಅದನ್ನೆದುರಿಸುತ್ತೇನೆಂದೂ ಆ ಧೀರೆ ಕಾಲೇಜು ಪ್ರವೇಶಿಸುವ ವೇಳೆ ದೃಢವಾಗಿ ನಿರ್ಧರಿಸಿದಳು. ಅವಳ ಈ ಕರುಣಾದಾಯಕ ಜೀವನಚರಿತ್ರೆಯು ನ್ಯಾಯಾಧೀಶರ ಮನಸ್ಸನ್ನು ಕರಗಿಸಿತು.

"ಗುಲದಸ್ತಾ" ದಿಂದ

ಕಾಲೇಜು ಶಿಕ್ಷಣವನ್ನು ಮುಗಿಸಿ ಅವಳು ಉದ್ಯೋಗಕ್ಕೆಂದು ನ್ಯೂಯಾರ್ಕಿಗೆ ತೆರಳಿದಳು. ಅವಳ ಯೋಗ್ಯತೆ, ಪ್ರತಿಭೆ ಹಾಗೂ ಸಾಹಸವು ಅಸಾಧಾರಣವಾಗಿದ್ದರೂ ಅವಳ ಮುಖದ ಕುರೂಪವು ಎಲ್ಲೆಡೆಯಲ್ಲೂ ಎಡರಾಗಿ ನಿಂತಿತು. ಅವಳು ಏಕಾಂತ ಕೋಣೆಯಲ್ಲಿ ಕುಳಿತು ಬಣ್ಣದ ಕೆಲಸ (Painting) ಕಲಿಯತೊಡಗಿದಳು.

ಒಂದು ದಿವಸ ಅವಳು ಗಿಡದ ಚಿತ್ರ ತಯಾರಿಸುತ್ತಿದ್ದಳು. ಅದರ ಹೂವಿನ ದಳಕ್ಕೆ ಕಡು ಕೆಂಪು ಬಣ್ಣ ತಗಲಿತ್ತು. ದಳವನ್ನು ಸ್ವಾಭಾವಿಕವಾಗಿ ಪರಿವರ್ತಿಸಲೆಂದು ಅವಳು ಅದರ ಮೇಲೆ ತಿಳಿ ಬಣ್ಣವನ್ನು ಸವರಿದಳು. ತಿಳಿ ಬಣ್ಣವು ಕಡುಕೆಂಪು ಬಣ್ಣವನ್ನು ಸಂಪೂರ್ಣವಾಗಿ ಮುಚ್ಚಿಬಿಟ್ಟಿತು. ಮುಖದ ಕೆಂಪು ಕಲೆಗಳನ್ನೂ ಹೀಗೆಯೇ ಮುಚ್ಚಲು ಸಾಧ್ಯವಾಗುತ್ತಿದ್ದರೆ...!—ಎಂಬ ವಿಚಾರ ಥಕ್ಕನೆ ಅವಳ ಮನದಲ್ಲಿ ಮಿಂಚಿತು. ಆ ಬಗ್ಗೆ ಅದೇಕೆ ಪ್ರಯತ್ನಿಸಬಾರದು ?— ಮರುಕ್ಷಣವೇ ಅವಳು ಮುಖದ ಕಲೆಯ ಮೇಲೆ ಅದೇ ಕುಂಚವನ್ನಾಡಿಸಿದಳು. ಕನ್ನಡಿಯಲ್ಲಿ ಅನಿಂದ್ಯ ಸೌಂದರ್ಯವುಳ್ಳ ಮುಖವೊಂದು ಪ್ರತಿಬಿಂಬಿತವಾಯಿತು.

ಕುರೂಪವನ್ನು ಮುಚ್ಚುವ ಈ ಕ್ರಮದ ಬಗ್ಗೆ ಯೋಚಿಸಿದಂತೆಲ್ಲ ಅವಳಿಗೆ ಇದು ಅತ್ಯಾವಶ್ಯಕವಾಗಿಯೇ ತೋರಿತು. ಕಾಲೇಜಿನಲ್ಲಿ ಅವಳು ರಸಾಯನಶಾಸ್ತ್ರವನ್ನಭ್ಯಸಿಸಿದ್ದಳು. ಆದ್ದರಿಂದ ರಸಾಯನ ಶಾಲೆಯಿಂದ ಅವಳು ಕೆಲ ವಸ್ತುಗಳನ್ನು ಕೊಂಡುತಂದು ದ್ರವವೊಂದನ್ನು ತಯಾರಿಸಬೇಕೆಂದು ನಿರ್ಣಯಿಸಿದಳು. ಸಾಕಷ್ಟು ಪ್ರಯೋಗ ಹಾಗೂ ಪರೀಕ್ಷೆಗಳ ಬಳಿಕ ದ್ರವ ಪದಾರ್ಥ ಸಿದ್ಧವಾಯಿತು. ಆದರೆ ಅದನ್ನು ಹಚ್ಚಿಕೊಂಡು ಮುಗುಳ್ನಕ್ಕಾಗ ಅಲ್ಲಲ್ಲಿ ಬಿರುಕುಗಳು ಕಾಣಿಸತೊಡಗಿದವು; ಮತ್ತೆ ಕೆಲವು ತಿಂಗಳ ವರೆಗೆ ಶೋಧ ನಡೆಸಿದ ಬಳಿಕ ಯಾವೊಂದು ಕುಂದುಕೊರತೆಯೂ ಇಲ್ಲದಂಥ ಪೇಸ್ಟ್ ತಯಾರಿಸಲು ಸಮರ್ಥಳಾದಳು. ಜನ್ಮಜಾತ ಕಲೆಗಳನ್ನು ಮರೆಮಾಡಿ ಮುಖಕ್ಕೆ ಸ್ವಾಭಾವಿಕ ಸೌಂದರ್ಯವನ್ನು ತಂದುಕೊಡಲು ಅವಳು ಸಮರ್ಥಳಾದಳು.

ಈಗ ಅವಳು ವಸ್ತುಭಂಡಾರದ ವ್ಯವಸ್ಥಾಪಕನ ಬಳಿ ನೌಕರಿಗೆಂದು ಹೋದಳು. ಆ ವ್ಯವಸ್ಥಾಪಕರು ಹಿಂದೆಷ್ಟೋ ಬಾರಿ ನಿರಾಕರಿಸಿಬಿಟ್ಟಿದ್ದರು. "ನೀವು ಹಿಂದೆಯೂ ಹಲವು ಬಾರಿ ಬಂದುಹೋಗಿದ್ದಿರಿ. ಆದರೆ ನಿಮ್ಮ ಮುಖ...?" ಎಂದರವರು.

ಯುವತಿಯು ಅವರಿಗೆ ತನ್ನ ಕತೆಯನ್ನು ಸವಿಸ್ತಾರವಾಗಿ ತಿಳಿಸಿದಾಗ ವ್ಯವಸ್ಥಾಪಕರಿಗೆ ತುಂಬ ಆನಂದವಾಯಿತು. ಅವರು ಅವಳಿಗೆ ಸಂತೋಷದಿಂದ ನೌಕರಿ ಕೊಟ್ಟರು; ಅವಳೂ ತನ್ನ ಅಸಾಧಾರಣ ಯೋಗ್ಯತೆಯಿಂದ ಸಫಲತೆ ಹೊಂದಿದಳು

ತನ್ನ ಈ ಆವಿಷ್ಕಾರವನ್ನು ಪೇಟೆಂಟ್ ಮಾಡುವುದಕ್ಕಾಗಿ ಕೋರ್ಟಿನಲ್ಲಿ ಅವಳು ಇಂದು ಎಂಟು ಜನ ನ್ಯಾಯಾಧೀಶರೆದುರು ನಿಂತಿದ್ದಳು ಸೌಂದರ್ಯ ಪ್ರಸಾಧನ ಸಾಮಗ್ರಿಗಳನ್ನು ಪೇಟೆಂಟ್ ಮಾಡಿಸುವುದು ಕಾಯದೆಗೆ ವಿರುದ್ಧವಾಗಿತ್ತು. ಆದ್ದರಿಂದಲೇ ಅವಳು ಈ ನ್ಯಾಯಾಲಯಕ್ಕೆ ಅಪೀಲು ಮಾಡಿದ್ದಳು.

ಓ ಲೀಯರಿಯ ಈ ಆವಿಷ್ಕಾರ ನಡೆದು ಎಷ್ಟೋ ವರ್ಷಗಳಾದ ಮೇಲೆಯೇ ಮಾರುಕಟ್ಟೆಗೆ ಬಂತು. ತನ್ನ ವೈಯಕ್ತಿಕ ಪ್ರಯೋಗಕ್ಕಾಗಿ ಅವಳದನ್ನು ದಿನಾಲೂ ಬಳಸುತ್ತಿದ್ದಳು. ಒಮ್ಮೆ ಅವಳ ಕಾಲಿಗೇನೋ ನೋವಾದುದರಿಂದ ಅವಳು ಆಸ್ಪತ್ರೆಗೆ ಹೋಗಿದ್ದಳು. ಆಸ್ಪತ್ರೆಯಲ್ಲಿ ಇನ್ನೊಬ್ಬಳು ಮಹಿಳೆ ಡಾಕ್ಟರರ ಹಾದಿಕಾಯುತ್ತ ಕುಳಿತಿದ್ದಳು. ಅವಳ ಮುಖದ ಮೇಲೂ ಲೀಯರಿಯ ಮುಖದ ಮೇಲಿರುವಂಥ ಕಲೆಯೇ ಇತ್ತು. ಡಾಕ್ಟರರು ಬಂದಾಗ ಅವಳು. . . ' ಈ ಕಲೆಯನ್ನು ಸಂಪೂರ್ಣವಾಗಿ ಮರೆಮಾಡಲು ಏನಾದರೂ ಔಷಧವಿದೆಯೆ ?' ಎಂದು ಪ್ರಶ್ನಿ-

ಸಿದಳು. 'ಸ್ವಲ್ಪ ಮಟ್ಟಿಗೆ ಮರೆಮಾಡಬಹುದು ಆದರೆ ಸಂಪೂರ್ಣ ಸಾಧ್ಯವಿಲ್ಲ'— ಡಾಕ್ಟರರೆಂದರು. 'ನನ್ನ ಮುಖದ ಮೇಲೂ ಇಂತಹದೇ ಕಲೆಯಿದೆ'— ಲೀಯರಿ ಸಂಕೋಚದಿಂದ ಹೇಳಿದಳು.

ಡಾಕ್ಟರರು ಅವಳ ಮುಖವನ್ನು ನಿಟ್ಟಿಸಿ ನೋಡಿ—ಹಾಗಿದ್ದರೆ ಅದು ಬಹಳ ಕಿರಿದಾಗಿರಬಹುದು ಎಂದರು.

ಲೀಯರಿ ಸ್ವಲ್ಪ ಕೋಲ್ಡ್‌ಕ್ರೀಮ್ ತರಿಸಿ ಪೇಸ್ಟಿನ ಆವರಣ ತೆಗೆದು ಆ ದೊಡ್ಡ ಕಲೆ ತೋರಿಸಿದಳು.

'ನಿಜಕ್ಕೂ ಚಮತ್ಕಾರವಿದು! ನನ್ನ ೨೮ ವರ್ಷದ ವೈದ್ಯಕೀಯ ಜೀವನದಲ್ಲಿ ಇಂಥ ಚಮತ್ಕಾರವನ್ನು ಮೊದಲು ಬಾರಿ ಕಾಣುತ್ತಿದ್ದೇನೆ. ಪ್ರಪಂಚದ ಒಳಿತಿಗಾಗಿ ನೀನಿದನ್ನು ಪ್ರಚಾರಗೊಳಿಸಬೇಕು'— ಡಾಕ್ಟರರೆಂದರು.

ಸೌಂದರ್ಯ ಪ್ರಸಾಧನ ಸಾಮಗ್ರಿಗಳನ್ನು ತಯಾರಿಸುವ ಯಾವುದಾದರೂ ಕಂಪೆನಿಗೆ ತನ್ನ ಈ ಆವಿಷ್ಕಾರವನ್ನು ಮಾರಿಬಿಡಬೇಕೆಂಬುದು ಮೊದಲು ಅವಳ ವಿಚಾರವಾಗಿತ್ತು. ಸಾವಿರಾರು ಡಾಲರುಗಳ ಕೊಡುಗೆಯೂ ಬಂದಿತ್ತು. ಆದರೆ ಹಾಗೆ ಮಾಡಬಾರದೆಂದು ಡಾಕ್ಟರರು ಖಡಾಖಂಡಿತವಾಗಿ ಹೇಳಿಬಿಟ್ಟರು.

'ನಿನ್ನ ಮುಖದ ಮೇಲೆ ಈ ಜನ್ಮಜಾತ ಕಲೆಯಿದೆ. ಆದ್ದರಿಂದ ಇಂಥ ನಿರ್ಭಾಗ್ಯವಂತರ ಮನೋಭಾವಗಳನ್ನು ನೀನು ಚೆನ್ನಾಗಿ ಗುರುತಿಸಬಲ್ಲೆ. ಇಂಥ ದುಃಖಿತರಿಗೆ ಸಹಾಯ ಮಾಡುವುದು ನಿನ್ನ ಕರ್ತವ್ಯ.'

ಅವಳು ಹಾಗೆಯೇ ಮಾಡಿದಳು. '೫೫೧, ೫ನೇ ಅವೆನ್ಯೂ, ನ್ಯೂಯಾರ್ಕ್'ದಲ್ಲಿ ಕುಮಾರಿ ಓ ಲೀಯರಿಯ ಕಾರ್ಯಾಲಯ ಎಷ್ಟೊಂದು ಜನ ಅವಳ ಹಾದಿ ಕಾಯುತ್ತ ಕುಳಿತುಕೊಳ್ಳುತ್ತಾರೆ! ಓ ಲೀಯರಿಯು ತನ್ನ ಚಂಚಲ ಬೆರಳುಗಳಿಂದ ಮುಖದ ಕಲೆಗಳನ್ನು ಮರೆಮಾಡಿ ಸೌಂದರ್ಯವು ಹೊಮ್ಮುವಂತೆ ಪರಿವರ್ತಿಸುತ್ತಾಳೆ. ಆ ವ್ಯಕ್ತಿ ಮರಳುವಾಗ ಕೊರಳನ್ನೆತ್ತಿ ಎಷ್ಟು ಆನಂದದಿಂದ ಸಾಗುತ್ತಾನೆ!

ಸಮಾಜ ಸೇವೆಯ ಕೆಲವೇ ವರ್ಷಗಳಲ್ಲಿ ಕುಮಾರಿ ಓ ಲೀಯರಿಯು ಸಾವಿರಾರು ಮನುಷ್ಯರ ಜೀವನಕ್ಕೆ ಹೊಸ ಆಕರ್ಷಣೆಯನ್ನಿತ್ತಿದ್ದಾಳೆ. ಈ ಆವರಣದ ಮೂಲಕ ಹುಟ್ಟುಕಲೆಗಳನ್ನಷ್ಟೇ ಅಲ್ಲ— ಗಾಯದ ಕಲೆಗಳು, ಸುಟ್ಟ ಕಲೆಗಳು ಹಾಗೂ ಇನ್ನಿತರ ಕಾಹಿಲೆ ಕಲೆಗಳನ್ನೂ ಮರೆಮಾಡಿಬಿಡುತ್ತಾಳೆ. ಆಗ ಆ ಜನ

ರಲ್ಲಿ ಆತ್ಮವಿಶ್ವಾಸ ಮೂಡುತ್ತದೆ.

ಆದರೆ ಓ ಲೀಯರಿಯ ಬಳಿ ಬರುವವರೆಲ್ಲರೂ ಇಂಥ ದಯನೀಯ ಸ್ಥಿತಿಗೆ ಗುರಿಯಾಗಿರುವುದಿಲ್ಲ. ಕೆಲವೊಮ್ಮೆ ಚರ್ಮದ ಮೇಲಿನ ತಾತ್ಕಾಲಿಕ ಮೊಡವೆಗಳನ್ನು ಹೋಗಲಾಡಿಸುವುದಕ್ಕಾಗಿ-ಯೂ ಬರುವವರಿದ್ದಾರೆ. ಹುಡುಗಿಯೊಬ್ಬಳು ತನ್ನ ಸಂಕಟವನ್ನು ಈ ರೀತಿ ತೋಡಿಕೊಂಡಳು—'ನನ್ನ ಮದುವೆಗೆ ಒಂದು ವಾರ ಮಾತ್ರ ಉಳಿದಿದೆ. ಆದರೆ ಎಲ್ಲಿಂದ ಈ ಹಾಳು ಮೊಡವೆಗಳು ಮೂಡಿದವೊ! ನನಗೆ ಮನಃಶಾಂತಿಯಿಲ್ಲ. ನನ್ನ ಮುಖ ಸೌಂದರ್ಯವೇ ಕೆಟ್ಟುಹೋಗಿದೆ.'

ಓ ಲೀಯರಿ ಅವಳೊಡನೆ ಸಹಾನುಭೂತಿಯಿಂದ ಮಾತಾಡಿ ಆ ಮುಖದ ಮೊಡವೆಗಳನ್ನು ತನ್ನ ಚಮತ್ಕಾರದಿಂದ ಮುಚ್ಚಿ ಅವಳನ್ನು ಮಹಾ ಸುಂದರಿಯನ್ನಾಗಿ ಮಾಡಿದಳು.

ದೇಹದ ಕಲೆಗಳನ್ನು ಮರೆಗೊಳಿಸುವುದರಿಂದ ದೊರೆಯುವ ಅತಿ ದೊಡ್ಡ ಲಾಭವೆಂದರೆ ಮಾನಸಿಕ ಪ್ರಭಾವವೆಂದು ಓ ಲೀಯರಿಯ ಅಭಿಪ್ರಾಯ. ಅದರಿಂದ ರೂಪ ಮಾತ್ರ ಬದಲಾಗುವುದಿಲ್ಲ. ಮನಸ್ಸಿನ ಹೀನತಾಭಾವವೂ ತೊಲಗುವುದೆಂದು ಅವಳು ಸಾರುತ್ತಾಳೆ. ತನ್ನ ಹಿಂದಿನ ದಿನಗಳನ್ನು ಸ್ಮರಿಸಿಕೊಂಡು ಅವಳು ಮಕ್ಕಳ ಹೆತ್ತವರಿಗೆ–ಮುಖಾಕೃತಿಯ ದೋಷಗಳಿಗಾಗಿ ನಿಮ್ಮ ಮಕ್ಕಳನ್ನು ದುಃಖಕ್ಕೆ ಗುರಿಪಡಿಸಬೇಡಿರಿ!—ಎಂದು ಹೇಳುತ್ತಾಳೆ. ಸಾಮಾನ್ಯವಾಗಿ ತಾಯಿತಂದೆಯರು ಮಕ್ಕಳ ಕುರೂಪದ ಬಗ್ಗೆ ಆಗಾಗ್ಗೆ ಗೋಳಾಡುವುದುಂಟು. ಈ ಪ್ರವೃತ್ತಿಯೇ ಘಾತಕವಾದುದು. ತಾಯಿತಂದೆಯರು ಆಗಾಗ್ಗೆ ಮಕ್ಕಳೊಡನೆ 'ನಿನ್ನ ಮುಖದ ಮೇಲೆ ಇದೆಂಥ ಕಲೆಯಿದೆ!' ಎಂದು ಕೇಳುವುದು ಸರಿಯಲ್ಲ. ಹೀಗೆ ಆಗಾಗ್ಗೆ ಕೇಳುತ್ತಿದ್ದರೆ ಮಕ್ಕಳ ಮನಸಿನಮೇಲೆ ಘಾತಕ ಪರಿಣಾಮವುಂಟಾಗಬಹುದು. . . .

ಓ ಲೀಯರಿಯು ತನ್ನ ಆವಿಷ್ಕಾರದಿಂದ ಸಾವಿರಾರು ಜನರಿಗೆ ಉಪಕಾರ ಮಾಡಿದ್ದಾಳೆ. . ಪ್ರತಿಯಾಗಿ ಅವರಿಂದಲೂ ಕೃತಜ್ಞತೆ, ಧನ್ಯವಾದ ಹಾಗೂ ಪ್ರಶಂಶಾತ್ಮಕ ಪತ್ರಗಳು ಬೇಕಾದಷ್ಟು ಬಂದಿವೆ. ಆ ಜನರು ತಮ್ಮ ಜೀವನದಲ್ಲಿ ಘಟಿಸಿದ ಬದಲಾವಣೆಯಿಂದಾಗಿ ಹೊಸ ಹುರುಪು ಹಾಗೂ ಆನಂದವನ್ನು ವ್ಯಕ್ತಪಡಿಸಿದ್ದಾರೆ. ಮೊದಲು ಅವರೆಲ್ಲರ ಜೀವನವು ಕುರೂಪದಿಂದಾಗಿ ತುಂಬ ದಾರುಣವೂ ಅಸಹ್ಯವೂ ಆಗಿತ್ತು. ಅವರೆಲ್ಲರೂ ಹೀನತಾ ಭಾವವನ್ನು ಕಳೆದುಕೊಂಡು ಹೊಸ ಆತ್ಮವಿಶ್ವಾಸ ಪಡೆದುದಕ್ಕಾಗಿ ತಮ್ಮ ಅಪರಿಮಿತ ಆನಂದವನ್ನು ತೋರ್ಪಡಿಸಿದ್ದಾರೆ. ಅವನ್ನು ಓದುತ್ತ ಓದುತ್ತ ತನ್ನ ಜೀವನವೂ ಸಾರ್ಥಕವಾಯಿತೆಂದು ಓ ಲೀಯರಿಗೆ ಅನ್ನಿಸಿದರೆ ಅಸಹಜವಲ್ಲ. *

---

ಗಂಡ-ಹೆಂಡಿರಿಬ್ಬರು ವಿವಾಹವಿಚ್ಛೇದನಕ್ಕಾಗಿ ಕೋರ್ಟಿನ ಮೊರೆ ಹೊಕ್ಕಿದ್ದರು. ಅವರ ವಿರಸ ನುಡಿಗಳನ್ನಾಲಿಸಿದ ನಂತರ ನ್ಯಾಯಾಧೀಶರು, "ನೀವು ವಿವಾಹವಿಚ್ಛೇದನ ಮಾಡಿಕೊಳ್ಳಬಹುದು. ಆದರೆ ನಿಮ್ಮಲ್ಲಿರುವ ಸೊತ್ತುಗಳನ್ನೆಲ್ಲಾ ಇಬ್ಬರೂ ಸರಿಸಮವಾಗಿ ಹಂಚಿಕೊಳ್ಳಬೇಕು" ಎಂದರು.

"ನಮ್ಮ ಮೂರು ಮಕ್ಕಳನ್ನೇನು ಮಾಡೋಣ?" ಎಂದು ಆ ಹೆಂಗಸು ನ್ಯಾಯಾಧೀಶರನ್ನು ಕೇಳಿದಳು.

"ಅದೇನೋ ನಾನು ಹೇಳಲು ಸಾಧ್ಯವಿಲ್ಲ. ನೀವೇ ನಿಮ್ಮೊಳಗೆ ಅದನ್ನು ಬಗೆಹರಿಸಿಕೊಳ್ಳಬೇಕು" ಎಂದರು ನ್ಯಾಯಾಧೀಶರು.

ಕೂಡಲೇ ಆ ಮಹಿಳೆ ತನ್ನ ಗಂಡನ ಕೈ ಹಿಡಿದುಕೊಂಡು ನ್ಯಾಯಾಧೀಶರಿಗೆ ಹೇಳಿದಳು: "ಹಾಗಾದರೆ ನಾವು ಮುಂದಿನ ವರ್ಷ ನಾಲ್ಕು ಮಕ್ಕಳೊಂದಿಗೆ ಬರುತ್ತೇವೆ."

—ನಾಗೇಶರಾವ್

# ಕಥೆಗಾರರಿಗೆ ಜ್ಞಾನದೃಷ್ಟಿ ಉಂಟೆ?

ಅನೇಕ ವರ್ಷಗಳ ಹಿಂದೆ ಇಂಗ್ಲಿಷ್ ಪತ್ತೇದಾರಿ ಕಥೆಗಾರ ಜಸ್ಟಿನ್ ಅತೋಲರು ಒಂದು ಕಥೆ ಬರೆದರು. ಅದರಲ್ಲಿ ಖಲನಾಯಕನು ಒಬ್ಬನನ್ನು ಕೊಲೆ ಮಾಡಿ ಅದು ಆತ್ಮಹತ್ಯೆಯಂತೆ ಕಾಣಬೇಕೆಂದು ಹಂಚಿಕೆ ಹೂಡಿ ಗ್ಯಾಸ್ ಒಲೆಯಲ್ಲಿ ಹೆಣದ ತಲೆಯನ್ನು ಹೊಗಿಸಿಟ್ಟಿದ್ದನು. ಕಥೆಯಲ್ಲಿ ಕೊಲೆಗಡಕನು ಹೇಗಾದರೂ ಸಿಕ್ಕಿಬೀಳಬೇಕಲ್ಲ, ಅದಕ್ಕೆ ಜಸ್ಟಿನ್ನರು ಅವನಿಂದ ಒಂದು ಚಿಕ್ಕ ತಪ್ಪುಮಾಡಿಸಿ ಅದರ ದೆಸೆಯಿಂದ ಕೊಲೆಯ ಜಾಡು ಹಿಡಿದು ಪೋಲೀಸರು ಅವನನ್ನು ಬಂಧಿಸುವಂತೆ ಮಾಡಿದ್ದರು.

ಪಾಪ, ಆ ಕಥೆಗಾರನಿಗೆ ತನ್ನ ಕಥೆಯನ್ನು ಪ್ರಕಟಿಸಲು ಅವಕಾಶವೇ ಸಿಗಲಿಲ್ಲ. ಏಕೆಂದರೆ ಒಂದು ದಿನ ಪತ್ರಿಕೆಗಳು ಇಂಗ್ಲಂಡಿನಲ್ಲಿ ಘಟಿಸಿದ ಒಂದು ಕೊಲೆಯ ವರದಿಯನ್ನು ಪ್ರಕಟಿಸಿದುದನ್ನು ಅವರು ಕಂಡರು. ಅದರಲ್ಲಿ ಕೊಲೆಗಡಕನು ಸರಿಯಾಗಿ ಅವರ ಕಥೆಯಲ್ಲಿನ ಕೊಲೆಗಡಕನು ಹೇಗೆ ಮಾಡಿದ್ದನೋ ಹಾಗೆಯೆ ಕೊಲೆ ಮಾಡಿ, ಹಾಗೆಯೆ ತನ್ನ ದುಷ್ಕೃತ್ಯದ ಪತ್ತೆ ಹತ್ತದ ಹಾಗೆ ನೋಡಿಕೊಂಡಿದ್ದನು: ಮತ್ತು ಆಶ್ಚರ್ಯವೆಂದರೆ ಕಥೆಯಲ್ಲಿನ ತಪ್ಪನ್ನೇ ಮಾಡಿ ಸಿಕ್ಕಿಬಿದ್ದಿದ್ದನು.

ಜಸ್ಟಿನ್ನರು ಕಥೆ ಬರೆದ ಮೇಲೆ, ಅದರಲ್ಲಿ ಕೊಲೆಗಡಕ ಹೂಡಿದ ಹಂಚಿಕೆ ಅತ್ಯಂತ ಬುದ್ಧಿವಂತಿಕೆಯದಾದ್ದರಿಂದ ನಿಜವಾಗಿ ಯಾರಾದರೂ ಆ ಹಂಚಿಕೆಯನ್ನು—ತಪ್ಪು ಮಾಡದೆನೆ—ಪುನರಾವರ್ತಿಸಬಹುದೆಂಬ ಹೆದರಿಕೆಯಿಂದ ಅದನ್ನು ಪ್ರಕಟಿಸಲು ಹಿಂಜರಿದಿದ್ದರು. ಆದರೆ ನಿಜವಾಗಿ ಒಬ್ಬನು ಅವರ ಕಥೆ ನೋಡದೆಯೆ ಅದೇ ಉಪಾಯ ಮಾಡಿದ್ದ.

ಪತ್ತೇದಾರಿ ಕಥೆಗಾರರೂ ಅಪರಾಧಿಗಳೂ ಒಂದೇ ವಿಧವಾಗಿ ಯೋಚಿಸಿದ ಉದಾಹರಣೆ ಇದೊಂದೇ ಅಲ್ಲ. ಜಸ್ಟಿನ್ನರ ಘಟನೆಗಿಂತ ಮೊದಲು ಕೆಲ ವರ್ಷಗಳ ಹಿಂದೆ ಒಬ್ಬ ಲೇಖಕನು ಒಂದು ನಾಟಕ ಬರೆದಿದ್ದ. ಅದರಲ್ಲಿ "ಚೆಜ್ ಬೋಗಸ್ಲೊವ್ಸ್ಕಿ" ಎಂಬ ಕಲಾವಿದನು ಪ್ಯಾರಿಸಿನ ಲೋವರ್ ಭವನದಿಂದ ಅಮೂಲ್ಯ ಚಿತ್ರವೊಂದನ್ನು ಅಪಹರಿಸಿದಂತೆ ತೋರಿಸಿತ್ತು. ಅದನ್ನು ಪ್ರಕಟಿಸಿ ಪ್ರದರ್ಶಿಸಿ ಕೂಡ ಆಗಿತ್ತು. ಒಂದು ವರ್ಷದ ನಂತರ ಲೋವರ್‌ನಲ್ಲಿ ನಿಜವಾಗಿ ಒಂದು ಚಿತ್ರ ಕಳವಾಯಿತು. ಅದನ್ನು ಅಪಹರಿಸಿದವನ ಹೆಸರು "ಬೋಗಸ್ಲಾವ್ಸ್ಕಿ" ಎಂದಿತ್ತು.

ಆಶ್ಚರ್ಯ! ಕಥೆಯ ಕಳ್ಳನ ಹೆಸರಿಗೂ ನಿಜವಾದ ಕಳ್ಳನದಕ್ಕೂ ಒಂದೇ ಅಕ್ಷರದಲ್ಲಿ ಹೆಚ್ಚು ಕಡಿಮೆ. ಆದರೆ ಈ ಆಶ್ಚರ್ಯವನ್ನು ಆಶ್ಚರ್ಯತರವಾಗಿ ಮಾಡಿದ ಅಂಶವೆಂದರೆ, ನಾಟಕಕಾರನು ಮೂಲತಃ ತನ್ನ ಕಳ್ಳನಿಗೆ "ಬೋಗಸ್ಲಾವ್ಸ್ಕಿ

ಜಸ್ಟಿನ್ ಅತೋಬಲರ ಲೇಖದ ಆಧಾರದಿಂದ

ಎಂದೆ ಹೆಸರಿಟ್ಟಿದ್ದ. ಆದರೆ ಅನಂತರ ಆಕಸ್ಮಾತ್ತಾಗಿ ಟೆಲಿಫೋನ್ ಡೈರೆಕ್ಟರಿಯಲ್ಲಿ "ಬೋಗ-ಸ್ಲಾವ್‌ಸ್ಕಿ" ಎಂಬೊಬ್ಬ ಪ್ರತಿಷ್ಠಿತ ಗೃಹಸ್ಥನ ಹೆಸರನ್ನು ಕಂಡು ಆತನಿಂದ ನಾಳೆ ಮಾನಹಾನಿಯ ಮೊಕದ್ದಮೆ ಬಂದೀತೆಂದು ಅಂಜಿ ಹೆಸರಿನ ಲಕಾರವನ್ನು ಕಕಾರವಾಗಿ ಮಾರ್ಪಡಿಸಿದ್ದನಷ್ಟೇ.

೧೯೩೦–೪೦ ರ ನಡುವೆ ಅಮೇರಿಕದಲ್ಲಿ ವಿಲಿಯಂ ಹರ್ಬರ್ಟ್ ವಾಲೆಸ್ ಎಂಬವನು ಹೆಂಡತಿ ಜೂಲಿಯಳ ಕೊಲೆ ಮಾಡಿದ್ದನೆಂದು ಅವನ ವಿಚಾರಣೆ ನಡೆಯಿತು. ದೇಶದಲ್ಲಿ ತುಂಬ ಕೋಲಾಹಲವೆಬ್ಬಿಸಿದ ಈ ಕೊಲೆಯ ಆಪಾದಿತನು ಅಪೀಲಿನಲ್ಲಿ ನಿರಪರಾಧಿಯಾಗಿ ಬಿಡುಗಡೆ ಮಾಡಲ್ಪಟ್ಟನು. ಆದರೆ ಈ ಘಟನೆ ಜರಗುವ ಮೊದಲೇ ಒಬ್ಬ ಕಾದಂಬರಿಕಾರನು ಒಂದು ಕಾದಂಬರಿಯಲ್ಲಿ ಪ್ರತಿಯೊಂದು ಅಂಶದಲ್ಲೂ ಜೂಲಿಯ ಕೊಲೆ ಮೊಕದ್ದಮೆಯಲ್ಲಿ ಆರೋಪಿಸಲ್ಪಟ್ಟ ಕ್ರಮವನ್ನೇ ಹೋಲುವ ಒಂದು ಕೊಲೆಯನ್ನು ಕಲ್ಪಿಸಿದ್ದನು. ಈ ಕಾದಂಬರಿಯಲ್ಲಿ ನಿಜವಾದ ಕೊಲೆಗಡಕಳು ತಾನು ಮಾಡಿದ ಕೊಲೆಯನ್ನು ಮುಚ್ಚಿಡುವುದಕ್ಕಾಗಿ ಸತ್ತವಳ ಗಂಡನಿಗೆ ಟೆಲಿಫೋನ್ ಮಾಡಿ ಅವನ ಮೇಲೆ ಸಂಶಯ ಹರಿಯುವಂತೆ ಉಪಾಯ ಮಾಡಿದ್ದಳು. ನಿಜವಾದ ಕೊಲೆಯಲ್ಲೂ ಹಾಗೆಯೆ ಆಗಿ ವಾಲೇಸನ ಬಂಧನವಾಗಿತ್ತು.

ಬ್ರಿಟನ್ನಿನ ಮಹಾ ಭಯಂಕರ ಸೆರೆಮನೆಯಾದ ಡಾರ್ಟ್‌ಮೋರ್‌ನಲ್ಲಿ ಸೆರೆಯಾಳುಗಳು ಹೂಡಿದ ಕಾಲ್ಪನಿಕ ಬಂಡಾಯವನ್ನು ಒಂದು ಕಾದಂಬರಿಯಲ್ಲಿ ವರ್ಣಿಸಲಾಗಿತ್ತು. ಅದು ಪ್ರಕಟವಾದ ಕೆಲ ತಿಂಗಳುಗಳಲ್ಲಿ ಅದೇ ಸೆರೆಮನೆಯಲ್ಲಿ ಅದೇ ವಿಧವಾದ ಬಂಡಾಯವೊಂದು ನಿಜವಾಗಿ ನಡೆದುಹೋಯಿತು. ಕೈದಿಗಳು ಆ ಪುಸ್ತಕವನ್ನು ಓದುವ ಸಂದರ್ಭವೇ ಇರಲಿಲ್ಲ.

ಇನ್ನೊಂದು ಕಥೆಯಲ್ಲಿ ಕೊಲೆಯಾದ ಹುಡುಗಿಯ ತಲೆಗೂದಲ ಒಂದು ಗುಚ್ಛವನ್ನು ಒಂದು ಹಕ್ಕಿ ಒಯ್ದು ಗೂಡು ಕಟ್ಟಲು ಉಪಯೋಗಿಸಿತು. ಆ ಕೂದಲ ಆಧಾರದಿಂದ ಕೊಲೆಯ ಪತ್ತೆಯಾಯಿತು. ಕೆಲ ಕಾಲದ ನಂತರ ನಿಜವಾಗಿ ಅಂಥದೇ ಒಂದು ಕೊಲೆಯು ಹಾಗೇ ಹಕ್ಕಿ ಕಟ್ಟಿದ ಗೂಡಿನಲ್ಲಿ ಸಿಕ್ಕಿದ ಕೂದಲಿನ ದೆಸೆಯಿಂದ ಪತ್ತೆಯಾಯಿತೆಂದು ಕೇಳಿ ಲೇಖಕನಿಗೆ ಆದ ಆಶ್ಚರ್ಯ ಅಷ್ಟಿಷ್ಟಲ್ಲ.

ಕಥೆಗಾರರಿಗೂ ಕಾದಂಬರೀಕಾರರಿಗೂ ಎಷ್ಟೋ ವೇಳೆ ಭವಿಷ್ಯದ್ದೃಷ್ಟಿ ಇದೆಯೋ ಎಂದನಿಸುವಷ್ಟು ಅವರ ಕಲ್ಪನೆಗಳು ಸತ್ಯ ಪ್ರಪಂಚಕ್ಕಿಳಿಯುವುದುಂಟು. ಪ್ರಸಿದ್ಧ ಕತೆಗಾರ ರುಡ್ಯಾರ್ಡ್ ಕಿಪ್ಲಿಂಗನಿಗೆ ಒಮ್ಮೆ ಒಂದು ಇಗರ್ಜಿಯಲ್ಲಿ ನಡೆದ ಒಂದು ಸಮಾರಂಭ ಮತ್ತು ಆ ಸಮಾರಂಭ ಮುಗಿದ ನಂತರ ಒಬ್ಬರು ಬಂದು ತಮಗೆ "ಅರಸ ಸತ್ತ" ಎಂದು ತಿಳಿಸಿದ ವಾರ್ತೆಯ ಕನಸು ಬಿದ್ದಿತ್ತು. ಕೆಲ ದಿನಗಳಲ್ಲಿ ಒಂದು ಇಗರ್ಜಿಯಲ್ಲಿ ಈ ಕನಸಿಗೆ ಚಾಚೂ ತಪ್ಪದಂತೆ ನಿಜವಾಗಿ ಸಮಾರಂಭ ನಡೆದು ಅದರ ಕೊನೆಗೆ ಕನಸಿನಲ್ಲಿ ಕಂಡ ವ್ಯಕ್ತಿ ಹಾಗೆಯೆ ಬಂದು ಅದೇ ಶಬ್ದಗಳಲ್ಲಿ ಏಳನೇ ಎಡ್ವರ್ಡನ ಮರಣವಾರ್ತೆಯನ್ನು ಅವರಿಗೆ ತಿಳಿಸಿದನು!

ಕಿಪ್ಲಿಂಗನ ಈ ಜ್ಞಾನದೃಷ್ಟಿಗೆ ಇನ್ನೂ ಉದಾಹರಣೆ ದೊರೆಯುತ್ತದೆ. ಅಟ್ಲಾಂಟಿಕ್ ಸಾಗರದ ಈ ದಂಡೆಯಿಂದ ಆ ದಂಡೆಗೆ ಟಪಾಲು ಹೊತ್ತ ಪ್ರಥಮ ವಿಮಾನವು ಸಾಗುವ ವರ್ಣನೆಯನ್ನಾತ ಕಲ್ಪನೆಯಿಂದ ಮನೋಹರವಾಗಿ ಬರೆದಿದ್ದ. ಎಷ್ಟೋ ಕಾಲದ ನಂತರ ನಿಜವಾಗಿ ಅಂಥ ಪ್ರಥಮ ಟಪಾಲುವಿಮಾನ ಹೊರಟಿತು. ಸೋಜಿಗವೆಂದರೆ ಆ ದಿನದ ಹವೆ, ವಾತಾವರಣ ಎಲ್ಲವೂ—ಮೂರಿಂಗ್ ಮಾಸ್ಟನ ಸ್ಥಿತಿ ಸಮೇತ—ಕಿಪ್ಲಿಂಗನು ಮುಂದಾಗಿ ವರ್ಣಿಸಿದಂತೆಯೆ ಇತ್ತು.

೧೯೧೧ ರಲ್ಲಿ "ಎಂದೂ ಮುಳುಗಲರಿಯದ" ಬ್ರಿಟಿಶ್ ಹಡಗ "ಟೈಟಾನಿಕ್" ತನ್ನ ಪ್ರಥಮ ಜಲಯಾನದಲ್ಲೇ ಹಿಮಗಡ್ಡೆಗೆ ಬಡಿದು ಮುಳುಗಿತು. ಅದಕ್ಕಿಂತ ಮೊದಲು ಬರೆದ ಮಾರ್ಗನ್

ರಾಬರ್ಟ್‌ಸನ್ನರ ಒಂದು ಕಾದಂಬರಿಯಲ್ಲಿ ಅಂಥದೇ ಭಾರೀ ಹಡಗು ಹಾಗೆಯೇ ಹಿಮಗಡ್ಡೆಗೆ ಬಡಿದು ಎರಡು ಸಾವಿರ ಜನರೊಡನೆ ಮುಳುಗುತ್ತದೆ. ಮತ್ತೆ ಅದರ ಹೆಸರು ಕೂಡ "ಟೈಟನ್" ಎಂದಿತ್ತು.

ಬ್ರಿಟಿಶ್ ಪತ್ತೇದಾರಿ ಕಾದಂಬರಿಕಾರ ಕಾನನ್ ಡ್ಯೈಲ್, ಬ್ರಿಟಿಶ್ ಲೇಖಕ ಎಚ್. ಜಿ ವೆಲ್ಸ್, ಫ್ರೆಂಚ್ ಲೇಖಕ ಜೂಲ್ಸ್ ವರ್ನ್ ಮೊದಲಾದ ಅನೇಕ ಲೇಖಕರು ಭವಿಷ್ಯತ್ತಿನ ಬಗ್ಗೆ ಬರೆದ ಸಂಗತಿಗಳು ಅಕ್ಷರಶಃ ಸತ್ಯವಾದ ಉದಾಹರಣೆಗಳು ಇವೆ. ಎಚ್. ಜಿ. ವೆಲ್ಸರು ಜರ್ಮನಿಯಲ್ಲಿ ಒಬ್ಬ ಸರ್ವಾಧಿಕಾರಿಯ ಉದಯವಾಗುವುದೆಂದು ಭವಿಷ್ಯ ಹೇಳಿ ಒಂದು "ಇತಿಹಾಸ" ಬರೆದರು. ಅದರಲ್ಲಿ ಆ ಸರ್ವಾಧಿಕಾರಿಯ ಹೆಸರು "ಬ್ಯಾಟ್ಲರ್" ಎಂದು! ಎಷ್ಟೋ ವರ್ಷಗಳ ನಂತರ ಯಾರೂ ಕಂಡು ಕೇಳಿರದಿದ್ದ ಒಬ್ಬ ಗಾರೆ ಬಳಿಯುವಾತ ನಿಜವಾಗಿ ಸರ್ವಾಧಿಕಾರಿಯಾದ. ಅವನ ಹೆಸರು "ಹಿಟ್ಲರ್" ನೆಂದಿತ್ತು. ಅಂತರ ಬಕಾರದ ಬದಲಿಗೆ ಹಕಾರ ಮಾತ್ರ.

*



## ೮೦ ನೇ ಪುಟದ "ನಿಮ್ಮ ಬುದ್ಧಿಬಲಕ್ಕೊಂದು ಸವಾಲು" ಎಂಬುದಕ್ಕೆ ಉತ್ತರ

ಮೊದಲನೇ ಪ್ರಶ್ನೆಗೆ ಪ್ರತ್ಯೇಕ ಉತ್ತರ ಅಗತ್ಯವಿಲ್ಲ. ನೀವೇ ಯೋಚಿಸಿದರೆ ಹೊಳೆಯುವುದು.

೨ನೇ ಸಮಸ್ಯೆಯಲ್ಲಿ ಕೊಟ್ಟ ಚಿತ್ರದಂತೆ ಪುಸ್ತಕಗಳನ್ನು ಜೋಡಿಸಿದಾಗ,

ಮೊದಲ ಪುಸ್ತಕದ ರಕ್ಷಾಕವಚದ ಮುಂಭಾಗ ಎರಡನೇ ಪುಸ್ತಕದ ರಕ್ಷಾಕವಚದ ಹಿಂಬದಿಯ ಭಾಗದಲ್ಲಿರುತ್ತದೆ. ಹಾಗೆಯೇ ಮೂರನೇ ಪುಸ್ತಕದ ಹಿಂಭಾಗದ ರಕ್ಷಾಕವಚ, ಎರಡನೆಯ ಪುಸ್ತಕದ ರಕ್ಷಾ ಕವಚದ ಮುಂಭಾಗದಲ್ಲಿ ಬರುತ್ತದೆ. ಆದ್ದರಿಂದ ಗೆದ್ದಲು ಹುಳುವು, ಮೊದಲ ಪುಸ್ತಕದ ರಕ್ಷಾಕವಚದ ಮುಂಭಾಗದಿಂದ ಹೊರಟು, ಎರಡನೆಯದನ್ನು ಕೊರೆದು, ಪಕ್ಕದಲ್ಲೇ ಇರುವ ಮೂರನೇ ಪುಸ್ತಕದ ರಕ್ಷಾ ಕವಚದ ಹಿಂಬದಿಯನ್ನು ಮುಟ್ಟುತ್ತದೆ. ಆದ್ದರಿಂದ ಹುಳುವು ಕೇವಲ ಎರಡನೇ ಪುಸ್ತಕವನ್ನು ಕೊರೆದು, ಮೊದಲನೆ ಪುಸ್ತಕದ ರಕ್ಷಾಕವಚದಿಂದ ಮುಂಭಾಗದಿಂದ ಹೊರಟು, ಮೂರನೇ ಪುಸ್ತಕದ ರಕ್ಷಾಕವಚದ ಹಿಂಬದಿಯನ್ನು ಮುಟ್ಟಲು, ಒಂದು ಇಂಚು ಇರುವ ಎರಡನೇ ಪುಸ್ತಕವನ್ನು ಮಾತ್ರ ಕೊರೆಯುತ್ತದೆ. ಆದ್ದರಿಂದ ಹುಳು ಒಂದು ಇಂಚು ಮಾತ್ರ ಕೊರೆಯುತ್ತದೆ.

ಮೂಲ ಹಿಂದಿ
ರಾಮನಾಥ ಸುಮನ್



ಅನುವಾದ
ರಾ. ನಾ. ರತನ್

# ಚೋರ ವ್ಯಾಪಾರಿಗಳ ಅದ್ಭುತ ಕಲ್ಪನೆಗಳು

ಮೃತ ಶಿಶುವಿನ ಹೊಟ್ಟೆಯಲ್ಲಿ ಅಫೀಮಿನ ಮುದ್ದೆಗಳು, ಬ್ರೆಡ್ಡಿನಲ್ಲಿ ಮತ್ತು ಶವದ ಪೆಟ್ಟಿಗೆಯಲ್ಲಿ ರತ್ನಗಳು, ಬ್ಲೌಜ್ ಕಾಲರುಗಳಲ್ಲಿ ಮುತ್ತಿನ ಸರಗಳು, ಸದ್ಯ ಶಸ್ತ್ರಕ್ರಿಯೆಯಾದ ಹೊಟ್ಟೆಯ ಗಾಯದಲ್ಲಿ ಪೇಪರ್-ಮಾರ್ಕ್ (ಜರ್ಮನಿ ನೋಟು) ಮುಂತಾದ ಕೈಚಳಕಗಳು ಚೋರ ವ್ಯಾಪಾರಿಗಳಿಗೆ ಸಾಧಾರಣ ಮಾತು.

ಅಂದಹಾಗೆ ನೂರಾರು ವರ್ಷಗಳಿಂದ ಈ ಕಳ್ಳ ಸಾಗಾಣಿಕೆ ವ್ಯಾಪಾರ ನಡೆದುಕೊಂಡು ಬಂದಿದೆ. ಒಂದಾನೊಂದು ಕಾಲದಲ್ಲಿ ಇದು ಸ್ಪೇನ್, ಇಂಗ್ಲಂಡ್, ಪೋರ್ಚುಗಾಲ್ ಜನರ ಪ್ರಮುಖ ವ್ಯಾಪಾರವಾಗಿತ್ತು. ತಸ್ಕರ-ನಾವಿಕರು ಗುಲಾಮರನ್ನು ಹಿಡಿದುಕೊಂಡು ಹೋಗಿ ಇತರ ದೇಶಗಳಲ್ಲಿ ಮಾರುತ್ತಿದ್ದರು. ಕಾನೂನಿಗೆ ವಿರುದ್ಧವಾಗಿ ಸಾಮಗ್ರಿಗಳನ್ನು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸಾಗಿಸುತ್ತಿದ್ದರು. ಆದರೆ ಆ ಕಾಲದಲ್ಲಿ ಇದೆಲ್ಲ ಒಂದು ಸಣ್ಣ ಶಕ್ತಿಶಾಲಿ ವರ್ಗದವರಿಗೆ ಮಾತ್ರ ಸೀಮಿತವಾಗಿತ್ತು. ಈಗ ಅದು ವ್ಯಾಪಕವಾಗಿ ಹರಡಿಬಿಟ್ಟಿದೆ. ಅದಕ್ಕೆ ತನ್ನದೇ ಒಂದು ಸಂಘಟನೆ ಬೇರೆ ಇದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಅದು ಕಾಲು ಚಾಚಿಬಿಟ್ಟಿದೆ. ಸ್ತ್ರೀಯರು, ಪುರುಷರು, ಮಕ್ಕಳು—ಈ ವೃತ್ತಿಯಲ್ಲಿ ಬಳಸಲ್ಪಡುತ್ತಿದ್ದಾರೆ.

ಹಲವು ವರ್ಷಗಳಾಯಿತು, ನಾನು ರೈಲಿನಿಂದ ಪ್ರಯಾಣ ಮಾಡುತ್ತಿದ್ದೆ. ಒಂದು ಜಂಕ್ಷನ್ ಸ್ಟೇಷನ್ನಿನಲ್ಲಿ ಗಾಡಿ ಬದಲಿಸಬೇಕಾಗಿತ್ತು. ಒಂದು ಬೆಂಚಿನ ಮೇಲೆ ನನ್ನ ಸಾಮಾನುಗಳನ್ನೊರಗಿಕೊಂಡು ಸಮಾಚಾರ ಪತ್ರಿಕೆ ಓದುತ್ತಿದ್ದೆ. ಇಷ್ಟರಲ್ಲಿ ಅತ್ತಲಿಂದ ಒಂದು ಪ್ಯಾಸೆಂಜರ್ ಗಾಡಿ ಬಂತು. ಸ್ವಲ್ಪ ಹೊತ್ತಿನಲ್ಲಿ ಒಂದು ಬೋಗಿಯ ಮುಂದೆ ಜನಜಂಗುಳಿ ಸೇರಿಬಿಟ್ಟಿತ್ತು, ಗಲಾಟೆಯೇ ಗಲಾಟೆ! ಸುಂಕದ ಅಧಿಕಾರಿಗಳು ಒಬ್ಬ ಸುಂದರ ಬುರ್ಕಾದವಳನ್ನು ಬಂಧಿಸಿದ್ದಾರೆಂದು ತಿಳಿದುಬಂತು. ಚಳಿಗಾಲ ಗಾಳಿ ತಣ್ಣಗೆ ಬೀಸುತ್ತಿತ್ತು. ಈ ಹೆಂಗಸು ಮಡಿಲಲ್ಲಿದ್ದ ತನ್ನ ಮಗುವನ್ನು ಎದೆಗವುಚಿ ಪೂರ್ತಿ ಹೊದ್ದಿಸಿ ರೈಲಿನ ಬಾಗಿಲ ಬಳಿ ಕುಳಿ



ತಿದ್ದಳು. ಗಾಡಿ ನಿಂತ ತಕ್ಷಣ ಧಕ್ಕೆಯುಂಟಾದ ಕಾರಣ ಮಗುವಿನ ತಲೆ ಜೋರಾಗಿ ಹೋಗಿ ಬಾಗಿಲಿಗೆ ಬಡಿಯಿತು. ಯಾರೋ ಚತುರಮತಿ ಎಕ್ಸೈಜ್ ಅಧಿಕಾರಿ ಕೆಲಸದ ಮೇಲೆ ಹಾಜರಿದ್ದ. ಇದನ್ನವನು ನೋಡಿದ. ಜೋರಾಗಿ ಬಡಿದರೂ ಮಗು ಅಳಲಿಲ್ಲ! ಇದರಲ್ಲಿ ಏನೋ ಕುಂಭಕೋಣ ನಡೆದಿದೆ ಎಂದು ಅವನಿಗೆ ಗೊತ್ತಾಗಿಹೋಯಿತು. ಝುಡಿ ಮಾಡಿ ನೋಡಿದರೆ, ಒಂದು ೩-೪ ತಿಂಗಳ ಮಗು ನಾಲ್ಕೈದು ಗಂಟೆ ಹಿಂದೆ ಸತು ಹೋಗಿದೆ ಅಥವಾ ಸಾಯಿಸಲ್ಪಟ್ಟಿದೆ. ಅದರ ಹೊಟ್ಟೆ ಕುಯ್ದು ಕರುಳನ್ನು ಹೊರಕ್ಕೆ ತೆಗೆದುಬಿಟ್ಟಿದ್ದಾರೆ. ಅದರಲ್ಲಿ ಅಫೀಮಿನ ಮೂರು ಮುದ್ದೆಗಳನ್ನು ತುಂಬಿ ಮೇಲಿಂದ ಪಟ್ಟಿ ಕಟ್ಟಿದ್ದಾರೆ!

ಕೆಲವು ದಿನಗಳ ಹಿಂದೆ ಮಧ್ಯಪ್ರದೇಶದಲ್ಲಿ ಒಬ್ಬನನ್ನು ಹಿಡಿದರು. ದೇವರು ಇವನನ್ನು ಸ್ಫುರದ್ರೂಪಿಯಾಗಿ ಸೃಷ್ಟಿಸಿದ್ದ. ಇವನು ತನ್ನ ಶರೀರದ ಮೇಲೆ ಅರ್ಧ ಅಂಗುಲ ದಪ್ಪ ಅಫೀಮಿನ ಲೇಪ ಬಳಿದುಕೊಂಡಿದ.

ಭಾರತದಲ್ಲಿ ಚಿನ್ನದ ಬೆಲೆ ಹೆಚ್ಚು. ಆದ್ದರಿಂದ ಚಿನ್ನ ಮತ್ತು ಚಿನ್ನದ ಪದಾರ್ಥಗಳನ್ನು ಇಲ್ಲಿಗೆ ಕದ್ದು ತರುವ ಪ್ರಯತ್ನಗಳು ಆಗಾಗ ನಡೆಯುತ್ತಿರುತ್ತವೆ. ಬೆಲ್ಜಿಯಂ, ಅಮೇರಿಕಾ, ಫ್ರಾನ್ಸ್ ಮುಂತಾದ ದೇಶಗಳಲ್ಲಿ ಮುತ್ತು-ರತ್ನಗಳ ಕಳ್ಳ ವ್ಯಾಪಾರ ಅಧಿಕವಾಗಿ ನಡೆಯುತ್ತದೆ. ರತ್ನಗಳನ್ನು ಸಾಮಾನ್ಯವಾಗಿ ಗಣಿಗಳಿಂದಲೇ ಹಾರಿಸಿಕೊಂಡು ಹೋಗುತ್ತಾರೆ. ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲ ಮತ್ತು ಬೇಚುವಾನಾಲ್ಯಾಂಡ್‌ಗಳಲ್ಲಿ ಇಂಥ ಅನೇಕ ಗಣಿಗಳಿವೆ. ಇಲ್ಲಿ ಗಣಿ ಕೆಲಸಗಾರರ ಮೇಲೆ ಬಲವಾದ ಕಾವಲು ಕಣ್ಣಿಟ್ಟಿರುತ್ತಾರೆ. ಈ ಪ್ರದೇಶವನ್ನೆಲ್ಲ ವಿದ್ಯುತ್ ಪ್ರವಾಹಯುಕ್ತ ತಂತಿ ಬೇಲಿಗಳಿಂದ ಆವರಿಸಿರುತ್ತಾರೆ ಮತ್ತು ಅಲ್ಲಿ ಬಲವಾದ ಪಹರೆಯಿರುತ್ತದೆ.

ಒಮ್ಮೆ ನಡೆದ ಸಂಗತಿ. ಅಗೆಯುವ ಕೆಲಸಗಾರರ ಬಿಡಾರದಲ್ಲಿ ಒಬ್ಬ ಸತ್ತುಹೋದ, ಸಾಲೋಥ ಬಂದರಿನಿಂದ ಒಂದು ಹೊಸ ಶವದ ಪೆಟ್ಟಿಗೆ ಈ ಹೆಣ ಸಾಗಹಾಕಲು ತರಿಸಲಾಯಿತು. ಶವವನ್ನು ಬಟ್ಟೆಯಿಂದ ಮುಚ್ಚಿದ ನಂತರ ಅದನ್ನು ಶವದ ಪೆಟ್ಟಿಗೆಯ ಸಮೇತ ಒಂದು ಲಾರಿಯ ಮೇಲೆ ಇರಿಸಿದರು. ಹಲವು ಜೊತೆಗಾರರು ಅದರ ಅಕ್ಕ ಪಕ್ಕದಲ್ಲಿ ಕುಳಿತುಕೊಂಡರು. ಶಿಬಿರದಿಂದ ಶವಯಾತ್ರೆ ಹೊರಟಿತು. ಈ ಪ್ರಪಂಚವನ್ನು ಪರಿತ್ಯಜಿಸುತ್ತಿರುವ ಬಡಪಾಯಿಗೆ ಕಾವಲುಗಾರನು ತನ್ನ ಶ್ರದ್ಧಾಂಜಲಿಯನ್ನರ್ಪಿಸಿದನು. ನಿಧಾನವಾಗಿ ಮೋಟಾರು ಲಾರಿ ಮುಂಸಾಗುತ್ತಾ ಮರಳ್ಗಾಡಿನಲ್ಲಿ ಹೋಗಿ ಕಣ್ಮರೆಯಾಯಿತು. ಹಲವು ಗಂಟೆಗಳ ನಂತರ ಆ ಶವದ ಪೆಟ್ಟಿಗೆಯಲ್ಲಿ ಹೆಣವಿರಲಿಲ್ಲವೆಂದು ತಿಳಿದುಬಂತು. ಅದು ಬದಲಾಗಿ ಗಣಿಯಿಂದ ಅಗೆದ ರತ್ನಯುಕ್ತ ಕಲ್ಲುಗಳ ರಾಶಿಯಿಂದ ತುಂಬಿತ್ತು!

ಒಬ್ಬ ಕಳ್ಳಸಾಗಾಣಿಕೆಗಾರನು ತನ್ನ ತೊಡೆಯನ್ನು ಕೊಯ್ದು ಗಾಯಮಾಡಿಕೊಂಡು ಅದರಲ್ಲಿ ಕೆಲವು ರತ್ನಗಳನ್ನು ಬಚ್ಚಿಟ್ಟ. ಔಷಧೋಪಚಾರದಿಂದ ಅದನ್ನು ಗುಣಪಡಿಸಿದ. ಸುಂಕ ಕಟ್ಟೆಯ ಅಧಿಕಾರಿಗಳ ಕಣ್ಣಿಗೆ ಮಣ್ಣೆರಚಿ ಹೊರಟುಹೋದ. ನಂತರ ಮಾಮೂಲಿ ಶಸ್ತ್ರಚಿಕಿತ್ಸೆ ಮೂಲಕ ಆ ರತ್ನಗಳನ್ನು ಹೊರಗೆ ತೆಗೆದುಕೊಂಡ.



ಕೆಲವು ಚೋರರು ಚಿನ್ನ, ವಜ್ರಗಳನ್ನು ನುಂಗಿಕೊಳ್ಳುತ್ತಾರೆ. ಯಾವಾಗ ಇವುಗಳನ್ನು ಎಕ್ಸರೇ ಮೂಲಕ ಪತ್ತೆ ಹಚ್ಚಲು ಆರಂಭಿಸಿದರೋ ಆಗ ಇವರೂ ಸಹ ಒಂದು ಉಪಾಯ ಕಂಡುಕೊಂಡರು. ಅವರು ಮೊದಲು ಎರಡು ಲೋಟ ನೀರು ಕುಡಿದು ನಂತರ ವಜ್ರಗಳನ್ನು ನುಂಗುತ್ತಾರೆ. ಮತ್ತೆ ನೀರು ಕುಡಿದುಬಿಟ್ಟರೆ ಎಕ್ಸರೇಯಲ್ಲಿ ಅಭಾವಾತ್ಮಕ ಪರಿಣಾಮವೇ ಹೊರಬರುತ್ತದೆ

ಒಬ್ಬ ಯಾತ್ರಿಕ ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದ. ಬಂದರನ್ನು ತಲುಪಲು ಇನ್ನು ಎರಡು ದಿನಗಳಿದವು. ಅಷ್ಟರಲ್ಲಿ ಅವನು ರೋಗಗ್ರಸ್ತನಾದ. ದಿನೇ ದಿನೇ ಸ್ಥಿತಿ ಬಿಗಡಾಯಿಸುತ್ತಿತ್ತು. ಅವನು ಬಹಳ ನಿಶ್ಯಕ್ತನಾಗಿಬಿಟ್ಟ. ಹಡಗಿನ ಕ್ಯಾಪ್ಟನ್ ಬಂದರಿನ ಅಧಿಕಾರಿಗಳಿಗೆ ರೋಗಿಯನ್ನು ಹೊತ್ತುಕೊಂಡು ಹೋಗಲು ಅಂಬ್ಯುಲನ್ಸ್‌ನ್ನು ಸಿದ್ಧವಾಗಿಡಿ ಎಂದು ತಂತಿ ಕೊಟ್ಟ. ಹಡಗು ಬಂದರನ್ನು ತಲುಪಿತು ಆ್ಯಂಬುಲೆನ್ಸ್‌ನವರು 'ರೋಗಿ'ಯನ್ನು ಎತ್ತಿಕೊಂಡು ಹೋದರು. ಸುಂಕದ ಕಟ್ಟೆ ಅಧಿಕಾರಿಗಳೂ ಅವನೊಡನೆ ಸಹಾನುಭೂತಿಯಿಂದ ವರ್ತಿಸಿದರು. ಲಕ್ಷಾಂತರ ಮೌಲ್ಯದ ರತ್ನಗಳನ್ನು ಸ್ಟ್ರೆಚರಿನ ಹಿಡಿಯಲ್ಲಿಟು ಹೊರಗೆ ತೆಗೆದುಕೊಂಡು ಹೊರಟುಹೋದ!

ಆಧ್ಧರೆ ಒಬ್ಬ ಹೆಂಗಸು ಇವರಿಗೂ ಮಿಗಿಲಾದ ಚತುರೆ. ಬಂದರಿನಲ್ಲಿ ಇಳಿಯುವುದಕ್ಕೆ ಮುಂಚೆ ಅವಳು ತನ್ನ ಮುದ್ದು ನಾಯಿಗೆ ಹಾಲಿನೊಡನೆ ಮುತ್ತಿನಸರವನ್ನೂ ಕುಡಿಸಿಬಿಟ್ಟಳು. ಸುಂಕದ ಕಟ್ಟೆ ಅಧಿಕಾರಿಗಳು ಸಾಮಾನುಗಳನ್ನು ಶೋಧಿಸಿದ ನಂತರ ಅವಳನ್ನು ಬಿಟ್ಟುಬಿಟ್ಟರು. ತನ್ನ ಸ್ಥಾನಕ್ಕೆ ಬಂದು ಅವಳು ನಾಯಿಗೆ ಭೇದಿ ಕೊಟ್ಟು ಹಾರವನ್ನು ಮರಳಿ ಪಡೆದಳು.



ಆದರೆ ಸುಂಕದ ಕಟ್ಟೆ ಅಧಿಕಾರಿಗಳಿಗೂ ಸಹ ಇವರ ರೋಮ ರೋಮದ ಪರಿಚಯವಿದೆ. ಸಂಯುಕ್ತರಾಷ ಅಮೇರಿಕಾದಲ್ಲಿ ಪ್ರತಿಷ್ಠಿತ ಫ್ರೆಂಚ್ ಸಜ್ಜನರೊಬ್ಬರು ವಾಸಮಾಡಿಕೊಂಡಿದ್ದರು. ಒಮ್ಮೆ ಅವರು ತಮ್ಮ ಪತ್ನಿಯೊಡಗೂಡಿ ಫ್ರಾನ್ಸಿನಿಂದ ನ್ಯೂಯಾರ್ಕಿಗೆ ಬಂದರು. ತಮ್ಮ ಬಳಿ ೪೦ ಪೌಂಡಿಗಿಂತ ಹೆಚ್ಚು ಸುಂಕದ ಪದಾರ್ಥಗಳಿಲ್ಲವೆಂದು ಘೋಷಿಸಿದರು. ಆದರೆ ಸುಂಕದಕಟ್ಟೆ ಅಧಿಕಾರಿಗಳಿಗೆ ಪ್ಯಾರಿಸಿನಿಂದ ಸಂಬಂಧಪಟ್ಟ ಪ್ರತಿಷ್ಠಿತರು ಪ್ಯಾರಿಸಿನ ಒಂದು ಸುಪ್ರಸಿದ್ಧ ರತ್ನದಂಗಡಿಯಿಂದ ಅನೇಕ ರತ್ನಾಭೂಷಣಗಳನ್ನು ಖರೀದಿ ಮಾಡಿದ್ದಾರೆಂದು ಕೇಬಲ್ ಬಂದಿತ್ತು. ಸುಂಕಕ್ಕಾಗಿ ಅವರು ಮುಂದಿಟ್ಟ ವಸ್ತುಗಳಲ್ಲಿ ಉದ್ದನೆಯ ಎರಡು ಸುಗಂಧದ ಶೀಶೆಗಳೂ ಇದ್ದವು. ಸುಂಕದ ಅಧಿಕಾರಿಗಳು ಅವರ ಪತ್ನಿಯನ್ನು ಕಾರ್ಯಾಲಯಕ್ಕೆ ಕರೆದುಕೊಂಡು ಹೋದರು. ಅಲ್ಲಿ ಒಬ್ಬ ಹೆಂಗಸು ಆಕೆಯನ್ನು ಶೋಧಿಸಿದಳು. ಆಕೆಯ ಸುಂದರ ಫ್ರಾನ್ಸ್ ಬ್ಲಾಜ್‌ನ ದಪ್ಪ ಕಾಲರಿನಲ್ಲಿ ಮೂವತ್ತು–ಮೂವತ್ತೈದು ಸಾವಿರ ಬೆಲೆ ಬಾಳುವ ಮುತ್ತಿನ ಸರವೊಂದು ಹೊರಬಂತು; ಅಲ್ಲದೆ ಸುಗಂಧದ ಶೀಶೆಗಳಲ್ಲಿ ಎರಡು ದೊಡ್ಡ ದೊಡ್ಡ ವಜ್ರಗಳಿದ್ದುದು ಪತ್ತೆಯಾಯಿತು.

ರೈಲುಗಾಡಿಯ ಶಯನ ಕಕ್ಷದಲ್ಲಿ ಒಬ್ಬ ಯಾತ್ರಿಕ ಮಲಗಿಕೊಂಡಿದ್ದಾನೆ. ಅವನ ಶರೀರವೆಲ್ಲ ಪಟ್ಟಿಗಳಿಂದ ಕಟ್ಟಲ್ಪಟ್ಟಿದೆ. ಸಂಪೂರ್ಣವಾಗಿ ವಿವಶನಾಗಿದ್ದಾನೆ. ಆದರೆ ಜರ್ಮನ್ ಅಧಿಕಾರಿಗಳು ಹಲವು ಬಾರಿ ಈ ವ್ಯಕ್ತಿ ಸ್ವಿಟ್ಜರ್‌ಲೆಂಡ್ ಮತ್ತು ಜರ್ಮನಿಗೆ ಹೋಗಿ ಬರುತ್ತಿದ್ದು

ದನ್ನು ಗಮನಿಸಿದ್ದಾರೆ. ಅವರಿಗೆ ಈಗ ಸಂದೇಹ ವಾಗಿದೆ. ಆದ್ದರಿಂದ ಪಟ್ಟಿಗಳನ್ನು ಬಿಚ್ಚಿ ಪರೀಕ್ಷೆ ಮಾಡಬಯಸುತ್ತಾರೆ.

ಯಾತ್ರಿಕನಿಗೆ ಕಷ್ಟ. ಆದರೆ ಅಧಿಕಾರಿಗಳ ಆಜ್ಞೆಯ ವಿರುದ್ಧ ಅವನೇನೂ ಮಾಡಲಾರ. ಹೊಟ್ಟೆಯ ದೊಡ್ಡ ಆಪರೇಷನ್ ಆದನಂತರ ಈ ರೀತಿ ಪಟ್ಟಿಗಳನ್ನು ಬಿಚ್ಚುವುದರಿಂದ ರೋಗಿ ಮರಣವನ್ನಪ್ಪಲೂಬಹುದು, ಅಲ್ಲದೆ ಇಲ್ಲಿ ವಿಶುದ್ಧ ಮತ್ತು ರೋಗಾಣು ರಹಿತ ಬೇರೆ ಪಟ್ಟಿಗಳೂ ಇಲ್ಲ ಎಂದು ಹೇಳಿ ಜೊತೆಯಲ್ಲಿ ಬಂದಿದ್ದ ನರ್ಸ್ ರೇಗಾಡುತ್ತಾಳೆ. ಆದರೆ ಅಧಿಕಾರಿಗಳು ಮೆಲ್ಲಮೆಲ್ಲನೆ ಪಟ್ಟಿಗಳನ್ನು ಕಿತ್ತು ಹಾಕುತ್ತಾರೆ. ನೋವು ತಾಳಲಾರದೆ ರೋಗಿ ಕಿರುಚಿಕೊಳ್ಳುತ್ತಾನೆ.

ಪಟ್ಟಿಗಳನ್ನು ಕಿತ್ತು ನಂತರ ಏನೂ ಸಿಗುವುದಿಲ್ಲ; ಆಗ ತಾನೆ ನಡೆಸಿದ ಶಸ್ತ್ರಕ್ರಿಯೆಯ ಗಾಯವೊಂದು ಕಂಡುಬರುತ್ತದೆ. ಅಧಿಕಾರಿಗಳು ಕ್ಷಮೆ ಕೋರುತ್ತಾರೆ. ಆದ್ದರಿಂದ ಅವರು ಒಂದು ರಿಸರ್ವ ಆದ ಬೋಗಿಯಲ್ಲಿ ಅವನು ಹೋಗಬೇಕಾಗಿದ್ದ ಬರ್ನ್ ಎಂಬಲ್ಲಿಗೆ ರವಾನಿಸಿ ಕೊಡುತ್ತಾರೆ ಸ್ಟೇಷನ್ ಬಿಡುತ್ತಲೇ ನರ್ಸ್ ಅವನನ್ನು ಪೂರ್ವ ನಿಶ್ಚಿತ ಪ್ರಸಿದ್ಧ ಸರ್ಜನ್‌ನ ನರ್ಸಿಂಗ್ ಹೋಂಗೆ ಕರೆದೊಯ್ಯುತ್ತಾಳೆ. ಅಲ್ಲಿ ಸದ್ಯ ಶಸ್ತ್ರ ಚಿಕಿತ್ಸೆಯಾದ ಗಾಯವನ್ನು ಬಿಚ್ಚಿ ಒಂದು ರೋಗಾಣುವಿರಹಿತ ರಬ್ಬರು ಚೀಲವನ್ನು ಹೊರ ತೆಗೆಯುತ್ತಾರೆ. ಈ ಚೀಲದಲ್ಲಿ ಒಂದು ಲಕ್ಷ ಪೇಪರ್ ಮಾರ್ಕ್ (ಜರ್ಮನಿ ನೋಟುಗಳು) ಗಳಿವೆ. ಇದು ಅವನ ಎಂಟನೆಯ ಶಸ್ತ್ರಚಿಕಿತ್ಸೆ!

ವಾಸ್ತವಿಕವಾಗಿ ಕಳ್ಳಸಾಗಣಿಕೆಯಲ್ಲಿ ಅದ್ಭುತ ಕಲ್ಪನೆಗೆ ಅತ್ಯಂತ ಮಹತ್ವವುಂಟು. ಕೆಲವೊಮ್ಮೆ ಒಂದೊಂದು ಕಲ್ಪನೆ ಲಕ್ಷಾಂತರ ರೂಪಾಯಿಯ ಕೆಲಸ ಮಾಡಿಬಿಡುತ್ತದೆ.

ನಾಜಿ ಜರ್ಮನಿಯ ಸಂಗತಿ. ಕರೆನ್ಸಿ ಹೊರಗೆ ಹೋಗದಿರಲೆಂದು ಅಧಿಕಾರಿಗಳು ಬಹು ಕ್ರೂರವಾಗಿ ವರ್ತಿಸುತ್ತಿದ್ದರು. ಜರ್ಮನಿಯಿಂದ ಹೊರಗೆ ಹೋಗುವ ಲಕೋಟೆಗಳ ಮೇಲೆ ಸೆನ್ಸಾರ್ ವಿಧಿಸಲಾಗಿತ್ತು. ಅವುಗಳನ್ನೊಡೆದು ನೋಡಿಕೊಳ್ಳುತ್ತಿದ್ದರು. ಇಂಥ ಪತ್ರಗಳ ಮೇಲೆ 'ಹಳದಿ ಲೇಬಲ್' ಮುದ್ರೆಯೊತ್ತುತ್ತಿದ್ದರು. ಅದರಲ್ಲಿ ಹೀಗಿರುತ್ತಿತ್ತು. 'ಕರೆನ್ಸಿ ನಿಯಂತ್ರಣದ ಕಾರಣ ಸರಕಾರದ ಕಡೆಯಿಂದ ಒಡೆಯಲಾಗಿತ್ತು.'

ಒಬ್ಬನ ಬಳಿ ಒಂದು ಲಕ್ಷ ಮಾರ್ಕುಗಳಿದ್ದವು. ಅದನ್ನವನು ಜರ್ಮನಿಯಿಂದ ಹೊರಗೆ ತೆಗೆದುಕೊಂಡು ಹೋಗಬೇಕೆಂದು ಯೋಚಿಸುತ್ತಿದ್ದ. ಆದರೆ ಕಾರ್ಯಗತವಾಗುವ ಉಪಾಯ ಯಾವುದೂ ಹೊಳೆಯುತ್ತಿರಲಿಲ್ಲ.

ಒಂದು ದಿನ ಆತ ಜ್ಯೂರಿಚ್‌ನ (ಸ್ವಿಜರ್ಲೆಂಡ್) ಉಪಾಹಾರ ಮಂದಿರವೊಂದರಲ್ಲಿ ಕುಳಿತು ಫಲಾಹಾರ ಸ್ವೀಕರಿಸುತ್ತಿದ್ದ. ಅವನ ಕೈಯಲ್ಲಿ ಆಗ ತಾನೆ ಬಂದಿದ್ದ ಒಂದು ಅಂಚೆ ಲಕೋಟೆಯಿತ್ತು. ಅದರ ಮೇಲೂ ಮೇಲಿನ ಲೇಬಲ್ ಮುದ್ರೆಯಿತ್ತು. ಇದ್ದಕ್ಕಿದ್ದಂತೆ ಅವನ ಬುರುಡೆಗೆ ಯಾವುದೋ ಒಂದು ಕಲ್ಪನೆ ವಿದ್ಯುತ್ ಪ್ರವಾಹದಂತೆ ಮಿಂಚಿಹೋಯಿತು! ತಕ್ಷಣ ಅವನು ಒಂದು ಪ್ರಸಿದ್ಧ ಮತ್ತು ಸರಕಾರಿ ವಲಯಗಳಲ್ಲಿ ಪ್ರಿಯವಾದ ಹಾಗು ಸುರಕ್ಷಿತ ಜರ್ಮನ್ ಪತ್ರಿಕೆಯ 'ಸ್ಥಳ ಖಾಲಿಯಾಗಿದೆ' ಎಂಬ ಕಾಲಮಿನಲ್ಲಿ "ವಿಜ್ಞಾಪಕನಿಗೆ ಸ್ವಿಟ್ಜರ್‌ಲೆಂಡ್‌ನಲ್ಲಿ ಕೆಲಸ ಮಾಡಲು ಒಬ್ಬ ಪ್ರಥಮ ದರ್ಜೆಯ ವ್ಯಾಪಾರಿ ಪ್ರತಿನಿಧಿಯ ಆವಶ್ಯಕತೆಯಿದೆ. ಯೋಗ್ಯ ಸಂಭಾವನೆ ಮತ್ತು ಕಮೀಶನ್ ಕೊಡಲಾಗುವುದು" ಎಂದು ಜಾಹೀರಾತು ಕೊಟ್ಟ. ಸಾಧಾರಣ ನಿಯಮದಂತೆ ಒಂದು ಬಾಕ್ಸ್ ನಂಬರ್ ಕೊಟ್ಟು ಅದೇ ಪತ್ರಿಕೆಯ ಕಾರ್ಯಾಲಯದ ವಿಳಾಸಕ್ಕೆ ಆವೇದನ ಪತ್ರಗಳು ಬರುವಂತೆ ಏರ್ಪಾಡಾಯಿತು.

ಈಗ ಮನೆಗೆ ಹೋಗಿ ಅವನು ೧೦೦ ಲಕೋಟೆಗಳನ್ನು ಅದೇ ವಿಳಾಸಕ್ಕೆ ತಾನೇ ರವಾನಿಸಿಬಿಟ್ಟ. ಪ್ರತಿಯೊಂದು ಲಕೋಟೆಯಲ್ಲಿ ೧೦೦೦ ಮಾರ್ಕ್‌ಗಳಿದ್ದವು. ಮಾರನೇ ದಿನ ರೈಲಿನಿಂದ

ಸ್ವಿಟ್ಜರ್‌ಲಂಡಿಗೆ ಹೊರಟುಹೋದ. ಅಲ್ಲಿ ಜ್ಯೂರಿಚ್‌ನಿಂದ ಅವನು ಆ ಸಮಾಚಾರ ಪತ್ರಿಕೆಗೆ ತಾನು ಯಾವುದೋ ಕಾರ್ಯಕ್ಕಾಗಿ ಇಲ್ಲಿಗೆ ಬಂದಿರುವೆನೆಂದೂ ಹಲವಾರು ದಿನಗಳು ಇಲ್ಲಿಯೇ ಇರಬೇಕಾಗಿದೆಯಾದ್ದರಿಂದ ತನ್ನ ವಿಜ್ಞಾಪನೆಗೆ ಉತ್ತರವಾಗಿ ಬಂದ ಟಪಾಲುಗಳನ್ನೆಲ್ಲ ದಯವಿಟ್ಟು ಜ್ಯೂರಿಚ್‌ಗೆ ಕಳುಹಿಸಿಕೊಡಿರೆಂದೂ ಪತ್ರ ಬರೆದ. ಆ ಸಮಾಚಾರ ಪತ್ರಿಕೆಯಿಂದ ಬರುವ ಪತ್ರಗಳು ಸೆನ್ಸಾರ್ ಆಗುವುದಿಲ್ಲ; ಏಕೆಂದರೆ ಅದು ಸರಕಾರದ ನೀತಿಯನ್ನು ಅತಿ ಉಗ್ರವಾಗಿ ಸಮರ್ಥಿಸುತ್ತದೆ ಎಂದು ಅವನಿಗೆ ಗೊತ್ತಿತ್ತು.

ಇಂಥ ಕಳ್ಳ ವ್ಯಾಪಾರಗಳು ಹೆಚ್ಚಲಾರಂಭಿಸಿದಾಗ ರೀಖ್ (ಜರ್ಮನಿಯ ಸರಕಾರಿ ಬ್ಯಾಂಕ್)ದ ಅರ್ಥವಿಶೇಷಜ್ಞರಾದ ಡಾ. ಶಾಖ್ತರು, ಯಾರೂ ದೇಶದ ಹೊರಗೆ ಹಣರಾಶಿಯನ್ನು ಸಾಗಿಸಿಕೊಂಡು ಹೋಗಿದ್ದಾರೋ ಅವರು ನಿಗದಿಯಾದ ಕಾಲದೊಳಗೆ ತಮ್ಮ ಅಪರಾಧವನ್ನು ಸ್ವೀಕರಿಸಿ ಪುನಃ ಆ ಧನರಾಶಿಯನ್ನು ಮರಳಿ ತಂದರೆ ಅವರಿಗೇನೂ ಶಿಕ್ಷೆ ವಿಧಿಸುವುದಿಲ್ಲ ಎಂದು ಘೋಷಿಸಿದರು.

ಈ ಘೋಷಣೆಯನ್ನು ಬಳಸಿಕೊಂಡು ಅಪಾರ ಲಾಭ ಗಳಿಸಿದ ಓರ್ವ ಚತುರ ವ್ಯಕ್ತಿಯ ಕುಶಾಗ್ರಮತಿಯನ್ನು ಕಂಡು ಜರ್ಮನ್ ಅಧಿಕಾರಿಗಳು ಬೆಕ್ಕುಬೆರಗಾದರು!

ಆ ವ್ಯಕ್ತಿಯು ಅಧಿಕಾರಿಗಳ ಬಳಿಗೆ ಬಂದು ತಾನು ದೇಶದಿಂದ ಹೊರಗೆ ಕಳ್ಳತನದಲ್ಲಿ ಹಣವನ್ನು ಸಾಗಿಸಿದವನೆಂದು ಹೇಳಿ ಅಪರಾಧವನ್ನು ಒಪ್ಪಿಕೊಂಡನು. ಆ ಹಣದಲ್ಲಿ ಐವತ್ತು ಸಾವಿರ ಮಾರ್ಕ್‌ಗಳನ್ನು ಜ್ಯೂರಿಚ್‌ನಲ್ಲಿ ಸೇಫ್ ಡಿಪಾಜಿಟ್ಟಿನಲ್ಲಿಟ್ಟಿದ್ದೇನೆಂದು ತಿಳಿಸಿ ಈಗ ಏನು ಮಾಡಬೇಕೆಂದು ಅಧಿಕಾರಿಗಳನ್ನು ಕೇಳಿದ

ಜ್ಯೂರಿಚ್‌ನ ಜರ್ಮನ್ ರಾಯಭಾರಿ ವರ್ಗಕ್ಕೆ ಪತ್ರ ಬರೆಯಿರಿ, ಅವರು ಅಲ್ಲಿಂದ ಹಣ ತೆಗೆದುಕೊಂಡು ಇಲ್ಲಿಗೆ ರವಾನಿಸಿಬಿಡುತ್ತಾರೆ ಎಂಬುದಾಗಿ ಅಧಿಕಾರಿಗಳು ತಿಳಿಸಿದರು. ಅದಕ್ಕವನೆಂದ— "ಆದರೆ ಒಂದು ತೊಂದರೆಯುಂಟು, ನನ್ನ ಹೊರತು ಬೇರಾರಿಗೂ ಅಲ್ಲಿಯವರು ಹಣ ಕೊಡುವುದಿಲ್ಲ. ನಾನು ಆ ರೀತಿ ಆದೇಶ ನೀಡಿದ್ದೇನೆ. ಆದ್ದರಿಂದ ನೀವು ಹೇಳಿದರೆ ಸ್ವಯಂ ನಾನೇ ಮೋಟಾರಿನಲ್ಲಿ ಜ್ಯೂರಿಚ್‌ಗೆ ಹೋಗಿ ಆ ಹಣವನ್ನು ತಂದುಬಿಡುತ್ತೇನೆ. ಬೇಕಾದರೆ ರೀಖ್ ಬ್ಯಾಂಕಿನ ಒಬ್ಬ ಪ್ರತಿನಿಧಿಯನ್ನು ನಿಮ್ಮ ಧೈರ್ಯಕ್ಕಾಗಿ ನನ್ನೊಡನೆ ಕಳುಹಿಸಿಕೊಡಿ." ಅಧಿಕಾರಿಗಳು ಒಪ್ಪಿಕೊಂಡರು.

ರೀಖ್ ಬ್ಯಾಂಕಿನ ಅಧಿಕಾರಿಯೊಬ್ಬ ಅವನೊಡನೆ ಇದ್ದುದರಿಂದ ಆ ಮನುಷ್ಯ ಯಾವ ತೊಂದರೆ—ತಕರಾರು ಇಲ್ಲದೆ ಗಡಿ ದಾಟಿ ಸ್ವಿಟ್ಜರ್‌ಲೆಂಡನ್ನು ಪ್ರವೇಶಿಸಿದ. ಒಂದು ಸ್ವಿಸ್ ಛತ್ರದ ಬಳಿ ಗಾಡಿಯನ್ನು ನಿಲ್ಲಿಸಿದ, ತಾನು ಉಪಾಹಾರ ಸ್ವೀಕರಿಸಿದ; ಅಧಿಕಾರಿಗೂ ಕೊಡಿಸಿದ ನಂತರ ಅವನನ್ನು ಕುರಿತೆಂದ— "ಈಗ ದಯವಿಟ್ಟು ನೀವು ಹಿಂತಿರುಗಿ ಹೋಗಿ."

ಚಕಿತನಾದ ಬ್ಯಾಂಕ್ ಅಧಿಕಾರಿ ಕೇಳಿದ— "ಜ್ಯೂರಿಚ್‌ನಲ್ಲಿಟ್ಟಿರುವ ಐವತ್ತು ಸಾವಿರ ಮಾರ್ಕ್?"

ಮುಗುಳ್ನಕ್ಕು ಅವನು ಉತ್ತರಿಸಿದ— "ಅವು ಎಂದೂ ಅಸ್ತಿತ್ವದಲ್ಲೇ ಇರಲಿಲ್ಲ! ಅದೆಲ್ಲ ಬರೀ ಬುರುಡೆ!"

"ಹಾಗಾದರೆ ಈ ಪ್ರಯಾಣ ಏಕೆ?"

"ಏಕೆಂದರೆ ಇಡೀ ನನ್ನ ಜೀವಮಾನದ ಗಳಿಕೆಯಾದ ಇಪ್ಪತ್ತು ಲಕ್ಷ ಮಾರ್ಕ್‌ಗಳನ್ನು ಜರ್ಮನಿಯಿಂದ ಹೊರಗೆ ತೆಗೆದುಕೊಂಡು ಹೋಗಬಯಸಿದೆ. ನಾನು ನಿಮಗೆ ತುಂಬಾ ಕೃತಜ್ಞನಾಗಿರುತ್ತೇನೆ. ಏಕೆಂದರೆ ನೀವಿದ್ದುದರಿಂದಲೇ ಗಡಿ ಪ್ರದೇಶದಲ್ಲಿ ಯಾವ ತಡೆ-ತಕರಾರು ಇಲ್ಲದೆ ಈ ಮೋಟಾರು ಗಾಡಿಯಲ್ಲಿ ಬಚ್ಚಿಟ್ಟ ಆ ಧನರಾಶಿ ಇಲ್ಲಿಗೆ ಸುರಕ್ಷಿತವಾಗಿ ಬಂದು ತಲುಪಿತು. ಈಗ ನನಗೆ ಜರ್ಮನಿಗೆ ಮರಳುವ ಇಚ್ಛೆಯಿಲ್ಲ. ಮಿತ್ರರೆ! ಧನ್ಯವಾದ!

*

# ನಗೆಮಲ್ಲಿಗೆ

"ರಾಯರೇ, ಹೋದವಾರ ನಿಮ್ಮ ಬಳಿ ಹತ್ತು ರೂಪಾಯಿ ಕೈಗಡವನ್ನು ನಾನು ಇಸಿದುಕೊಳ್ಳಲಿಲ್ಲವೆ?"

"ಛೇ, ಇಲ್ಲವಲ್ಲ."

"ಓ, ನೋಡಿದಿರಾ, ಎಷ್ಟು ಮರೆವು! ಹಾಗಾದರೆ ಈಗ ಕೊಡಿ."

— ಎಂ. ಟಿ. ಆರ್. ಪ್ರಸಾದ

ಇಂಗ್ಲಂಡಿನ ರಾಜನಾದ ೪ನೇ ವಿಲಿಯಮ್‌ನು ಒಮ್ಮೆ ಅಮೇರಿಕೆಗೆ ಹೋಗಿದ್ದನು. ಅಲ್ಲಿ ಅವನು ಒಂದು ದಿನ ಕ್ಷೌರಿಕನ ಅಂಗಡಿಗೆ ಹೋದನು. ಕ್ಷೌರವಾದ ನಂತರ ಅವನು ಖುರ್ಚಿಯಿಂದ ಏಳುತ್ತಲೇ ಎದುರಿನ ಕನ್ನಡಿಯಲ್ಲಿ ಕ್ಷೌರಿಕನ ಸುಂದರ ಹೆಂಡತಿ ಕಾಣಿಸಿದಳು. ರಾಜನು ಅವಳನ್ನು ಒಮ್ಮೆಲೆ ಚುಂಬಿಸಿದನು. ಮತ್ತು ಅವಳನ್ನುದ್ದೇಶಿಸಿ, "ಇಂಗ್ಲಂಡಿನ ರಾಜನು ಅಮೇರಿಕೆಯ ಕ್ಷೌರಿಕನ ಹೆಂಡತಿಗೆ ಮುತ್ತನ್ನು ಕಾಣಿಕೆಯಾಗಿ ಕೊಟ್ಟಿದ್ದಾನೆಂದು ನಿನ್ನ ದೇಶದ ಸ್ತ್ರೀಯರಿಗೆ ಹೇಳು" ಎಂದು ಅಂದನು.

ತನ್ನ ಎದುರು ನಡೆದ ತನ್ನ ಹೆಂಡತಿಯ ಅಪಮಾನವನ್ನು ಸಹಿಸದ ಕ್ಷೌರಿಕನು ರಾಜನನ್ನು ಒದ್ದನು. ಮತ್ತು ಅವನನ್ನುದ್ದೇಶಿಸಿ, "ಅಮೇರಿಕೆಯ ಒಬ್ಬ ಕ್ಷೌರಿಕನು ಇಂಗ್ಲಂಡಿನ ರಾಜನಿಗೆ ಒದ್ದನೆಂದು ನಿನ್ನ ದೇಶದ ಸ್ತ್ರೀಯರಿಗೆ ಹೇಳು" ಎಂದು ಹೇಳಿದನು.

— ಪಿ. ಕೆ. ಕೊಟ್ಟಲಗಿ

ಸೈನ್ಯಕ್ಕಾಗಿ ಜನರನ್ನು ಸೇರಿಸಿಕೊಳ್ಳುವ ಕೆಲಸ ನಡೆದಿತ್ತು. ಸಾರ್ಜಂಟರು ಒಬ್ಬ ಉಮೇದವಾರನನ್ನು ಕೇಳಿದರು: "ಏನು ಬಿ. ಎ. ಪಾಸು ಮಾಡಿದ್ದೀರಾ?"

"ಹೌದು ಸರ್, ಮುಂಬಯಿ ವಿಶ್ವವಿದ್ಯಾಲಯದ ಪಧವೀಧರ ನಾನು."

"ಸರಿ. ಸರಿ." ಎಂದು ಫಾರ್ಮಿನ ಮೇಲೆ ಬರೆದುಕೊಳ್ಳುತ್ತ ಸಾರ್ಜಂಟರು ಪ್ರಶ್ನಿಸಿದರು: "ಸಾಕ್ಷರರು ತಾನೆ?"

* *

ಹುಚ್ಚರ ಅಸ್ಪತ್ರೆಯ ಒಬ್ಬ ರೋಗಿ, ಮತ್ತೊಬ್ಬ ರೋಗಿಯನ್ನು ಕುರಿತು, ಹೇಳಿದ: "ಲೋ ತಿಮ್ಮ, ನಮ್ಮ ಪಕ್ಕದ ಹಾಸಿಗೆ ಮಂಚಯ್ಯ ನಿನ್ನೆ ಸತ್ತು ಹೋದನಲ್ಲಾ, ಅವನ್ನ ಕುಯ್ದು ಫಜೀತಿಮಾಡಿ ಏನೋ ಪರೀಕ್ಷೆ ಮಾಡಿಬಿಟ್ಟರಂತೆ ಕಣೋ"

ತಿಮ್ಮ— ಅರೆರೆ ಅದೇಗೊ ಕುಯ್ದರೊ?

ಮೊದಲಿನ ರೋಗಿ- ಹೇ ಅಷ್ಟು ಗೊತ್ತಾಗಲ್ವೇನೋ, ಜ್ಞಾನ ತಪ್ಪಿಸಿ ಕುಯ್ದಿರಬೇಕು.

— ಎನ್. ಎಸ್. ರಾಮೇಗೌಡ

ಕಳೆದ ವಾರ ಒಂದು ಸಂಜೆ ನನ್ನ ಮಿತ್ರನೊಡನೆ ತಿರುಗಾಡಲು ಹೊರಟಿದ್ದೆ. ನನ್ನ ಮಿತ್ರನೊಡನೆ ಅವನ ಚಿಕ್ಕ ಮಗನೂ ಹೊರಟಿದ. ದಾರಿಯಲ್ಲಿ ಪೋಲಿಸನು ಕೈದಿಯೋರ್ವನನ್ನು ಸಂಕಲೆ ಬಿಗಿದು ಕೊಂಡೊಯ್ಯುತ್ತಿರುವುದನ್ನು ಕಂಡ ನನ್ನ ಮಿತ್ರನ ಹುಡುಗ: "ಆತನನ್ನು ಎಲ್ಲಿಗೆ ಕೊಂಡೊಯ್ಯುತ್ತಾರೆ" ಎಂದು ಕೇಳಿದ.

ನನ್ನ ಮಿತ್ರ ಗಂಭೀರ ಸ್ವರದಿಂದ, "ಅವನನ್ನು ಸಾಧಾರಣದ ಸ್ಥಳಕ್ಕೆ ಕೊಂಡೊಯ್ಯುತ್ತಿಲ್ಲ! ಆ ಸ್ಥಳದಲ್ಲಿ ಹಗಲಿನಲ್ಲೂ ಕತ್ತಲಿರುತ್ತದೆ. ಅಲ್ಲಿ ಬೇಕಾದ ರೀತಿಯ ಊಟ, ಉಪಚಾರ, ಮಲಗಲು ಹಾಸಿಗೆ ಮೊದಲಾದುವುಗಳಿಲ್ಲ. ನುಸಿ, ತಿಗಣೆಗಳ ಕಾಟ ಆ ಸ್ಥಳದಲ್ಲಿ ಬಹಳವಾಗಿರುತ್ತದೆ" ಎಂದು ಅವನನ್ನು ಹೆದರಿಸಿದ.

ಆಗ ಅವನ ಮಗ ಮುಗ್ಧಭಾವದಿಂದ ಕೇಳಿದ: "ಹಾಗಾದರೆ ಅವನನ್ನು ನಮ್ಮ ಮನೆಗೇ ಕರಕೊಂಡು ಹೋಗುತ್ತಿದ್ದಾರೊ ?"

—ನಾಗೇಶರಾವ್

ನಮ್ಮೂರ ಅನುಭವಿ ವೃದ್ಧರೊಬ್ಬರು ಯಾವಾಗಲೂ ನವಯುವಕರಿಗೆ ಬುದ್ಧಿವಾದಗಳನ್ನು ಹೇಳುವಾಗ "ಮುಖ್ಯವಾಗಿ ಒಂದು ವಿಷಯ ಏನೆಂದರೆ— ಯಾವುದೇ ಕೆಲಸವನ್ನು ಬುಡದಿಂದ ಕಟ್ಟಲು ಪ್ರಾರಂಭಿಸಬೇಕು" ಎಂಬುದಾಗಿ ಉಪದೇಶವನ್ನು ಕೊಡಲು ಮರೆಯುತ್ತಿರಲಿಲ್ಲ. ಆದರೆ ಒಂದು ಬಾರಿ ಅವರಿಗೆ ಸರಿಯಾದ ತಿರುಮಂತ್ರ ಹಾಕುವ ಶಿಷ್ಯರು ದೊರಕಿದರು. ಅವರು ಬಾವಿ ತೋಡುವ ಕೆಲಸಗಾರರಾಗಿದ್ದರು.

—ಬಿ. ಸಚ್ಚಿದಾನಂದ ಹೆಗಡೆ

ಶಿಕ್ಷಕ- ಗೋವಿಂದಾ, ನೀರು ಬರ್ಫವಾಯಿತೆಂದರೆ ಏನಾದಂತಾಯಿತು ?

ಗೋವಿಂದ- ಅದರ ಬೆಲೆಯಲ್ಲಿ ಬದಲಾವಣೆಯಾಯಿತು

* *

ಊರ ಪಟೇಲನ ಕುದುರೆಯನ್ನು ಊರಿನಲ್ಲಿ 'ಪುಂಡ'ನೆನ್ನಿಸಿಕೊಂಡಿದ್ದ ನಿಂಗ ಕದ್ದು ಕುದುರೆಯ ಬಾಲವನ್ನು ಕತ್ತರಿಸಿಬಿಟ್ಟ. ಪಟೇಲ ನಿಂಗನ ಮೇಲೆ ಅಮಲ್ದಾರರಲ್ಲಿ ದೂರನ್ನು ಕೊಂಡೊಯ್ದ.

"ಅದು ನಿನ್ನದೇ ಕುದುರೆ ಎನ್ನಲು ಸಾಕ್ಷ್ಯವೇನು ?" ಅಮಲ್ದಾರರು ಕೇಳಿದರು.

"ಮಗ್ಗಲುಮನೆ ಶೆಟ್ಟರೇ ಅದಕ್ಕೆ ಸಾಕ್ಷಿ" ಎಂದ ಪಟೇಲ.

"ನನಗೂ ಶೆಟ್ಟರೇ ಸಾಕ್ಷಿ" ಎಂದು ನಿಂಗನೂ ಅವರ ಹೆಸರನ್ನೇ ಹೇಳಿದ.

ಸಾಕ್ಷ್ಯ ನುಡಿಯಬೇಕಾದ ಶೆಟ್ಟರು ಈಗ ಪೇಚಿನಲ್ಲಿ ಸಿಕ್ಕುಬಿದ್ದರು. ಕಡೆಗೆ ಅವರಿಗೆ ಒಂದು ಉಪಾಯ ಹೊಳೆಯಿತು. ಅಂತೆಯೇ, "ಮಹಾಸ್ವಾಮಿಯವರು ಲಾಲಿಸಬೇಕು... ಕುದುರೆಯ ಮುಂಭಾಗ ಪಟೇಲರ ಕುದುರೆಯಂತಿದೆ, ಹಿಂಭಾಗ ನಿಂಗಪ್ಪನವರ ಕುದುರೆಯಂತಿದೆ" ಎಂದು ಸಾಕ್ಷ್ಯ ನುಡಿದರು. ಕುಶಲಮತಿಗಳಾದ ಅಮಲ್ದಾರರು 'ಪಟೇಲರ ಕುದುರೆಯ ಬಾಲವನ್ನು ನಿಂಗ ಕತ್ತರಿಸಿದ್ದಾನೆ. ಅವನ ಕೃತ್ಯವೇ ಅದು' ಎಂದು ಶೆಟ್ಟರು ಬಹಳ ಚಾತುರಿಯಿಂದ ಅಂದುದನ್ನು ಗ್ರಹಿಸಿ ನಿಂಗನನ್ನು ದಂಡಿಸಿ ಶೆಟ್ಟರನ್ನು ಸನ್ಮಾನಿಸಿದರು.

—ಬಿ. ಆರ್. ಶಂಕರ



ಪ್ರಚಂಡ ಸರ್ಕಸ್

ಅಲ್ಲಿ ಪ್ರಾಣಿಗಳ
ಗೋರಿಗಳು ಇವೆ





# ಪ್ಯಾರೀಸಿನ ಪ್ರಾಣಿಗಳ ಸ್ಮಶಾನ

ರಾ. ಕ. ನಾಯಕ

ನೀವು ಹಳ್ಳಿಯಲ್ಲಿ ಕೆಲ ಕಾಲ ಇದ್ದಿದ್ದರೆ ನೀವು ಇದ್ದಾಗಲೇ ಒಬ್ಬಾನೊಬ್ಬ ರೈತನ ಮುದಿ ಎತ್ತು ಸತರೆ ಅದನ್ನಾತ ಆತ್ಮೀಯಭಾವದಿಂದ ಗಾಡಿಯಲ್ಲಿ ಹಾಕಿ ಒಯ್ದು ಕುಟುಂಬೀಯನೊಬ್ಬನನ್ನೇ ಹೂಳುವಂತೆ ತನ್ನ ಹೊಲದಲ್ಲಿ ಹೂಳಿ ಅದರ ಗೋರಿ ಕಟ್ಟುವುದನ್ನು ನೋಡಿರಬಹುದು. ಇಲ್ಲ, ಮನೆಗೆ ದೊಡ್ಡ ಹಿತ್ತಲಿದ್ದರೆ ಬೆಕ್ಕು ನಾಯಿಗಳನ್ನು ಸಾಕುವ ಅಭಿರುಚಿ ನಿಮಗಿದ್ದರೆ ನೀವು ಸಾಕಿದ ನಾಯಿ-ಬೆಕ್ಕಿನ ಮರಿ ಸತ್ತರೆ ಆಗ ಅದನ್ನು ಹಿತ್ತಲಲ್ಲಿ ಗಿಡದ ಬುಡದಲ್ಲಿ ಹುಗಿಯುತ್ತೀರಿ. ಬಹುಶಃ ನಿಮ್ಮ ಬಾಲ್ಯದಲ್ಲಿ ಇಂಥ ಘಟನೆ ಜರುಗಿದ್ದರೆ ನೀವು ಹಿತ್ತಲಲ್ಲಿ ಆ ಗಿಡದ ಬುಡದಲ್ಲಿ ನೋಡುತ್ತ ನಿಂತ ಸನ್ನಿವೇಶಗಳೆಷ್ಟೋ ನಡೆದಿರಲೂಬಹುದು.

ಪ್ರಾಣಿಗಳನ್ನು ಆತ್ಮೀಯಭಾವದಿಂದ ಸಾಕುವ ಹೂಳುವ ರೂಢಿ ನಮಗೇನೂ ಹೊಸದಲ್ಲವಾದರೂ ಪ್ಯಾರೀಸಿನಲ್ಲಿ ಪ್ರಾಣಿಗಳ ಸ್ಮಶಾನಭೂಮಿಯೊಂದಿದ್ದು ಪ್ರಯಾಣಕರು ಅಲ್ಲಿ ಹೋದಾಗ ಅದನ್ನು ನೋಡಲಿಕ್ಕೆ ಮರೆಯುವುದಿಲ್ಲವೆಂಬುದು ತುಸು ಆಶ್ಚರ್ಯಕರವೆನ್ನಿಸುವುದಲ್ಲವೆ ?

ಈ ಸ್ಮಶಾನಸ್ಥಾನವು ಒಂದು ಸಂಸ್ಥೆಯಾಗಿ ಕೆಲಸ ಮಾಡುತ್ತದೆ. ಪ್ಯಾರೀಸಿನ ಅಸ್ನಿಯರ್ಸ್ (Asnieres) ಎಂಬ ಉಪನಗರದಲ್ಲಿ ಈ ಸ್ಮಶಾನಭೂಮಿ ಇದೆ. ಇಲ್ಲಿ ೪೦,೦೦೦ ಕ್ಕೂ ಮೇಲ್ಪಟ್ಟು ಪ್ರಾಣಿಗಳು ಚಿರ ನಿದ್ರೆಯಲ್ಲಿ ಪವಡಿಸಿವೆ. ಅವುಗಳಲ್ಲಿ ನಾಯಿಗಳು, ಬೆಕ್ಕುಗಳು, ಕೋಳಿಗಳು, ಕೋತಿಗಳು, ಮೊಲಗಳು, ಗಿಳಿಗಳು, ಸಿಂಹ, ಕುದುರೆ ಎಲ್ಲ ಬಗೆಯ ಪ್ರಾಣಿಗಳಿವೆ. ರಿನ್-ಟಿನ್-ಟಿನ್ ಎಂಬ ಹಾಲಿವುಡ್ಡಿನ ಚಲಚ್ಚಿತ್ರಗಳಲ್ಲಿ ನಟಿಸಿ ಜನಪ್ರಿಯವಾದ ನಾಯಿ ಇದೆ. "ನಾನೆಂತು ನಿನ್ನನ್ನು ಮರೆಯಲಿ ?" ಎಂದು ಮರುಗಿ ಯಜಮಾನಿ ೧೮ ವರ್ಷಗಳ ಹಿಂದೆ ಹುಗಿದು ಹೋದ ಕೊಕೆಟ್ ಎಂಬ ಕೋಳಿ ಇದೆ. ೧೯೨೦ ರಲ್ಲಿ ದೊಡ್ಡ ರೇಸಿನಲ್ಲಿ ವಿಜಯಿಯಾದ, ಒಂದು ರೇಸಿನಲ್ಲೆ ಮುಂದೆ ವೀರಸ್ವರ್ಗ ಪಡೆದ ಟ್ರಾಯ್‌ಟೌನ್ ಎಂಬ ಕುದುರೆ ಇದೆ. ಮತ್ತು ಈ ಸ್ಮಶಾನ ಭೂಮಿಯ ಸ್ಥಾಪಿಕೆಯಾದ ಶ್ರೀಮತಿ ಮಾರ್ಗಾರಿಟ್ ಡ್ಯುರಾಂಡ್‌ಳಿಗೆ ೨೫ ವರ್ಷ ಸೇವೆ ಸಲ್ಲಿಸಿದ ಸ್ವಾಮಿನಿಷ್ಠ ಕುದುರೆಯೂ ಇದೆ.

ಶ್ರೀಮತಿ ಡ್ಯುರಾಂಡಳು ೧೮೯೯ ರಲ್ಲಿ ರಾಗ್‌ಪಿಕ್ಕರ್ಸ್ ಐಲೆಂಡ್' ಎಂಬ ಬಂಜರು ಭೂಮಿಯ ಅರ್ಧ ಭಾಗವನ್ನು ಕೊಂಡು ಈ ಸ್ಮಶಾನಭೂಮಿಯನ್ನು ಸ್ಥಾಪಿಸಿದಳು. ಇಂದು ಅವಳ ಸೊಸೆ ತನ್ನಿಬ್ಬರು ಸಹಾಯಿಕೆಯರೊಂದಿಗೆ ಅದನ್ನು ನಡೆಸುತ್ತಿದ್ದಾಳೆ.

ಮೊಟ್ಟಮೊದಲನೆಯ ಗೋರಿ ೧೯೦೦ ನೇ ಇಸವಿಯಲ್ಲಿ ತಯಾರಾಯಿತು. ಅದು ಯಾವ ಪ್ರಾಣಿಯ ಗೋರಿ ಎಂಬುದನ್ನು ಈಗ ಯಾರೂ ಹೇಳಲಾರರು. ನಂ. ೬ ಎಂಬ ಫಲಕ ಮತ್ತು ಕಲ್ಲಿನ ರಾಶಿ ಮಾತ್ರ ಅದರ ಗುರುತಾಗಿ ಇವೆ. ಇಲ್ಲಿ ಬೇಕಾದವರು ತಮ್ಮ ಪ್ರೀತಿಯ ಪ್ರಾಣಿಯ ಕಳೇವರವನ್ನು ಹುಗಿಯಬಹುದು. ಬಾಗಿಲಿಗೆ ಹತ್ತಿರದ ಸ್ಥಳದ ಬಾಡಿಗೆ ಹೆಚ್ಚು. ದೂರದ ತುದಿಗಾದರೆ ಕೊಂಚ ಕಡಿಮೆ. ೧,೫೦೦ ಫ್ರಾಂಕಿನಿಂದ ಬಾಡಿಗೆ ದರ ಪ್ರಾರಂಭವಾಗುತ್ತದೆ. ಪ್ರತಿವರ್ಷದ ರಕ್ಷಣೆಯ ಖರ್ಚಿಗಾಗಿ ೨,೦೦೦ ಫ್ರಾಂಕ್.

ಪ್ರತಿದಿವಸ ಇಲ್ಲಿ ಪ್ರಯಾಣಿಕರು ದರ್ಶನಕ್ಕೆ ಬರುತ್ತಾರೆ. ಪ್ರವೇಶಧನ ೮೦ ಫ್ರಾಂಕ್. ದಿನಾಲೂ ೫೦–೧೦೦ ಜನ ಬರುತ್ತಾರೆ. ಪ್ರತಿ ಭಾನುವಾರದ ದಿನ ೬೦೦ ಜನರಾದರೂ ಬರುತ್ತಾರೆ. ಬರುವವರು ಪ್ರಯಾಣಿಕರು, ಶಾಲೆಯ ವಿದ್ಯಾರ್ಥಿಗಳು, ಧರ್ಮಗುರುಗಳೂ ಉಂಟು.

ತಮ್ಮ ತಮ್ಮ ಪ್ರಿಯಪ್ರಾಣಿಯ ಗೋರಿಯನ್ನು ಕಾಣಲು ವಾರಕ್ಕೆ ಮೂರು ಬಾರಿ ಬರುವವರೂ ಇದ್ದಾರೆ. ಬಂದಾಗ ಗೋರಿಯ ಮೇಲೆ ಹೂ ಎರೆದು ಹೋಗುತ್ತಾರೆ. ನೀರು ಹನಿಸಿ ಹೋಗುತ್ತಾರೆ. ಕ್ರಿಸ್‌ಮಸ್ ದಿನ ಕ್ರಿಸ್‌ಮಸ್ ಗಿಡಗಳನ್ನೂ ತರುತ್ತಾರೆ.

ಅಲ್ಲಿ ನಿಮ್ಮೊಡನೆ ಮಾತಾಡುವಾಗ ಪ್ರವಾಸಿಕರ ಕತೆಗಳನ್ನು ಅಲ್ಲಿಯ ಸಹಾಯಿಕೆಯರು ನಿಮಗೆ ಹೇಳಬಹುದು. ಅವನ್ನು ಕೇಳಿದರೆ ಪ್ರಾಣಿಗಳ ಬಗೆಗಿರುವ ಮಾನವ ಹೃದಯದ ಆಸ್ಥೆಯ ಅನುಭವಗಳು ನಿಮ್ಮ ಮನಸ್ಸನ್ನು ಮುಗ್ಧಗೊಳಿಸುವವು.

ರಿನ್-ಟಿನ್-ಟಿನ್ ನಾಯಿಯ ಗೋರಿಯ ಬಳಿ ಬಂದು ಒಬ್ಬ ಜರ್ಮನ್ ಮನುಷ್ಯ ಪ್ರಿಯ ಸಖನನ್ನು ಕಳೆದುಕೊಂಡಂತೆ ಅತ್ತಿದ್ದ. ಆತ ಅಂದು ಪೂರ್ಣ ನಿರಾಹಾರ ಮಾಡಿದ. ತೀರ ಬಡವ; ಆದರೂ ಹೃದಯ ಬಡವಾಗಿರಲಿಲ್ಲ. ಅಂತೆಯೆ ಊಟದ ಖರ್ಚನ್ನು ಆತ ಗೋರಿಗೇರಿಸಲು ಹೂ ಕೊಳ್ಳಲು ಉಪಯೋಗಿಸಿದ.

ಮತ್ತೊಮ್ಮೆ ಒಬ್ಬ ಕುರುಡ ಶಸ್ತ್ರಕ್ರಿಯೆಯಿಂದ ತನ್ನ ದೃಷ್ಟಿ ದೊರಕಿಸಿಕೊಂಡ. ಆದರೆ ಆವರೆಗೂ ಅವನಿಗೆ ದಾರಿ ತೋರಿಸುತ್ತಿದ್ದ ಅವನ ನಾಯಿ ಇವನ ಕಣ್ಣು ಬಂದ ಮರುದಿನವೇ ಮಡಿಯಿತು. ಇನ್ನು ತನ್ನ ಜೀವಿತಕಾರ್ಯ ಮುಗಿಯಿತೆಂದದು ಬಗೆದಿರಬೇಕು! ಪಾಪ! ಈ ಮಾತು ಅವನ ಮನಸ್ಸಿಗೆ ಎಷ್ಟು ಹತ್ತಿತೆಂದರೆ ಆ ನಾಯಿಯನ್ನು ಈ ರುದ್ರಭೂಮಿಯಲ್ಲಿ ಹುಗಿಯ ಬಂದಾಗ ಅವನ ಕಣ್ಣಿಗೆ ಕತ್ತಲೆ ಬಂದು ಬಿಟ್ಟಿತು.

ಒಮ್ಮೆ ಒಬ್ಬ ಎಂಟು ಹತ್ತು ವರ್ಷದ ಕುವರಿ ತನ್ನ ಮೊಲವನ್ನು ಹೂಳಲು ಬಂದಿದ್ದಳು. ಆಗ ಅವಳಿಗಾದ ವೇದನೆ ಹೇಳಲಾಸಲ್ಲ. ತನ್ನ ಪುಟ್ಟ ಮೈಯ ರೋಮ ರೋಮದಿಂದಲೂ ಕಣ್ಣೀರು ಮಿಡಿವಂತೆ ಅತ್ತಳಾಕೆ.

ಸಹಾಯಿಕೆಯು ಹೇಳುವ ಒಂದು ಮೋಜಿನ ಸಂಗತಿ ಎಂದರೆ "ಇಲ್ಲಿ ಬರುವ ಪ್ರತಿ ಒಬ್ಬರೂ ತಾವಿನ್ನು ಹೊಸ ಪ್ರಾಣಿಯನ್ನು ಸಾಕಲಾರೆವೆಂಬಂತೆ ಪ್ರತಿಜ್ಞೆ ಮಾಡುತ್ತಾರೆ— ಮುಂದೊಂದು ವರ್ಷದಲ್ಲಿ ಅವರ ಸ್ಮಶಾನವೈರಾಗ್ಯವಳಿದದ್ದು ಕಂಡುಬರುತ್ತದೆ" ಎಂಬ ಮಾತು. ಆಗ ಆಕೆ ತಾನು ಮಾತ್ರ ಆ ವರ್ಗಕ್ಕೆ ಸೇರಿದವಳಲ್ಲ; ಮತ್ತೆ ಈ ದುಃಖ ಬೇಡೆಂದು ಒಮ್ಮೆ ನಾಯಿ ಸತ್ತ ಮೇಲೆ ಬೇರೆ ನಾಯಿಯನ್ನೇ ತಾನು ತಂದಿಲ್ಲವೆಂದೂ ತಪ್ಪದೇ ಹೇಳುತ್ತಾಳೆ. ಆಗ ಅವಳ ಕಣ್ಣಗಳು ಆರ್ದ್ರವಾಗದಿರುವುದಿಲ್ಲ.

ಹುಗಿಯುವಾಗ ಪ್ರಾಣಿಗಳನ್ನು ಈ ಲೋಕದಿಂದ ಬೀಳ್ಕೊಡಲೇನೋ ಎಂಬಂತೆ ಕಿನಕಾಪಿನ ಬಟ್ಟೆಯಲ್ಲಿ ಸುತ್ತಿ ಬುಟ್ಟಿಯಲ್ಲಿ ಹಾಕಿ ನೋವಾಗಬಾರದೆಂಬಂತೆ ಇಟ್ಟು ಹುಗಿಯುತ್ತಾರೆ. ಇನ್ನು ಹಲವು ಸಲ ಸೂಟ್‌ಕೇಸಿನಲ್ಲಿ ಮಲಗಿಸಿ ಅದನ್ನೇ ಹುಗಿಯುತ್ತಾರೆ. ರಿನ್–ಟಿನ್–ಟಿನ್‌ವನ್ನು ಈಗಿನ ಸಂಚಾಲಿಕೆ ತನ್ನ ಖರ್ಚಿನಿಂದ

ಸಿಂಗರಿಸಿ ಇಹಲೋಕದಿಂದ ಬೀಳ್ಕೊಟ್ಟಿದ್ದಳು. ಗೋರಿಯ ಕಲ್ಲಿನ ಮೇಲೆ ಹೆಸರು, ತಾರೀಖು, ಬಹಳವಾದರೆ ಪ್ರಾಣಿಯ ಚಿತ್ರ ಇವಿಷ್ಟನ್ನು ಕೊರೆದಿರುತ್ತಾರೆ. ಐದು ಪೋಲೀಸ್‌ನಾಯಿಗಳ ಗೋರಿಯ ಕಲ್ಲು ಮನುಷ್ಯಗಾತ್ರದ್ದಿವೆ.

ಯುದ್ಧದ ನಾಯಿಗಳನ್ನೂ ಹೂತಿವ್ದಾರೆ. ಡಿಕ್, ಬ್ಲ್ಯಾಕೀ, ಕಾಸ್ಸಾ ಮುಂತಾದವು ಅವುಗಳ ಹೆಸರುಗಳು. ಅವುಗಳ ಕಲ್ಲುಗಳಿಂದ ಅವು ಯಾವ ದೇಶದ, ಯಾವ ಪಡೆಯವೆಂಬುದು ಗೊತ್ತಾಗುತ್ತದೆ. ಸ್ಮೃತಿಯ ಮುಂದೆ ಅವುಗಳ ಜೀವಿತದ ಸಾಹಸಗಳು ಮಿಂಚಿ ಹೋಗುತ ವೆ.

ಮಾರ್ಕಿಸ್ ಮತ್ತು ಟೋನಿ ಎಂಬೆರಡು ರಾಜಮನೆತನದ ಸಾಕುನಾಯಿಗಳ ಗೋರಿಯ ಮೇಲೆ ಅವುಗಳ ಪ್ರತಿಮೆಗಳಿವೆ. ಅವನ್ನು ಕಂಡವರು ಅವುಗಳ ಮೈಮೇಲೆ ಕೈಯಾಡಿಸದೆ ಮುಂದೆ ಹೋಗುವುದೇ ಇಲ್ಲ.

ಗೋರಿಯ ಕಲ್ಲಿನ ಮೇಲಿನ ಒಕ್ಕಣೆಗಳು ಬಹಳ ಸಲ ಸಾಮಾನ್ಯವಾದರೂ ಕೆಲವು ಕಡೆ ಬಲು ಮೋಜಿನವಾಗಿರುತ್ತವೆ. ಒಂದು ಕಡೆ "ನನ್ನ 'ಭ್ರಮಂತಿ'ಯ ಏಕ ಮಾತ್ರ ಮಿತ್ರ." ಮತ್ತೊಂದು ಕಡೆ. "ಈ ವರೆಗೆ ನಗಿಸಿದೆ. ಇಂದು ಅಳಿಸಿದೆ."

ಮತ್ತೊಂದು ಕಡೆ, "ಇಂದಿಲ್ಲ ನಾಳೆ; ಒಮ್ಮೆ ಒಟ್ಟಿಗೆ ಸೇರೋಣ," "ಸುಖದುಃಖದ ಸಮಭಾಗಿ." "ನನಗೆ ನೀನೊಬ್ಬನೇ ಇದ್ದೆ. ನಾನೊಬ್ಬನೇ ನಿನಗಿದ್ದೆ." "ಜನಜೀವನವನು ಹೆಚ್ಚೆಚ್ಚು ನೋಡಿದಂತೆ ನನ್ನ ನಾಯಿಯನ್ನು ಹೆಚ್ಚೆಚ್ಚು ಪ್ರೀತಿಸಿದೆನು." ಮುಂತಾದ ಭಾವಪೂರ್ಣ ಲೇಖಗಳು ಯಾರ ಮನಸ್ಸನ್ನಾದರೂ ಆ ಗಂಭೀರ ವಾತಾವರಣದಲ್ಲಿ ಭಾರಗೊಳಿಸದಿರಲಾರವು.

ಮತ್ತೊಂದು ಕತೆ ಕೇಳಿ. ಇದು ಝೀ ಝೀ ಎಂಬ ನಾಯಿಯದು. ಇದು ಹುಟ್ಟಿದ್ದು ೧೭ ತಾರೀಖಿಗೆ. ಇದರ ಒಡೆಯನು ೧೭ ವರ್ಷದವನಿದ್ದಾಗ ಇದು ೧೭ ದಿನದ್ದಿದ್ದಾಗ ಇದನ್ನಾತ ಸಾಕಿದ. ಇದು ಸತ್ತಾಗ ೧೭ ವರ್ಷದ್ದೇ ಇತ್ತು.

ಬ್ಯಾರಿ ಎಂಬ ನಾಯಿಯ ಗೋರಿಯ ಮೇಲೆ ಅದರ ಯಶೋಗಾಥೆ ಇದೆ. "೪೦ ಜನರ ಪ್ರಾಣ ಉಳಿಸಿದ ವೀರ ಬ್ಯಾರಿ ೪೧ನೆಯವನಿಂದ ಹತವಾಯಿತು." *

## ಧರ್ಮದ್ರೋಹ !

೧೮೭೦ ರ ಮಾತು. ಒಂದು ಸಣ್ಣ ಕಾಲೇಜಿನ ಸ್ನೇಹ ಸಮ್ಮೇಲನಕ್ಕೆ ಒಬ್ಬ ಪಾದ್ರಿಯುವರು ಅಧ್ಯಕ್ಷರಾಗಿದ್ದರು. ಆ ಕಾಲೇಜಿನ ಪ್ರಿನ್ಸಿಪಾಲರೊಡನೆ ಚರ್ಚೆ ಮಾಡುವಾಗ "ಈ ಜಗತ್ತು ಸಂಪೂರ್ಣ ವಿಕಾಸಗೊಂಡಿದೆ. ಮುಂದೆ ವಿಕಾಸವಾಗುವುದು ಶಕ್ಯವಿಲ್ಲ" ಎಂದರು ಪಾದ್ರಿ ಮಹಾಶಯರು. ಆದರೆ ಪ್ರಿನ್ಸಿಪಾಲರಿಗೆ ಇದು ಸರಿಬರಲಿಲ್ಲ. "ಇನ್ನು ೫೦ ವರ್ಷಗಳಲ್ಲಿ ಮನುಷ್ಯ ಪಕ್ಷಿಗಳಂತೆ ಹಾರಾಡಬಹುದೆಂದು ನನಗನಿಸುತ್ತದೆ" ಎಂದರವರು.

"ಛೆ ಛೆ! ಸುಳ್ಳೇ ಸುಳ್ಳು! ಕೇವಲ ದೇವದೂತರಿಗಷ್ಟೇ ಹಾರಾಡುವ ಹಕ್ಕನ್ನು ಕೊಟ್ಟಿರುವವನು ಪರಮೇಶ್ವರ. ನೀವು ಹೀಗೆ ಹೇಳಿ ಧರ್ಮದ್ರೋಹ ಮಾಡುತ್ತಿರುವಿರಿ" ಎಂದರು ಪಾದ್ರಿಯುವರು.

ಈ ಪಾದ್ರಿಯುವರೇ ಮಿಲ್ಟನ್ ರಾಯಿಟ್. ಮುಂದೆ ಕೆಲವು ವರ್ಷಗಳಲ್ಲೇ ಅವರ ಪುತ್ರರಿಬ್ಬರೂ— ಅರಿವಿಲ್ ಮತ್ತು ವಿಲ್ಬರ್— ಮೊಟ್ಟಮೊದಲ ವಿಮಾನಯಾನ ಮಾಡಿದರು.

—ಸಂಗ್ರಹ : ಉಮೇಶ.

# ಭಯವೆಂಬ ಅಂಟುರೋಗ

ಗಂಗಾಧರ

ಹೆದರಿ ಸಾಯಬೇಡ ಎನ್ನುವುದನ್ನು ನೀವು ಕೇಳಿದ್ದೀರಿ. ಈ ಮಾತೇನೂ ಅತಿಶಯೋಕ್ತಿಯಲ್ಲ. ಕೇವಲ ಭಯದಿಂದಲೇ ಪ್ರಾಣ ನೀಗುವವರೆಷ್ಟೋ ಮಂದಿ ಇದ್ದಾರೆ. ಹಾವು (ಕೇವಲ ವಿಷಾರಿ) ಕಡಿದರೆ ಮನುಷ್ಯ ಸಾಯುತ್ತಾನೆ ಎಂಬುದು ನಿಜವಾದುದರಿಂದ ಹಾವು ಎಂದರೆ ಜನ ಹೆದರುತ್ತಾರೆ. ಈ ಹೆದರಿಕೆ–ಭಯ ಎಷ್ಟು ಆಳವಾಗಿರುತ್ತದೆಂದರೆ ವಿಷಹೀನ ಹಾವು ಕಡಿದಾಗಲೂ ಕೂಡ ಎಷ್ಟೋ ಜನ "ಹಾವು ಕಡಿಯಿತು ಇನ್ನು ಸಾಯುವುದು ಖಂಡಿತ" ಎಂಬ ಭಯಮಾತ್ರದಿಂದಲೇ ಸತ್ತುಹೋಗುತ್ತಾರೆ.

ಇದೊಂದೇ ಅಲ್ಲ. ಭಯದ ನಾನಾ ಪ್ರಕಾರಗಳೂ ಇದೇ ಬಗೆಯ ಕೇಡನ್ನು ಮನುಷ್ಯನಿಗುಂಟುಮಾಡುತ್ತವೆ. ಕಾಲರಾ ಮೊದಲಾದ ಸಾಂಕ್ರಾಮಿಕ ರೋಗಗಳಿಗಿಂತಲೂ ಹೆಚ್ಚು ಪ್ರಬಲವಾದ ಸಾಂಕ್ರಾಮಿಕವಾಗಿದೆ ಈ ಭಯರೋಗ. ಯಾವ ಕಾರಣವಿರದಿದ್ದರೂ ಮನುಷ್ಯ ಒಮ್ಮಿಂದೊಮ್ಮೆ ಯಾವುದೊ ಅಜ್ಞಾತವಾದ ಭಯದಿಂದ ಕಂಗೆಡಹತ್ತುತ್ತಾನೆ. ಯಾತಕ್ಕೆ ಈ ಭಯ, ಯಾವ ಭಯ ಇದು ಎಂಬಿತ್ಯಾದಿಗಳು ಅವನಿಗೆ ತಿಳಿಯದೆ ಹೋದರೂ ಅವನ ಎದೆ ಹೊಡೆದುಕೊಳ್ಳುವುದು ಮಾತ್ರ ನಿಲ್ಲುವುದಿಲ್ಲ.

ಒಮ್ಮೆ ಜಾನ್ ಜೋನ್ಸ್ ಎಂಬಾತ ನಿತ್ಯದಂತೆ ತನ್ನ ಕೆಲಸಕ್ಕೆ ಹೋಗಲು ಬಸ್ ಏರಿದ. ಉತ್ಸಾಹಭರಿತನಾಗಿದ್ದ ಆತ ಸಿಳ್ಳು ಹಾಕುತ್ತಲೇ ಒಂದು ಸೀಟಿನ ಮೇಲೆ ಕುಳಿತ. ಅವನ ಮುಂದುಗಡೆ ಕುಳಿತಿದ್ದಾತ ತನ ಮುಖದೆದುರು ವೃತ್ತಪತ್ರಿಕೆಯೊಂದನ್ನು ಹಿಡಿದುಕೊಂಡಿದ್ದ. ಅವನ ಮುಖದಲ್ಲಿ ಅಂಜಿಕೆ ಮೂಡಿತ್ತು, ಉದ್ವಿಗ್ನತೆ ಇತ್ತು ಎಂಬುದು ಜಾನನಿಗೆ ತಿಳಿಯುವಂತಿರಲಿಲ್ಲ. ಆದರೆ ಇದ್ದಕ್ಕಿದ್ದ ಹಾಗೆ ಜಾನನಿಗೆ ಏನೋ ಒಂದು ಬಗೆಯ ಅಂಜಿಕೆ-ಅಸ್ವಸ್ಥತೆ ಉಂಟಾಯಿತು. ಕಾರಣ ತಿಳಿಯದೆ ಆತ ಕಂಗೆಟ್ಟ. ಈ ಅಜ್ಞಾತ ಭಯನಿವಾರಣೆ ಮಾಡಿಕೊಳ್ಳುವುದು ಅವನಿಗೆ ಸಾಧ್ಯವೂ ಅಗಲಿಲ್ಲ.

ಅದೇಕೆ ಹಾಗಾಯಿತು ಎಂಬುದನ್ನೀಗ ವಿಜ್ಞಾನ ವಿವರಿಸಬಲ್ಲುದಾಗಿದೆ. ಪ್ರಯೋಗಶಾಲೆಗಳಲ್ಲಿ ನಡೆಸಿದ ಪ್ರಯೋಗಗಳಿಂದ ಭಯವೆಂಬುದು ಅತಿ ಘೋರ ಸಾಂಕ್ರಾಮಿಕ ಜಡ್ಡಿಗಿಂತಲೂ ಹೆಚ್ಚು ಸಾಂಕ್ರಾಮಿಕವಾಗಿದೆ ಎಂಬುದು ಖಚಿತವಾಗಿದೆ. ಭಯಪೀಡಿತರಾದವರ ಬಳಿಯಲ್ಲಿ ನಿಂತಿರುವವರು ಅಜ್ಞಾತ ಭಯಕ್ಕೊಳಗಾಗುತ್ತಾರೆಂದು ಕಂಡುಬಂದಿದೆ. ಕ್ಯಾಲಿಫೋರ್ನಿಯ ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ನಡೆಸಿದ ಪ್ರಯೋಗಗಳು ಭಯಪೀಡಿತರ ಧ್ವನಿಯ ರಿಕಾರ್ಡುಗಳನ್ನು ಕೇಳಿಸಿದರೆ ನಾವು ನೀವು ಕೂಡ ಭಯಪೀಡಿತರಾಗಬಹುದು ಎಂಬುದನ್ನು ತೋರಿಸಿಕೊಟ್ಟಿವೆ.

ಈ ವಿಶ್ವವಿದ್ಯಾಲಯದಲ್ಲಿ ಇಪ್ಪತ್ತೆರಡು ಮನಃಶಾಸ್ತ್ರಜ್ಞರನ್ನು ಪ್ರಯೋಗಕ್ಕೊಳಪಡಿಸಿದರು. ಮೊದಲಿಗೆ ಕೆಲ ನರದೌರ್ಬಲ್ಯರೋಗಿಗಳು ತಮ್ಮ ಅಂಜಿಕೆ, ಉದ್ವಿಗ್ನತೆ, ಚಿಂತೆಗಳ ಬಗ್ಗೆ

ನಡೆಸಿದ ಸಂಭಾಷಣೆಯ ರಿಕಾರ್ಡು ಮಾಡಿಕೊಂಡು ಬಳಿಕ ಅವನ್ನು ಈ ಮನಃಶಾಸ್ತ್ರಜ್ಞರೆದುರು ನುಡಿಸಲಾಯಿತು. ಧ್ವನಿ ಮುದ್ರಿಕೆಗಳನ್ನು ಕೇಳುತ್ತ ಹೋದಂತೆ ಆ ಮನಃಶಾಸ್ತ್ರಜ್ಞರ ಮುಖದಲ್ಲಿ ಅಂಜಿಕೆ ಉದ್ವೇಗಗಳು ಮೂಡಿದವು. ಪ್ರಯೋಗಾನಂತರದಲ್ಲಿ ಆ ಶಾಸ್ತ್ರಜ್ಞರೆಲ್ಲ ತಾವು ಕೂಡ ಸಂಭಾಷಣೆ ನಡೆಸಿದ್ದ ಆ ರೋಗಿಗಳಷ್ಟೇ ವ್ಯಾಕುಲರಾಗಿದ್ದೆವೆಂದು ಹೇಳಿದರು.

ಅಕಸ್ಮಾತ್ತಾಗಿ ನಿಮಗೆ ನಿಷ್ಕಾರಣವಾಗಿ ಹೆದರಿಕೆಯೆನಿಸಿದರೆ ನೀವು ಅದನ್ನು ಇನ್ನಾರಿಂದಲೋ ಪಡೆದಿರುವ ಸಂಭವವೇ ಹೆಚ್ಚಾಗಿರುತ್ತದೆ. ಇತ್ತೀಚಿನ ಅಭ್ಯಾಸ ಪ್ರಯೋಗಗಳಿಂದ ನಮ್ಮ ಅಂಜಿಕೆಗಳಲ್ಲಿ ಹೆಚ್ಚಿನವು ನಮ್ಮಲ್ಲಿಯೇ ಹುಟ್ಟಿರದೆ ಮತ್ತಾವನ ಮನಸ್ಸಿನಿಂದಲೊ ನಮ್ಮಲ್ಲಿಗೆ ತೇಲಿ ಬಂದವುಗಳಿರುತ್ತವೆಂದು ಕಂಡುಬಂದಿದೆ. ಆದರೆ ಯಾರಿಂದ ನಿಮಗೆ ನೆಗಡಿ ಅಂಟಿಕೊಂಡಿತು ಎಂದು ತಿಳಿಯುವುದು ಎಷ್ಟು ಕಠಿನವೋ ಅಷ್ಟೇ ಭಯ ಯಾರಿಂದ ತಗಲಿತು ಎಂದು ತಿಳಿಯುವುದೂ ಕಠಿಣವಾದದ್ದಾಗಿದೆ.

ಈ ಅಜ್ಞಾತ ಭಯಗಳು ಎಷ್ಟು ಕಾಲ ನಮ್ಮನ್ನು ಪೀಡಿಸಬಲ್ಲವು, ಎಷ್ಟು ಜನರನ್ನು ಅವು ಪೀಡಿಸಬಲ್ಲವು ಎಂಬುದನ್ನು ಅಂದಾಜು ಕಟ್ಟಲು ಕೂಡ ಮನಃಶಾಸ್ತ್ರಜ್ಞರು ಪ್ರಯತ್ನ ಮಾಡಲಾರರು. ಏಕೆಂದರೆ ಈ ಸಾಂಕ್ರಾಮಿಕ ಪಿಡುಗಿನಿಂದ ಯಾರೂ ತಪ್ಪಿಸಿಕೊಳ್ಳಲಾರರು. ಮನುಷ್ಯರಿಂದ ಈ ಭಯರೋಗ ಪ್ರಾಣಿಗಳಿಗೆ ಕೂಡ ಅಂಟಿಕೊಳ್ಳುತ್ತದೆ ಎಂದು ಸಂಶೋಧಕರು ಗೊತ್ತು ಮಾಡಿಕೊಂಡಿದ್ದಾರೆ.

ತಾಯಿ ಅಂಜಿ ಗಾಬರಿಯಾದಾಗ ಅವಳ ತೊಡೆಯ ಮೇಲೆ ಮಲಗಿರುವ ಮಗು ಅಳಲು ಪ್ರಾರಂಭಿಸುವುದನ್ನು ಉದಾಹರಣೆಯಾಗಿ ಮನಶಾಸ್ತ್ರಜ್ಞ ಜಾರ್ಜ್ ಎಚ್. ಪ್ರೆಸ್ಟನ್ ಹೇಳುತ್ತಾರೆ. ಅನೇಕ ಚಿಕ್ಕ ಮಕ್ಕಳು ರಾತ್ರಿ ಸರಿಯಾಗಿ ನಿದ್ದೆ ಮಾಡದಿರುವುದಕ್ಕೆ ತಮ್ಮ ಮಕ್ಕಳಿಗೆ ರಾತ್ರಿ ಎಲ್ಲಿ ಏನಾಗುತ್ತದೊ ಎಂದು ತಾಯಂದಿರ ಮನದಲ್ಲಿರುವ ಭಯವೇ ಕಾರಣವಾಗಿರುತ್ತದೆಂದು ಅವರು ಹೇಳುತ್ತಾರೆ. ತಾಯಿಯ ಮನದಲ್ಲಿ ಮೂಡಿರುವ ಈ ಭಯವು ತತ್‌ಕ್ಷಣ ಮಗುವಿನ ಮನಸ್ಸಿನಲ್ಲಿ ಸೇರಿಕೊಂಡು ಅದನ್ನು ಅಸ್ವಸ್ಥಗೊಳಿಸುತ್ತದೆ.

ಭಯದ ಪರಿಣಾಮ ನಮ್ಮ ವಿಚಾರಶಕ್ತಿಯ ಮೇಲೂ ಆಗುತ್ತದೆ. ಸಾಮಾನ್ಯ ಅಂಜಿಕೆ ವಿಚಾರಶಕ್ತಿಯನ್ನು ತುಸು ಕುಂಠಿತಗೊಳಿಸಿದರೆ ಅತಿ ಭಯವು ಅದನ್ನಿಡಿಯಾಗಿ ತೊಡೆದುಹಾಕಬಲ್ಲದು. ಸಭಾಕಂಪದಿಂದ ಮನುಷ್ಯ ಹೇಳಬೇಕಾದ ಮಾತುಗಳೆಲ್ಲವನ್ನೂ ಮರೆತು ಕಂಗೆಟ್ಟು ಬೆವತು ಒಂದಕ್ಷರ ಉಚ್ಚರಿಸಲಾರದೆ ಕುಳಿತ ದೃಶ್ಯಗಳನ್ನು ಅನೇಕರು ನೋಡಿರಬಹುದು. ಅತ್ಯಂತ ಪ್ರಬಲ ಭಯದಿಂದ ಪೀಡಿತನಾದ ಮನುಷ್ಯ ತನ್ನ ಹೆಸರನ್ನೆ ಮರೆತುಬಿಡುವ ಸಂಭವವೂ ಇದೆ.

ಭಯದಿಂದ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ದೇಹದ ಮೇಲೂ ಆಗುತ್ತದೆ. ನ್ಯೂಯಾರ್ಕ್ ಅಕಾಡಮಿಯ ವಿಜ್ಞಾನಿಗಳು ಭಯವು ದೇಹದಲ್ಲಿ ಒಂದು ರಹಸ್ಯಮಯ ರಾಸಾಯನಿಕ ದ್ರಾವಕವನ್ನು ಹುಟ್ಟಿಸಿ ರಕ್ತದಲ್ಲಿ ಹರಿಸಿ ಆ ಮೂಲಕ ಪ್ರಮುಖ ಅಂಗಗಳು ಆಕುಂಚನ ಹೊಂದುವಂತೆ ಮಾಡುತ್ತವೆ ಎಂದು ಕಂಡು ಹಿಡಿದಿದ್ದಾರೆ. ಭಯನಿವಾರಣೆಯಾದೊಡನೆ ಈ ನೂತನ ದ್ರಾವಕ ಇದ್ದಕ್ಕಿದ್ದಂತೆ ರಕ್ತದಿಂದ ಮಾಯವಾಗಿಬಿಡುತ್ತದೆ. ಬಹುಶಃ ಈ ದ್ರಾವಕವೇ ಭಯದಿಂದ ದೇಹದ ಮೇಲೆ ಆಗುವ ಪರಿಣಾಮಗಳಿಗೆ ಕಾರಣವಾಗಿರಬೇಕು ಎಂದು ವಿಜ್ಞಾನಿಗಳ ಅಂಬೋಣವಿದೆ. ಹೃದಯವಿಕಾರ, ಬಹುಮೂತ್ರ, ರಕ್ತದ ಒತ್ತಡ, ದಮ್ಮು ಮುಂತಾದ ಅನೇಕ ರೋಗಗಳಿಗೆ ಶಾಶ್ವತ ಭಯ-ಉದ್ವಿಗ್ನತೆಗಳು ಕಾರಣವಾಗಿರುತ್ತವೆಂದು ಇಂದು ವೈದ್ಯರು ಹೇಳುವಂತಾಗಿದೆ.

ಈ ರಹಸ್ಯಮಯ ದ್ರಾವಕದ ಸ್ವರೂಪ ಇತ್ಯಾ

ದಿಗಳ ಬಗ್ಗೆ ವಿಜ್ಞಾನಿಗಳಿಗೆ ಇನ್ನೂ ಪೂರ್ಣ ಮಾಹಿತಿ ಸಿಕ್ಕಿಲ್ಲ. ಆದರೆ ಅದು ನಮ್ಮ ದೇಹದ ಆಂತರಿಕ ಅವಯವಗಳ ಕಾರ್ಯಕ್ಕೆ ಆತಂಕ ವುಂಟುಮಾಡುತ್ತದೆಂದು ಮಾತ್ರ ಪ್ರಯೋಗಗಳಿಂದ ತಿಳಿದಿದೆ.

ಭಯದಿಂದ ತತ್‌ಕ್ಷಣ ಸಾವು ಬಂದ ಉದಾಹರಣೆಗಳೆಷ್ಟೊ ಇವೆ. ವಿಷಹೀನ ಹಾವು ಕಡಿದಾಗಲೂ ವಿಷಾರಿ ಹಾವು ಕಡಿಯಿತು ಎಂಬ ಭ್ರಮೆಯಿಂದ ಸತ್ತವರ ಕಥೆಗಳಂತೂ ಸರಿಯೆ. ಭಯದಿಂದ ಇನ್ನೂ ಹಲಬಗೆಯ ವಿಚಿತ್ರ ಮರಣಗಳಿಗೆ ತುತ್ತಾದವರಿದ್ದಾರೆ. ಅಲಬಾಮಾದಲ್ಲಿ ಜೇವನ್ಸ್ ಇಮೆಟ್ ಡೇವಿಸ್ ಎಂಬ ಹದಿನೈದು ವರ್ಷ ಪ್ರಾಯದ ಹುಡುಗನಿಗೆ ನೀರೆಂದರೆ ಎಲ್ಲಿಲ್ಲದ ಹೆದರಿಕೆಯಿತ್ತು. ಒಂದು ದಿನ ಆತ ಗೆಳೆಯರ ಅವಹೇಳನದಿಂದ ಖತಿಗೊಂಡು ಸೇಂಟ್ ಬರ್ನಾರ್ಡ್ ಕಾಲೇಜ್ ಕ್ಯಾಂಪಸ್‌ನಲ್ಲಿದ್ದ ಟೊಂಕಮಟ್ಟ ಆಳವಾದ ಹೊಂಡದಲ್ಲಿ ಜಿಗಿದ ಅಲ್ಲಿ ಕೆಲ ಕ್ಷಣಗಳ ವರೆಗೆ ಸುಮ್ಮನೆ ನಿಂತ ಆತ ಒಮ್ಮೆಲೆ ಮುಗ್ಗರಿಸಿ ಬಿದ್ದು "ಬದುಕಿಸಿರಿ" ಎಂದು ಕೂಗಿಕೊಂಡ. ಆತ ಮುಳುಗುವ ಮೊದಲೆ ಅವನನ್ನು ಹೊರಕ್ಕೆಳೆದರಾದರೂ ಅಷ್ಟರಲೆ ಸತ್ತುಹೋಗಿದ್ದ. ಬರಿ ಭಯದಿಂದ ಅವನ ಪ್ರಾಣ ಹಾರಿಹೋಗಿತ್ತು. ತತ್‌ಕ್ಷಣ ಕೊಲ್ಲುವ ಭಯದಂತೆ ನಿದಾನವಾಗಿ ಕೊಲ್ಲುವ ಭಯಗಳೂ ಇವೆ. ಬ್ರಿಟನ್ನಿನಲ್ಲಿ ಇತ್ತೀಚೆಗೆ ಒಂದು ಸಾಕ್ಷಿಚಿತ್ರದಿಂದ ಭಯ ಹುಟ್ಟಿಸುವಂಥ ಸನ್ನಿವೇಶವೊಂದನ್ನು ಕತ್ತರಿಸಿ ಹಾಕಬೇಕಾಯಿತು. ಅದನ್ನು ನೋಡಿದವರಲ್ಲಿ ಅನೇಕರು ಎಚ್ಚರದಪ್ಪಿದರು.

ಭಯದಿಂದ ರಾತ್ರಿ ಬೆಳಗಾಗುವುದರೊಳಗಾಗಿ ಕೂದಲು ಬೆಳ್ಳಗಾಗಿಬಿಡುವುದೆಂಬುದೂ ಸತ್ಯವಾದ ಮಾತೇ ಆಗಿದೆ. ಮನುಷ್ಯ ಹೆದರಿಕೊಂಡಾಗ ಅವನ ದೃಷ್ಟಿಶಕ್ತಿ ಕುಂಠಿತವಾಗುತ್ತದೆ ಎಂದು ಕಣ್ಣಿನ ಡಾಕ್ಟರುಗಳಿಗೆ ಅನುಭವವಾಗಿದೆ.

ಅದರಂತೆ ಮನುಷ್ಯನ ವಿವೇಕ ಬುದ್ಧಿ ಹರಿತವಾದಷ್ಟೂ ಭಯತ್ರಸ್ತನಾಗುವುದು ಕಡಿಮೆ ಎಂದು ವಿಜ್ಞಾನವು ಕಂಡುಹಿಡಿದಿದೆ. ಅಲಬಾಮಾ ಕಾಲೇಜಿನಲ್ಲಿ ಈ ಬಗ್ಗೆ ನಡೆಸಿದ ಪ್ರಯೋಗಗಳು ಇದಕ್ಕೆ ಸಾಕ್ಷಿಯಾಗಿವೆ. ವಿದ್ಯಾವಂತನಾದ ನಾಗರಿಕನಿಗಿಂತಲೂ ಅವಿದ್ಯಾವಂತನಾದವನಲ್ಲಿ ಹೆಚ್ಚು ಭಯಗಳು ಇರುವುದಕ್ಕೆ ಇದೇ ಕಾರಣ.

ಪ್ರಯತ್ನಪಟ್ಟಲ್ಲಿ ಸಾಮಾನ್ಯರು ಎಷ್ಟೋ ನಿತ್ಯಭಯಗಳಿಂದ ಮುಕ್ತರಾಗಬಹುದು. ಅದಕ್ಕಾಗಿ ಮನಃಶಾಸ್ತ್ರಜ್ಞರು ಈ ಕೆಳಗಿನ ಉಪಾಯಗಳನ್ನು ಹೇಳುತ್ತಾರೆ:

೧. ನಿಮ್ಮ ಅಂಜಿಕೆಗಳನ್ನು ಗುಪ್ತವಾ

ಗಿಟ್ಟುಕೊಳ್ಳಬೇಡಿ. ಹಾಗೆ ಮಾಡಿದರೆ ಅವು ದ್ವಿಗುಣಿತವಾಗುವುದರ ಜೊತೆಗೆ ಹೆಚ್ಚು ಭಯಾನಕವಾಗುವವು. ಅಂದರೆ ನೀವು ಕಂಡವರ ಮುಂದೆಲ್ಲ ನಿಮ್ಮ ಗೋಳನ್ನು ತೋಡಿಕೊಳ್ಳಬೇಕು ಎಂದಲ್ಲ. ಆದರೆ ನಿಮ್ಮ ನಿಜ ಸ್ನೇಹಿತರೆದುರು ಮನಬಿಚ್ಚಿ ಮಾತಾಡಿದಲ್ಲಿ ಆಗ ನಿಮಗೆ ಮಾತಾಡುತ್ತಿರುವಾಗಲೇ ನಿಮ್ಮ ಸಂಶಯ—ಭಯಗಳಲ್ಲಿ ಎಷ್ಟೋ ನಿರಾಧಾರವಾದವುಗಳು ಎಂದು ಕಂಡುಬರಬಹುದು. ಮಿತ್ರರ ಅಭಿಪ್ರಾಯ ಸಲಹೆಯಿಂದ ಧೈರ್ಯ ಬರಬಹುದು.

೨. ಯಾತರ ಬಗ್ಗೆ ಭಯವೆನಿಸುವುದೊ ಆ ಕೆಲಸವನ್ನು ತಪ್ಪದೆ ಮಾಡಿ. ನಿಮಗೆ ಭಯವೆನಿಸಿದೊಡನೆ ಮೊದಲು ಆ ಬಗ್ಗೆ ವಿಚಾರ ಮಾಡಿ. ಅದರಿಂದ ತಪ್ಪಿಸಿಕೊಂಡು ಓಡಲು ಯತ್ನಿಸಬೇಡಿ. ಭಯದ ಕಾರಣವನ್ನು ಕಂಡುಹಿಡಿಯಲು ಯತ್ನಿಸಿ. ಭಯಕ್ಕೆ ಕಾರಣವಿಲ್ಲವೆಂದಾದರೂ ಏನೊ ಅಳುಕು ಎನಿಸಿದರೆ ಯಾತರಿಂದ ಭಯವುಂಟಾಗುತ್ತಿರುವುದೊ ಆ ಕೆಲಸವನ್ನು ಮೊಟ್ಟಮೊದಲು ಮಾಡಿ ಮುಗಿಸಿಬಿಡಿ. ದೀರ್ಘಕಾಲದ ಅಂಜಿಕೆಯಾಗಿದ್ದರೆ ಒಳ್ಳೆಯ ಮನಶ್ಶಾಸ್ತ್ರಜ್ಞರ ಸಲಹೆಯಂತೆ ನಿದಾನವಾಗಿ ಅದರ ನಿವಾರಣೆಗೆ ತೊಡಗಿ.

೨. ಭಯ ಮತ್ತು ಉದ್ವೇಗಗಳ ಮೂಲಕ ನೀವು ತಲೆ ಕೆಡಿಸಿಕೊಳ್ಳುವಂಥ ಪ್ರಸಂಗ ಬಂದೊಡನೆ ಏನಾದರೊಂದು ಕೆಲಸದಲ್ಲಿ ಉದ್ಯುಕ್ತರಾಗಿರಿ. ದೇಹದ ಚಟುವಟಿಕೆಯಿಂದ ಮನಸ್ಸಿನ ಮಂಗಾಟ ಕಡಿಮೆಯಾಗುವುದು. *



## ಪಿಯಿನೇ ಫಿನಿಕ್ಸ್

ವಿಶ್ವಸಂಚಾರ ಮಾಡಿದ ಎ. ಕೆ. ಚೆಟ್ಟಿಯಾರರು ತಾವು ಹೋದ ದೇಶಗಳಲ್ಲಿ ‘ಕೃತಜ್ಞತೆ’ ಹಾಗೂ ‘ವಂದನೆ’ ಎಂಬ ಪದಗಳಿಗೆ ದೇಶೀ ಪದಗಳನ್ನು ಯಾರಿಂದಲಾದರೂ ಕೇಳಿ ತಿಳಿದುಕೊಂಡು ಸಮಯಬಂದಾಗ ಆ ಪದಗಳನ್ನು ಪ್ರಯೋಗಿಸುತ್ತಿದ್ದರು. ಹಾಗೊಮ್ಮೆ ಅವರೊಂದು ದೇಶದಲ್ಲಿ ‘ಕೃತಜ್ಞತೆ’ ಎಂಬ ಪದಕ್ಕೆ ಸಮಾನ ದೇಶೀಪದ ಯಾವುದೆಂದು ಒಬ್ಬ ತರುಣಿಯನ್ನು ಕೇಳಿದಾಗ ಅವಳು, ‘ಪಿಯಿನೇ ಫಿನಿಕ್ಸ್’ ಎಂದು ಹೇಳಿಕೊಟ್ಟಳು.

ಅಂದು ತಮಗಿತ್ತ ಸತ್ಕಾರಕೂಟದಲ್ಲಿ ಬಡಿಸಿದವನಿಗೆ ಅವರು “ಪಿಯಿನೇ ಫಿನಿಕ್ಸ್” ಎಂದರು.

ಆ ಕ್ಷಣವೇ ಅವನ ಮುಖದಲ್ಲಿ ಮಿಂಚುತ್ತಿದ್ದ ನಗೆ ಮಾಯವಾಯಿತು. ಕ್ಷಣಕಾಲ ಮೌನವಾಗಿದ್ದ ಅವನು ಅವರ ಸಮೀಪಕ್ಕೆ ಬಂದು “ದಯವಿಟ್ಟು ಯಾರೊಡನೆಯೂ ಹಾಗೆನ್ನಬೇಡಿ! ಹಾಗಂದರೆ ‘ಕೆರೆಗೆ ಹಾರಿ ಸಾಯಿ’ ಎಂದು ಅರ್ಥ” ಎಂದು ಸ್ಪಷ್ಟವಾಗಿ ಆಂಗ್ಲದಲ್ಲಿ ನುಡಿದ.

ಇನ್ನೊಮ್ಮೆ ತಮಗೆ ಆ ಪದವನ್ನು ಕಲಿಸಿದ ಹುಡುಗಿಯನ್ನು ಚೆಟ್ಟಿಯಾರರು ಸಂಧಿಸಿದಾಗ ಏನೆಂದರು ಗೊತ್ತೆ?

“ಪಿಯಿನೇ ಫಿನಿಕ್ಸ್.”

—ಸಂ: ಬಿ. ಆರ್. ಶಂಕರ್

# ಇಸ್ರಾಯಿಲ್: ಯಹೂದ್ಯರ ನನಸಾದ ಕನಸು

ಮುರಲೀಧರ




ಇತಿಹಾಸದಲ್ಲಿ ಇಸ್ರಾಯಿಲ್‌ನಂಥದು ಇನ್ನೊಂದು ಸಿಗಲಾರದು. ಬರುವ ಮೇ ೨ ರಂದು ಅದು ತನ್ನ ಹದಿನೈದನೇ ಹುಟ್ಟು ಹಬ್ಬವನ್ನಾಚರಿಸಲಿದೆಯಷ್ಟೇ. ಅದು ಬಲು ಚಿಕ್ಕ ರಾಷ್ಟ್ರ. ಭೂಮಧ್ಯ ಸಮುದ್ರದ ಪೂರ್ವ ಕರಾವಳಿಯಲ್ಲಿ ೨೬೦ ಮೈಲುದ್ದ ಮತ್ತು ಕೆಲವಡೆ ಬರಿ ೧೨ ಮೈಲು ಮತ್ತು ಕೆಲವಡೆ ೭೦ ಮೈಲು ಅಗಲವಿರುವ ಇಸ್ರಾಯಿಲ್‌ನ ಕ್ಷೇತ್ರಫಲ ೮,೦೦೦ ಚದರ ಮೈಲು, ಅಂದರೆ ನಮ್ಮ ಕೇರಳ ರಾಜ್ಯದ ಅರ್ಧದಷ್ಟು ಮಾತ್ರ. ಪ್ರದೇಶವೂ ಬಹಳ ಮಟ್ಟಿಗೆ ಬೆಂಗಾಡು. ಜನಸಂಖ್ಯೆ ೨೦ ಲಕ್ಷ. ಆದರೆ ಅದರ ಸ್ಥಾಪನೆ ಮತ್ತು ಬೆಳವಣಿಗೆಯು ಒಂದು ಧಾರ್ಮಿಕ ಗ್ರಂಥದ ಮೇಲೆ ಒಂದು ಜನಾಂಗ ವಿಟ್ಟ ಅಚಲ ವಿಶ್ವಾಸದಿಂದ ಸಾಧಿಸಲ್ಪಟ್ಟ ಅಘಟಿತಘಟನೆಯಾಗಿದೆ. ಇಪ್ಪತ್ತು ಶತಮಾನಗಳ ಹಿಂದೆ ಜಗತ್ತಿನ ಪಂಚಖಂಡಗಳಲ್ಲಿ ಚದರಿ ಹೋಗಿ ಭಾಷೆ, ಸ್ವಭಾವ, ಸಂಸ್ಕೃತಿಗಳಲ್ಲಿ ಮಾತ್ರವಲ್ಲ, ಬಣ್ಣದಲ್ಲಿ ಕೂಡ ಭಿನ್ನಭಿನ್ನವಾಗಿ ಹೋದ ಯಹೂದ್ಯ ಜನಾಂಗದ ಜನರು ಇಲ್ಲಿ ಪುನಃ ಒಂದುಗೂಡಿ ಒಂದು ಅಸಂಬದ ಜನ ಸಂಕುಲದಿಂದ ಒಂದು ಸುಸಂಬದ್ಧ ಆಧುನಿಕ ರಾಷ್ಟ್ರವನ್ನು ನಿರ್ಮಿಸಿಕೊಂಡಿದ್ದಾರೆ.

ಇಂದು ಇಸ್ರಾಯಿಲ್ ಎಂದು ಕರೆಯಲ್ಪಡುವ

ನಾಡು ೩,೫೦೦ ವರ್ಷಗಳ ಹಿಂದೆ ಯುಹೂದ್ಯ ಜನಾಂಗದ ತವರೂರಾಗಿತ್ತು. ಬೈಬಲ್ಲಿನ ಹಳೇ ಒಡಂಬಡಿಕೆಯ ಪ್ರಕಾರ ದೇವರು ಅದನ್ನು ಯುಹೂದ್ಯರ ನಾಯಕನಾದ ಅಬ್ರಹಾಮನಿಗೆ ಕೊಟ್ಟು, "ಈ ಅಪರಿಚಿತ ದೇಶವನ್ನೆಲ್ಲ ನಿನಗೂ ನಿನ್ನ ವಂಶಜರಿಗೂ ದಯಪಾಲಿಸಿದ್ದೇನೆ. ಇದು ಅನಂತ ಕಾಲದ ವರೆಗೆ ಅವರ ಸೊತ್ತಾಗುವುದು" ಎಂದು ಆಶ್ವಾಸನವಿತ್ತನು.

ಅಂದಿನಿಂದ ಯುಹೂದ್ಯರ ಇತಿಹಾಸವು ಉತ್ಕರ್ಷ ದುರ್ದೈವಗಳ ನಡುವೆ ತೂಗಾಡುತ್ತ ಬಂದಿದೆ. ಪುನಃ ಪುನಃ ಪ್ರಬಲ ಶತ್ರುಗಳು ಅವರನ್ನು ಅವರಿಗೆ ದೇವರಿತ್ತ ಆ ನಾಡಿನಿಂದ ಚದರಿಸಿ ದೇಶಭ್ರಷ್ಟರಾಗಿ ಅಲೆಯುವಂತೆ ಮಾಡಿದರು; ಪುನಃ ಪುನಃ ದೇವರ ಆಶ್ವಾಸನ ವಾಕ್ಯದಿಂದ ಧೈರ್ಯಗೊಂಡವರಾಗಿ ಅವರು ತಮ್ಮ ಮೂಲ ದೇಶಕ್ಕೆ ಮರಳಿ ಉರುಳಿದ್ದನ್ನು ನಿಲ್ಲಿಸಿ ಕಟ್ಟಿದರು.

ಯೇಸು ಕ್ರಿಸ್ತನನ್ನು ಶಿಲುಬೆಗೇರಿಸಿದ ಕೆಲ ವರ್ಷಗಳಲ್ಲೇ ರೋಮನ್ನರು ಇಸ್ರಾಯಿಲರ ನಾಡಿನ ಮೇಲೆ ದಾಳಿ ಮಾಡಿ ಸಾವಿರಗಟ್ಟಳೆ ಯುಹೂದ್ಯರನ್ನು ಕಗ್ಗೊಲೆಗಡಿದು, ಸಾವಿರಗಟ್ಟಳೆ ಜನರನ್ನು ಗುಲಾಮರಾಗಿ ಮಾಡಿ, ನಾಡನ್ನು ಧ್ವಂಸ ಮಾಡಿ, ಅವರ ಪವಿತ್ರ ದೇವಾಲಯವನ್ನು ನೆಲಸಮ ಮಾಡಿದರು. ಈ ಕೊನೆಯ ಅನಾಹುತಕ್ಕೆ ಕ್ರಿಸ್ತ ವಧೆಯಿಂದ ಯುಹೂದ್ಯ ಜನಾಂಗಕ್ಕೆ ಅಂಟಿದ ಪಾಪವೇ ಕಾರಣವೆಂದು ಭಾವಿಸಲಾಗಿದೆ.

ರೋಮನ್ನರ ಈ ದಾಳಿಯ ನಂತರ ಶಾಪಗ್ರಸ್ತರಂತೆ ಯುಹೂದ್ಯ ಜನಾಂಗವು ವೈಭವವನ್ನು ಕಳೆದುಕೊಂಡು ಯುರೋಪ್ ಏಶಿಯ, ಆಫ್ರಿಕಗಳಲ್ಲಿ ಚದರಿತು. ಕೆಲವರು ಭಾರತದಷ್ಟು ದೂರದ ನಾಡಿಗೂ ಬಂದರು. ಅಮೇರಿಕ ಕಂಡು ಹಿಡಿಯಲ್ಪಟ್ಟ ಮೇಲೆ ಯುರೋಪಿನಿಂದ ಹಲವರು ಅಲ್ಲಿಗೂ ಹೋದರು. ತಮ್ಮ ಮೂಲ ಭಾಷೆಯನ್ನು ಮರೆತರು. ಅಲ್ಲಲ್ಲಿನ ಸಂಸ್ಕೃತಿಯಿಂದ ಪ್ರಭಾವಿತರಾದರು. ಏಶಿಯ, ಆಫ್ರಿಕ, ಭಾರತಗಳ ಕಡೆ ಬಂದವರು ಕಪ್ಪು ಬಣ್ಣದವರಾದರು. ಯುರೋಪಿಗೆ ತೆರಳಿದವರು ಬಿಳಿಯರಾದರು. ಎಲ್ಲಿಯೂ ಸ್ಥಾನಿಕ ಜನತೆಯ ಪ್ರೀತಿಪಾತ್ರವಾಗದೆ, ನಾನಾ ಕಷ್ಟಗಳಿಗೊಳಗಾಗಿ, ಎಲ್ಲಿಯೂ ನೆಲೆ ನಿಲ್ಲಲಾರದೆ ಅಲೆಯುತ್ತ "ಸಂಚಾರಿ ಯುಹೂದ್ಯ" ಎಂದು ಹೆಸರು ಗಳಿಸಿದ ಈ ಜನಾಂಗವು ಈ ದೀರ್ಘ ರಾತ್ರಿಯಲ್ಲಿ ತನ್ನ ಧಾರ್ಮಿಕ ಗ್ರಂಥದಲ್ಲಿ ದೇವರಿತ್ತ ಆಶ್ವಾಸನ ಮತ್ತು ಪ್ರವಾದಿಗಳ ಭವಿಷ್ಯವನ್ನು ಮಾತ್ರ ಗಟ್ಟಿಯಾಗಿ ನಂಬಿಕೊಂಡಿತ್ತು.

ಯುಹೂದ್ಯರು ಮಾತೃಭೂಮಿಯಿಂದ ಚದರಿಸಲ್ಪಟ್ಟ ಹದಿನೆಂಟು ಶತಮಾನಗಳ ನಂತರ ಹಂಗೇರಿಯ ಥಿಯೊಡೋರ್ ಹರ್ಜಲ್ಲನು ಯುಹೂದ್ಯ ರಾಷ್ಟ್ರದ ಚಳವಳಿಯನ್ನು ಪ್ರಾರಂಭಿಸಿದಾಗ ಈ ಅಂತರಂಗದಲ್ಲಿ ಹುದುಗಿದ್ದ ಶ್ರದ್ಧೆ ಬೆಳಗಿ ಯುಹೂದ್ಯರನ್ನೆಲ್ಲ ಉತ್ತೇಜನಗೊಳಿಸಿತು. ೧೮೯೭ ರಲ್ಲಿ ಸ್ವಿಜರ್ಲಂಡಿನಲ್ಲಿ ಜೀಯನಿಸ್ಟ್ ಕಾಂಗ್ರೆಸ್ಸು ಪ್ರಥಮತಃ ಸೇರಿತು. ಹರ್ಜಲ್ ತನ್ನ ಸ್ಫೂರ್ತಿವಾಣಿಯಿಂದ ಯುಹೂದ್ಯರ ಆದರ್ಶವನ್ನು ಹೀಗೆ ಸಾರಿದ: "ನಾವು ನಮ್ಮ ನಾಡಿಗೆ ಮರಳುವೆವು. ಯುಹೂದ್ಯ ಜನಾಂಗ ತನ್ನ ಆತ್ಮವನ್ನು ಮರಳಿ ಪಡೆಯುವುದು. ಯುಹೂದ್ಯ ಆತ್ಮವನ್ನು ನಾವು ಶಿಖರಸ್ಥಾನಕ್ಕೆತ್ತುವೆವು."

ಹರ್ಜಲ್ ೧೯೦೪ ರಲ್ಲಿ ಸತ್ತ. ಅವನ ಕನಸು ನನಸಾದೀತೆಂದು ಯುಹೂದ್ಯರ ಹೊರತು ಮತ್ತಾರಿಗೂ ನಂಬಿಕೆಯಿರಲಿಲ್ಲ. ಯುಹೂದ್ಯರಿಗೆ ದೇವರಿತ್ತ ನಾಡಿನಲ್ಲಿ ಶತಮಾನಗಳಿಂದ ಅರಬರು ನೆಲೆಯೂರಿದ್ದರು. ಅದು ತುರ್ಕಿ ಸಾಮ್ರಾಜ್ಯದ ವಶವಾಗಿತ್ತು. ಅಲ್ಲಿ ಪುನಃ ಯುಹೂದ್ಯ ರಾಜ್ಯ ಸ್ಥಾಪನೆಯೆ ?

ಆದರೆ ಪ್ರಥಮ ಜೀಯನಿಸ್ಟ್ ಕಾಂಗ್ರೆಸ್ ಸೇರಿದ ೫೦ ವರ್ಷಗಳೊಳಗೆ ಇಸ್ರಾಯಿಲ್ ರಾಷ್ಟ್ರ ಸತ್ಯ ಘಟನೆಯಾಯಿತು. ಯುಹೂದ್ಯರ

ವಿಶ್ವಾಸ, ಇತಿಹಾಸದ ಒತ್ತಡ ಇದಕ್ಕೆ ನೆರವಾದವು. ಹರ್ಜಲನಿಂದ ಸ್ಫೂರ್ತಿಹೊಂದಿದ ಯಹೂದ್ಯರು ಧ್ಯೆಯಸಾಧನೆಗಾಗಿ ಲಕ್ಷಾಂತರ ಧನ ಸಂಗ್ರಹ ಮಾಡಿದರು. ಇಸ್ರಾಯಿಲ್ (ಆಗ ಪಾಲಿಸ್ತಾನ ಎನಿಸಿತ್ತು) ನಲ್ಲಿ ನೆಲ ಕೊಂಡರು. ದೇವರ ವಾಕ್ಯದಲ್ಲಿ ಭರವಸೆಯಿಟ್ಟು ಯಹೂದ್ಯರನ್ನು ಅಲ್ಲಿ ನೆಲಸಲು ಕಳಿಸಿದರು. ಮೊದಲನೇ ಮಹಾಯುದ್ಧದ ಅಂತ್ಯದಲ್ಲಿ ಈ ಪ್ರದೇಶ ತುರ್ಕಿಯ ಕೈಬಿಟ್ಟು ಬ್ರಿಟಿಶ್ ಆದೇಶಕ್ಕೊಳಪಟ್ಟಮೇಲೆ ಅವರ ಕೆಲಸ ಹೆಚ್ಚು ಭರದಿಂದ ಸಾಗಿತು. ಎರಡನೇ ಮಹಾಯುದ್ಧ ಕಾಲದಲ್ಲಿ ಹಿಟ್ಲರನು ೬೦ ಲಕ್ಷ ಯಹೂದ್ಯರನ್ನು ನಾಶಮಾಡಿದ್ದರಿಂದ ಯಹೂದ್ಯರಲ್ಲಿ ದೇವರಿತ್ತ ನಾಡಿನ ಹಂಬಲಕ್ಕೆ ದುರ್ನಿವಾರವಾದ ಪುಟ ದೊರೆಯಿತು

೧೯೪೮ ರಲ್ಲಿ ಪಾಲಿಸ್ತಾನದಲ್ಲಿ ಯಹೂದ್ಯ ರಾಜ್ಯ (ಇಸ್ರಾಯಿಲ್) ಘೋಷಿಸಲ್ಪಟ್ಟಿತು. ಆಗ ಒಂದು ಅದ್ಭುತವೇ ನಡೆದುಹೋಯಿತು. ಆಗ ಅಲ್ಲಿದ್ದ ಯಹೂದ್ಯರ ಸಂಖ್ಯೆ ಆರು ಲಕ್ಷ ಮಾತ್ರ. ಯಹೂದ್ಯ ರಾಜ್ಯ ಸ್ಥಾಪನೆಗೆ ಅರಬರು ಬದ್ಧ ವಿರೋಧಿಗಳಾಗಿದ್ದರು ಬ್ರಿಟಿಶರೂ ಅನುಕೂಲವಾಗಿರಲಿಲ್ಲ. ಯಹೂದ್ಯರೂ ಅರಬರೂ ಭೀಕರ ಹಿಂಸಾತ್ಮಕ ಚಳವಳಿಯಲ್ಲಿ ಮಗ್ನರಾಗಿದ್ದರು. ಅವರೊಳಗೆ ರಾಜಿ ಮಾಡಿಸಿ ಉಭಯ ಪ್ರದೇಶಗಳ ಒಂದು ಸಂಯುಕ್ತರಾಜ್ಯ ಸ್ಥಾಪಿಸಲು ಮಾಡಿದ ಯತ್ನವನ್ನು ಅರಬರು ಕೆಡಿಸಿದರು. ಯಾವ ನಿರ್ಣಯವಿಲ್ಲದೆ ಬ್ರಿಟಿಶರು ಹೊರಬಿದ್ದು ಹೋದೊಡನೆ ಪಾಲಿಸ್ತಾನದ ತಮ್ಮ ಬಾಂಧವರ ನೆರವಿಗಾಗಿ ಸುತ್ತಲ ಏಳು ಅರಬ ರಾಷ್ಟ್ರಗಳು ಪಾಲಿಸ್ತಾನದಲ್ಲಿ ನುಗ್ಗಿದವು. ಈ ಕೋಲಾಹಲದ ಮಧ್ಯದಲ್ಲಿ ಕೆಲ ಲಕ್ಷ ಯಹೂದ್ಯರು ಹಲ ಕೋಟಿ ಶತ್ರುಗಳನ್ನು ಸಂಘಟಿತವಾಗಿ ಎದುರಿಸಿದ ರೀತಿ ಚರಿತ್ರಾರ್ಹವಾದದ್ದು. ಪ್ರತಿಯೊಂದು ಕಡೆಯೂ ಯಹೂದ್ಯರ ಚಿಕ್ಕ ಪಡೆಗಳು ಅರಬರ ಭಾರಿ ಪಡೆಗಳ ವಿರುದ ವಿಜಯವನ್ನು ಪಡೆದು ತಮ್ಮ ಪ್ರದೇಶವನ್ನು ವಿಸ್ತರಿಸಿಕೊಂಡವು. ಕೊನೆಗೆ ಸಂಯುಕ್ತರಾಷ್ಟ್ರ ಸಂಘದ ಮಧ್ಯಸ್ಥಿಕೆಯಿಂದ ಯುದ್ಧವಿರಾಮವಾಯಿತು. ಇಂದಿಗೂ ಅರಬ ರಾಷ್ಟ್ರಗಳು ಇಸ್ರಾಯಿಲ್ ಅಸ್ತಿತ್ವವನ್ನೊಪ್ಪಿಲ್ಲ. ಆದರೆ ಇಸ್ರಾಯಿಲ್ ವಾಸ ವಿಕ ಸತ್ಯವಾಗಿದೆ.

ಇಸ್ರಾಯಿಲ್ ರಾಷ್ಟ್ರದ ಸ್ಥಾಪನೆ ಎಷ್ಟು ಚೋದ್ಯದ್ದೋ ಅದಕ್ಕಿಂತಲೂ ಹೆಚ್ಚಿನದು ಅದರ ಬೆಳವಣಿಗೆ. ಇಂದು ಇಸ್ರಾಯಿಲ್ ತನ್ನದೇ ಭೂ ಜಲ ವಾಯುಪಡೆಗಳಿಂದೊಡಗೂಡಿದ ಬಲವತ್ತರವಾದ ರಾಷ್ಟ್ರ. ಸುತ್ತಲೂ ಕೇಡು ಬಗೆಯುತ್ತಿರುವ ಅರಬ ರಾಷ್ಟ್ರಗಳು ಯಾವ ಕ್ಷಣಕ್ಕೇನು ಮಾಡಿಯಾವೆಂಬ ನಿಯಮವಿಲ್ಲ; ಅದನ್ನೆದುರಿಸಲು ರಾಜತಾಂತ್ರಿಕವಾಗಿಯೂ ಸಾಮರಿಕವಾಗಿಯೂ ಇಸ್ರಾಯಿಲ್ ಸದಾ ಸಿದ್ಧವಾಗಿದೆ.

ಶತಮಾನಗಳಿಂದ ಅರಬರ ಮನೆಯಾಗಿದ್ದ ಈ ಪ್ರದೇಶದಲ್ಲಿ ಹಿಂದೆಂದೋ ತಮ್ಮ ಪೂರ್ವಜರು ಅಲ್ಲಿದ್ದರೆಂಬೊಂದೇ ಕಾರಣದಿಂದ ಯಹೂದ್ಯರು ಬಂದು ಬಲವಂತದಿಂದ ರಾಜ್ಯ ಸ್ಥಾಪನೆ ಮಾಡುವುದರ ನ್ಯಾಯಾನ್ಯಾಯಗಳೇನೇ ಇರಲಿ, ಸುತ್ತಲ ಯಾವುದೇ ರಾಷ್ಟ್ರಕ್ಕಿಂತ ಪ್ರಗತಿಪರವೂ ಸಮೃದ್ಧವೂ ಆದ ರಾಷ್ಟ್ರವೊಂದನ್ನು ಒಂದೂವರೆ ದಶಕದ ಅವಧಿಯೊಳಗ ಕಟ್ಟಿದ ಇಸ್ರಾಯಿಲಿನ ಸಾಹಸ ಪ್ರಶಂಸನೀಯವಾಗಿದೆ. ಆರ್ಥಿಕ, ಸಾಮಾಜಿಕ ಎರಡೂ ದೃಷ್ಟಿಗಳಿಂದ ಇಸ್ರಾಯಿಲ್ ಇತರರಿಗೊಂದು ಮೇಲ್ಪಂತಿಯೆನ್ನುವಂತೆ ಬೆಳೆದಿದೆ. ಅರ್ಧ ಶತಮಾನ ಹಿಂದೆ ಓಬೀರಾಯನ ಕಾಲದ ಪದ್ಧತಿ, ಅಜ್ಞಾನ, ಅಂಧಶ್ರದ್ಧೆ, ಔದಾಸೀನ್ಯಗಳಿಂದ ತುಂಬಿದ್ದ ಈ ಪ್ರದೇಶ ಇಂದು ಆಧುನಿಕ ಪದ್ಧತಿಯ ಕೃಷಿ, ಉದ್ಯಮ, ಶಿಕ್ಷಣ, ಸಾರ್ವಜನಿಕ ಆರೋಗ್ಯ, ವಾಣಿಜ್ಯ ವ್ಯಾಪಾರಗಳಿಂದ ಸದಾ ಕಾರ್ಯಮಗ್ನವಾಗಿದೆ. ಮತ್ತು ಇದೆಲ್ಲವನ್ನೂ ಪ್ರಜಾಸತ್ತಾತ್ಮಕ, ಕಾಯದೆಬದ್ಧ ರೀತಿಯಲ್ಲೇ ಸಾಧಿಸಲಾಗಿದೆಯೆಂಬುದು ಇನ್ನೂ ಮಹತ್ವದ್ದು.

ಇಸ್ರಾಯಿಲ್ ಸ್ಥಾಪನೆಯಾಗುವಾಗ ಕೇವಲ

೬,೫೦,೦೦೦ ವಿದ್ದ ಜನಸಂಖ್ಯೆ ಇಂದು ಅದರ ಮುಪ್ಪಟ್ಟಾಗಿದೆ. ಇಸ್ರಾಯಿಲ್ ಸ್ಥಾಪನೆಯಾದೊಡನೆ ಜಗತ್ತಿನ ಯಾವ ದೇಶದಲ್ಲಿದ್ದ ಯಹೂದ್ಯರೂ ಇಲ್ಲಿ ಬಂದು ನೆಲಸಬಹುದೆಂದು ಘೋಷಿಸಲಾಯಿತು. ಭೂಜಲ ವಾಯು ಮಾರ್ಗಗಳಿಂದ ಎಪ್ಪತ್ತು ದೇಶಗಳ ಯಹೂದ್ಯರು ತಮ್ಮ ಪೂರ್ವಜರ ನಾಡಿಗೆ ಬಂದರು. ಅವರು ಆಡುತ್ತಿದ್ದ ಭಾಷೆಗಳು ಅಷ್ಟೇ ಸಂಖ್ಯೆಯವಿರಬೇಕು. ಹಿಟ್ಲರನ ನರಮೇಧದಿಂದುಳಿದವರಂತೂ ಆಯಿತು; ಅರಬ ರಾಷ್ಟ್ರಗಳಿಂದಲೇ ಐದು ಲಕ್ಷಕ್ಕಿಂತಲೂ ಹೆಚ್ಚು ಜನ ಬಂದರು. ಭಾರತದಿಂದ ಕೂಡ ಕೆಲ ಸಾವಿರ ಜನ ಹೋದರು. ಹೀಗೆ ಬಂದವರಲ್ಲಿ ಒಬ್ಬರ ಭಾಷೆ ಒಬ್ಬರಿಗೆ ತಿಳಿಯುತ್ತಿದ್ದಿಲ್ಲ. ಒಬ್ಬರ ರೀತಿ ನೀತಿ ಇನ್ನೊಬ್ಬರಿಗೆ ಹೊಂದುತ್ತಿರಲಿಲ್ಲ. ಸುತ್ತಮುತ್ತಲ ರಾಜ್ಯಗಳಿಂದ ಬಂದವರಲ್ಲಿ ಅಧಿಕಾಂಶ ನಿರಕ್ಷರ ಕುಕ್ಷಿಗಳಾಗಿದರು. ಪಶ್ಚಿಮ ಯುರೋಪಿನಿಂದ ತಮ್ಮ ಜನಾಂಗದವರಿಗೆ ನೆರವಾಗಬೇಕೆಂಬ ಧ್ಯೇಯದಿಂದಲೇ ಬಂದ ಪ್ರಗತಿಪರ ಯಹೂದ್ಯರೂ ಅನೇಕರಿದ್ದರು.

ಈ ವಿಜಾತೀಯ ಜನಸಮ್ಮರ್ದದಿಂದ ಒಂದು ಸಜಾತೀಯವಾದ ಸುಬದ್ಧ ರಾಷ್ಟ್ರವನ್ನು ನಿರ್ಮಿಸಲು ಸರಕಾರವೂ ಜಗತ್ತಿನಲ್ಲೆಲ್ಲ ಪಸರಿಸಿರುವ ಯಹೂದ್ಯ ಏಜನ್ಸಿಯೂ ನಿರಂತರವಾಗಿ ದುಡಿದಿವೆ. ಬರುತ್ತಿದ್ದ ನಿರಾಶ್ರಿತ ಧಾರೆಯನ್ನು—ಬಹುಜನರು ಬರಿಗೈಯಲ್ಲೇ ಬಂದಿದ್ದರು—ಕರೆದುಕೊಂಡು, ಅವರಿಗೆ ಒಡನೆ ನಾನಾ ಜೀವನರಂಗಗಳಲ್ಲಿ ತರಬೇತು ಕೊಟ್ಟು, ಕೃಷಿಯಲ್ಲೋ ಉದ್ಯಮದಲ್ಲೋ ಕೆಲಸವೊದಗಿಸಲಾಯಿತು. ಹೊಸ ಹೊಸ ಹಳ್ಳಿಗಳನ್ನು, ಹೊಸ ಹೊಸ ಪಟ್ಟಣಗಳನ್ನು ನಿರ್ಮಿಸಲಾಯಿತು. ಕಷ್ಟಗಳು ಅತಿಶಯವಾಗಿದ್ದವು, ಅವುಗಳನ್ನೆದುರಿಸುವ ನಿರ್ಧಾರ ಮತ್ತು ಶ್ರದ್ಧೆಯೂ ಅಷ್ಟೇ ದೃಢವಾಗಿದ್ದವು.

೧೯೬೦ ರಲ್ಲಿ ಇಸ್ರಾಯಲಿಗೆ ಭೆಟ್ಟಿಕೊಟ್ಟು ಬಂದ ಶ್ರೀ ಎಚ್. ವಿ. ಕಾಮತರು, ಇಸ್ರಾಯಿಲಿನ ರಾಷ್ಟ್ರೀಯ ಸಾಮರಸ್ಯವನ್ನು ಕುರಿತು ಬರೆಯುತ್ತ, ಆ ನಾಡು ಇನ್ನೂ ಪೂರ್ತಿ ಏಕರಸವಾಗಿದೆಯೆಂದು ಹೇಳಲು ಬಾರದಿದ್ದರೂ ಯೌರೋಪ್ಯ ಯಹೂದ್ಯ, ಭಾರತೀಯ ಯಹೂದ್ಯ, ಮೊರಕ್ಕೋ ಯಹೂದ್ಯ, ಮೊದಲಾದ ಭೇದಗಳು ಇನ್ನೂ ಉಳಿದಿದ್ದರೂ ಇಸ್ರಾಯಿಲಿನಲ್ಲಿ "ನಮ್ಮ ದೇಶದಲ್ಲಿರುವುದಕ್ಕಿಂತಲೂ ಹೆಚ್ಚಿನ ರಾಷ್ಟ್ರೀಯ ಏರಕ, ಬಲವತ್ತರವಾದ ರಾಷ್ಟ್ರೀಯ ಐಕ್ಯ ಮತ್ತು ಗಾಢತರವಾದ ರಾಷ್ಟ್ರೀಯ ಜಾಗೃತಿ ಕಾಣಿಸುತ್ತದೆ" ಎಂದಿದ್ದಾರೆ.

ಇಸ್ರಾಯಿಲಿನ ಪುನರುತ್ಥಾನದ ಕಥೆ ಹೇಳುವಾಗ "ಕಿಬ್ಬುತ್ಸ್" ಮತ್ತು "ಮೋಶವ್" ಗಳನ್ನು ಹೆಸರಿಸದಿರಲು ಸಾಧ್ಯವಿಲ್ಲ. ಎರಡೂ ಇಸ್ರಾಯಿಲಿನ ಕೃಷಿ ಸಮೃದ್ಧಿಗೆ ಬೆನ್ನೆಲುಬಾಗಿವೆ. ಎರಡೂ ಸಹಕಾರಿ ಸಮಾಜವಾದದ ಉತ್ತಮ ನಿದರ್ಶನಗಳಾಗಿವೆ.

"ಕಿಬ್ಬುತ್ಸ್" ಎಂದರೆ ಸಾಮೂಹಿಕ ಕೃಷಿ ಕೇಂದ್ರ. ಇಸ್ರಾಯಿಲಿನಲ್ಲಿ ಒಟ್ಟು ೨೫೦ ಕಿಬ್ಬುತ್ಸುಗಳಿವೆ. ಅವುಗಳಲ್ಲಿ ದುಡಿಯುವ ೮೦,೦೦೦ ಜನರು ಒಟ್ಟಾಗಿ ದುಡಿದು, ಒಟ್ಟಾಗಿ ಉಂಡು, ಒಟ್ಟಾಗಿ ಬಾಳುವ ಸಮಾಜವಾದಿಗಳು. ಅವರನ್ನು ಪ್ರಚೋದಿಸುವುದು ಮಾತ್ರ ಮಾರ್ಕ್ಸ್‌ವಾದವಲ್ಲ, ಬೈಬಲ್ಲಿನ ಪ್ರವಾದಿಗಳು ಕೊಟ್ಟ "ನಿನ್ನ ಹುಬ್ಬಿನ ಬೆವರಿನಲ್ಲಿ ನಿನ್ನ ರೊಟ್ಟಿಯನ್ನುಣ್ಣು" ಎಂಬ ಆದೇಶ. ಇಸ್ರಾಯಿಲ್ ಜನ್ಮತಾಳುವುದಕ್ಕೆ ೩೮ ವರ್ಷ ಮುಂಚೆಯೇ ಈ ಧ್ಯೇಯದಿಂದ ಪ್ರೇರಣೆಹೊಂದಿದ ಜಾಸೆಫ್ ಬರತ್ ಎಂಬ ರಶಿಯದ ಯಹೂದ್ಯ ಡೆಗಾನಿಯ ಎಂಬಲ್ಲಿ ಪ್ರಪ್ರಥಮ ಕಿಬ್ಬುತ್ಸನ್ನು ಸ್ಥಾಪಿಸಿದ. ಇಂದು ಎಪ್ಪತ್ತು ಮೀರಿರುವ ಈತ ಹತ್ತು ಜನ ಸುಶಿಕ್ಷಿತ ಯಹೂದ್ಯರನ್ನು–ಅವರಲ್ಲಿ ಇಬ್ಬರು ಹೆಂಗಸರು– ಕಲೆಹಾಕಿ ಜಾರ್ಡನ್ ನದೀ ತೀರದಲ್ಲಿ ಸಮುದ್ರ ಮಟ್ಟಕ್ಕಿಂತ ೭೦೦ ಅಡಿ ತಗ್ಗಾಗಿರುವ ಅಸಹ್ಯ ಮಲೇರಿಯ ಮತ್ತು ಸೆಕೆಯಿಂದ ಕೂಡಿದ ಸ್ಥಳದಲ್ಲಿ ಬಂದು ನೆಲಸಿದನು. "ಖಾಸಗಿ

ಒಡೆತನಕ್ಕೆ ಇಲ್ಲಿ ಸ್ಥಾನವಿಲ್ಲ; ಒಬ್ಬನು ಇಲ್ಲಿ ಇನ್ನೊಬ್ಬನ ಒಡೆಯನಾಗಲು ಸಾಧ್ಯವಿಲ್ಲ" ಎಂಬ ಧ್ಯೇಯ ವಾಕ್ಯದಿಂದ ಪ್ರಾರಂಭಿಸಿದ ಈ ಹತ್ತು ಜನರು ಮಾನವ ವಸತಿಗೆ ಅಯೋಗ್ಯವಾದ ಭೂಮಿಯನ್ನು ತಮ್ಮ ಬೆವರಿನಿಂದ ನಂದನವನವಾಗಿ ಮಾರ್ಪಡಿಸಿದರು.

ಕಿಬ್ಬುತ್ಸ್ ವಸತಿ ನಿರ್ಮಾಣ ಮಾಡಬೇಕೆಂಬವರಿಗೆ ಭೂಮಿಯನ್ನೂ ಮನೆಯನ್ನೂ ಸಲಕರಣೆಗಳನ್ನೂ ಜಾನುವಾರುಗಳನ್ನೂ ಬೀಜವನ್ನೂ ಸರಕಾರ (ಅದಕ್ಕೆ ಮೊದಲು ಯಹೂದ್ಯ ರಾಷ್ಟ್ರೀಯ ನಿಧಿ) ಒದಗಿಸುತ್ತದೆ. ಇದಕ್ಕೆ ತಗಲಿದ ಹಣವನ್ನೂ ಅದರ ಬಡ್ಡಿಯನ್ನೂ ವಸತಿಗಾರರು ದುಡಿದು ತೀರಿಸಬೇಕು. ಆದರೆ ಅಲ್ಲಿ ಖಾಸಗಿ ಒಡೆತನವಿಲ್ಲ. ತಲೆಮಾರಿನಿಂದ ತಲೆಮಾರಿಗೆ ಅಲ್ಲಿರುವ ಹಕ್ಕು ಇದ್ದರೂ ಪ್ರತಿ ಸದಸ್ಯನೂ ಅಲ್ಲಿ ಸ್ವತಃ ದುಡಿಯಲೇಬೇಕು. ಸಂಬಳದ ಕೆಲಸಗಾರರನ್ನು ಇಟ್ಟುಕೊಳ್ಳುವಂತಿಲ್ಲ.

ಪ್ರತಿಯೊಬ್ಬನೂ/ಳೂ ತಂತನ್ನ ಶಕ್ತಿಗನುಗುಣವಾಗಿ ತನಗೆ ಸರಿಹೊಂದುವ ಕೆಲಸವನ್ನು—ಅದಾವುದೆಂದು ಆಡಳಿತ ಸಮಿತಿ (ಚುನಾಯಿತ) ನಿರ್ಧರಿಸುತ್ತದೆ—ಮಾಡಬೇಕು. ಉತ್ಪತ್ತಿಯಾದದ್ದರಲ್ಲಿ ವೈಯಕ್ತಿಕ ಹಕ್ಕು ಯಾರಿಗೂ ಇಲ್ಲ. ಯಾರಿಗೂ ಸಂಬಳವಿಲ್ಲ. ಮನೆ, ಆಹಾರ, ಬಟ್ಟೆ, ಔಷಧ ಮತ್ತು ಇತರ ಸೌಕರ್ಯಗಳು ಪ್ರತಿ ಸದಸ್ಯನಿಗೂ ಪುಕ್ಕಟೆ ದೊರೆಯುತ್ತವೆ. ಕೇಂದ್ರ ಭೋಜನಶಾಲೆಗಳು, ಅಡಿಗೆ ಮನೆ, ಉಗ್ರಾಣ, ಮಕ್ಕಳಿಗೆ ಕಿಂಡರ್‌ಗಾರ್ಟನ್ ಶಾಲೆಗಳು, ವಿಹಾರ ಸೌಕರ್ಯಗಳು ಸಾಮೂಹಿಕವಾಗಿವೆ. ವೃದ್ಧಾಪ್ಯ ಮತ್ತು ಅನಾರೋಗ್ಯಕಾಲದಲ್ಲಿ ಕಿಬ್ಬುತ್ಸು ಸದಸ್ಯರ ಸಂಪೂರ್ಣ ಹೊಣೆ ಹೊರುತ್ತದೆ.

ಇಲ್ಲಿ ಸಮಾಜವಾದದ್ದೇ ಆಳಿಕೆ. ಆದರೆ ಅದು ಸೇರದ ಸದಸ್ಯನು ಯಾವಾಗ ಬೇಕಾದರೂ ಬಿಟ್ಟು ಹೋಗಲು ಸ್ವತಂತ್ರನಾಗಿದ್ದಾನೆ. ಎಲ್ಲ ಸದಸ್ಯರಿಗೂ ಸಮಾನ ದುಡಿತ ಮತ್ತು ಹಕ್ಕು. ಪ್ರಾರಂಭದಲ್ಲಂತೂ ಸದಸ್ಯರಿಗೆ ಸ್ವಂತ ಅಂಗಿಯೆಂಬುದೂ ಇರಲಿಲ್ಲ ಅಗಸನಿಂದ ಬಂದ ಅಂಗಿಗಳನ್ನು ಯಾವುದು ಯಾರ ಕೈಗೆ ಬಂತೋ ಹಾಗೆ ಹಾಕಿಕೊಳ್ಳುತ್ತಿದ್ದರು. ಈಗ ಅದನ್ನು ತುಸು ಸಡಿಲಿಸಿ ಕೆಲವು ಸ್ವಂತ ಸರಕುಗಳ ಹಕ್ಕುಗಳನ್ನು ಮಾನ್ಯ ಮಾಡಲಾಗಿದೆ. ಮಕ್ಕಳ ಶಿಕ್ಷಣವೆಲ್ಲ ಕಿಬ್ಬುತ್ಸುವಿನ ವೆಚ್ಚದಿಂದ ಅದು ನಿರ್ಧರಿಸಿದಂತೆ ಆಗುತ್ತದೆ. ಸಂಜೆ ಕೆಲಸ ಮುಗಿದ ಮೇಲೆ ಅಥವಾ ರಜಾ ದಿನದಲ್ಲಷ್ಟೇ ಮಕ್ಕಳಿಗೆ ತಂದೆ ತಾಯಿಯ ದರ್ಶನ

ಈ ಪೂರ್ಣ ಸಮಾಜವಾದದ ಮಾರ್ಗದಲ್ಲಿ ಕಿಬ್ಬುತ್ಸುಗಳು ಅದ್ಭುತ ಪ್ರಗತಿ ಸಾಧಿಸಿವೆ. ಉತ್ಪಾದನೆಯನ್ನು ಹೆಚ್ಚಿಸಿಕೊಂಡು ಅವೀಗ ಶ್ರಮದ ಫಲವಾಗಿ ಬಂದ ಅನೇಕ ಸುಖ ಸೌಕರ್ಯಗಳನ್ನನುಭವಿಸುತ್ತಿವೆ. ಉತ್ತಮ ಮನೆಗಳು, ಶಾಲೆಗಳು, ಉದ್ಯಾನಗಳು, ಪುಸ್ತಕಾಲಯಗಳು ಈ ವಿಶ್ವಕುಟುಂಬಿಗಳಿಗೆ ದೊರೆತಿವೆ.

ಆದರೆ ಈ ಕಠೋರ ಸಮಾಜವಾದ ಗಂಟಲಲ್ಲಿಳಿಯದವರೂ ಇದ್ದಾರೆ. ಸರ್ವರೂ ಶ್ರಮಿಸುವ ಸರ್ವರಿಗೂ ಸಮಾನ ಹಕ್ಕಿನ ವಾತಾವರಣದಲ್ಲಿ ಕೌಟುಂಬಿಕ ಜೀವನಕ್ಕೆ ವಿಶೇಷ ಅವಕಾಶವಿಲ್ಲ. ಗಂಡಸರಂತೆಯೆ ದುಡಿದು ಗಂಡಸರಂತೆಯೆ ಬಾಳುವ ಕಿಬ್ಬುತ್ಸ್ ತರುಣಿಯರ "ಗಂಡುಬೀರಿತನ" ಅನೇಕ ಸಂದರ್ಶಕರ ವ್ಯಂಗ್ಯ ಟೀಕೆಗಳಿಗೆ ಗುರಿಯಾದದ್ದುಂಟು. (ತಂದೆಯನ್ನರಿಯದ ಅನೇಕ ಮಕ್ಕಳು ಕಿಬ್ಬುತ್ಸ್ ಹುಡುಗಿಯರ ವ್ಯಕ್ತಿ ಸ್ವಾತಂತ್ರ್ಯಕ್ಕೆ ಸಾಕ್ಷಿಯಾಗಿದ್ದವು). ಮಕ್ಕಳು ಸಾರ್ವಜನಿಕ ಸೊತ್ತುಗಳಾಗುವುದು ಮತೆ ಕೆಲವರಿಗೆ ಹಿತವೆನಿಸಿಲ್ಲ.

ಇಂಥವರು "ಮೋಶವ್" ಗಳ ಕಡೆ ಆಕರ್ಷಿತರಾಗುತ್ತಾರೆ. ಪ್ರಥಮ ಮೋಶವ್ ನಹಲಾಲ್ ಎಂಬಲ್ಲಿ ೧೯೨೧ ರಲ್ಲಿ ಸ್ಥಾಪಿಸಲ್ಪಟ್ಟರೂ ಇಂದು ಕಿಬ್ಬುತ್ಸುಗಳ ಸಂಖ್ಯೆಗಿಂತ ಮೋಶವ್‌ಗಳದು ಹೆಚ್ಚಾಗಿದೆ. ಇಲ್ಲಿಯೂ ಸಂಬಳದ ಆಳು

ಗಳನ್ನಿಟ್ಟುಕೊಳ್ಳುವುದಕ್ಕೆ (ಅನಿವಾರ್ಯ ಸಂದರ್ಭಗಳಲ್ಲಿ ಹೊರತು) ಪ್ರತಿಬಂಧವಿದ್ದು ದುಡಿಮೆಯನ್ನು ಆಯಾ ಕುಟುಂಬಗಳೇ ಒದಗಿಸಬೇಕಾದರೂ ಭೂಮಿಯ ಮತ್ತು ಇತರ ಸೊತ್ತುಗಳ ಮೇಲೆ ಖಾಸಗಿ ಒಡೆತನವಿದೆ. ಎಲ್ಲರಿಗೂ ಸಮಾನ ಭೂಮಿ ಇದ್ದರೂ ಅದರ ಉತ್ಪಾದನೆಯ ಮೇಲೆ ವೈಯಕ್ತಿಕ ಅಧಿಕಾರವಿದೆ. ಸಲಕರಣೆ, ಬೀಜ ಮೊದಲಾದ ಆವಶ್ಯಕತೆಗಳನ್ನು ಕೊಳ್ಳುವುದಕ್ಕೂ ಉತ್ಪತ್ತಿಗಳನ್ನು ಮಾರುವುದಕ್ಕೂ ಸಹಕಾರಿ ಸಂಘಗಳಿವೆ. ಸಾಂಸ್ಕೃತಿಕ, ಸಾಮಾಜಿಕ, ಆರೋಗ್ಯ ಸೌಕರ್ಯಗಳನ್ನು ಸದಸ್ಯರೆಲ್ಲರಿಗೂ ಸಾಮಾನ್ಯ ನಿಧಿಯಿಂದ ಒದಗಿಸಲಾಗುತ್ತದೆ. ಆದರೆ ಇಲ್ಲಿ ವೈಯಕ್ತಿಕ ಶ್ರಮದಿಂದ ವೈಯಕ್ತಿಕ ಪ್ರಯೋಜನವನ್ನು ಹೆಚ್ಚಿಸಿಕೊಳ್ಳಲು ಅವಕಾಶವಿದೆ. ವ್ಯಕ್ತಿ ಸ್ವಾತಂತ್ರ್ಯ ಹೆಚ್ಚಾಗಿದೆ. ಸ್ವಾರ್ಥಕ್ಕೆಪ್ರಾಧಾನ್ಯವಿಲ್ಲದಿದ್ದರೂ ಅವಕಾಶವಿದೆ.

ಕಿಬ್ಬುತ್ಸ್, ಮೋಶವ್‌ಗಳಲ್ಲದೆ ಇವೆರಡರ ನಾನಾ ತರಹದ ಸಮ್ಮಿಶ್ರಣಗಳುಳ್ಳ ಅಸಂಖ್ಯ ವಸತಿಗಳೂ ಇಸ್ರಾಯಿಲಿನಲ್ಲಿವೆ. ಆದರೆ ಎಲ್ಲವುಗಳಲ್ಲಿಯೂ ಒಂದು ಸಮಾನ ಧರ್ಮವಿದೆ. ಅದೆಂದರೆ ಬೆವರು ಸುರಿಸಿ ರಾಷ್ಟ್ರವನ್ನು ಕಟ್ಟುವ ಆಸಕ್ತಿ. ಪಾಲಿಸ್ತಾನದ ಬರಡು ಭೂಮಿಯನ್ನುವರು ಶ್ರಮಬಲದಿಂದ ನಂದನವಾಗಿ ಮಾಡುತ್ತಿದ್ದಾರೆ. ಅಗಾಧವಾಗಿ ಬೆಳೆದ ಜನಸಂಖ್ಯೆಗೆ ಬೇಕಾದಷ್ಟು ಹಣ್ಣು, ಪಲ್ಯಕಾಯಿ, ಹಾಲು, ತತ್ತಿಗಳನ್ನು ಪೂರೈಸಲು ಅವರು ಸಮರ್ಥರಾಗಿರುವರಷ್ಟೇ ಅಲ್ಲ; ನಿರ್ಯಾತ ಮಾಡಲು ಕೂಡ ಸಮರ್ಥರಾಗಿದ್ದಾರೆ. ಇಸ್ರಾಯಿಲಿನ ಉದ್ಯಮಗಳಿಗಾಗಿ ಹತ್ತಿ, ನೆಲಗಡಲೆ, ನಾರುಗಳನ್ನೂ ಅವರು ಹೆಚ್ಚು ಹೆಚ್ಚು ಬೆಳೆಯುತ್ತಿದ್ದಾರೆ.

ಇಸ್ರಾಯಿಲಿನ ಜೀವನದ ಒಂದು ಮಹತ್ವದ ಅಂಶವೆಂದರೆ ಬೈಬಲ್ಲಿನ (ಹಳೆ ಒಡಂಬಡಿಕೆ) ಮೇಲೆ ಅದಕ್ಕಿರುವ ಅಪಾರ ವಿಶ್ವಾಸ. ಅದು ಸತ್ಯ ಸಂಗತಿಗಳ ಇತಿಹಾಸವೆಂಬ ನಂಬಿಕೆ ಅವರಿಗೆಷ್ಟು ಮಟ್ಟಿಗಿದೆಯೆಂದರೆ ಬೈಬಲ್ಲನ್ನು ಹಿಡಿದುಕೊಂಡು ಅವರು ದೇಶದಲ್ಲೆಲ್ಲ ಸಂಶೋಧನೆ ನಡೆಸುತ್ತಿದ್ದಾರೆ. ಬೈಬಲ್ಲು ಇಂಥಲ್ಲಿ ಆ ಕಾಲದಲ್ಲಿ ಮಾನವ ವಸತಿಯಿತ್ತೆಂದು ಹೇಳಿದ್ದರೆ ಅಲ್ಲಿ ನೆಲದಲ್ಲಿ ನೀರು ಇದ್ದೇ ತೀರಬೇಕೆಂದು ನಂಬಿ ಅವರು ಅಗೆಯುತ್ತಾರೆ. ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಅವರ ನಂಬಿಕೆ ಸತ್ಯವೆಂದೂ ಸಿದ್ಧವಾಗಿದೆ. ಬೈಬಲ್ಲು ಹೀಗೆ ಪುರಾತತ್ವ ಸಂಶೋಧನೆಗಷ್ಟೇ ಅಲ್ಲದೆ ಆರ್ಥಿಕ ಪ್ರಯೋಜನಕ್ಕೂ ಅನುಕೂಲ ಮಾಡಿಕೊಡುತಿದೆ. ಹೀಗೆ ಮರಳುಗಾಡಿನಲ್ಲಿ ದೊರೆತ ನೀರಿನ ಆಸರೆಯಲ್ಲಿ ಮತ್ತೆ ಮಾನವ ವಸತಿಗಳು ತಲೆಯೆತ್ತಿವೆ.

ಇಸ್ರಾಯಿಲ್‌ನಲ್ಲಿ ರವಿವಾರವಲ್ಲ—ಶನಿವಾರ ರಜಾದಿನ. ಇದಕ್ಕೂ ಬೈಬಲ್ಲಿನ ಆದೇಶವೇ ಕಾರಣ. ಅಂದು ಪೂರ್ಣ ವಿಶ್ರಾಂತಿ ದೇವತಾ ಪ್ರಾರ್ಥನೆ, ಉಪವಾಸವಿರಬೇಕೆಂದು ಬೈಬಲ್ ಹೇಳುತ್ತದೆ. ಈ ಆದೇಶವನ್ನೆಷ್ಟು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆಂದರೆ ಅಂದು ಇಡೀ ದಿನ ಅಂಗಡಿಗಳೂ ಕಚೇರಿಗಳೂ ಮುಚ್ಚುವುದು ಮಾತ್ರವೇ ಅಲ್ಲ, ಬಸ್ಸು ಕಾರುಗಳೂ ಓಡಾಡುವಂತಿಲ್ಲ ರಸ್ತೆಗಳೆಲ್ಲ ನಿರ್ಜನವಾಗಿರುತ್ತವೆ. ಶ್ರದ್ಧಾಳು ಯಹೂದ್ಯರು ಅಂದು ಅಡುಗೆ ಮಾಡರು, ರೊಟ್ಟಿ ಸುಡರು. ರೈಲುಗಳು ಕೂಡ ಅಂದು ಚಲಿಸುವುದಿಲ್ಲೆಂದರೆ ಹೆಚ್ಚಿಗೆ ಹೇಳಲೇನು?

ಹಿಬ್ರೂ ಭಾಷೆ ಇಸ್ರಾಯಿಲ್‌ನಲ್ಲಿ ಒಂದು ದೊಡ್ಡ ಸಂಯೋಜಕ ಶಕ್ತಿಯಾಗಿದೆ. ರಾಜಧಾನಿ ಜರುಸಲೇಮ್‌ನಲ್ಲಿ ಹಿಬ್ರೂ ವಿಶ್ವವಿದ್ಯಾಲಯವೇ ಇದೆ. ೨,೦೦೦ ವರ್ಷಗಳಿಗೆ ಹಿಂದೆಯೇ ಮೃತಾವಸ್ಥೆಗೆ ಬಂದಿದ್ದ ಯಹೂದ್ಯರ ಈ ಪ್ರಾಚೀನ ಭಾಷೆಯನ್ನು ಪುನರುಜ್ಜೀವನಗೊಳಿಸಿ ಆಧುನಿಕ ಸಾಹಿತ್ಯಕಲಾವಿಜ್ಞಾನಗಳ ಭಾಷೆಯಾಗಿ ಮಾರ್ಪಡಿಸಿದ್ದು ಯಹೂದ್ಯರ ಶ್ರದ್ಧೆಯ ಇನ್ನೊಂದು ನಿದರ್ಶನವಾಗಿದೆ. ಶಾಲೆ ಕಾಲೇಜುಗಳಲ್ಲಿ ಮಾತ್ರವಲ್ಲ ಸೈನ್ಯದಲ್ಲೂ ಹಿಬ್ರೂ ಒತ್ತಾಯದ ಭಾಷೆಯಾಗಿದೆ. ಅಸಂಖ್ಯ ಭಾಷೆಗಳನ್ನಾಡುವ ಜನರು


ಶುಭ್ರವಾದ
ಒಗೆಗೆ
ನಿರಾಲಾ
ಬಾರ್
ಸಾಬೂನ್
Nirala
ತುಂಗಭದ್ರಾ ಇಂಡಸ್ಟ್ರೀಸ್ ಲಿಮಿಟೆಡ್, ಕರ್ನೂಲ್.

ಸೇರಿದಲ್ಲಿ ಹಿಬ್ರೂ ಸೂತ್ರದಂತೆ ಅವರನ್ನೆಲ್ಲ ಒಂದಾಗಿ ಪೋಣಿಸಿದೆ.

ಹೀಗಿದ್ದರೂ ಇಸ್ರಾಯಿಲನ್ನು ಮತೀಯ ರಾಷ್ಟ್ರ ಎನ್ನುವಂತಿಲ್ಲ. ಅದು ಆಧುನಿಕ ಮತಾತೀತ ರಾಷ್ಟ್ರವಾಗಿದೆ. ಅಲ್ಲಿ ೧,೬೦,೦೦೦ ಮುಸ್ಲಿಮರೂ ೫೦,೦೦೦ ಕ್ರೈಸ್ತರೂ ೨೨,೦೦೦ ಡ್ರೂಜರೂ ಇದ್ದಾರಲ್ಲದೆ ಅವರಿಗೆಲ್ಲ ಪೂರ್ಣ ಧಾರ್ಮಿಕ ಸ್ವಾತಂತ್ರ್ಯವಿದೆ.

ಇಸ್ರಾಯಿಲ್ ಪ್ರಜಾಸತ್ತಾತ್ಮಕ ದೇಶ. ಅದರ ಪಾರ್ಲಿಮೆಂಟಾದ ಕ್ನೆಸ್ಸೆತ್‌ನಲ್ಲಿ ಮುಸ್ಲಿಮರಿಗೂ ಪ್ರಾತಿನಿಧ್ಯವಿದೆಯಲ್ಲದೆ ಅವರಿಗೆ ಅಲ್ಲಿ ತಮ್ಮ ಸ್ವಭಾಷೆಯಾದ ಅರಬ್ಬಿಯಲ್ಲಿ ಮಾತಾಡುವ ಸ್ವಾತಂತ್ರ್ಯವಿದೆ. ಎಲ್ಲ ಕ್ನೆಸ್ಸೆತ್ ಕಾರ್ಯಕಲಾಪಗಳನ್ನು ತತ್‌ಕ್ಷಣ ಅರಬ್ಬಿ ಭಾಷೆಯಲ್ಲಿ ಅನುವಾದಿಸುವ ವ್ಯವಸೆಯಿದೆ. ಮುಸ್ಲಿಮರಿಗೆ ಶುಕ್ರವಾರ, ಕ್ರೈಸ್ತರಿಗೆ ರವಿವಾರ ಧಾರ್ಮಿಕ ದಿನಗಳಾಗಿರುವುದರಿಂದ ಅವರಿಗೆ ತೊಂದರೆಯಾಗಬಾರದೆಂದು ಕ್ನೆಸ್ಸೆತ್ ವಾರದಲ್ಲಿ ಮೂರು ದಿನ ಮಾತ್ರ ಕೂಡುತ್ತದೆ.

ಮುಸ್ಲಿಮರಿಗೆ ಸಂಪೂರ್ಣ ವ್ಯಕ್ತಿಸ್ವಾತಂತ್ರ್ಯವಿದೆ. ಅವರ ಜೀವನ ಪರಿಸ್ಥಿತಿ ಎಷ್ಟೋ ಸುಧಾರಿಸಿದೆ. ಯಹೂದ್ಯರ ಸಾಹಸೋದ್ಯಮದ ಫಲ ಮುಸ್ಲಿಮರಿಗೂ ದೊರೆತಿದೆ. ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿದ್ದ ಅವರಿಗೆ ಕೃಷಿ, ಕೈಗಾರಿಕೆ, ಶಿಕ್ಷಣ ವೈದ್ಯಕೀಯ ಸೌಕರ್ಯಗಳು ಬಹುಶಃ ಇದೇ ಮೊದಲ ಬಾರಿಯಾಗಿ ದೊರೆತು ನಾಗರಿಕತೆಯ ಸುಖಗಳಿಗವರು ಭಾಗಿಗಳಾಗಿದ್ದಾರೆ. ಆದರೆ ಅವರನ್ನು ಇಸ್ರಾಯಿಲಿನ ಸಂತುಷ್ಟ ನಾಗರಿಕರೆಂದು ಕರೆಯಲು ಬಾರದು. ಯಹೂದ್ಯ ಆಳಿಕೆಯ ಸೌಖ್ಯಗಳನ್ನೆಲ್ಲ ಅನುಭವಿಸುತ್ತಲೂ ಅವರು ಗಡಿಯಾಚೆಗಿರುವ ಅರಬ ರಾಷ್ಟ್ರಗಳತ್ತವೇ ತಮ್ಮ ನಿಷ್ಠೆಯ ದೃಷ್ಟಿಯನ್ನಿಟ್ಟಿದ್ದಾರೆ. ರಕ್ತಸಂಬಂಧ ಕೊನೆಗೂ ಸಮೃದ್ಧಿಯ ಸಂಬಂಧಕ್ಕಿಂತ ಬಲವಾಗಿದೆಯೇನೋ. ಇದರಿಂದ ಮುಸ್ಲಿಮ ಹಳ್ಳಿ ಮತ್ತು ವಸತಿಗಳ ಮೇಲೆ ಸರಕಾರ, ಆತ್ಮರಕ್ಷಣೆಗಾಗಿ ಕಣ್ಣಿಡಲೇಬೇಕಾಗಿ ಬಂದಿದೆ. ಮುಸ್ಲಿಂ ವಸತಿಯುಳ್ಳ ಗಡಿ ಹಳ್ಳಿಗಳಲ್ಲಿ ಗೂಢಚಾರರ ಬಲೆಯ ಹರಡಿದೆ.

ಇಸ್ರಾಯಿಲ್ ರಾಜ್ಯ ಭಾರತೀಯ ಮಾದರಿಯ ಪ್ರಜಾಪ್ರಭುತ್ವವೇ ಆಗಿದೆ ಅದರ ಪ್ರಥಮ ಅಧ್ಯಕ್ಷರಾಗಿದ್ದ ಚೈಮ್ ವೈಜ್‌ಮನ್ನರು ವಿಜ್ಞಾನಿಯೂ ಬಹುಕಾಲ ಯಹೂದ್ಯಚಳವಳಿಯ ನಾಯಕರೂ ಆಗಿದ್ದು ಪಾಲಿಸ್ತಾನದಲ್ಲಿ ಯಹೂದ್ಯರ ಪ್ರವೇಶಕ್ಕೆ ಅವಕಾಶ ಮಾಡಿಕೊಡಲು ಬ್ರಿಟಿಶರ ಮನ ವೊಲಿಸಿದವರು. ಪ್ರಥಮ ಪ್ರಧಾನ ಮಂತ್ರಿ ಬೆನ್ ಗುರಿಯನ್ನರೇ ನಡುವೆ ಕೆಲ ಕಾಲ ಅಧಿಕಾರ ಕಳೆದುಕೊಂಡ ನಂತರ ಈಗ ಪುನಃ ಪ್ರಧಾನ ಮಂತ್ರಿಯಾಗಿದ್ದಾರೆ. ಅವರು ದೊಡ್ಡ ಹಿಬ್ರೂ ಪಂಡಿತರೂ ಶ್ರಮಜೀವಿಗಳೂ ಆಗಿದ್ದಾರೆ.

ಇಸ್ರಾಯಿಲ್ ಶ್ರಮಜೀವಿಗಳ ರಾಷ್ಟ್ರವೇ ಎನ್ನಬೇಕು. ಖಾಸಗಿ ಉದ್ಯಮಗಳು ಬೇಕಷ್ಟು ಬೆಳೆದಿದ್ದರೂ ಅಲ್ಲಿ ಕೆಲಸಗಾರರದೇ ಪ್ರಾಧಾನ್ಯ. ಶ್ರಮಜೀವಿಗಳ ಸಂಸ್ಥೆಯಾದ "ಹಿಸ್ತಾದ್ರುತ್" ರಾಷ್ಟ್ರದ ಜೀವನದಲ್ಲಿ ಪ್ರಮುಖಪಾತ್ರ ವಹಿಸಿದೆ. ಶ್ರಮಜೀವಿಗಳ ಪ್ರಾಧಾನ್ಯವುಳ್ಳ ಸಮಾಜವಾದಿ ವಿಚಾರಧಾರೆಯ "ಮಾಪಾಯಿ" ಪಕ್ಷವೇ ಎಲ್ಲಕ್ಕೂ ದೊಡ್ಡ ರಾಜಕೀಯ ಪಕ್ಷ. ಅದರ ಸಂಗಡಣೆಯಿಂದಲೇ ಸರಕಾರ ರಚನೆಯಾಗಿದೆ.

ಯಹೂದ್ಯರ ಎರಡು ಸಾವಿರ ವರ್ಷಗಳ ಕನಸು ಇಸ್ರಾಯಿಲ್‌ನಲ್ಲಿ ನನಸಾಗಿದೆ. ಈ ಪುಟ್ಟ ರಾಷ್ಟ್ರದಲ್ಲಿ ಜಗತ್ತಿನ ಯಹೂದ್ಯರೆಲ್ಲರೂ ಸೇರಿಲ್ಲವೆಂಬ ಮಾತು ನಿಜ. ಇಸ್ರಾಯಿಲ್‌ನೊಳಗಿರುವುದಕ್ಕಿಂತ ಹೊರಗಿರುವ ಯಹೂದ್ಯರೇ ಹೆಚ್ಚು. ರಶಿಯದಲ್ಲಿ ೨೦ ಲಕ್ಷ ಯಹೂದ್ಯರಿದ್ದಾರೆ. ಅವರಿಗೆ ಹೊರ ಹೋಗಲು ಅನುಮತಿಯಿಲ್ಲ. ಅಮೇರಿಕದಲ್ಲಿರುವ ೫೦ ಲಕ್ಷ ಯಹೂದ್ಯರು ಅತ್ಯಂತ ಸುರಕ್ಷಿತ ಮತ್ತು ಸಮೃದ್ಧಸ್ಥಿತಿಯಲ್ಲಿರುವುದರಿಂದ ಇಸ್ರಾಯಿಲಿಗೆ ಬರುವ ವಿಚಾರ ಅವರಿಗಿಲ್ಲ. ಆದರೆ ಅವರೆಲ್ಲರ ಹರಕೆ, ಧನಸಹಾಯ ಇಸ್ರಾಯಲಿನ ಬೆಂಬಲಕ್ಕಿದೆ. *

## ಇಂದಿನ ಮನೆಗಳಲ್ಲಿ ಸರ್ಫ್...

# 'ಗೃಹ ನಿರ್ವಹಣೆಯಲ್ಲಿ ಹೊಸ ಕ್ರಮಗಳೆ?'

ಎಂದು ನವ ದೆಹಲಿಯಲ್ಲಿರುವ ಸೆಕ್ರೆಟರಿ ಶ್ರೀಮತಿ ಚಂದರ್ ಮೋಹಿನಿ ಸರೀನ್ ಕೇಳುತ್ತಾರೆ.






'ನಿಮ್ಮ ಗೃಹನಿರ್ವಹಣೆಗೆ ಹೊಸ ಕ್ರಮಗಳು ಸರಿಯಾಗಿವೆಯೇ ಎಂದು ನೀವು ಪರೀಕ್ಷಿಸಿ ನೋಡಬೇಕು.' ಎಂದು ಅವರು ಹೇಳುತ್ತಾರೆ. ಶ್ರೀಮತಿ ಸರೀನ್ ಸರ್ಫ್‌ನ 'ಒಗೆಯುವ ಅಧಿಕ ಶಕ್ತಿ' ಬಟ್ಟೆಗಳಿಗೆ ಉಜ್ಜ್ವಲ ಬಿಳುಪನ್ನು ಕೊಡುತ್ತದೆಂದು ಮನಗಂಡಿದ್ದಾರೆ. 'ಏನು ನೊರೆ! ಮಗ್ಗಲಾಸಿಗೆ, ಫ್ರಾಕ್, ಇಜಾರು ಇತ್ಯಾದಿ ಎಲ್ಲ ಬಟ್ಟೆಗಳನ್ನು ಒಗೆಯಲು ನಾನು ಸರ್ಫನ್ನೇ ಉಪಯೋಗಿಸುತ್ತೇನೆ.'

# ಸರ್ಫ್ ನಿಮ್ಮ ಬಟ್ಟೆಗಳಿಗೆ ಅನುಪಮ ಬಿಳುಪು ಬರುವಂತೆ ಒಗೆಯುತ್ತದೆ

ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ

SU. 20-X29 KN



ಶರತ್‌ಚಂದ್ರರ ಒಂದು ಅನುಭವ

# ಸ್ಮೃತಿರತ್ನರ ಫಜೀತಿ

ಶರಚ್ಚಂದ್ರ ಚಟರ್ಜಿ

ಬಾಲ್ಯದಲ್ಲಿ ನನಗೆ ಲಾಲೂ ಎಂಬ ಹೆಸರಿನ ಮಿತ್ರನೊಬ್ಬ ಇದ್ದ. ಆತನೂ ಬಲು ತುಂಟ. ಯಾರನ್ನು ಯಾವಾಗ ಯಾವ ಕುತಂತ್ರದಿಂದ ಹೆದರಿಸಿ ಕಂಗಾಲು ಮಾಡಿಯಾನೆಂಬ ನಿಯಮವಿರಲಿಲ್ಲ. ನಿತ್ಯವೂ ಆತನ ತಂತ್ರ ಹೊಸತಾಗಿರುತ್ತಿತ್ತು. ಒಮ್ಮೆ ಆತ ರಬ್ಬರ್ ಹಾವನ್ನು ತೋರಿಸಿ ತನ್ನ ತಾಯಿಯನ್ನೆ ಹೆದರಿಸಿಬಿಟ್ಟಿದ್ದ. ಪಾಪ! ಅವಳು ಗಾಬರಿಯಿಂದ ಓಡಿದಾಗ ಅವಳ ಕಾಲು ಉಳುಕಿಹೋಗಿ ಮೂರು ತಿಂಗಳ ಕಾಲ ಹಾಸಿಗೆಯ ಮೇಲೆ ಮಲಗಿರಬೇಕಾಯಿತು.

ಲಾಲೂನ ವಯಸ್ಸಿನ ಜೊತೆಗೆ ಅವನ ತುಂಟತನ ಬೆಳೆಯದಿರಲಿ ಎಂದು ಅವನ ತಾಯಿ ಗಂಡನಿಗೆ "ಆದಷ್ಟು ಬೇಗ ಒಬ್ಬ ಖಾಸಗಿ ಶಿಕ್ಷಕನನ್ನು ನೇಮಿಸಿ!" ಎಂದು ಕಟ್ಟುನಿಟ್ಟಾಗಿ ಹೇಳಿದಳು. ಮುಂಜಾನೆ ಸಂಜೆ ಮಾಸ್ತರನ ಕಾವಲು ಬಿದ್ದರೆ ಲಾಲೂನ ಪುಂಡಾಟಿಕೆ ಒಂದಿಷ್ಟು ಕಡಿಮೆಯಾದೀತೆಂದು ಅವಳು ನಂಬಿದ್ದಳು.

ಆದರೆ ವಕೀಲ ಸಾಹೇಬರು ಹೆಂಡತಿಯ ಈ ಮಾತನ್ನು ಒಮ್ಮೆಲೆ ಒಪ್ಪಿಕೊಳ್ಳಲಿಲ್ಲ. ಅವರು ಸ್ವಾವಲಂಬನದಿಂದ ಬಡತನವನ್ನುದೂರ ಮಾಡಿಕೊಂಡು ಇಂದಿನ ಸಂಪನ್ನ ಸ್ಥಿತಿಗೆ ಬಂದಿದ್ದರು. ಇಂದು ಅವರು ಈ ಭಾಗದಲ್ಲೆ ಹೆಸರಾದ ವಕೀಲ

ರಾಗಿದ್ದರು. ಮಗ ತನ್ನಂತೆಯೆ ತನ್ನ ಸಾಮರ್ಥ್ಯ ದಿಂದಲೇ ಮುಂದೆ ಬರಬೇಕು ಎಂದು ಅವರು ಬಯಸುತ್ತಿದ್ದರು. ಪತಿ-ಪತ್ನಿಯರ ಈ ಮತ ಭೇದದಿಂದಲೇ ಇದುವರೆಗೆ ಖಾಸಗಿ ಶಿಕ್ಷಕನ ನೇಮಕವಾಗಿರಲಿಲ್ಲ. ಈ ಸಲವೂ ಈ ಬಗ್ಗೆ ಗಂಡ ಹೆಂಡರಲ್ಲಿ ತುಂಬ ವಾದ ವಿವಾದ ನಡೆದು ಕೊನೆಗೆ ಯಾವಾಗ ಲಾಲೂ ಪರೀಕ್ಷೆಯಲ್ಲಿ ಒಂದನೇ ನಂಬರು ಬರುವುದಿಲ್ಲವೊ ಆಗ ಅವನಿ ಗಾಗಿ ಖಾಸಗಿ ಶಿಕ್ಷಕರನ್ನು ನೇಮಿಸಬೇಕು ಎಂದು ನಿಶ್ಚಯವಾಯಿತು.

ತನ್ನ ಮೇಲೆ ಬಂದಿದ್ದ ಸಂಕಟದಿಂದ ಲಾಲೂ ತಾತ್ಪೂರ್ತಿಕವಾಗಿ ಪಾರಾಗಿದ್ದನಾದರೂ ಅವ ನಿಗೆ ತಾಯಿಯ ಮೇಲೆ ಬಲು ಸಿಟ್ಟು ಬಂದಿತು. ಅವಳ 'ಕೃಪೆ' ಯಿಂದಲೇ ಇಂದಲ್ಲ ನಾಳೆಯಾ ದರೂ ಖಾಸಗಿ ಶಿಕ್ಷಕ ಅವನ ತಲೆಯ ಮೇಲೆ ಕೂಡ್ರತಕ್ಕವನಿದ್ದ. ಮನೆಯಲ್ಲಿ ಪೋಲೀಸರು ಬರುವುದು ಮತ್ತು ನಿಯಮಿತ ವೇಳೆಗೆ ಖಾಸಗಿ ಶಿಕ್ಷಕ ಬರುವುದು ಎರಡೂ ಅವನಿಗೆ ಅಷ್ಟೇ ಭಯಂಕರವಾದ ಸಂಗತಿಗಳೆಂದು ಅನಿಸು ತ್ತಿತ್ತು.

ಲಾಲೂನ ತಂದೆ ಶ್ರೀಮಂತರಾಗಿದ್ದರು. ಇದೀಗ ಅವರು ತಮ್ಮ ಪಿತ್ರಾರ್ಜಿತ ಮನೆ ಯನ್ನು ಕೆಡವಿಸಿ ಅಲ್ಲಿ ಮೂರಂತಸ್ತಿನ ಭವ್ಯ ಮನೆಯನ್ನು ಕಟ್ಟಿಸಿದ್ದರು. ಲಾಲೂನ ತಾಯಿ ತುಂಬ ಧಾರ್ಮಿಕ ವೃತ್ತಿಯವಳು. ತಮ್ಮ ಈ ಹೊಸ ಮನೆಯಲ್ಲಿ ಕುಲಪುರೋಹಿತರ ಚರಣ ಧೂಳಿ ಬೀಳಬೇಕು ಎಂದು ಅವಳ ಉತ್ಕಟ ಬಯಕೆಯಿತ್ತು.

ಪಂಡಿತ ಸ್ಮೃತಿರತ್ನರು ಹಣ್ಣು ಮುದುಕ ರಾಗಿ ಬಿಟ್ಟಿದ್ದರು. ಫರೀದಪುರದಿಂದ ಇಲ್ಲಿಗೆ ಪ್ರವಾಸ ಮಾಡುವಷ್ಟು ಚೈತನ್ಯ ಅವರಲ್ಲಿರ ಲಿಲ್ಲ. ಆದರೆ ಇಂಥ ಶುಭ ಪ್ರಸಂಗ ಹಗಲೆಲ್ಲ ಬರುವುದಿಲ್ಲ ಎಂದು ಯೋಚಿಸಿ ಅವರು— ಹೇಗೂ ಅವರು ಸೂರ್ಯಗ್ರಹಣ ನಿಮಿತ್ತವಾಗಿ ಕಾಶಿಗೆ ಗಂಗಾಸ್ನಾನಕ್ಕೆಂದು ಬಂದಿದ್ದರು— ಕಾಶಿಯಿಂದ ತಾವು ಬರುವುದಾಗಿ ಲಾಲೂನ ತಾಯಿ ನಂದಾ ರಾಣಿಗೆ ತಿಳಿಸಿದರು. ನಂದಾ ರಾಣಿಗೆ ಈ ಸಮಾಚಾರ ತಿಳಿದಾಗ ಬಲು ಆನಂದವಾಯಿತು. ಬಹು ದಿನಗಳಿಂದಲೂ ಅವ ಳಿಗೆ ಗುರುಗಳ ಸಹವಾಸದ, ಅವರ ಆದರಾ- ತಿಥ್ಯದ, ಚರಣಸೇವೆಯ ಭಾಗ್ಯ ದೊರೆತಿರಲಿಲ್ಲ. ಪಂಡಿತ ಸ್ಮೃತಿರತ್ನರು ಬಂದಾಗ ಅವರಿಗೆ ಏನೊಂದೂ ತೊಂದರೆಯಾಗಬಾರದು ಎಂದು ಅವಳು ಸಿದ್ಧತೆಗೆ ತೊಡಗಿದಳು.

ಮಾಳಿಗೆ ಏರಿಳಿಯುವುದು ಮುದುಕರಾದ ಕುಲಪುರೋಹಿತರಿಗೆ ಕಷ್ಟವಾದೀತೆಂದು ಅವ ರಿಗಾಗಿ ಕೆಳಗಡೆಗೇ ಅವರ ವಸತಿಯ ಏರ್ಪಾಟು ಮಾಡಿದಳು. ರಾತ್ರಿ ಸೊಳ್ಳೆಗಳ ಕಾಟವಾಗ ಬಾರದು ಎಂದು ಅವರಿಗಾಗಿ ಮಚ್ಛರದಾನಿ ಕಟ್ಟಿದ ಪಲ್ಲಂಗವನ್ನು ಕೆಳಗೆ ತರಿಸಿಟ್ಟಳು.

ಕುಲಪುರೋಹಿತ ಪಂಡಿತ ಸ್ಮೃತಿರತ್ನರು ಬಂದರು. ತಮ್ಮೊಡನೆ ಅವರು ಒಂದು ಸಂಕಟ ವನ್ನೂ ತಂದರು. ಅವರು ಬಂದ ದಿನವೇ ಮುಸಲಧಾರೆಯಾಗಿ ಮಳೆ ಬೀಳತೊಡಗಿತು. ನಂದಾರಾಣಿ ಅವರ ಆದರಾತಿಥ್ಯದಲ್ಲಿ ಮಗ್ನ ಳಾಗಿದ್ದಳು. ಅವರಿಗಾಗಿ ಬಗೆಬಗೆಯ ಮಿಷ್ಟಾ ನ್ನಗಳನ್ನು ತಯಾರಿಸಿದಳು. ಸ್ಮೃತಿರತ್ನರು ಬಂದಾಗ ಬಹಳ ರಾತ್ರಿಯಾಗಿತ್ತಾದ್ದರಿಂದ ಅವ ರಿಗಾಗಿ ಫಲಾಹಾರದ ವ್ಯವಸ್ಥೆ ಮಾಡಿದಳು. ಫಲಾಹಾರ, ಅದು ಇದು ಮಾತುಕಥೆ ಎನ್ನು ವಷ್ಟರಲ್ಲಿ ಮಧ್ಯರಾತ್ರಿ ಕಳೆದುಹೋಯಿತು.

ದಣಿದು ಸುಣ್ಣವಾದ ಪಂಡಿತರು ಹಾಸಿಗೆಯ ಮೇಲೆ ಬಿದ್ದುಕೊಂಡರು. ಆ ಸುಕೋಮಲ ಶಯ್ಯಾಸುಖದಿಂದ ಅವರ ಕಂಠ ಬಿಗಿದುಬಂತು. ನಂದಾರಾಣಿಗೆ ಮನಃಪೂರ್ವಕವಾಗಿ ಆಶೀ- ರ್ವಾದ ಮಾಡುತ್ತ ಅವರು ನಿದ್ರಾಧೀನರಾದರು.

ಆದರೆ ತುಸು ಹೊತ್ತಿನ ನಂತರ ಅವರಿಗೆ ತಟನೆ ಎಚ್ಚರಾಯಿತು. ಮಾಡಿನಿಂದ ಅವರ ಮೇಲೆ ನೀರು ತಟಕಿಕ್ಕುತ್ತಿತ್ತು. ಸೊಳ್ಳೆಪರದೆ ತೊಯ್ದುಹೋಗಿತ್ತು. ಬೀಳುತ್ತಿದ್ದ ಪ್ರತಿ

ಯೊಂದು ನೀರಿನ ಹನಿ ಬರ್ಫದ ನೀರಿನಂತಿತ್ತು. ಪಂಡಿತರು ಗಾಬರಿಯಾಗಿ ಪಲ್ಲಂಗದಿಂದ ಕೆಳಗಿಳಿದು ಒದ್ದೆಮೈಯನ್ನು ಒರೆಸಿಕೊಳ್ಳುತ್ತ "ನಂದಾರಾಣಿ ಹೊಸತಾಗಿ ಮನೆ ಕಟ್ಟಿಸಿದ್ದಾಳೆ. ಬಹುಶಃ ಬಿಸಿಲಿನಿಂದ ಮಾಳಿಗೆಗೆ ಬಿರುಕು ಬಿಟ್ಟಿರಬೇಕು" ಎಂದುಕೊಂಡರು.

ಹೊರಗೆ ಮಳೆ ಸುರಿಯುತ್ತಿತ್ತು. ಕೋಣೆಯಲ್ಲಿ ಗಾಢವಾದ ಕತ್ತಲೆಯಿತ್ತು. ಹೊರಗೂ ವಿಲಕ್ಷಣ ಶಾಂತಿಯಿತ್ತು. ಪಲ್ಲಂಗವೇನೂ ಬಹಳ ಭಾರವಾಗಿರಲಿಲ್ಲವಾದ್ದರಿಂದ ಪಂಡಿತರು ಅದನ್ನು ಬೇರೆ ಮೂಲೆಗೆ ಎಳೆದೊಯ್ದರು. ಮತ್ತೆ ಮಲಗಬೇಕೆನ್ನುವಾಗ ಅಲ್ಲಿಯೂ ನೀರು ತಟಕಿಕ್ಕುವುದು ಕಾಣಿಸಿತು. ನಾಲ್ಕೂ ಮೂಲೆಗಳಲ್ಲೂ ಇದೇ ಅವಸ್ಥೆ. ಅವರು ತ್ರಸ್ತರಾಗಿ "ಇಡೀ ಮಾಳಿಗೆಯೆ ಸೋರುತ್ತಿರುವಂತಿದೆ" ಎಂದುಕೊಂಡರು. ಇಡೀ ಹಾಸಿಗೆ ಒದ್ದೆಯಾಗಿತ್ತು. ಅದರ ಮೇಲೆ ಮಲಗುವುದು ಸಾಧ್ಯವಿರಲಿಲ್ಲ. ಅಮಾವಾಸ್ಯೆಯ ರಾತ್ರಿ, ಅಪರಿಚಿತವಾದ ಸ್ಥಳ, ವೃದ್ಧಾಪ್ಯ, ಮತ್ತೆ ಪ್ರವಾಸದ ದಣಿವು. ಸ್ಮೃತಿರತ್ನರು ವಿಚಿತ್ರ ಸಂಕಟಕ್ಕೆ ಸಿಲುಕಿದ್ದರು. ಕೋಣೆಯಲ್ಲಿರುವುದೂ ಗಂಡಾಂತರದ್ದೇ ಎಂದು ಅವರಿಗೆ ಅನಿಸತೊಡಗಿತು. ಮಾಡು ಎಷ್ಟೊತ್ತಿಗೆ ಕುಸಿದೀತು ಎಂಬ ನಿಯಮವಿರಲಿಲ್ಲ.

ಹೊರಗೆ ಮಳೆ ಜಡಿಯುತ್ತಿತು. ಆಗಾಗ ತಣ್ಣನ್ನ ಗಾಳಿ ಬೀಸುತ್ತಿತ್ತು. ಜಗಲಿಯ ಮೇಲೆ ನಿಲ್ಲುವುದು ಕೂಡ ಪಂಡಿತರಿಗಾಗಲಿಲ್ಲ. ಅಷ್ಟು ಥಂಡಿಯಿತ್ತು. ಆಳುಗಳ ಕೋಣೆ ಯಾವುದೆಂದು ಅವರಿಗೆ ಗೊತ್ತಿರಲಿಲ್ಲ. ತುಂಬ ಪ್ರಯಾಸದಿಂದ ಅವರು ಒಂದು ಹೆಸರನ್ನು ನೆನಪುಮಾಡಿಕೊಂಡು ಎರಡು ಮೂರು ಸಲ ಕೂಗಿದರು. ಆದರೆ ಆ ಘನಘೋರ ಮಳೆಯ ಅರ್ಭಟದಲ್ಲಿ ಅವರ ಕೂಗು ಅಡಗಿಹೋಯಿತು.

ಪಕ್ಷಕಾರರು ಕುಳಿತುಕೊಳ್ಳಲೆಂದು ಜಗಲಿಯ ಮೇಲೊಂದು ಬೆಂಚು ಇಟ್ಟಿದ್ದರು. ಅದರ ಆಶ್ರಯ ಪಡೆಯದೆ ಪಂಡಿತರಿಗೆ ಬೇರೆ ಗತಿಯಿರಲಿಲ್ಲ. ಚಳಿಯಿಂದ ಮೈ ನಡುಗುತ್ತಿತ್ತು. ಮೈಮೇಲಿನ ಧೋತರವನ್ನೆ ಸುತ್ತಿಕೊಂಡು ಮಲಗುವ ವಿಚಾರವನ್ನು ಮಾಡಿದರು. ನಿದ್ರಾಭಂಗದಿಂದ ಮನಸ್ಸು ವ್ಯಗ್ರವಾಗಿತ್ತು. ವಯಸ್ಸಿನ ಮಾನಕ್ಕೆ ತುಸು ಹೆಚ್ಚಾಗಿಯೆ ಫಲಾಹಾರ ಸ್ವೀಕರಿಸಿದ್ದರಿಂದ ಒಂದೇ ಸವನೆ ತೇಗು ಬರುತ್ತಿತ್ತು. ಪ್ರಶಸ್ತವಾಗಿ ಮಲಗಲು ಬೆಂಚು ಕಿರಿದಾಗಿತ್ತು. ಇದೂ ಸಾಲದೆಂಬಂತೆ ಅವರ ಕಿವಿಯ ಹತ್ತಿರವೇ ಸೊಳ್ಳೆಗಳ ಗಾನ ಕೇಳಿಸಿತು. ನಿದ್ದೆಯ ಅಮಲಿನಲ್ಲಿ ಮೊದಮೊದಲು ಅವರಿಗೆ ಸೊಳ್ಳೆಗಳ ಪರಿವೆಯೆನಿಸದಿದ್ದರೂ ಮುಂದೆ ಅವುಗಳೆದುರು ಅವರು ಸೋಲೊಪ್ಪಿಕೊಳ್ಳಬೇಕಾಯಿತು. ಒಳಗೆಲ್ಲ ಸೋರುತ್ತಿದ್ದುದರಿಂದ ಅಲ್ಲಿ ಮಲಗುವಂತಿಲ್ಲ. ನಿದ್ದೆ ಬಾರದೆ ಸುಮ್ಮನೆ ಮಲಗಿರುವುದೂ ತ್ರಾಸದಾಯಕವಾಗಿತ್ತು. ನಿದ್ದೆಯ ಅಮಲನ್ನು ಇಳಿಸಲೆಂದು ಅವರು ಶತಪಥ ಹಾಕತೊಡಗಿದರು. ಮನೆಯಲ್ಲಿ ಎಲ್ಲರೂ ಸುಖವಾಗಿ ನಿದ್ರಿಸುತ್ತಿದ್ದಾಗ ಪಂಡಿತರು "ಡಬಲ್ ಮಾರ್ಚ್" ಮಾಡಹತ್ತಿದ್ದರು.

ಯಾವುದೋ ಗಡಿಯಾರ ನಾಲ್ಕು ಹೊಡೆಯಿತು. ಪಂಡಿತರಿಗೆ ಮಿತಿಮೀರಿದ ಕೋಪ ಬಂತು. ಈ ಚಳಿ ಮತ್ತು ಸೊಳ್ಳೆಗಳಿಂದ ಪಾರಾಗಿ ಬೆಳಗಾಗುವ ತನಕ ಬದುಕುಳಿದರೆ ಮುಂದೆ ಒಂದು ಕ್ಷಣವೂ ಈ ಊರಲ್ಲಿರುವುದಿಲ್ಲ ಎಂದವರು ಪ್ರತಿಜ್ಞೆ ಮಾಡಿದರು.

ತುಸು ಹೊತ್ತಿನಲ್ಲಿ ಆಕಾಶ ಬೆಳಗತೊಡಗಿತು. ರಾತ್ರಿಯಿಡೀ ಜಾಗರಣೆ ಮತ್ತು ಶಾರೀರಕ ದಣಿವಿನಿಂದ ಪೂರ್ಣ ಶಿಥಿಲರಾಗಿ ಹೋಗಿದ್ದ ಪಂಡಿತರಿಗೆ ಜಗಲಿಯ ಗೋಡೆಗೆ ಆತು ಕೂಡ್ರುವುದೊಂದೇ ತಡ, ಎಚ್ಚರವಳಿದು ಗಾಢ ನಿದ್ದೆ ಬಂದು ಬಿಟ್ಟಿತು.

ನಂದಾರಾಣಿ ಎಂದಿಗಿಂತಲೂ ತುಸು ಬೇಗನೆ ಎದ್ದಳು. ರಾತ್ರಿ ತಡವಾದ್ದರಿಂದಲೂ ಮಳೆಯಿಂದಲೂ ಪುರೋಹಿತರ ಆದರಾತಿಥ್ಯ ಸರಿಯಾ

ಗಿರಲಿಲ್ಲ. ಈಗ ಆ ಕೊರತೆಯನ್ನೆಲ್ಲ ತುಂಬಬೇಕೆಂದು ಅವಳು ಯೋಚಿಸಿದಳು.

ಆದರೆ ಕೆಳಗೆ ಬಂದು ನೋಡಿದಾಗ ಪಂಡಿತರ ಕೋಣೆಯ ಬಾಗಿಲು ತೆರೆದಿತ್ತು. ಅಂದರೆ— ಪಂಡಿತರು ತನಗಿಂತ ಮೊದಲೇ ಎದ್ದಿರುವರೆ? ತಾನು ತಡಮಾಡಿ ಎದ್ದದ್ದಕ್ಕಾಗಿ ಅವಳಿಗೆ ನಾಚಿಕೆಯಾಯಿತು. ಆದರೆ ಕೋಣೆಯಲ್ಲಿ ಹೋಗಿ ನೋಡಿದರೆ ಪಲ್ಲಂಗದ ಮೇಲೆ ಪಂಡಿತರಿರಲಿಲ್ಲ. ಕೋಣೆಯಲ್ಲಿದ್ದ ಸಾಮಾನುಗಳು ಅಸ್ತವ್ಯಸ್ತವಾಗಿದ್ದವು. ದಕ್ಷಿಣ ಮೂಲೆಯಲ್ಲಿದ್ದ ಪಲ್ಲಂಗ ಉತ್ತರ ದಿಕ್ಕಿಗೆ ಬಂದಿತ್ತು. ಏನೂ ಅರ್ಥವಾಗದೆ ನಂದಾರಾಣಿ ಕೋಣೆಯ ಹೊರಗೆ ಬಂದು ಆಳುಗಳನ್ನು ಕೂಗಿದಳು. ಆದರೆ ಅವರಲ್ಲಾರೂ ಎದ್ದಿರಲಿಲ್ಲ. ಅಷ್ಟರಲ್ಲಿ ಜಗಲಿಯ ಮೇಲೆ ಗೋಡೆಗೆ ಅಸ್ತವ್ಯಸ್ತವಾಗಿ ಒರಗಿಕೊಂಡು ನಿದ್ರಿಸುತ್ತಿದ್ದ ಪಂಡಿತರು ಅವಳಿಗೆ ಕಾಣಿಸಿದರು. ಯಾವುದೋ ಅಜ್ಞಾತ ಭೀತಿಯಿಂದ ಅವಳ ಎದೆ ನಡುಗಿತು. "ಅಯ್ಯೊ! ಪರಮಾತ್ಮಾ, ಇದೆಲ್ಲ ಏನಾಯಿತು?" ಎಂದುಕೊಂಡಳಾಕೆ.

ಸ್ಮೃತಿರತ್ನರಿಗೆ ತಟ್ಟನೆ ಎಚ್ಚರಾಯಿತು. ಅವರ ಅವಸ್ಥೆಯನ್ನು ಕಂಡು ನಂದಾರಾಣಿಗೆ ಭಯ, ನಾಚಿಕೆ, ಚಿಂತೆಗಳಿಂದ ಅಳು ಬಂತು. "ಗುರುಗಳೇ, ಇದೇನು ಇಲ್ಲಿ?" ಎಂದು ಕೇಳಿದಳಾಕೆ.

"ಮತ್ತೇನು ಮಾಡಲಿ! ರಾತ್ರಿಯಿಡೀ ಜಾಗರಣೆಯಾಗಿಹೋಯಿತು."

"ಅಂ! ಯಾಕೆ?"

"ನೀನು ಹೊಸ ಮನೆ ಕಟ್ಟಿಸಿದ್ದು ನಿಜ. ಆದರೆ ಬಿಸಿಲಿನಿಂದ ಇಡೀ ಮಾಡಿಗೆ ಬಿರುಕು ಬಿದ್ದಿದೆ. ರಾತ್ರಿಯಿಡೀ ಸೋರುತಿತ್ತು. ಮಾಡೇ ಕುಸಿದು ಬಿದ್ದೀತೆಂದು ಅಂಜಿ ಜಗುಲಿಗೆ ಬಂದೆ. ಅಲ್ಲಿ ಸೊಳ್ಳೆಗಳು ತ್ರಾಹಿ ತ್ರಾಹಿ ಎನಿಸಿಬಿಟ್ಟವು."

ಪಂಡಿತರ ದೈನ್ಯವನ್ನು ಕಂಡು ನಂದಾರಾಣಿಗೆ ಇನ್ನಿಷ್ಟು ಸಂತಾಪವಾಯಿತು. ಆದರೆ ಮನೆ ಸೋರಿದ್ದು ಹೇಗೆ ಎಂದು ಅವಳಿಗೆ ತಿಳಿಯಲಿಲ್ಲ. ಮೂರನೆಯ ಮಾಳಿಗೆಯ ಮೇಲಿದ್ದ ಅವಳ ಕೋಣೆ ಸೋರದಿರುವಾಗ ಕೆಳಗಿನ ಕೋಣೆ ಸೋರಿತಾದರೂ ಹೇಗೆ? ಆಶ್ಚರ್ಯವಲ್ಲವೆ?

ಅವಳು ಕೋಣೆಗೆ ಹೋಗಿ ನೋಡಿದಳು. ನೆಲವೆಲ್ಲ ಒಣಗಿಯೇ ಇತ್ತು. ಪಲ್ಲಂಗದ ಮೇಲಿನ ಹಾಸಿಗೆ ಮಾತ್ರ ಒದ್ದೆಯಾಗಿತ್ತು. ಮಚ್ಚಗದಾನಿಯ ಮೇಲ್ಗಡೆ ಭಾಗದಲ್ಲಿ ಅರಿವೆಯಲ್ಲಿ ಸುತ್ತಿಟ್ಟ ಬರ್ಫದ ತುಂಡು ಅವಳಿಗೆ ಸಿಕ್ಕಿತು. ರಾತ್ರಿಯಿಡೀ ಈ ಬರ್ಫವೇ ಸ್ಮೃತಿರತ್ನರನ್ನು ತೋಯಿಸಿ ಗೋಳು ಹೊಯ್ದುಕೊಂಡಿತ್ತು. ಇದನ್ನೆಲ್ಲ ಕಂಡ ಬಳಿಕ ನಂದಾರಾಣಿಗೆ ಇಷ್ಟೆಲ್ಲ ಕುತಂತ್ರ ನಡೆಸಿದ್ದು ಯಾರು ಎಂದು ತಿಳಿದುಹೋಯಿತು.

ಹೊರಗೆ ಬಂದು ಅವಳು ಗರ್ಜಿಸಿದಳು: "ಎಲ್ಲಿದ್ದಾನೆ ಆ ನತದೃಷ್ಟ? ಹಾಳಾದ ಲಾಲೂನೆ ಇದೆಲ್ಲ ಮಾಡಿರಬೇಕು."

ಆದರೆ ಲಾಲೂನ ಪತ್ತೆ ಹತ್ತಲಿಲ್ಲ. ತುಸು ಹೊತ್ತಿನ ಮೇಲೆ ಅದೇ ಊರಿನಲ್ಲಿದ್ದ ಅವಳ ಅಕ್ಕನಿಂದ "ಲಾಲೂ ನನ್ನ ಮನೆಗೆ ಬಂದಿದ್ದಾನೆ. ಹತ್ತು ಹದಿನೈದು ದಿನ ಇಲ್ಲೇ ಇರುತ್ತಾನೆ" ಎಂಬ ಸಮಾಚಾರ ಅವಳಿಗೆ ಬಂತು. *

ಹಾಲು ತನಗೆ ಎಟಕದಿರುವಾಗ ಬೆಕ್ಕು ಕೂಡ ಪ್ರಾಮಾಣಿಕವಾಗಿರುತ್ತದೆ.

—ಒಂದು ಜಾಣ್ನುಡಿ

ಜಗತ್ತಿನಲ್ಲಿ ಯಾವುದೂ ಪೂರ್ಣ ತಪ್ಪಾಗಿರುವುದಿಲ್ಲ. ಸಂಪೂರ್ಣವಾಗಿ ಬಂದು ಬಿದ್ದಿರುವ ಗಡಿಯಾರ ಕೂಡ ದಿನದಲ್ಲಿ ಎರಡು ಸಲ ಸರಿಯಾಗಿರುತ್ತದೆ.

—ಅಜ್ಞಾತ





# "ಘಾನಾ ಬಿನ ಘಾನಾ"

೧೯೫೨ ಜನವರಿ ೨೯ ರಂದು ಸಂಜೆ ೫ ಗಂಟೆಯ ಸುಮಾರಿಗೆ ಕೋರ್ಟಿನ ಕೆಲಸ ಮುಗಿಸಿಕೊಂಡು ಮೈಸೂರು ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ಮೇದಪ್ಪನವರು ಬೆಂಗಳೂರಿನ ಕನಿಂಗ್‌ಹ್ಯಾಮ್ ರೋಡಿನಲ್ಲಿದ್ದ ತಮ್ಮ ಬಂಗಲೆಗೆ ಬಂದರು.

ಅವರು ಬಂದೊಡನೆಯೆ ಅವರ ಪತ್ನಿ ಮತ್ತು ಮಗಳು ಹೊರಗೆಲ್ಲಿಯೊ ಚಹಾಪಾರ್ಟಿಗಾಗಿ ಹೋಗಿದ್ದಾರೆಂದು ಬಂಗಲೆಯ ಕಾವಲುಗಾರ ಲಿಂಗ ಅವರಿಗೆ ತಿಳಿಸಿದ. ಸಾಹೇಬರು ಬಂದದ್ದನ್ನು ನೋಡಿದ್ದ ಆಳು ಲಕ್ಕನು ಅಡಿಗೆಮನೆಯಲ್ಲಿ ಚಹದ ತಯಾರಿಗೆ ತೊಡಗಿದ. ಮೇದಪ್ಪನವರು ತಮ್ಮ ಕೋಣೆಯಲ್ಲಿ ಅಂದು ಬಂದಿದ್ದ ಪತ್ರಗಳನ್ನು ಓದುತ್ತ ಕುಳಿತಾಗ ಇನ್ನೊಬ್ಬ ಆಳು ಗಂಗ್ಯಾ ಅವರೆದುರಿನ ಮೇಜಿನ ಮೇಲೆ ತಿಂಡಿ ಮತ್ತು ಚಹದ ಟ್ರೇ ತಂದಿಟ್ಟ. ಚಹದ ಅರ್ಕ ಚೆನ್ನಾಗಿ ಬಂದಿದೆಯೆ ಎಂದು ನೋಡಲೆಂದು ಆತ ಕಿಟಲಿಯ ಮುಚ್ಚಳ ತೆಗೆದಾಗ ಅರ್ಕ ಕೊಂಚ ಬೆಳ್ಳಗಾಗಿರುವುದು ಅವನಿಗೆ ಕಾಣಿಸಿತು. ಎಲ್ಲಿಯೊ ಕೈತಪ್ಪಿ ಹಾಲಿನ ಹನಿ ಬಿದ್ದಿರಬೇಕೆಂದು ಯೋಚಿಸಿ ಆತ ಹಾಲು ತರಲೆಂದು ಒಳಗೆ ಹೋದ.

ಕಿಟಲಿಗೆ ಹಾಕಿ ಉಳಿದಿದ್ದ ಬಿಸಿ ನೀರಿನಲ್ಲಿ ಲಕ್ಕ ಒಂದು ಹಾಲು ಹಾಕಿದ ತಟ್ಟೆಯನ್ನಿಟ್ಟಿದ್ದ. ಗಂಗ್ಯಾ ತಟ್ಟೆಯನ್ನೆತ್ತಿಕೊಂಡಾಗ ಅದರ ಸುತ್ತಲೂ ಒಂದು ಬಗೆಯ ಬಿಳಿ ಲೇಪವನ್ನು ಕಂಡು ಅವನಿಗೆ ಆಶ್ಚರ್ಯವಾಯಿತು. ಹಿಂದೆಂದೂ ಹೀಗೆ ಆಗಿರಲಿಲ್ಲ. ಪಾತ್ರೆಯಲ್ಲಿದ್ದ ನೀರೂ ತುಸು ಬಿಳಿಯದಾಗಿ ಕಾಣಿಸುತ್ತಿತ್ತು. ಗಂಗ್ಯಾನ ಮನದಲ್ಲಿ ಒಂದು ಸಂದೇಹ ಮಿಂಚಿಹೋಯಿತು. ಆತ ಸರಕ್ಕನೆ ತಿರುಗಿ ಹೋಗಿ ಮೇದಪ್ಪನವರ ಮುಂದಿಟ್ಟಿದ್ದ ಚಹದ ಟ್ರೇ ತಂದು ಕಿಟಲಿಯಲ್ಲಿದ್ದ ಚಹ ಮತ್ತು ಪಾತ್ರೆಯಲ್ಲಿದ್ದ ನೀರನ್ನು ಮೋರಿಯಲ್ಲಿ ಚೆಲ್ಲಿದ. ಮತ್ತೊಂದು ಪಾತ್ರೆಯಲ್ಲಿ ಚಹಾ ಮಾಡಿಕೊಂಡು ಹೋಗಿ ಕೊಟ್ಟ.

ಚಹದ ಪಾತ್ರೆಯಲ್ಲಿ ಬಿದ್ದ ಪೌಡರ್ ಏನಿರಬಹುದು ಎಂದು ಗಂಗ್ಯಾ ಲಕ್ಕನನ್ನು ಕೇಳಿದ. ಆತನಿಗೂ ಇದೊಂದು ಗೂಢವೇ ಆಗಿತ್ತು. ನೀರನ್ನು ಒಲೆಯ ಮೇಲಿಟ್ಟಾಗ ಅದು ಸ್ವಚ್ಛವಿತ್ತೆಂದು ಆತ ಹೇಳಿದ. ಕಾವಲುಗಾರ ಲಿಂಗ ಮತ್ತು ಮನೆಯಲ್ಲಿದ್ದ ದಾದಿಯರನ್ನು ಗಂಗ್ಯಾ ಕೇಳಿದಾಗ ತಮಗೆ ಏನೂ ತಿಳಿಯದು ಎಂದು ಅವರು ಉತ್ತರವಿತ್ತರು.

ಮೇದಪ್ಪನವರು ಅಷ್ಟರಲ್ಲಿ ಸ್ನಾನ ತೀರಿಸಿ ಊರೊಳಗೆ ಅಡ್ಡಾಡಿ ಬರಲು ಹೊರಟರು. ಅಷ್ಟರಲ್ಲಿ ಅವರ ಮಗಳು ಅಕ್ಕ ಹೊರಗಿನಿಂದ ಬಂದಳು. ತಂದೆ ಮಗಳಿಬ್ಬರೂ ಜಗುಲಿಯಲ್ಲಿ ಮಾತಾಡುತ್ತ ನಿಂತಿದ್ದಾಗ ಗಂಗ್ಯಾ ಬಂದು ಎಲ್ಲವನ್ನೂ ಅರಿಕೆ ಮಾಡಿಕೊಂಡ.

ಆಶ್ಚರ್ಯಚಕಿತರಾದ ಮೇದಪ್ಪನವರು ಅಡಿಗೆ ಮನೆಗೆ ಹೋಗಿ ಪಾತ್ರೆ ಮತ್ತು ಹಾಲಿನ ತಟ್ಟೆಯನ್ನು ನೋಡಿದರು. ತಟ್ಟೆಯ ಹೊರಬದಿಗೆ ಏನೊ ಬಿಳಿ ಪದಾರ್ಥ ಅಂಟಿಕೊಂಡದ್ದು ಸ್ಪಷ್ಟವಾಗಿ ಕಾಣಿಸುತ್ತಿತ್ತು. ತಾನೆಂಥ ಆಪತ್ತಿನಿಂದ ಪಾರಾದೆ ಎಂಬುದು ಮೇದಪ್ಪನವರಿಗೆ ತಿಳಿದುಹೋಯಿತು. ಇದರ ಹಿಂದೇನೊ ಭೀಕರ ಒಳಸಂಚಿರಬೇಕೆಂದು ಅವರ ಮನಸ್ಸಿಗೆ ಖಾತ್ರಿಯಾಯಿತು. ತಮ್ಮ ಆಳುಗಳಿಗೆ ಅವರು ಕೆಲ ಪ್ರಶ್ನೆಗಳನ್ನು ಕೇಳಿದರು. ಅವರ ಮನೆಗೆ ಆಗಾಗ

ಬಂದು ಸಣ್ಣಪುಟ್ಟ ಕೆಲಸ ಮಾಡಿ ಕೊಟ್ಟು ಹೋಗುತ್ತಿದ್ದ ದಾದಿ ಅಷ್ಟರಲ್ಲಿ ಮನೆಗೆ ಹೋಗಿ ಬಿಟ್ಟಿದ್ದಳು.

ಮೇದಪ್ಪನವರು ಕ್ಲಬ್ಬಿನಲ್ಲಿದ್ದ ತಮ್ಮ ಮಗನನ್ನು ಕರೆಸಿಕೊಂಡು ಅವನಿಗೆ ಫಿರ್ಯಾದಿ ಬರೆಯಲು ಹೇಳಿದರು. ಆತ ಫಿರ್ಯಾದಿ ಅರ್ಜಿಯನ್ನು ಟೈಪ್ ಮಾಡುತ್ತಿದ್ದಾಗ ಫೋನ್ ಮಾಡಿ ಪೋಲೀಸ್ ಸುಪರಿಂಟೆಂಡೆಂಟ್ ಆನಂದನ್‌ರನ್ನು ಮನೆಗೆ ಬರಹೇಳಿದರು. ಸ್ವಲ್ಪ ಹೊತ್ತಿನಲ್ಲೆ ಬಂದ ಆನಂದನ್‌ರಿಗೆ ಎಲ್ಲ ವಿಷಯ ತಿಳಿಸಿದರು. ಆನಂದನ್ ಬಂಗಲೆಯನ್ನೆಲ್ಲ ತಪಾಸಿಸಿ ನೀರಿನ ಪಾತ್ರೆ ಮತ್ತು ಹಾಲಿನ ತಟ್ಟೆಯನ್ನು ಜಪ್ತಿಮಾಡಿಕೊಂಡು ಹೋದರು.

ಫೆಬ್ರುವರಿ ೨ ರಂದು ತಜ್ಞರಿಂದ ಪೋಲೀಸರಿಗೆ ಕಾಗದ ಬಂತು. ಹಾಲಿನ ತಟ್ಟೆಗೆ ಅಂಟಿಕೊಂಡಿದ್ದ ಪದಾರ್ಥ ಅತ್ಯಂತ ಭಯಂಕರ ವಿಷವಾದ ಮರ್ಕ್ಯುರಿ ಕ್ಲೋರಾಯಿಡ್ ಎಂದು ಅವರು ತಿಳಿಸಿದ್ದರು. ಮುಖ್ಯ ನ್ಯಾಯಾಧೀಶ ಮೇದಪ್ಪನವರಿಗೆ ವಿಷ ಕೊಟ್ಟು ಕೊಲ್ಲಲು ಯಾರೋ ಸಂಚು ಹೂಡಿದ್ದರೆಂಬುದು ಸ್ಪಷ್ಟವಾಗಲು ಪೋಲೀಸ್ ಖಾತೆ ತ್ವರಿತದಿಂದ ಕಾರ್ಯಕ್ಕಣಿಯಾಯಿತು. ಸಂಚುಗಾರರನ್ನು ಶೋಧಿಸಲು ಇನಸ್ಪೆಕ್ಟರ್ ನೀಲಕಂಠರನ್ನು ನೇಮಿಸಲಾಯಿತು.

ಇನಸ್ಪೆಕ್ಟರ್ ನೀಲಕಂಠರು ಮೇದಪ್ಪನವರ ಬಂಗಲೆಗೆ ಬಂದು ಮತ್ತೊಮ್ಮೆ ಚೌಕಸಿ ನಡೆಸಿದರು. ಆಗಾಗ ಅಲ್ಲಿ ಕೆಲಸ ಮಾಡಲು ಬರುತ್ತಿದ್ದ ದಾದಿ ಆಗ್ನೆಸ್ ಎಂಬವಳೇ ಈ ಘಟನೆಗೆ ಕಾರಣಳಿರಬೇಕೆಂದು ಅವರಿಗೆ ಸಂಶಯ ಬಂತು. ಜನವರಿ ೨೯ ರಂದು ಈ ಘಟನೆ ನಡೆದ ನಂತರ ಅವಳು ಪುನಃ ಬಂಗಲೆಗೆ ಬಂದಿರಲಿಲ್ಲ. ಆದರೆ ಅವಳೆಲ್ಲಿರುತ್ತಾಳೆಂದು ಬಂಗಲೆಯಲ್ಲಿ ಒಬ್ಬರಿಗೂ ಗೊತ್ತಿರಲಿಲ್ಲ. ಅವಳ ಚಹರೆಪಟ್ಟಿಯ ಬಗ್ಗೆ ಒಂದಿಷ್ಟು ಮಾಹಿತಿ ದೊರಕಿಸಿಕೊಂಡ ನೀಲಕಂಠರು ಅವಳ ಶೋಧ ಕಾರ್ಯವನ್ನು ಸಬ್ ಇನಸ್ಪೆಕ್ಟರ್ ನಾರಾಯಣರಾಯರಿಗೆ ಒಪ್ಪಿಸಿದರು. ಪೋಲೀಸರು ಹತ್ತು ಹನ್ನೆರಡು ದಿನಗಳ ವರೆಗೆ ಇಡೀ ಬೆಂಗಳೂರನ್ನೇ ಶೋಧಿಸಿದರೂ ಆಗ್ನೆಸಳ ಪತ್ತೆ ಹತ್ತಲಿಲ್ಲ.

ಫೆಬ್ರುವರಿ ೧೫ ರಂದು ರಾತ್ರಿ ಗಸ್ತಿ ತಿರುಗುತ್ತಿದ್ದ ನಾರಾಯಣರಾಯರಿಗೆ ನಸುಕಿನ ೪ ಗಂಟೆಯ ಸುಮಾರಿಗೆ ಶಿವಿಂಗ್ ರೋಡಿನಲ್ಲಿ ಬುರಖಾಧಾರಿ ಹೆಂಗಸೊಬ್ಬಳು ಗಡಿಬಿಡಿಯಿಂದ ನಡೆದದ್ದು ಕಾಣಲು ಅವರು ಸಂಶಯದಿಂದ ಅವಳ ಬೆನ್ನು ಹತ್ತಿದರು. ಆ ಹೆಂಗಸು ಸುದರ್ಶನ ಫಾರ್ಮಸಿಯ ಹತ್ತರ ನಿಂತು ಅತ್ತಿತ್ತ ನೋಡಿ ಮೆಲ್ಲಗೆ ಫಾರ್ಮಸಿಯ ಬಾಗಿಲನ್ನು ಬಡಿದಳು. ಬಾಗಿಲು ತೆರೆಯುವ ಮೊದಲೇ ನಾರಾಯಣರಾಯರು ಗರ್ಜಿಸಿದರು. "ನಿಲ್ಲು. ಯಾರು ನೀನು?"

ಹೆಂಗಸು ನಡುಗಿದಳು. ಅವಳ ಬಾಯಿಂದ ಶಬ್ದವೇ ಹೊರಡಲಿಲ್ಲ. ನಾರಾಯಣರಾಯರು ಮತ್ತೆ ಗುಡುಗಿದರು.

"ನಿನ್ನ ಹೆಸರೇನು?"

"ಆಗ್ನೆಸ್."

ನಾರಾಯಣರಾಯರಿಗೆ ಅವರ ಬೇಟೆ ಸಿಕ್ಕಿತ್ತು. ಅವರು ಆಗ್ನೆಸಳನ್ನು ಬಂಧಿಸಿ ನೀಲಕಂಠರ ಎದುರು ಒಯ್ದು ನಿಲ್ಲಿಸಿದರು. ಆಗ್ನೆಸಳ ಬಾಯಿಯಿಂದ ಒಂದು ದೊಡ್ಡ ಒಳಸಂಚಿನ ಗುಟ್ಟು ಬಯಲಾಯಿತು.

ಫೆಬ್ರುವರಿ ೧೬ ರಂದು ಪೋಲೀಸರು ಬೆಂಗಳೂರಿನ ಬೇರೆ ಬೇರೆ ಕಡೆಗಳಲ್ಲಿ ದಾಳಿ ಮಾಡಿ ಅನೇಕ ಪ್ರತಿಷ್ಠಿತ ವ್ಯಕ್ತಿಗಳನ್ನು ಬಂಧಿಸಿದರು. ಮೊದಲು ಅವರು ಸುದರ್ಶನ ಫಾರ್ಮಸಿಯ ಮಾಲಕ ಡಾ. ನಾರಾಯಣ ಪ್ರಸಾದರನ್ನು ಬಂಧಿಸಿದರು. ನಾರಾಯಣ ಪ್ರಸಾದ ಒಬ್ಬ ದೇಶೀ ವೈದ್ಯನಾಗಿದ್ದ. ಫಾರ್ಮಸಿಯ ಝಡತಿ ಮಾಡಿದಾಗ ಅಲ್ಲಿ ಮರ್ಕ್ಯುರಿ ಕ್ಲೋರಾಯಿಡ್ ಅರ್ಧ ತುಂಬಿದ್ದ ಒಂದು ಬಾಟ್ಲಿ, ಮೇದಪ್ಪನವರ ಒಂದು ಫೋಟೊ, ಮಂತ್ರ ಮಾಟಗಳ

ವಿವರಣೆಯಿದ್ದ ಪುಸ್ತಕಗಳು ಮತ್ತು ಇನ್ನಿತರ ಅನೇಕ ಆಕ್ಷೇಪಾರ್ಹ ವಸ್ತುಗಳು ಸಿಕ್ಕವು. ಆ ಮೇಲೆ ಪೋಲೀಸರು ಕಾಮನ್‌ವೆಲ್ತ್ ವಿಮಾ ಕಂಪೆನಿಯ ಬ್ರಾಂಚ್ ಮ್ಯಾನೇಜರ್ ಕೃಷ್ಣ ಮೂರ್ತಿಯನ್ನು ಬಂಧಿಸಿದರು. ಇವರಿಬ್ಬರಿಂದ ದೊರೆತ ಮಾಹಿತಿಯ ಆಧಾರದಿಂದ ನೀಲಕಂಠರು ೫೦—೬೦ ಸಶಸ್ತ್ರ ಪೋಲೀಸರೊಂದಿಗೆ ಬಸವನ ಗುಡಿಯಲ್ಲಿದ್ದ ಸುಪ್ರಸಿದ್ಧ ವಕೀಲ ರಾಜು ಇವರ 'ಸೀತಾ ವಿಲಾಸ' ಎಂಬ ಬಂಗಲೆಗೆ ಮುತ್ತಿಗೆ ಹಾಕಿದರು.

ರಾಜು ಅವರನ್ನು ಬಂಧಿಸಲು ನೀಲಕಂಠರು ಒಳಗೆ ಹೋದಾಗ ಅವರು ಎದ್ದು ಕೂಡುವ ತ್ರಾಣವೂ ಇಲ್ಲದೆ ಹಾಸಿಗೆಯ ಮೇಲೆ ಮಲಗಿರುವುದು ಕಾಣಿಸಿತು. ಅವರನ್ನು ಅಂಬುಲನ್ಸ್‌ನಲ್ಲಿ ಬ್ರಾಡವೇ ಪೋಲೀಸ್ ಸ್ಟೇಶನ್ನಿಗೆ ತಂದರು. 'ಸೀತಾ ವಿಲಾಸ'ದ ಝಡತಿ ನಡೆದಿದ್ದಾಗ ರಾಜೂರ ಮಗ ಜಯರಾಮ ಫರಾರಿಯಾದ. ಮುಂದೆ ಎರಡು ದಿನಗಳ ನಂತರ ಆತ ರಾತ್ರಿಯಲ್ಲಿ ಕಳ್ಳನಂತೆ ಮನೆಯನ್ನು ಪ್ರವೇಶಿಸುತ್ತಿದ್ದಾಗ ಅವನ ಬಂಧನವಾಯಿತು. ರಾಜೂರ ಮಿತ್ರ ದಾಸಪ್ಪ ನಾಯಡು ಎಂಬವನನ್ನೂ ಪೋಲೀಸರು ಬಂಧಿಸಿದರು.

ಈ ಸಂಗತಿ ಮರುದಿನ ಪತ್ರಿಕೆಗಳಲ್ಲಿ ಪ್ರಸಿದ್ಧವಾದಾಗ ಜನ ದಂಗಾಗಿ ಹೋದರು. ಮೇದಪ್ಪನವರ ಕೊಲೆ ಸಂಚಿನಲ್ಲಿ ರಾಜೂರ ಅಂಗವಿದೆಯೆಂಬ ಮಾತಿನಲ್ಲಿ ಅನೇಕರಿಗೆ ನಂಬಿಕೆಯೆ ಆಗಲಿಲ್ಲ.

೬೦ ವರ್ಷ ವಯಸ್ಸಾಗಿದ್ದರೂ ದೃಢಕಾಯರಾಗಿದ್ದ ರಾಜು ಮೈಸೂರು ಹೈಕೋರ್ಟಿನ ಹೆಸರಾಂತ ವಕೀಲರಾಗಿದ್ದರು. ಮೈಸೂರು ವಿಧಾನ ಸಭೆಯ ಕಾಂಗ್ರೆಸ್ ಸದಸ್ಯರೂ ಆ ಪಕ್ಷದ ಉಪಧುರೀಣರೂ ಆಗಿದ್ದರಲ್ಲದೆ ಸಿವಿಲ್ ಲಿಬರ್ಟಿಜ್ ಯೂನಿಯನ್ನಿನ ಅಧ್ಯಕ್ಷರೂ ಆಗಿದ್ದರು. ಅನೇಕ ಸಾಮಾಜಿಕ ಕಾರ್ಯಗಳನ್ನು ಯಶಸ್ವಿಯಾಗಿ ಮಾಡಿದ್ದ ಮತ್ತು ವಕೀಲಿ ವ್ಯವಸಾಯದಲ್ಲಿ ತುಂಬ ಹಣ ಸಂಪಾದಿಸಿದ್ದ ಅವರು ಮೈಸೂರು ಪ್ರಾಂತದಲ್ಲೆಲ್ಲ ಒಬ್ಬ ಪ್ರಖ್ಯಾತ ವ್ಯಕ್ತಿಯಾಗಿದ್ದರು.

ರಾಜೂರನ್ನು ಬಂಧಿಸಿದ ಬಳಿಕ ಪೋಲೀಸರು ನೂರಾರು ಜನರ ಜವಾಬು ತೆಗೆದುಕೊಂಡರು. ಇದೇ ಸಮಯದಲ್ಲಿ ನಾರಾಯಣ, ಕೃಷ್ಣ ಮೂರ್ತಿ ಮತ್ತು ಆಗ್ನೆಸರು ಕಬೂಲಿ ಜವಾಬು ಕೊಟ್ಟಿದ್ದರಿಂದ ಪ್ರಕರಣ ಬೆಳಕಿಗೆ ಬರಲು ತಡ ಹಿಡಿಯಲಿಲ್ಲ. ನಡೆದದ್ದೆಲ್ಲವೂ ಅದ್ಭುತವಾಗಿತ್ತು.

ಒಂದು ದಾವೆಯಲ್ಲಿ ಖೊಟ್ಟಿ ಪ್ರತಿಜ್ಞಾ ಪತ್ರ ಹಾಜರು ಮಾಡಿ ಸುಳ್ಳು ಸಾಕ್ಷಿ ಹೇಳಿದ ಆರೋಪವಿಟು ೧೯೪೯ ರ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನ ಡಿಸ್ಟ್ರಿಕ್ಟ್ ಜಜ್ಜರು ರಾಜೂರ ಮೇಲೆ ಕ್ರಿಮಿನಲ್ ಖಟ್ಲೆಯೊಂದನ್ನು ಹಾಕಿದ್ದರು. ಇದು ಸುಳ್ಳು ಆರೋಪ, ತನ್ನ ಜೀವನ ಹಾಳು ಮಾಡಲು ಮೇದಪ್ಪನವರೇ ಈ ಕುತಂತ್ರ ಹೂಡಿದ್ದಾರೆಂದು ರಾಜುರವರ ಹೇಳಿಕೆಯಿತ್ತು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಮೇದಪ್ಪನವರು ಓದುತ್ತಿದ್ದಾಗ ರಾಜು ಅವರ ಶಿಕ್ಷಕರಾಗಿದ್ದರು. ಜೀವನ ಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ರಾಜು ಅವರು ನೌಕರಿ ಮಾಡುತ್ತಲೆ ಎಂ. ಎ. ಮತ್ತು ಎಲ್‌ಎಲ್. ಬಿ. ಪಾಸಾಗಿ ವಕೀಲಿ ಶುರು ಮಾಡಿದರು. ಮೇದಪ್ಪನವರೂ ಅದೇ ಸುಮಾರಿಗೆ ವಕೀಲಿ ಆರಂಭಿಸಿದ್ದರು. ೧೯೩೩ ರಲ್ಲಿ ಡಿಸ್ಟ್ರಿಕ್ಟ್ ಜಜ್ಜರಾದ ಮೇದಪ್ಪನವರು ೧೯೪೪ ರಲ್ಲಿ ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದರು. ಈ ಅವಧಿಯಲ್ಲಿ ಅನೇಕಾನೇಕ ಕಠಿಣ ಕೇಸುಗಳನ್ನು ಗೆದ್ದು ರಾಜು ಅವರು ಪ್ರಖ್ಯಾತರಾಗಿದ್ದರು. ೧೯೪೫ ರ ವರೆಗೆ ರಾಜು ಮತ್ತು ಮೇದಪ್ಪನವರಲ್ಲಿದ್ದ ಸ್ನೇಹ ಮುಂದೆ ಕೆಟ್ಟಿತು.

೧೯೪೫—೪೬ರ ಸುಮಾರಿಗೆ ಗೋಪಾಲ ರಾವ್ ಎಂಬ ಪ್ರತಿಷ್ಠಿತ ವ್ಯಕ್ತಿ ನಾನಾ ಯೋಜನೆಗಳಿಗಾಗಿ ಎಂದು ಜನರಿಂದ ಸುಮಾರು ಒಂದು

ಕೋಟಿ ರೂಪಾಯಿಗಳನ್ನು ಕೂಡಿಸಿ ಆಮೇಲೆ ದಿವಾಳಿ ಅರ್ಜಿ ಹಾಕಿಕೊಂಡರು. ಜನರಲ್ಲಿ ಕೋಲಾಹಲವೆದ್ದಿತು. ಮೈಸೂರು ವಿಧಾನ ಸಭೆಯು ಗೋಪಾಲ ರಾಯರ ಹಣಕಾಸಿನ ವ್ಯವಹಾರದ ಚೌಕಶಿ ಮಾಡಲು ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿಗೆ ನ್ಯಾ. ಮೂ. ಮೇದಪ್ಪನವರು ಅಧ್ಯಕ್ಷರಾಗಿದ್ದರು. ಡಿ. ಎಸ್. ಪಿ. ಬಾಬು ರೆಡ್ಡಿಯವರು ಕಾರ್ಯದರ್ಶಿಗಳಾಗಿದ್ದರು. ಶ್ರೀ. ಎಸ್. ನಿಜಲಿಂಗಪ್ಪ ಮತ್ತು ಶ್ರೀ ಟಿ. ಸುಬ್ರಹ್ಮಣ್ಯಂರು ಸದಸ್ಯರಾಗಿದ್ದರು.

ಸಮಿತಿಯು ಕೆಲಸ ನಡೆದಿದ್ದಾಗ ರಾಜು ಅವರು "ತಾಯಿನಾಡು" ಮತ್ತು "ಡೇಲಿ ನ್ಯೂಜ್" ಪತ್ರಿಕೆಗಳಲ್ಲಿ ಕೆಲವು ಲೇಖಗಳನ್ನು ಬರೆದು ಗೋಪಾಲ ರಾವ್ ಸಮಿತಿಯ ಮೇಲೆ ಅನೇಕ ಆರೋಪಗಳನ್ನು ಮಾಡಿದ್ದರಿಂದ ಸಮಿತಿಯ ಪ್ರತಿಷ್ಠೆಗೆ ಧಕ್ಕೆ ಬಂತು. ಆಗ ಸಮಿತಿಯು ರಾಜು ಮತ್ತು ಆ ಎರಡೂ ಪತ್ರಿಕೆಗಳ ಸಂಪಾದಕರ ಮೇಲೆ ಮಾನಹಾನಿ ಮೊಕದ್ದಮೆ ಹೂಡಿತು. ಆ ಮೊಕದ್ದಮೆಯಲ್ಲಿ ಮೂವರು ಆರೋಪಿಗಳಿಗೆ ತಲಾ ಎರಡು ತಿಂಗಳ ಸಾದಾ ಶಿಕ್ಷೆ ಮತ್ತು ರೂ. ೩೦೦ ದಂಡ ವಿಧಿಸಲ್ಪಟ್ಟಿತು. ಆರೋಪಿಗಳು ಸೆಂಟ್ರಲ್ ಜೇಲಿನಲ್ಲಿಡಲ್ಪಟ್ಟರು. ಆರೋಪಿಗಳು ಹೈಕೋರ್ಟಿಗೆ ಅಪೀಲು ಮಾಡಿಕೊಂಡಾಗ ಅದು ಆರೋಪಿಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿತು. ಗೋಪಾಲ ರಾವ್ ಸಮಿತಿಗೆ ಆರೋಪಿಗಳಿಗೆ ಶಿಕ್ಷೆ ಮಾಡುವ ಅಧಿಕಾರವಿಲ್ಲ, ಅದರ ನಿರ್ಣಯ ಕಾಯದೆ ಬಾಹಿರವಾದದ್ದು ಎಂದು ಹೈಕೋರ್ಟು ಅಭಿಪ್ರಾಯಪಟ್ಟಿತು. ಆದರೆ ಹೈಕೋರ್ಟಿನ ತೀರ್ಪು ಹೊರಬೀಳುವ ಮೊದಲೇ ಮೈಸೂರು ಮಹಾರಾಜರು ಒಂದು ಆಜ್ಞಾಪತ್ರ ಹೊರಡಿಸಿ ಗೋಪಾಲ ರಾವ್ ಸಮಿತಿಯ ನಿರ್ಣಯಗಳೆಲ್ಲ ಕಾಯದೆ ಬದ್ಧವಾದವು ಎಂದು ಜಾಹೀರು ಮಾಡಿದ್ದರಿಂದ ಹೈಕೋರ್ಟು ಏನನ್ನೂ ಮಾಡಲಾರದೆ ಹೋಯಿತು. ಆರೋಪಿಗಳು ಪುನಃ ಸೆಂಟ್ರಲ್ ಜೇಲಿಗೆ ಕಳಿಸಲ್ಪಟರು. ಆದರೆ ಅಂದೇ ಮೈಸೂರು ಮಹಾರಾಜರು ಬೇರೊಂದು ಆಜ್ಞಾಪತ್ರ ಹೊರಡಿಸಿ ಆರೋಪಿಗಳ ಶಿಕ್ಷೆಯನ್ನು ಮಾಫಿ ಮಾಡಿದರು. ಈ ಪ್ರಕರಣದಿಂದ ಮೇದಪ್ಪನವರ ಮೇಲೆ ರಾಜೂರವರಿಗೆ ದ್ವೇಷ ಹುಟ್ಟಿಕೊಂಡಿತು.

೧೯೪೩, ನವಂಬರ ತಿಂಗಳಲ್ಲಿ ಮೇದಪ್ಪನವರು ಮೈಸೂರು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದರು. ೧೯೪೯ ಸೆಪ್ಟೆಂಬರ ತಿಂಗಳಿನಲ್ಲಿ ಲಕ್ಷ್ಮಿ ಎಂಬಾಕೆ ರಾಜುರವರ ವಿರುದ್ಧ ಒಂದು ಅರ್ಜಿಯನ್ನು ಹೈಕೋರ್ಟಿಗೆ ಸಲ್ಲಿಸಿದಳು. ೧೯೪೩ ರಲ್ಲಿ ಹೈಕೋರ್ಟಿನ ನ್ಯಾಯಮೂರ್ತಿ ಶ್ರೀ ಅಯ್ಯರರು ಮರಣಹೊಂದಿದ್ದರು. ಅವರ ಮೃತ್ಯುಪತ್ರಕ್ಕನುಸರಿಸಿ ವಾರಸಾ ಪತ್ರವನ್ನು ದೊರಕಿಸಿಕೊಡುವ ಕೆಲಸ ರಾಜುರವರ ಕೈಗೆ ಬಂದಿತ್ತು. ನ್ಯಾ. ಮೂ. ಅಯ್ಯರರ ಮೊಮ್ಮಗಳಾದ ಲಕ್ಷ್ಮಿ ಈಗ ಹೈಕೋರ್ಟಿನಲ್ಲಿ ಅಯ್ಯರರ ಆಸ್ತಿಯನ್ನು ಹಂಚುವಾಗ ರಾಜು ಅವರು ಬಹಳ ಹಣ ಅಫರಾತಫರ ಮಾಡಿದರೆಂದು ದೂರು ಕೊಟ್ಟಿದ್ದಳು. ಈ ಅರ್ಜಿಯ ವಿಚಾರಣೆಯಲ್ಲಿ ವಾರಸಾಪತ್ರ ದೊರಕಿಸುವಾಗ ರಾಜು ಅವರು ಒಂದು ಕೃತಕ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದರೆಂದು ಬೆಳಕಿಗೆ ಬಂದಿತ್ತು.

ಈ ಖಟ್ಲೆಯ ವಿಚಾರಣೆ ೧೯೪೯, ಅಕ್ಟೋಬರ ೧೯ ರಂದು ಆರಂಭವಾದ ಬಳಿಕ ರಾಜು ಅವರಿಗೆ ಫಿರ್ಯಾದಿ ಪಕ್ಷ ಬಲವತ್ತರವಾಗಿದೆಯೆಂದು ತಿಳಿದುಬಂತು. ತಮ್ಮ ಮೇಲೆ ಕೇಸು ತಿರುಗಿ ಬೀಳುವ ಲಕ್ಷಣ ಕಾಣಲು ಅವರು ಗಾಬರಿಯಾದರು. ಅವರ ಇದುವರೆಗಿನ ಕೀರ್ತಿಗೆ ಮಹಾ ಕಲಂಕ ತಗಲುವ ಪ್ರಸಂಗ ಬಂದಿತು.

ಈ ಕಷ್ಟದಿಂದ ಉಳಿದುಕೊಳ್ಳಲು ಅವರಿಗೆ ಒಂದೆ ಹಾದಿಯಿರುವಂತೆ ಅನಿಸುತ್ತಿತ್ತು. ಮೇದಪ್ಪನವರು ಪದಚ್ಯುತರಾದರೆ ಈ ಖಟ್ಲೆಯಿಂದ ತಾನು ಉಳಿದುಕೊಳ್ಳುವೆ ಎಂದು ಅವರಿಗೆ ನಂಬಿಕೆಯಾಗಿತ್ತು. ಅದಕ್ಕಾಗಿ ದಿಲ್ಲಿಯ ಸುಪ್ರೀಂ

ಕೋರ್ಟ್ಟು ಮತ್ತು ಮೈಸೂರಿನ ಮಂತ್ರಿಮಂಡಳದ ಎದುರು ಮೇದಪ್ಪನವರ ಬಗ್ಗೆ ಅನೇಕ ದೂರುಗಳನ್ನು ಒಯ್ದರು. ಆದರೆ ಅದರಿಂದೇನೂ ಪ್ರಯೋಜನವಾಗಲಿಲ್ಲ.

೧೯೫೦, ಫೆಬ್ರುವರಿಯಲ್ಲಿ ಮೈಸೂರು ಹೈಕೋರ್ಟಿನ ನ್ಯಾ. ಮೂ. ಪುಟ್ಟರಾಜರು ನಿವೃತ್ತರಾದರು. ಮೇದಪ್ಪನವರ ಕಾರಸ್ಥಾನದಿಂದಾಗಿಯೆ ತಾವು ನಿವೃತ್ತರಾಗಬೇಕಾಯಿತೆಂದು ತಿಳಿದುಕೊಂಡಿದ್ದ ಪುಟ್ಟರಾಜರು ಮೇದಪ್ಪನವರ ಮೇಲೆ ಬೇರೆ ಬೇರೆ ಕಾರಣಗಳಿಗಾಗಿ ಕ್ರಿಮಿನಲ್ ಮತ್ತು ಸಿವಿಲ್ ದಾವೆಗಳನ್ನು ಹೂಡಿ ರಾಜುರವರಿಗೆ ತಮ್ಮ ವಕೀಲ ಪತ್ರ ಕೊಟ್ಟರು. ಆದರೆ ರಾಜುರವರು ಎಷ್ಟೇ ಯತ್ನಿಸಿದರೂ ಅವರಿಗೆ ಯಶಸ್ಸು ಸಿಗಲಿಲ್ಲ. ಮುಂದೆ ಮೇ ತಿಂಗಳಲ್ಲಿ ರಾಜುರವರಿಗೆ ಕಾಮನ್‌ವೆಲ್ತ್ ವಿಮಾ-ಕಂಪನಿಯ ಬ್ರ್ಯಾಂಚ್ ಮ್ಯಾನೇಜರ್ ಕೃಷ್ಣಮೂರ್ತಿಯ ಪರಿಚಯವಾಯಿತು. ಅವರ ವಿಮಾಕಾರ್ಯದಲ್ಲಿ ತುಂಬ ಸಹಾಯ ಮಾಡಿದ ರಾಜು ಅವರು ತನ್ನ ಮೇಲಿನ ಖಟ್ಲೆಯ ವಿಚಾರದಲ್ಲಿ ಜನರ ಬೆಂಬಲ ತನಗೆ ದೊರಕಿಸಿಕೊಡಲು ಕೃಷ್ಣಮೂರ್ತಿಯನ್ನು ಬಿನ್ನವಿಸಿಕೊಂಡರು.

ಮೇದಪ್ಪನವರ ಜಾತಕ ನೋಡಿದರೆ ಅವರು ಪದಚ್ಯುತರಾಗುವರೇ ಇಲ್ಲವೇ ಎಂದು ತಿಳಿದೀತು ಎಂದು ಕೃಷ್ಣಮೂರ್ತಿ ಹೇಳಿದಾಗ ರಾಜುರವರಿಗೆ ಹೌದೆನಿಸಿತು. ಮೇದಪ್ಪನವರ ಜಾತಕಕ್ಕಾಗಿ ಅವರು ಹುಟ್ಟಿದ ತಾರೀಖನ್ನು ಶೋಧಿಸುತ್ತಿದ್ದಾಗ ಕಾಲೇಜಿನಲ್ಲಿ ಮೇದಪ್ಪನವರ ಜನ್ಮತಾರೀಖು ೧೦-೪-೧೮೯೩ ಎಂದೂ ಸರಕಾರೀ ದಫ್ತರದಲ್ಲಿ ೧೦-೪-೧೮೯೫ ಎಂದೂ ಇರುವುದು ಕೃಷ್ಣಮೂರ್ತಿಗೆ ತಿಳಿಯಿತು. ಮೇದಪ್ಪನವರು ಸುಳ್ಳು ವಯಸ್ಸು ದಾಖಲೆ ಮಾಡಿಸಿದ್ದಾರೆ ಎಂದು ರಾಜು ಅವರು ಮೈಸೂರು ಸರಕಾರಕ್ಕೆ ತಕರಾರು ಕಳಿಸಿದರು. ಆದರೆ ಇಲ್ಲಿಯೂ ಅವರಿಗೆ ನಿರಾಶೆ ಆಯಿತು. ವಿಚಾರಣೆಯ ನಂತರ ಸರಕಾರೀ ದಫ್ತರದಲ್ಲಿದ್ದ ತಾರೀಖೇ ನಿಜವೆಂದು

ಸರಕಾರ ನಿರ್ಣಯವಿತ್ತಿತು.

ಮೇದಪ್ಪನವರ ಜಾತಕಕ್ಷೆತಯಾರಿಸಿ ಅನೇಕ ಜ್ಯೋತಿಷಿಗಳಿಗೆ ತೋರಿಸಿದ್ದಾಯಿತು. ಅವರ ಹೇಳಿಕೆಯಿಂದ ರಾಜು ಅವರಿಗೆ ಸಮಾಧಾನವಾಗಲಿಲ್ಲ. ಆಗ ಕೃಷ ಮೂರ್ತಿ ಅವರನ್ನು ಸೀತಾರಾಮಶಾಸ್ತ್ರಿ ಎಂಬವರಲ್ಲಿಗೆ ಕರೆದೊಯ್ದ. ಕೆಲವೊಂದು ಪೂಜೆಗಳನ್ನು ನೆರವೇರಿಸಿದರೆ ಸಂಕಟ ನಿವಾರಣೆಯಾಗುವುದು, ಮೇದಪ್ಪನವರಿಗೆ ಮರಣ ಬರುವುದು ಎಂದು ಸೀತಾರಾಮ ಶಾಸ್ತ್ರಿಗಳು ಹೇಳಿ ರಾಜೂರವರ ಮನೆಯಲ್ಲಿ ತಿಂಗಳೊಪ್ಪತ್ತು ಪೂಜೆಯ ಸತ್ರವನ್ನು ನಡೆಸಿದರು. ಆದರೆ ಮೇದಪ್ಪನವರ ಮೇಲೆ ಇದರ ಪರಿಣಾಮ ಏನೇನೂ ಆಗಲಿಲ್ಲ.

ಆನಂತರ ರಾಜೂರವರು ಇನ್ನೊಬ್ಬ ಜ್ಯೋತಿಷಿಯನ್ನು ಭೆಟ್ಟಿಯಾದರು. 'ಭೃಗುನಾಡಿ'ಯನ್ನೋದಿ ಆ ಶಾಸ್ತ್ರಿ, ೧೯೫೧ ರ ಪ್ರಾರಂಭದ ಕಾಲ ಮೇದಪ್ಪನವರಿಗೆ ಕ್ಲೇಶಕಾರಕವಿದ್ದು ಆ ಕಾಲದಲ್ಲಿ ಅತಿಶಯ ಮಾನಹಾನಿ, ಅಪಯಶಸ್ಸು ಮತ್ತು ನಿರಾಶೆಗಳನ್ನು ಅವರು ಅನುಭವಿಸಬೇಕಾಗುವುದೆಂದು ಹೇಳಿದ. ರಾಜೂರವರಿಗೆ ಇದನ್ನು ಕೇಳಿ ಆನಂದವಾದರೂ ೧೯೫೧ ರ ವರೆಗೂ ಕಾಯುವ ತಾಳ್ಮೆ ಅವರಲ್ಲಿರಲಿಲ್ಲವಾದ್ದರಿಂದ ಅವರು ಇನ್ನೂ ಬೇರೆ ಜ್ಯೋತಿಷಿಗಳನ್ನು ಅರಸತೊಡಗಿದರು. ೧೯೫೦ ರ ನವಂಬರ ತಿಂಗಳಲ್ಲಿ ರಾಜೂರಿಗೆ ದಾಸಪ್ಪ ನಾಯುಡೂನ ಪರಿಚಯವಾಯಿತು. ಆತ ಅವರ ಪಕ್ಷಕಾರನಾಗಿ ಬಂದಿದ್ದ. ದಾಸಪ್ಪನನ್ನು ಒಲಿಸಿಕೊಂಡ ರಾಜೂ ಅವರು ಅವನ ಸಹಾಯದಿಂದ ಅನೇಕ ಹೊಸ ಹೊಸ ಜ್ಯೋತಿಷಿಗಳನ್ನು ಭೆಟ್ಟಿಯಾದರು.

ರಾಜೂರವರ ಮೇಲಿನ ಖಟಿಯ ವಿಚಾರಣೆ ಮುಂದುವರಿಯುತ್ತಲೇ ಇತ್ತು. ನ್ಯಾ. ಮೂ. ಸೋಮನಾಥ ಅಯ್ಯರರು ಈ ಖಟ್ಲೆಯಲ್ಲಿ ವಿಶೇಷ ಲಕ್ಷ್ಯ ಹಾಕಿದ್ದು ಕಂಡು ಗಾಬರಿಯಾದ ರಾಜು ಅವರು ಜ್ಯೋತಿಷಿಗಳ ಹಂಬಲ ಬಿಟ್ಟು, ಕೃಷ್ಣ ಮೂರ್ತಿ ಮತ್ತು ದಾಸಪ್ಪ ಇವರ ಸಲಹೆಯಂತೆ ಮಂತ್ರತಂತ್ರ ಮಾಡುವವರ ಬೆನ್ನುಬಿದ್ದರು.

ರಾಜೂರವರ ಮಗ ಜಯರಾಮನೊಂದಿಗೆ ದಾಸಪ್ಪ ಕೊಳ್ಳೆಗಾಲದ ರಂಗ ಎಂಬ ಮಾಂತ್ರಿಕನ ಬಳಿಗೆ ಹೋಗಿ ಮಾಟ ಮಾಡಿ ಮೇದಪ್ಪನವರನ್ನು ಕೊಲ್ಲಬಲ್ಲೆಯಾ ಎಂದು ಕೇಳಿದ. ಶೂನ್ಯಪೂಜೆ ಮಾಡಿ ಯಾರನ್ನು ಬೇಕಾದರೂ ಕೊಲ್ಲಬಹುದು ಎಂದ ರಂಗ. "ಈ ದಿನ ಒಳ್ಳೆಯದಾಗಿಲ್ಲ ನಾಳೆ ಬನ್ನಿ, ಅಡವಿಗೆ ಹೋಗಿ ಈ ಪೂಜೆ ಮಾಡಬೇಕು" ಎಂದು ಹೇಳಿದ.

ಮಾರನೆಯ ದಿನ ರಾಜು, ದಾಸಪ್ಪ ಮತ್ತು ಜಯರಾಮರು ಪೂಜಾದ್ರವ್ಯಗಳನ್ನೂ ಎರಡು ಕೋಳಿಗಳನ್ನೂ ಕೊಂಡು ರಂಗನ ಭೆಟ್ಟಿಗೆ ಹೋದರು. ಮೇದಪ್ಪನವರ ಫೋಟೊವನ್ನೂ ರಾಜೂ ಅವರು ತಂದಿದ್ದರು.

ಮಾಂತ್ರಿಕನೊಂದಿಗೆ ಅವರೆಲ್ಲ ದೊರೆಛತ್ರದ ಭೂತಪ್ಪನ ಗುಡಿಗೆ ಬಂದರು. ದೇವಿಗೆ ಎರಡೂ ಕೋಳಿಗಳನ್ನು ಬಲಿಕೊಟ್ಟು ರಂಗ ಅವಳ ಆರಾಧನೆ ಮಾಡಿ ಒಂದು ಹಿತ್ತಾಳಿ ತಗಡಿನ ಮೇಲೆ ಮೊಳೆಯಿಂದ "ಮೇದಪ್ಪನವರಿಗೆ ಮೃತ್ಯು ಬರಲಿ" ಎಂದು ಬರೆದ. ಆ ತಗಡನ್ನೂ ಮೇದಪ್ಪನವರ ಫೋಟೋವನ್ನೂ ಒಂದು ಮಡಿಕೆಯಲ್ಲಿಟ್ಟು ಮಂತ್ರೋಚ್ಚಾರ ಮಾಡಿ ಗುಡಿಯ ಎದುರು ಒಂದು ತಗ್ಗು ತೋಡಿ ಅದರಲ್ಲಿ ಮಡಿಕೆಯನ್ನು ಹೂಳಿದ.

ಆದರೆ ಈ ಶೂನ್ಯಪೂಜೆ ವ್ಯರ್ಥವಾಯಿತು.

ಆಮೇಲೆ ದಾಸಪ್ಪ ರಾಜೂ, ಜಯರಾಮ ಮತ್ತು ಕೃಷ್ಣಮೂರ್ತಿಯವರನ್ನು ಸುದರ್ಶನ ಫಾರ್ಮಸಿಗೆ ಕರೆತಂದ. ಫಾರ್ಮಸಿಯ ಮಾಲಕ ಡಾ. ನಾರಾಯಣ ಪ್ರಸಾದ ಶೂನ್ಯಪೂಜೆಗಾಗಿ ಮತ್ತು ಅಂಜನ ಹಾಕುವುದರಲ್ಲಿ ಪ್ರಸಿದ್ಧಿ ಪಡೆದಿದ್ದ. ತನ್ನ ಮಂತ್ರಶಕ್ತಿಯಿಂದ ರಾಜೂರ ಸಂಕಟ ನಿವಾರಣೆಮಾಡುವುದಾಗಿ ಆತ ಪ್ರತಿಜ್ಞೆ ಮಾಡಿ ಒಂದು ಸಣ್ಣ ಪೂಜೆ ನೆರವೇರಿಸಿ "ನಾಳೆ




ಬನ್ನಿ, ಅಂಜನ ಹಾಕುತ್ತೇನೆ" ಎಂದ.

ಮರುದಿನ ರಾಜೂ ಬಂದರು. ಅಂಗಡಿ ಮುಚ್ಚಿ ನಾರಾಯಣ ಏಳೆಂಟು ಕನ್ನಡಿಗಳನ್ನು ಜೋಡಿಸಿಟ್ಟು ಮಂತ್ರೋಚ್ಚಾರ ಮಾಡಿ ಒಂದು ಕನ್ನಡಿಗೆ ಅಂಜನ ಹಚ್ಚಿ ಅದರಲ್ಲಿ ನೋಡಲು ಜಯರಾಮನಿಗೆ ಹೇಳಿದ.

"ನನಗೆ ದಟ ಕತ್ತಲೆ ಕಾಣುತ್ತಿದೆ. ಹೊಳೆಯುವ ಕೆಲ ನಕ್ಷತ್ರಗಳೂ ಕಾಣಿಸುತವೆ" ಎಂದ ಜಯರಾಮ.

ಕುತೂಹಲ ತಡೆಯದೆ ರಾಜೂ ಕೂಡ ಕನ್ನಡಿಯಲ್ಲಿ ಇಣಿಕಿದರು. "ನನಗೊಂದು ಜ್ಯೋತಿ ಕಾಣುತ್ತಿದೆ. ಹಾ! ನನಗೀಗ ಮೇದಪ್ಪನವರ ಪ್ರೇತ ಕಾಣಿಸುತ್ತದೆ" ಎಂದರವರು.

ಅತ್ಯಾನಂದದಿಂದ ಅವರು ಮತ್ತೆ ಕನ್ನಡಿ ನೋಡಿದರು. "ನನಗೀಗ ಮಾರುತಿ ಕಾಣಿಸುತ್ತಿದ್ದಾನೆ"

"ಅವನಲ್ಲಿ ಪ್ರಾರ್ಥನೆ ಮಾಡಿಕೊಳ್ಳಿ" ನಾರಾಯಣ ಹೇಳಿದ. ರಾಜೂ ಕನ್ನಡಿಯೊಳಗಿನ ಮಾರುತಿಗೆ ಕೈಮುಗಿದರು. "ಅವನ ಬಳಿ ನಿಮ್ಮ ಬೇಡಿಕೆಯನ್ನು ಮಂಡಿಸಿ" ಎಂದ ನಾರಾಯಣ.

"ಮೇದಪ್ಪನವರು ಸಾಯಲಿ. ಸೋಮನಾಥ ಅಯ್ಯರರು ಸಾಯಲಿ. ನನ್ನ ಮೇಲಿನ ಖಟ್ಲೆ ತಿರುಗಲಿ. ದೇವಾ, ಇಷ್ಟು ಕೃಪೆ ಮಾಡಲಾರೆಯಾ?" ರಾಜೂ ದೀನರಾಗಿ ಕೇಳಿಕೊಂಡರು.

ಎರಡು ದಿನಗಳ ನಂತರ "ಕಾಲಿಪೂಜೆ" ಮತ್ತು "ಶಕ್ತಿಪೂಜೆ" ಮಾಡಬೇಕೆಂದಾದ ಮೇಲೆ ರಾಜು ಮನೆಗೆ ಮರಳಿ ಬಂದರು.

ಎರಡು ದಿನಗಳ ನಂತರ ರಾತ್ರಿ ಹೊತ್ತು ಬೆಂಗಳೂರಿನ ಕಲಪಲ್ಲಿ ಸ್ಮಶಾನದಲ್ಲಿ ಪೂಜೆ ನಡೆಯಿತು. ರಾಜುರವರು ಕೊಟ್ಟ ಹಣದಿಂದ ಪೂಜಾದ್ರವ್ಯಗಳೊಂದಿಗೆ ಎರಡು ಕುರಿಗಳನ್ನು ದಾಸಪ್ಪ ಮತ್ತು ನಾರಾಯಣ ಕೊಂಡಿದ್ದರು. ಒಂದು ಕುರಿಯನ್ನು ನಾರಾಯಣ ಮನೆಯಲ್ಲಿ ಬಲಿಕೊಟ್ಟು ಕಾಲಿಪೂಜೆ ಮಾಡಿದ್ದ. ರಾತ್ರಿ

ಎಂಟು ಗಂಟೆಗೆ ನಾರಾಯಣ ತನ್ನ ಇಬ್ಬರು ಆಳುಗಳು ಹಾಗೂ ದಾಸಪ್ಪನೊಂದಿಗೆ ಸ್ಮಶಾನಕ್ಕೆ ಹೋದ. ಅಲ್ಲಿ ಕುರಿಯನ್ನು ಬಲಿಕೊಟ್ಟು ಅನ್ನದ ರಾಶಿಯ ಮೇಲೆ ಅದರ ತಲೆಯನ್ನಿಟ್ಟು ನಾರಾಯಣ ಪೂಜೆಗಾರಂಭಿಸಿದ. ಅನ್ನದ ರಾಶಿಗೆ ಅರಿಶಿಣ ಕುಂಕುಮ ತೂರಿ ಆತ "ಘಾನಾ ಬಿನ ಘಾನಾ. ಮೇದಪ್ಪಾ ಸಾಯಿ" ಎಂದು ಉಚ್ಚಾರ ಮಾಡಿದ.

ಆಮೇಲೆ ಆತ ಮೇದಪ್ಪನವರ ಫೋಟೋವನ್ನು ಹೋಲುವಂತೆ ಒಂದು ಹಿಟ್ಟಿನ ಗೊಂಬೆ ತಯಾರಿಸಿ ಅದನ್ನು ಕುರಿಯ ತಲೆಯ ಮೇಲಿಟ್ಟ. ದಾಸಪ್ಪ ಆ ಗೊಂಬೆಯ ಸರ್ವಾಂಗಗಳಿಗೆ ಗುಂಡು ಸೂಜಿಗಳನ್ನು ಚುಚ್ಚಿದ. ಮತ್ತೆ "ಘಾನಾ ಬಿನ ಘಾನಾ" ಎಂಬ ಮಂತ್ರ ಉಚ್ಚರಿಸಲ್ಪಟ್ಟಿತು. (ಘಾನಾ ಬಿನ ಘಾನಾ ಎಂಬುದು ಘಾರ್ಸಿ ಮಂತ್ರ. ಇದರ ಅರ್ಥ ಶತ್ರುಗಳ ಸರ್ವನಾಶವಾಗಲಿ ಎಂದಾಗುತ್ತದೆ.)

ಅಷ್ಟರಲ್ಲಿ ಅಲ್ಲಿಗೆ ಬಂದ ಬ್ಯೂಕ್ ಕಾರಿನಿಂದ ರಾಜು, ಜಯರಾಮ ಮತ್ತು ಕೃಷ್ಣಮೂರ್ತಿ ಇಳಿದರು. ತನ್ನ ಬಳಿ ಬಂದು ಕುಳಿತ ರಾಜುರವರ ಹಣೆಗೆ ರಕ್ತದಲ್ಲಿ ಅದ್ದಿದ ಕುಂಕುಮವನ್ನು ಹಚ್ಚುತ್ತ ನಾರಾಯಣ ಹೇಳಿದ "ಇನ್ನು ಮೇದಪ್ಪ ಸತ್ತ ಎಂದೇ ತಿಳಿಯಿರಿ. ಈ ರಕ್ತ ಅವನದೇ ಎಂದು ತಿಳಿಯಿರಿ." ಆ ಮೇಲೆ ರಾಜೂರವರ ತಲೆಯ ಮೇಲೆ ಒಂದು ತೆಂಗಿನಕಾಯನ್ನು ಸುಳಿ ತೆಗೆದು ನಾರಾಯಣ ಅಂದಿನ ಕಾರ್ಯಕ್ರಮ ಮುಗಿಸಿದ.

ಮನೆಗೆ ಮರಳಿದ ಬಳಿಕ "ಪೂಜೆ ಇನ್ನೂ ಮುಗಿದಿಲ್ಲ. ನಸುಕಿನಲ್ಲಿ ಶ್ರೀರಂಗ ಪಟ್ಟಣದ ಸಂಗಮಕ್ಕೆ ಹೋಗಿ ಗಂಗಾಪೂಜೆ ಮಾಡಬೇಕು" ಎಂದ ನಾರಾಯಣ.

ಸಂಗಮದಲ್ಲಿ ಎಲ್ಲರೂ ಸ್ನಾನ ಮಾಡಿದರು. ಗಾಂಜಾ, ಬೆಲ್ಲ ಮತ್ತು ತುಪ್ಪದ ಒಂದು ಮುದೆ ತಯಾರಿಸಿ ಅದನ್ನು ಅತಿ ಹಳದಿಯಾಗಿದ್ದ ಒಂದು ಕುಂಬಳಕಾಯಿ ಮೇಲಿಟ್ಟು ನಾರಾಯಣ ಅದರ ಪೂಜೆ ಮಾಡಿದ. ರಾಜು ಅವರು ಆ ಕುಂಬಳಕಾಯನ್ನು ಪ್ರವಾಹದಲ್ಲಿ ತೇಲಿಬಿಟರು.

"ಘಾನಾ ಬಿನ ಘಾನಾ" ನಾರಾಯಣ ಮಂತ್ರೋಚ್ಚಾರ ಮಾಡಿದ.

"ಘಾನಾ ಬಿನ ಘಾನಾ" ರಾಜು ಗುಣುಗುಟ್ಟಿದರು.

"ಶತ್ರು ಪೀಡಾ ಚಲೀ ಗಯಾ"

"ಶತ್ರು ಪೀಡಾ ಚಲೀ ಗಯಾ"

ಎರಡು ದಿನಗಳು ಕಳೆದವು. ಮೇದಪ್ಪನವರ ಮೇಲೇನೂ ಪೂಜೆಯ ಪರಿಣಾಮವಾಗಿರಲಿಲ್ಲ. ರಾಜೂರ ಕಾರು ಫಾರ್ಮಸಿಯ ಎದುರು ಬಂದು ನಿಂತಿತು.

"ಖಟ್ಲೆಯ ಕಾರ್ಯ ಬಿರುಸಾಗಿ ನಡೆದಿದೆ. ಈಗ ಏನಾದರೂ ಕ್ರೂರ ಉಪಾಯ ಮಾಡಲೇಬೇಕು" ಎಂದರು ರಾಜು.

"ನಿಮ್ಮ ಶತ್ರು ಬಹು ಬಲಿಷ್ಠನಿರುವ ಹಾಗಿದೆ. ಇನ್ನೂ ಒಂದು ಉಪಾಯ ಮಾಡೋಣ. ಆದರೆ ಅದಕ್ಕೆ ಕರೀ ನಾಯಿಯ ಎಲುವು ಬೇಕು" ಎಂದ ನಾರಾಯಣ.

ಮರುದಿನ ದಾಸಪ್ಪ ತಂದು ಕೊಟ್ಟ ಎರಡು ಎಲುವುಗಳಲ್ಲಿ ಒಂದರ ಮೇಲೆ ಮೇದಪ್ಪನವರ ಮತ್ತು ಇನ್ನೊಂದರ ಮೇಲೆ ಸೋಮನಾಥ ಅಯ್ಯರರ ಹೆಸರನ್ನು ನಾರಾಯಣ ಬರೆದ. ಬಳಿಕ ಸೂರ್ಯಾಸ್ತದ ನಂತರ ರಾಜು, ಜಯರಾಮ, ದಾಸಪ್ಪ ಮತ್ತು ಕೃಷ್ಣಮೂರ್ತಿಯರೊಂದಿಗೆ ನಂದಿದುರ್ಗ ರೋಡಿನಲ್ಲಿರುವ ಕಬರಸ್ತಾನಕ್ಕೆ ಹೋಗಿ ಮಂತ್ರೋಚ್ಚಾರ ಮಾಡಿ ಎಲುವುಗಳನ್ನು ನೆಲಕ್ಕೆ ಅಪ್ಪಳಿಸಿದ.

"ಘಾನಾ ಬಿನ ಘಾನಾ."

ಮತ್ತೂ ಎರಡು ದಿನಗಳು ಕಳೆದವು. ರಾಜು ನಾರಾಯಣನಲ್ಲಿ ಬಂದು "ನಿನ್ನ ಶೂನ್ಯಪೂಜೆ ವ್ಯರ್ಥವಾಯಿತು. ಮೇದಪ್ಪ ನನ್ನ ಬಲಿ ತೆಗೆದುಕೊಳ್ಳುವಂತೆ ಕಾಣುತ್ತದೆ" ಎಂದರು.

"ನಾನೇನು ಮಾಡಲಿ ರಾಯರೆ? ನನ್ನ ಕೆಲಾ

ದ್ದನ್ನು ಮಾಡಿದೆ. ಇನ್ನು ನನ್ನದೇನೂ ನಡೆಯದು."

"ಛೆ. ಛೆ. ಹಾಗನ್ನಬೇಡ. ಖಟ್ಲೆಯ ನಿಕಾಲೆಯಾಗುವುದರೊಳಗೆ ಏನಾದರೂ ಮಾಡಲೇಬೇಕು."

"ಒಳ್ಳೇದು. ಪ್ರಯತ್ನ ಮಾಡುತ್ತೇನೆ."

ಅಂದು ರಾತ್ರಿ ನಾರಾಯಣ ಕರಡಿಯ ಎರಡು ಹಲ್ಲುಗಳನ್ನು ಖರೀದಿ ಮಾಡಿ ಅವುಗಳ ಮೇಲೆ ಮೇದಪ್ಪ ಮತ್ತು ಸೋಮನಾಥ ಅಯ್ಯರರ ಹೆಸರು ಬರೆದು ಅವುಗಳ ಪೊಳ್ಳಿನಲ್ಲಿ ಕುಂಕುಮ ಮತ್ತು ಪಾದರಸವನ್ನು ತುಂಬಿ ಸ್ಮಶಾನದಲ್ಲಿ "ಘಾನಾ ಬಿನ ಘಾನಾ" ಮಂತ್ರೋಚ್ಚಾರದೊಂದಿಗೆ ಪೂಜೆ ಮಾಡಿದ.

ಇದೂ ಪ್ರಯೋಜನವಾಗಲಿಲ್ಲ.

ರಾಜೂರ ಹೇಳಿಕೆಯಂತೆ ದಾಸಪ್ಪ ಮಾಟದ ವಸ್ತುಗಳನ್ನು ಮೇದಪ್ಪನವರ ಬಂಗಲೆಯ ಕಂಪೌಂಡಿನಲ್ಲಿ ಚೆಲ್ಲಿದ್ದೂ ಉಪಯೋಗಕ್ಕೆ ಬರಲಿಲ್ಲ. ಮೇದಪ್ಪನವರ ಡ್ರೈವರನಿಗೆ ಒಮ್ಮೆ ಕಂಪೌಂಡಿನಲ್ಲಿ ಕುಂಕುಮದ ಪುಡಿಕೆಯೊಂದು ಸಿಕ್ಕಲು ಆತ ಅದನ್ನು ಮೇದಪ್ಪನವರಿಗೆ ತೋರಿಸಿದ. ಅವರು ಪೋಲೀಸರಲ್ಲಿ ಈ ಬಗ್ಗೆ ದೂರಿತ್ತರು.

೧೯೫೦ ರ ಡಿಸೆಂಬರ್ ತಿಂಗಳ ಆರಂಭವಾಯಿತು. ಖಟ್ಲೆಯ ಸಾಕ್ಷಿಪುರಾವೆಯ ಕೆಲಸ ಮುಗಿಯುತ್ತ ಬಂದಿತ್ತು. ರಾಜೂ ಹತವೀರ್ಯರಾಗಿ ಹೋಗಿದ್ದರು.

ಡಿಸೆಂಬರ್ ಎರಡನೆ ವಾರದಲ್ಲಿ ನಾರಾಯಣ ತನ್ನ ಅಂಗಡಿಯಲ್ಲಿ ಕುಳಿತಿದ್ದಾಗ ಬೀದಿಯಲ್ಲಿ ಆಗ್ನೆಸ್ ಹೋಗುತ್ತಿರುವುದು ಕಾಣಿಸಿತು. ಅವಳು ಅವನಲ್ಲಿ ತನ್ನ ಮಕ್ಕಳಿಗಾಗಿ ಔಷಧಿ ತೆಗೆದುಕೊಳ್ಳಲು ಆಗೀಗ ಬರುತ್ತಿದ್ದಳು. ನಾರಾಯಣ ಅವಳನ್ನು ಕರೆದು "ಎಲ್ಲ ಕ್ಷೇಮವೆ?"

ಎಂದು ಕೇಳಿದ.

"ಡಾಕ್ಟರ್, ಮಕ್ಕಳ ಆರೋಗ್ಯ ಚೆನ್ನಾಗಿದೆ. ಆದರೆ ಅವರು ಉಪವಾಸ ಸಾಯುವ ಹೊತ್ತು ಬಂದಿದೆ" ಎಂದಳು ಆಗ್ನೆಸ್.

ಆಗ್ನೆಸ್ ಸುಮಾರು ೪೦ ವರ್ಷ ವಯಸ್ಸಿನವಳು. ಐದು ಮಕ್ಕಳು ತಾಯಿ. ಅವಳ ಗಂಡ ತೀರ ವೃದ್ಧನಾಗಿ ದುಡಿಯಲಾರದವನಾಗಿದ್ದ. ತಾನು ಮೇದಪ್ಪನವರ ಬಂಗಲೆಯಲ್ಲಿ ಕಳೆದ ಎರಡು ತಿಂಗಳ ಕೆಲಸಕ್ಕಿದ್ದೆನೆಂದೂ ಆದರೆ ಬಂಗಲೆಯಲ್ಲಿದ್ದ ಅರಿವೆ ಕಳವಾಯಿತೆಂದು ತನ್ನನ್ನ ಕೆಲಸದಿಂದ ತೆಗೆದು ಹಾಕಿದ್ದರಿಂದ ಈಗ ಅನ್ನಕ್ಕಾಗಿ ಒದ್ದಾಡುವ ಅವಸ್ಥೆ ಬಂದಿದೆಯೆಂದೂ ಅವಳು ಹೇಳಿ ಏನಾದರೂ ನೌಕರಿ ಇದ್ದರೆ ತಿಳಿಸಿ ಎಂದು ನಾರಾಯಣನಿಗೆ ಹೇಳಿ ಹೊರಟುಹೋದಳು.

ಮುಂದೆ ರಾಜು ಮತ್ತು ನಾರಾಯಣರು ಆಗ್ನೆಸಳಿಗೆ ಕೆಲ ರೂಪಾಯಿಗಳನ್ನು ಕೊಟ್ಟು ಮೇದ-ಪ್ಪನವರ ಬಂಗಲೆಗೆ ಆಗಾಗ್ಗ ಹೋಗಿ ಬರುತ್ತಿರಲು ಹೇಳಿದರು. ಆಗ್ನೆಸಳು ಅದರಂತೆ ಮಾಡಹತ್ತಲು ಅವಳಿಗೆ ಅಲ್ಲಿ ಆಗಾಗ ಚಿಕ್ಕ ಪುಟ್ಟ ಕೆಲಸಗಳೂ ದೊರೆಯತೊಡಗಿದವು. ರಾಜೂರಿಗೆ ಅವಳ ಮೂಲಕ ಮೇದಪ್ಪನವರ ಮನೆಯ ಒಳ ಸಮಾಚಾರ ತಿಳಿಯತೊಡಗಿತು.

"ಇಂದು ಮೇದಪ್ಪನವರ ಆರೋಗ್ಯ ತುಂಬ ಕೆಟ್ಟಿತ್ತು. ಅವರು ರಕ್ತ ಕಾರಿಕೊಂಡರು" ಎಂದು ಒಂದು ದಿನ ಆಗ್ನೆಸ್ ಹೇಳಿದಾಗ ಶೂನ್ಯ ಪೂಜೆಯ ಪ್ರತಾಪ ಕಂಡುಬರತೊಡಗಿತೆಂದು ರಾಜು ಹಿರಿಹಿರಿ ಹಿಗ್ಗಿದರು. ಆದರೆ ಕ್ರಿಸ್‌ಮಸ್ ಸೂಟಿ ಮುಗಿದು ಮೇದಪ್ಪನವರು ಕೆಲಸಕ್ಕೆ ಹಾಜರಾಗಲು ಅವರ ಆನಂದ ಕರಗಿ ಹೋಯಿತು.

ಖಟಿಯ ಸಾಕ್ಷಿ ಪುರಾವೆ ಕೆಲಸ ಮುಗಿದು ೧೯೫೧ ಜನವರಿ ೧೭ ರಂದು ಎರಡೂ ಕಡೆಯ ವಕೀಲರ ವಾದವನ್ನು ಕೇಳಲಾಗುವುದೆಂದು ಕೋರ್ಟು ತಿಳಿಸಿತು. ಆದರೆ ಅದಕ್ಕೂ ಮೊದಲೇ ಕೃಷ್ಣಮೂರ್ತಿ "ಮ್ಯಾಜಿಸ್ಟ್ರೇಟರು ತೀರ್ಪನ್ನು ಈಗಾಗಲೇ ಬರೆದಿಟ್ಟಿದ್ದಾರೆ. ರಾಜೂರಿಗೆ ಕಠಿಣ ಶಿಕ್ಷೆ ವಿಧಿಸಿದ್ದಾರೆ. ವಕೀಲರ ವಾದ ಕೇಳುವ ನಾಟಕ ಮಾಡಲಿದ್ದಾರೆ ಅಷ್ಟೆ" ಎಂಬ ಸುದ್ದಿ ತಂದ. ಕಂಗೆಟ್ಟ ರಾಜು ತಮ್ಮ ವಕೀಲರಾದ ಶ್ರೀನಿವಾಸ ಅಯ್ಯಂಗಾರ್ ಮತ್ತು ರಾಘವಾಚಾರಿಯರನ್ನು ಕಂಡು ತಮ್ಮ ಖಟ್ಲೆಯನ್ನು ಬೇರೆ ಕೋರ್ಟಿಗೆ ವರ್ಗಾಯಿಸಬೇಕೆಂದು ಹೈಕೋ-ರ್ಟಿಗೆ ಅರ್ಜಿ ಸಲ್ಲಿಸಲು ಹೇಳಿದರು. ಜನವರಿ ೧೭ ರಂದು "ಟ್ರಾನ್ಸ್‌ಫರ್ ಅರ್ಜಿ ಮಾಡಲಿದ್ದೇವೆ" ಎಂದು ರಾಘವಾಚಾರಿಯರು ಮುದ್ದತು ಪಡೆದುಕೊಂಡರು.

ಇದೂ ಅಲ್ಲದೆ ಈ ಖಟಿಯನ್ನು ಹಿಂತೆಗೆದು ಕೊಳ್ಳುವಂತೆ ಅಥವಾ ಅದನ್ನು ಮೈಸೂರು ಪ್ರಾಂತದಿಂದ ಬೇರೆ ಪ್ರಾಂತಕೆ ವರ್ಗಾಯಿಸುವಂತೆ ಕೇಂದ್ರ ಸರಕಾರದಲ್ಲಿ ಪ್ರಯತ್ನಿಸಿ ಮೈಸೂರು ಸರಕಾರದ ಮೇಲೆ ಒತ್ತಾಯ ತರಬೇಕೆಂದು ರಾಜು ಮತ್ತು ಅವರ ವಕೀಲರು ನಿರ್ಧರಿಸಿದರು. ಅದರಂತೆ ಪ್ರಯತ ಆರಂಭವಾಯಿತು.

ಜನವರಿ ೨೨ ಮತ್ತು ೨೩ ರಂದು ರಾಜು ಮತ್ತು ಅವರ ಕಾಯದೆ ಸಲಹೆಗಾರರು ದಿಲ್ಲಿಯಲ್ಲಿ ವಿಶೇಷ ಪ್ರಯತ್ನ ನಡೆಸಿದರು. ಕೇಂದ್ರ ಮಂತ್ರಿ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರನ್ನು ಕಂಡು ಈ ಖಟ್ಲೆಯ ವಿಚಾರವನ್ನು ತಿಳಿಸಿ "ಖಟಿ ಹಿಂತೆಗೆದುಕೊಳ್ಳಿ, ಇಲ್ಲವೆ ಬೇರೆ ಪ್ರಾಂತದ ಕೋರ್ಟಿಗೆ ಕಳಿಸಿ" ಎಂದು ಮೈಸೂರು ಸರಕಾರಕ್ಕೆ ಆಜ್ಞೆ ಮಾಡಬೇಕು ಎಂದು ಕೇಳಿಕೊಂಡರು. ಶ್ರಿ ಗೋಪಾಲಸ್ವಾಮಿಯವರು ಈ ಕಾರ್ಯವನ್ನು ತಮ್ಮ ಸೆಕ್ರೆಟರಿ ವಿ. ಪಿ. ಮೆನನ್ನರಿಗೆ ಒಪ್ಪಿಸಿದರು. ಮೆನನ್ನರು ಮೈಸೂರಿನ ಮುಖ್ಯಮಂತ್ರಿ ಶ್ರಿ ಕೆ. ಸಿ. ರೆಡ್ಡಿ ಮತ್ತು ಗೃಹಮಂತ್ರಿ ಶ್ರಿ ಮರಿಯಪ್ಪನವರೊಡನೆ ಫೋನಿನಲ್ಲಿ ಮಾತಾಡಿದರು. ಆದರೆ ಮಂತ್ರಿ ಮಂಡಳದ ಇತರರ ಸಲಹೆ ಕೇಳದೆ ಏನನ್ನೂ

ಮಾಡಲಾರೆವು ಎಂದು ಅವರಿಗೆ ಉತ್ತರ ಸಿಕ್ಕಿತು.

ನಿರಾಶರಾದ ರಾಜೂ ಅವರು ದಿಲ್ಲಿಯ ತಮ್ಮ ಕಾಯದೆ ಸಲಹೆಗಾರರಿಗೆ ಮೈಸೂರಿಗೆ ಬಂದು ಮಂತ್ರಿಮಂಡಲದೊಡನೆ ಮಾತನಾಡಲು ಬಿನ್ನವಿಸಿಕೊಂಡರು. ಜನವರಿ ೨೫ ರಂದು ಅವರು ಬೆಂಗಳೂರಿಗೆ ಮರಳಿ ಬಂದರು

ದಿಲ್ಲಿಯಿಂದ ಮರಳುವಾಗ ಆಗ್ನೆಸಳ ಸಹಾಯದಿಂದ ಮೇದಪ್ಪನವರ ಮೇಲೆ ವಿಷ-ಪ್ರಯೋಗ ಮಾಡಬೇಕೆಂದು ರಾಜು ಅವರು ಮನದಲ್ಲೆ ನಿರ್ಧಾರ ಮಾಡಿಕೊಂಡಿದ್ದರು. ಬೆಂಗಳೂರಿಗೆ ಬಂದೊಡನೆಯೆ ಅವರು ಈ ಮಾತನ್ನು ದಾಸಪ್ಪ ಮತ್ತು ಕೃಷ್ಣಮೂರ್ತಿಗೆ ಹೇಳಿದರು. ಪ್ರಕರಣ ವಿಪರೀತಕ್ಕೆ ಹೋಗುತ್ತಿರುವುದನ್ನು ಕಂಡು ಬೆದರಿದ ಕೃಷ್ಣಮೂರ್ತಿ ತನ್ನ ಸಂಬಂಧ ಕಡಿದುಕೊಳ್ಳಲು ನಿಶ್ಚಯಿಸಿದ.

ಅಂದು ರಾತ್ರಿ ಜಯರಾಮ ಮತ್ತು ದಾಸಪ್ಪನವರೊಂದಿಗೆ ನಾರಾಯಣನಲ್ಲಿಗೆ ಹೋಗಿ ರಾಜು ಹೇಳಿದರು: "ಇಗೊ, ಮರ್ಕ್ಯುರಿಕ್ ಕ್ಲೊರಾಯಿಡ್‌ನ ಬಾಟ್ಲಿ. ಇದರಲ್ಲಿರುವ ಪುಡಿಯನ್ನು ಮೇದಪ್ಪನವರ ಆಹಾರ—ಪಾನೀಯಗಳಲ್ಲಿ ಬೆರೆಸಲು ಆಗ್ನೆಸ್‌ಳಿಗೆ ಹೇಳು" ಎಂದರು.

ಅಷ್ಟರಲ್ಲಿ ಕರೆಕಳಿಸಿದ್ದ ಆಗ್ನೆಸ್ ಅಲ್ಲಿಗೆ ಬಂದಳು. ತನ್ನ ಮೇಲೆ ಹೊರಿಸಲ್ಪಟ್ಟ ಕಾರ್ಯದ ಭಯಾನಕತೆಯಿಂದ ಅವಳು ಕಂಗೆಟ್ಟಳು. ಆದರೆ ರಾಜೂ "ನಿನಗೆ ೫೦೦ ರೂಪಾಯಿಗಳನ್ನು ಕೊಡುತ್ತೇನೆ. ಮನೆ ಕೊಡುತ್ತೇನೆ. ನಾನು ಬದುಕಿರುವವರೆಗೂ ನಿನ್ನ ಮತ್ತು ಕುಟುಂಬವನ್ನು ಪೋಷಿಸುತ್ತೇನೆ. ಮೇದಪ್ಪ ನಿನಗೇನು ಹಿತ ಮಾಡಿದ್ದಾನೆ? ಹೆದರುವಿ ಯಾಕೆ?" ಎಂದರು.

"ಇಂಥ ಪ್ರಚಂಡ ವಕೀಲರು ನಿನ್ನ ಬೆಂಬಲಕ್ಕಿರುವಾಗ ನೀನೇತಕ್ಕೆ ಹೆದರುತ್ತಿ? ಹೂಂ ಅನ್ನು" ಎಂದು ನಾರಾಯಣ ದನಿಗೂಡಿಸಿದ.

ಮೇದಪ್ಪನವರ ಆಹಾರ-ಪಾನೀಯದಲ್ಲಿ ವಿಷ ಬೆರೆಸುವುದಾಗಿ ದೇವರ ಆಣೆಮಾಡಿ ಆಗ್ನೆಸಳು ಅಲ್ಲಿಂದ ಹೋದಳು. ಇದು ನಡೆದದ್ದು ಜನವರಿ ೨೫ ರಂದು.

ಆಗ್ನೆಸಳಿಗೆ ತನ್ನ ಕಾರ್ಯಕ್ಕಾಗಿ ಯೋಗ್ಯ ಸಂಧಿ ಜನವರಿ ೨೯ ರಂದು ಸಿಕ್ಕಿತು. ಅಡಿಗೆ ಮನೆಯ ಮಗ್ಗುಲಲ್ಲಿದ್ದ ಮಾಳಿಗೆಯ ಮೆಟ್ಟಿಲ ಮೇಲೆ ಕುಳಿತು ಆಗ್ನೆಸ್ ತನ್ನ ಕೆಲಸ ನಡೆಸುತ್ತಿದ್ದಳು. ಮಧ್ಯಾಹ್ನ ೪ ಗಂಟೆಗೆ ಒಲೆಯ ಮೇಲೆ ಚಹಕ್ಕಾಗಿ ನೀರಿಟ್ಟು ಗಂಗ್ಯಾ ಪೇಟೆಗೆ ಹೋದ. ೪॥ ಗೆ ಮೇದಪ್ಪನವರ ಹೆಂಡತಿ ಮತ್ತು ಮಗಳು ಚಹ ಪಾರ್ಟಿಗಾಗಿ ಹೊರಗೆ ಹೋದರು.

ಅಡಿಗೆ ಮನೆಯಲ್ಲಿ ಯಾರೂ ಇರಲಿಲ್ಲ. ಆಗ್ನೆಸ್ ಗಡಬಡಿಯಿಂದ ಒಳಗೆ ಹೋದಳು. ಅವಳ ಕೈ ನಡುಗುತ್ತಿತ್ತು. ಮೈ ಬೆವರುತ್ತಿತ್ತು. ಅವಳು ಟೊಂಕಕ್ಕೆ ಸಿಕ್ಕಿಸಿಕೊಂಡಿದ್ದ ಚೀಟಿಯನ್ನು ತೆಗೆದು ಪುಡಿಯನ್ನೆಲ್ಲ ಒಲೆಯ ಮೇಲಿದ್ದ ಪಾತ್ರೆಯಲ್ಲಿ ಸುರುವಿ ಕಾಗದವನ್ನು ಒಲೆಯಲ್ಲಿ ಚೆಲ್ಲಿ ಮತ್ತೆ ತನ್ನ ಸ್ಥಾನದಲ್ಲಿ ಬಂದು ಕುಳಿತಳು.

ಮೇದಪ್ಪನವರು ಕೋರ್ಟಿನಿಂದ ಬಂದರು. ಗಂಗ್ಯಾ ಮತ್ತು ಲಕ್ಕ ಗಡಿಬಿಡಿಯಿಂದ ಕೆಲಸ ಮಾಡಹತ್ತಿದರು. ಮೇದಪ್ಪನವರ ಮಗಳು ಬಂದೊಡನೆ ಅವಳ ಕೈಲಿ ಅರಿವೆಗಳನ್ನು ಕೊಟ್ಟು ಆಗ್ನೆಸ್ ಕಾಲುಕಿತ್ತಳು.

ಜನವರಿ ೩೦ ರಂದು ದಿಲ್ಲಿಯ ಕಾಯದೆ ಪಂಡಿತರು ಮುಖ್ಯಮಂತ್ರಿ ರೆಡ್ಡಿ ಮತ್ತು ಗೃಹಮಂತ್ರಿ ಮರಿಯಪ್ಪನವರನ್ನು ಭೆಟ್ಟಿಯಾಗಿ "ರಾಜೂರವರಿಗೆ ಪಶ್ಚಾತ್ತಾಪವಾಗಿದೆ. ಖಟ್ಲೆಯಲ್ಲಿ ರಾಜಿ ಮಾಡಿಸಿ" ಎಂದು ಬಿನ್ನವಿಸಿಕೊಂಡರು. ಕೋರ್ಟಿನೆದುರು ಇರುವ ಪ್ರಕರಣದಲ್ಲಿ ಕೈ-ಹಾಕುವುದಿಲ್ಲ ಎಂದವರು ಉತ್ತರವಿತ್ತರು.

ಅಂದೇ ನಾರಾಯಣ ಮೇದಪ್ಪನವರ ಬಂಗಲೆಯಲ್ಲಿ ನಡೆದ ವಿಷಪ್ರಯೋಗದ ಕಥೆಯನ್ನು ರಾಜೂರವರಿಗೆ ತಿಳಿಸಿದಾಗ ಅವರ ಬಿಳಿಯ ಮುಖ ಕಪ್ಪಿಟ್ಟುಹೋಯಿತು ಅಂದೇ

ಹೈಕೋರ್ಟು ರಾಜು ಅವರ ಟ್ರಾನ್ಸಫರ್ ಅರ್ಜಿಯನ್ನು ಕಿತ್ತುಹಾಕಿತು.

ಪೋಲಿಸ್ ತಪಾಸಣೆ ಭರದಿಂದ ಸಾಗಿತು. ಆಗ್ನೆಸಳಿಗೆ ಮನೆ ಬಿಟ್ಟು ಹೊರಬೀಳದಿರಲು ರಾಜು ಅವರು ಕಟ್ಟಪ್ಪಣೆ ಮಾಡಿದ್ದರು. ಮುಂದಿನ ಕ್ಷಣದಲ್ಲಿ ಏನಾಗುವುದೋ ಎಂಬ ಭೀತಿ ಚಿಂತೆಯಿಂದ ರಾಜು ಹಾಸಿಗೆಯನ್ನೆ ಹಿಡಿದರು.

ಖಟ್ಲೆಯು ತೀರ್ಪು ಹೊರಬೀಳುವ ಮೊದಲೇ, ಮೇದಪ್ಪನವರ ಮೇಲೆ ವಿಷಪ್ರಯೋಗ ಮಾಡುವ ಪ್ರಯತ್ನ ಮಾಡಿದರೆಂಬ ಆರೋಪದಿಂದ ರಾಜು ಬಂಧಿಸಲ್ಪಟ್ಟರು.

ಆ ಮೇಲೆ ಖಟ್ಲೆಯ ತೀರ್ಪು ಹೊರಬಿತ್ತು. ಅದರಲ್ಲಿ ರಾಜೂರಿಗೆ ಎರಡು ವರ್ಷ ಕಠಿನ ಶಿಕ್ಷೆ ವಿಧಿಸಲ್ಪಟ್ಟಿತ್ತು.

ಪೋಲೀಸರು ರಾಜು, ಜಯರಾಮ, ನಾರಾಯಣ, ದಾಸಪ್ಪ ಮತ್ತು ಆಗ್ನೆಸರ ಮೇಲೆ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಫಿರ್ಯಾದಿ ದಾಖಲು ಮಾಡಿದರು. ನಾರಾಯಣನನ್ನು ಮಾಫಿ ಸಾಕ್ಷಿದಾರನನ್ನಾಗಿ ಮಾಡಬೇಕೆಂದು ಶಿಫಾರಸು ಮಾಡಿ ಖಟ್ಲೆಯನ್ನು ಮ್ಯಾಜಿಸ್ಟ್ರೇಟರು ಸೆಶನ್ಸ್ ಕೋರ್ಟಿಗೆ ಕಳಿಸಿದರು.

ಈ ಖಟ್ಲೆಯಲ್ಲಿ ಮುಖ್ಯ ನ್ಯಾಯಾಧೀಶರ ಸಂಬಂಧವಿರುವುದರಿಂದ, ಸ್ಥಾನಿಕ ಕೋರ್ಟಿನಲ್ಲಿ ನಿಷ್ಪಕ್ಷಪಾತ ವಿಚಾರಣೆ ನಡೆಯುವುದು ಸಾಧ್ಯವಿಲ್ಲವಾದ್ದರಿಂದ ಇದನ್ನು ಬೇರೆ ಪ್ರಾಂತಕ್ಕೆ ವರ್ಗಾಯಿಸಬೇಕೆಂದು ರಾಜು ಅವರು ಕೇಂದ್ರ ಮತ್ತು ಮೈಸೂರು ಸರಕಾರಕ್ಕೆ ಅರ್ಜಿ ಮಾಡಿಕೊಂಡರು. ಕೇಂದ್ರ ಸರಕಾರವು ಅರ್ಜಿಯನ್ನು ಮನ್ನಿಸಿ ಖಟ್ಲೆಯನ್ನು ವರ್ಗಾಯಿಸಲು ಮೈಸೂರು ಸರಕಾರಕ್ಕೆ ವಿಧಿಸಿತು. ಮೈಸೂರು ಸರಕಾರ ಇದನ್ನು ಪ್ರತಿಭಟಿಸಿತು. ಕೊನೆಗೆ ಈ ಖಟ್ಲೆಯನ್ನು ಮೈಸೂರಿನ ಹೊರಗೆ ಕಳಿಸದೆ ಬೇರೆ ಪ್ರಾಂತದ ಸೆಶನ್ಸ್ ಜಜ್ಜರನ್ನು ಈ ಖಟ್ಲೆಯ ವಿಚಾರಣೆಗಾಗಿ ನೇಮಿಸಬೇಕೆಂದಾಯಿತು. ಅದರಂತೆ ಮುಂಬಯಿಯ ಸಿಟಿ ಸಿವಿಲ್ ಮತ್ತು ಸೆಶನ್ಸ್ ಕೋರ್ಟಿನ ನ್ಯಾಯಾಧೀಶ ಶ್ರೀ ಎಂ. ಬಿ. ಹೊನ್ನಾವರರನ್ನು ನೇಮಿಸಲಾಯಿತು.

೧೯೫೨ ಫೆಬ್ರುವರಿ ೨೩ ರಂದು ಬೆಂಗಳೂರು ಸೆಶನ್ಸ್ ಕೋರ್ಟಿನಲ್ಲಿ ಹೊನ್ನಾವರರೆದುರು ಖಟ್ಲೆ ಆರಂಭವಾಯಿತು. ಫಿರ್ಯಾದಿಯ ಪರವಾಗಿ ಶ್ರೀ ನರಸಿಂಹ ಮೂರ್ತಿ ಮತ್ತು ಆರೋಪಿಗಳ ಪರವಾಗಿ ಸರ್ವಶ್ರೀ ಶ್ರೀನಿವಾಸ ಅಯ್ಯಂಗಾರ್, ರಾಘವಾಚಾರಿ ಮತ್ತು ಕೆ. ಆರ್. ಚಾರಿ ಇವರು ವಕಾಲತ್ತು ನಡೆಸಿದರು. ಫಿರ್ಯಾದಿ ಪಕ್ಷವು ೨೦ ಸಾಕ್ಷಿದಾರರನ್ನು ಕೊಟ್ಟಿತು ರಾಜು ಅವರ

ಸಾಕ್ಷಿಗಳ ಯಾದಿಯೂ ದೊಡ್ಡದಿತ್ತು. ಅವರಲ್ಲಿ ಮೈಸೂರು ಹೈಕೋರ್ಟಿನ ಮಾಜಿ ಮುಖ್ಯ ನ್ಯಾಯಾಧೀಶ ಶ್ರಿ ಪರಮಶಿವಯ್ಯ ಗೃಹಮಂತ್ರಿ ಮರಿಯಪ್ಪ, ಅನಂತಶಯನಂ ಅಯ್ಯಂಗಾರ್, ತಾಯಿನಾಡು ಪತ್ರಿಕೆಯ ಸಂಪಾದಕ ಶ್ರೀನಿವಾಸನ್ ಇವರು ಪ್ರಮುಖರಾಗಿದ್ದರು. ಕೋರ್ಟಿನ ಆಜ್ಞೆಯಂತೆ ಮುಖ್ಯಮಂತ್ರಿ ರೆಡ್ಡಿ ಮತ್ತು ಕೇಂದ್ರ ಸರಕಾರದ ಕಾರ್ಯದರ್ಶಿ ಮೆನನ್ನರ ಸಾಕ್ಷಿಗಳೂ ಆದವು.

ಮಾಜಿ ಮುಖ್ಯ ನ್ಯಾಯಾಧೀಶ ಪರಮಶಿವಯ್ಯನವರ ಸಾಕ್ಷಿಯ ವಿಚಾರ ಹೇಳುವುದು ಅಗತ್ಯವಿದೆ. ವಿಷಪ್ರಯೋಗದ ಪ್ರಕರಣದ ಹಿಂದೆ ರಾಜು ಅವರ ಮೇಲಿನ ಖಟ್ಲೆಯಂತೆಯೇ ಮೈಸೂರಿನ ಸಾಮಾಜಿಕ ಜೀವನದಲ್ಲಿ ಕೋಲಾಹಲವೆಬ್ಬಿಸಿರುವ ಬ್ರಾಹ್ಮಣ ಬ್ರಾಹ್ಮಣೇತರರ ವಾದವೂ ಇದೆಯೆಂದು ಅವರ ಸಾಕ್ಷಿಯಿಂದ ಬಹಿರಂಗವಾಯಿತು. ಶ್ರೀ ಪರಮಶಿವಯ್ಯನವರು ಹೇಳಿದ್ದೇನೆಂದರೆ "ನಾನು ೨೫–೩೦ ವರ್ಷಗಳಿಂದ ರಾಜು ಅವರನ್ನು ಬಲ್ಲೆ. ಗೋಪಾಲರಾವ್ ಸಮಿತಿ ವಿಧಿಸಿದ ಶಿಕ್ಷೆಯ ವಿರುದ್ಧ ಅವರು ಮತ್ತು ಇನ್ನಿಬ್ಬರು ಸಂಪಾದಕರು ಮಾಡಿಕೊಂಡ ಅಪೀಲು ನನ್ನೆದುರೇ ವಿಚಾರಣೆಗೆ ಬಂದಿತ್ತು. ಈ ವಿಚಾರಣೆ ಆರಂಭವಾಗುವ ಮೊದಲು ಮೇದಪ್ಪನವರು ನನಗೆ ಫೋನ್ ಮಾಡಿ 'ಮೂವರು ಕುಹಕ ಬ್ರಾಹ್ಮಣರು ಕತ್ತರಿಯಲ್ಲಿ ಸಿಲುಕಿದ್ದಾರೆ. ಈಗ ನೀವೇನು ಮಾಡುತ್ತೀರಿ?' ಎಂದು ಕೇಳಿದರು. ಕೋರ್ಟಿನೆದುರು ಇರುವ ಮತ್ತು ವಿಶೇಷತಃ ನಿಮ್ಮ ಸಂಬಂಧವಿರುವ ಪ್ರಕರಣದಲ್ಲಿ ನೀವು ಮಾತಾಡುವುದು ಯೋಗ್ಯವಲ್ಲವೆಂದು ನಾನು ಉತ ರವಿತ್ತೆ. ಮೇದಪ್ಪನವರು ಅದಕ್ಕೇನೂ ಹೇಳಲಿಲ್ಲ. ಈ ವಿಚಾರವನ್ನು ನಾನು ಆ ಮೇಲೆ ದಿವಾನ ರಾಮಸ್ವಾಮಿ ಮುದಲಿಯಾರ್ ಮತ್ತು ಕಾಯದೆ ಮಂತ್ರಿಗಳ ಕಿವಿಗೆ ಹಾಕಿದೆ."

ಮೇದಪ್ಪನವರು ತಮ್ಮ ಸಾಕ್ಷಿಯಲ್ಲಿ ಈ ಮಾತನ್ನು ಅಲ್ಲಗಳೆದರು.

೧೯೫೨ ಮಾರ್ಚ್ ೨೭ ರಂದು ಖಟ್ಲೆಯ ತೀರ್ಪು ಹೇಳಲ್ಪಟ್ಟಿತು:

ಇಂಡಿಯನ್ ಪೀನಲ್ ಕೋಡ್ ೩೦೭ ನೇ ಕಲಮಿನನ್ವಯ ಅಗ್ನೆಸ್‌ಳಿಗೆ ೨ ವರ್ಷ ಕಠಿನ ಶಿಕ್ಷೆ.

ಜಯರಾಮ ನಿರ್ದೋಷಿ.

ರಾಜು ಅವರಿಗೆ ಕಲಮ ೧೧೫ ಮತ್ತು ೩೦೨ ರನ್ವಯ ಎರಡು ವರ್ಷ ಸಾದಾ ಶಿಕ್ಷೆ ಮತ್ತು ೨,೦೦೦ ರೂ. ಗಳ ದಂಡ. (ಅವರ ಆರೋಗ್ಯ ಚೆನ್ನಾಗಿಲ್ಲದ್ದರಿಂದ ಅವರಿಗೆ 'ಅ' ವರ್ಗ ಕೊಡಬೇಕೆಂದು ಶಿಫಾರಸು ಮಾಡಲಾಯಿತು.)

೧೧೫ ಮತ್ತು ೩೦೨ ನೇ ಕಲಮುಗಳನ್ವಯ ದಾಸಪ್ಪಗೆ ೨ ವರ್ಷ ಕಠಿಣ ಶಿಕ್ಷೆ.

ರಾಜು ಮೈಸೂರು ಹೈಕೋರ್ಟಿಗೆ ಅಪೀಲು ಮಾಡಿಕೊಂಡರು. ಖಟ್ಲೆಯನ್ನು ವರ್ಗಾಯಿಸಬೇಕೆಂಬ ಅವರ ಅರ್ಜಿಯನ್ನು ಮನ್ನಿಸಿ ಸುಪ್ರೀಂ ಕೋರ್ಟು ಅಪೀಲನ್ನು ಮುಂಬಯಿ ಹೈಕೋರ್ಟಿಗೆ ಕಳಿಸಿತು

ಮುಂಬಯಿ ಹೈಕೋರ್ಟು ವಿಚಾರಣೆ ಮಾಡಿ ಅಪೀಲನ್ನು ತಳ್ಳಿಹಾಕಿತು.

ರಾಜು ಅವರು ಸುಪ್ರಿಂ ಕೋರ್ಟಿಗೆ ಮಾಡಿಕೊಂಡ ಅಪೀಲು ನಾಮಂಜೂರಾಯಿತು.

ರಾಜು ಅವರು ಸೆಂಟ್ರಲ್ ಜೇಲಿನಲ್ಲಿ ಶಿಕ್ಷೆ ಅನುಭವಿಸಲು ತೆರಳಿದರು. ★

'ಕಿರ್ಲೋಸ್ಕರ' ದಿಂದ



This Magazine owned by the Loka Shikshana Trust, Hubli is printed and published by Shri H. R. Purohit at the Samyukta Karnatak Press, Koppikar Road, Hubli.